ಶುಕ್ರವಾರ, ಏಪ್ರಿಲ್ 22, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಭಿಷೇಕ

ಗುಜರಾತ್‌ನ ಗಾಂಧಿನಗರದ ಅಕ್ಷರಧಾಮ ದೇವಾಲಯದಲ್ಲಿ ಗುರುವಾರ ನೀಲಕಂಠ ವರ್ಣಿ ವಿಗ್ರಹಕ್ಕೆ ಅಭಿಷೇಕ ಮಾಡಿದ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್

TUITIONS ARE BACK,
BUT BETTER THAN EVER

CLASSES
4 to 10
STATE BOARD, ICSE & CBSE

INTRODUCING
BYJU'S
TUITION CENTRE

Upgrade to the next-generation classroom experience from BYJU'S. Ensure complete understanding of concepts while making your child exam ready.

NOW IN
BANGALORE

BYJU'S ADMISSION CUM SCHOLARSHIP TEST

Attend offline at a Tuition Centre near you.

Know where you stand and get upto 100% scholarship on admissions

Classes 4 - 10
APRIL
23rd & 24th

Register for FREE
900 900 2000

Scan to register

Our centres: **Richmond Circle:** No.76/1, 1st Floor, Mission Rd, Sampangi Rama Nagara, Next to Canara Bank, Bengaluru, Karnataka - 560027 | **JP Nagar:** Premises No. 276, 2nd floor, 15th Cross, 5th Phase, J.P. Nagar, Bengaluru - 560078 | **Sadashiva Nagar:** 190, 2nd Floor, Sankey Road, Sadashivanagar, Bengaluru - 560080 | **HSR Layout:** No. 1, 3rd Floor, 14th Main Road, Sector 7, HSR Layout, Above Mc Donald's, Bengaluru - 560102 | **Whitefield:** 2nd Floor, Sri Narayani Arcade, ITPL main road, above BATA showroom, Kundanahalli, Brookefield. Bengaluru - 560066 | **Yelahanka:** No. 896/4, 'KALPAVRUKSHA', 1st A Main Road, Sector A, Yelahanka New Town, Bengaluru - 560064 | **Rajrajeshwari Nagar:** 1st Floor, Raghavendra Arcade, Jawaharlal Nehru Road, BEML Layout, 4th Stage, Above KFC, Rajarajeshwari Nagar, Bengaluru - 560098 | **Vijaya Nagar:** Second Floor of Square 55, 17th Cross, MRCR Layout, Vijayanagar, Bengaluru - 560040 | **Mahalakshmi Layout:** No.52,1st Floor,Mahalakshmipura,12th Cross. Mahalakshmi Layout, Bangalore - 560086 | **Kalyan Nagar:** No.232 & 234, 10th Main, 100 Feet Road, HRBR Layout, 1st Block, Kalyannagar, Bangalore - 560043

ಶುಕ್ರವಾರ, ಏಪ್ರಿಲ್ 22, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿಹಿ ಸ್ವಾದ

ಮುಂಬೈನಲ್ಲಿ ರಂಜಾನ್‌ನ ವಿಶೇಷ ಸಿಹಿತಿನಿಸು ಸವಿದ ಬಾಲಿವುಡ್ ನಟ ಮಲ್ಲಿಕಾ ಶೆರಾವತ್



ಹರಿಹರಪುರ ಮಠದಲ್ಲಿ ಆರ್‌ಎಸ್‌ಎಸ್ ಸಹಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿಕೆ

‘ಏಕತ್ವದ ಸಂದೇಶ ಮನೆ–ಮನಗಳಿಗೆ ತಲುಪಲಿ’

ಪ್ರಜಾವಾಣಿ ವಾರ್ತೆ

ಕೊಪ್ಪ: ‘ಧರ್ಮದ ಹೆಸರಿನಲ್ಲಿ ಸಂಘರ್ಷಗಳು ನಡೆಯುತ್ತಿವೆ, ದೇಶ ದೇಶಗಳ ಮಧ್ಯೆ ಯುದ್ಧ ನಡೆಯುತ್ತಿದೆ. ಏಕತ್ವದ ಸಂದೇಶ ಪ್ರತಿ ಮನೆ ಮನಗಳಿಗೆ ತಲುಪಬೇಕು. ಹಿಂದೂ ಧರ್ಮವು ವಿವಿಧತೆಯಲ್ಲಿ ಏಕತೆಯನ್ನು ಸಾರುವ ಜಗತ್ತಿನ ಏಕೈಕ ಧರ್ಮ’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದರು.

ಹರಿಹರಪುರ ಮಠದಲ್ಲಿ ನಡೆಯುತ್ತಿರುವ ಮಹಾಕುಂಭಾಭಿಷೇಕ ನಿಮಿತ್ತ ಗುರುವಾರ ಭೇಟಿ ನೀಡಿದ ಅವರು ಧಾರ್ಮಿಕ ಸಭೆಯಲ್ಲಿ ಮಾತನಾಡಿದರು.

‘ದೇವರೊಬ್ಬ ನಾಮ ಹಲವು ಎಂಬುದನ್ನು ಹಿಂದೂ ಧರ್ಮ ಒಪ್ಪುತ್ತದೆ. ಸೃಷ್ಟಿಯನ್ನು ಆರಾಧಿಸುವ ಧರ್ಮ ನಮ್ಮದು. ಆದ್ದರಿಂದ ಅನೇಕ ದಾಳಿಗಳಿಗೆ ತುತ್ತಾದರೂ ಹಿಂದೂ ಧರ್ಮ ಇಂದಿಗೂ ಗಟ್ಟಿಯಾಗಿ ನಿಂತಿದೆ. ಭಾರತವು ಧರ್ಮಭೂಮಿ, ಪುಣ್ಯಭೂಮಿ, ತ್ಯಾಗಭೂಮಿ, ಯೋಗಭೂಮಿಯೂ ಹೌದು, ಮೇಲು ಕೀಳು ಭೇದ ಭಾವ ದೂರ ಮಾಡಿ ಎಲ್ಲಾ ಧರ್ಮಗಳನ್ನು ನಾವು ಸಮಾನವಾಗಿ ಕಂಡಿದ್ದೇವೆ’ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಮಾತನಾಡಿ, ‘ಹರಿಹರಪುರ ಸ್ವಾಮೀಜಿ ಧಾರ್ಮಿಕ ಸೇವೆಯ ಜೊತೆಗೆ ಸಾಹಿತ್ಯ ಕ್ಷೇತ್ರಕ್ಕೂ ಹಲವಾರು ಕೊಡುಗೆ ನೀಡಿದ್ದಾರೆ. 2 ಸಾವಿರಕ್ಕೂ ಹೆಚ್ಚು ವಚನಗಳನ್ನು ಬರೆದು ಸಮಾಜದಲ್ಲಿ ಧಾರ್ಮಿಕ ಪ್ರಜ್ಞೆ ಪ್ರೇರೇಪಿಸಿದ್ದಾರೆ’ ಎಂದರು.

ಮಹಾಕುಂಭಾಭಿಷೇಕ ಸ್ವಾಗತ ಸಮಿತಿ ಅಧ್ಯಕ್ಷ ಜಿ. ಭೀಮಶ್ವರ ಜೋಶಿ, ಮಠದ ಆಡಳಿತಾಧಿಕಾರಿ ಡಾ.ಬಿ.ಎಸ್. ರವಿಶಂಕರ್, ಬ್ರಾಹ್ಮಣ ಮಹಾಸಭಾದ ರಾಘವೇಂದ್ರ ಭಟ್ ಇದ್ದರು.

ಸಂಸದ ಬಿ.ವೈ. ರಾಘವೇಂದ್ರ, ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಡಿ.ಎನ್. ಜೀವರಾಜ್, ಶಾಸಕರಾದ ಎಂ.ಪಿ. ಕುಮಾರಸ್ವಾಮಿ, ಹರತಾಳು ಹಾಲಪ್ಪ, ಆರ್.ಎಸ್.ಎಸ್. ದಕ್ಷಿಣ ಪ್ರಾಂತ ಸಹ ಸಂಚಾಲಕ ಪಟ್ಟಾಭಿರಾಮ್ ಇದ್ದರು.

ಕೊಪ್ಪ ತಾಲ್ಲೂಕು ಹರಿಹರಪುರ ಮಠದಲ್ಲಿ ಆರೆಸ್ಸೆಸ್ ಸಹಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರಿಗೆ ಮಠದ ವತಿಯಿಂದ ‘ಲಕ್ಷ್ಮೀನರಸಿಂಹ’ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಡಾ. ಜಿ.ಭೀಮಶ್ವರ ಜೋಶಿ, ಡಾ.ಬಿ.ಎಸ್‌.ರವಿಶಂಕರ್, ರಾಘವೇಂದ್ರ ಭಟ್ ಇದ್ದರು.

‘ಮಾತು ಸಾಧನೆಯಲ್ಲ, ಸಾಧನೆ ಮಾತಾಗಲಿ’

ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಆಶೀರ್ವಚನ ನೀಡಿ, ‘ಸಾಮಾನ್ಯ ಜನರಿಗೆ ಮಾತೇ ಸಾಧನೆಯಾದರೆ ವಿಶೇಷ ಹಾಗೂ ಆದರ್ಶ ವ್ಯಕ್ತಿಗಳ ಸಾಧನೆಯೇ ಮಾತನಾಡುತ್ತದೆ’ ಎಂದರು.

ಕೆಸರಿನಲ್ಲಿ ವಟಗುಟ್ಟುವ ಕಪ್ಪೆಯು ಕೆಸರಿನಲ್ಲಿ ಸತ್ತು ಹೋಗುತ್ತದೆ. ಆದರೆ ಅದೇ ಕೆಸರಿನಲ್ಲಿ ಮೌನವಾಗಿ ಅರಳುವ ಕಮಲದ ಹೂ ಸೂರ್ಯನನ್ನು ಕಾಣುವ ತವಕದಿಂದ ಕೆಸರನ್ನು ಭೇದಿಸಿಕೊಂಡು ಮೇಲೆ ಬಂದು ಲಕ್ಷ್ಮೀ ದೇವಿಯ ಕರದಲ್ಲಿ ಸೇರುತ್ತದೆ. ಜೀವನದಲ್ಲಿ ಉನ್ನತ ಗುರಿಯನ್ನು ಇಟ್ಟುಕೊಂಡು ಸಾಧನೆ ಮಾಡಿದರೆ ಗುರಿಯನ್ನು ತಲುಪಲು ಸಾಧ್ಯ’ ಎಂದರು.

ಸುದ್ದಿ 2 ನಿಮಿಷ

ನೌಕರರ ಕಾರ್ಯವೈಖರಿ ಬದಲಾಗಬೇಕು: ಬೊಮ್ಮಾಯಿ

ಶಿವಮೊಗ್ಗ: ‘ಸರ್ಕಾರಿ ನೌಕರರು ಎಲ್ಲರ ಸಹಭಾಗಿತ್ವದಲ್ಲಿ ಕೆಲಸ ಮಾಡುವ ಅನಿವಾರ್ಯ ಇದೆ. ಅದಕ್ಕಾಗಿ ಕೆಲಸದ ಚಿಂತನೆ, ಕಾರ್ಯವೈಖರಿಗಳು ಬದಲಾಗಬೇಕಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಪಾದಿಸಿದರು.

ಜಿಲ್ಲಾಡಳಿತ, ಜಿಲ್ಲಾ ಸರ್ಕಾರಿ ನೌಕರರ ಸಂಘ ಶಿವಮೊಗ್ಗದಲ್ಲಿ ಗುರುವಾರ ಆಯೋಜಿಸಿದ್ದ ರಾಜ್ಯ ಸರ್ಕಾರಿ ನೌಕರರ ದಿನಾಚರಣೆ, ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಬದಲಾಗುತ್ತಿರುವ ಜಾಗತಿಕ ವಿದ್ಯಮಾನಗಳು ಸರ್ಕಾರದ ಆಡಳಿತ ಯಂತ್ರದ ಮೇಲೆ ಪರಿಣಾಮ ಬೀರುತ್ತಿವೆ ಎಂದು ಹೇಳಿದರು.

‘ಪಟ್ಟಭದ್ರ ಹಿತಾಸಕ್ತಿಗಳು ವ್ಯವಸ್ಥೆಯನ್ನು ಅಲ್ಲೋಲ ಕಲ್ಲೋಲ ಮಾಡುತ್ತಿರುತ್ತವೆ. ಸಾಮಾಜಿಕ, ಜನಪರ ಕೆಲಸ, ಕಾರ್ಯಕ್ಷಮತೆಯ ಮೂಲಕ ಉತ್ತರ ನೀಡಬೇಕು. ಕುಳಿತಲ್ಲೇ ಕೆಲಸ ಮಾಡಿ ಕುರ್ಚಿ ಬಿಸಿಮಾಡಿಕೊಳ್ಳುವ ಬದಲು ಜನರ ಬಳಿಗೆ ಹೋಗಿ ಕೆಲಸ ಮಾಡಬೇಕು. ಬಡವರ ಸೇವಕರಾಗಬೇಕು’ ಎಂದು ಕಿವಿಮಾತು ಹೇಳಿದರು.

ಭಾರತ ಎಂದಿಗೂ, ಯಾರನ್ನೂ ಬೆದರಿಸಿಲ್ಲ: ಪ್ರಧಾನಿ ಮೋದಿ

ನವದೆಹಲಿ (ಪಿಟಿಐ): ಭಾರತವು ಯಾವುದೇ ದೇಶ ಅಥವಾ ಸಮಾಜಕ್ಕೆ ಎಂದಿಗೂ ಬೆದರಿಕೆಯೊಡ್ಡಿಲ್ಲ. ಜಾಗತಿಕ ಸಂಘರ್ಷಗಳ ನಡುವೆಯೂ ಭಾರತವು ವಿಶ್ವದ ಕಲ್ಯಾಣಕ್ಕಾಗಿ ಯೋಚಿಸುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಹೇಳಿದರು. ದೇಶವು ಸಿಖ್ ಗುರುಗಳ ಆದರ್ಶಗಳನ್ನು ಅನುಸರಿಸುತ್ತಿದೆ ಎಂದೂ ಅವರು ಪ್ರತಿಪಾದಿಸಿದರು.

ಸಿಖ್ ಗುರು ತೇಜ್ ಬಹದ್ದೂರ್ ಅವರ 400ನೇ ಜನ್ಮದಿನ ಆಚರಿಸಲು ದೆಹಲಿಯ ಕೆಂಪು ಕೋಟೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ, ಕೆಂಪು ಕೋಟೆಯ ಸಮೀಪವಿರುವ ಗುರುದ್ವಾರ ಸಿಸ್ ಗಂಜ್ ಸಾಹಿಬ್ ಗುರು ತೇಜ್ ಬಹದ್ದೂರ್ ಅವರ ಅಮರ ತ್ಯಾಗದ ಸಂಕೇತವಾಗಿದೆ ಎಂದು ಹೇಳಿದರು. ಔರಂಗಜೇಬನ ದಬ್ಬಾಳಿಕೆಯ ಮುಂದೆ ಗುರು ತೇಜ್ ಬಹದ್ದೂರ್ ಅವರು ‘ಹಿಂದ್ ದಿ ಚಾದರ್’ ಆಗಿ ಬಂಡೆಯಂತೆ ನಿಂತರು ಎಂದು ಮೋದಿ ಹೇಳಿದರು.

ಔರಂಗಜೇಬ್, ಅವನಂತಹ ನಿರಂಕುಶಿಗಳು ಅನೇಕ ಜನರ ಶಿರಚ್ಛೇದ ಮಾಡಿರಬಹುದು ಎಂಬುದಕ್ಕೆ ಕೆಂಪು ಕೋಟೆ ಸಾಕ್ಷಿಯಾಗಿದೆ ಎಂದ ಪ್ರಧಾನಿ, ‘ಇಂಥವರಿಂದ ನಮ್ಮ ನಂಬಿಕೆಯನ್ನು ಬೇರ್ಪಡಿಸಲು ಸಾಧ್ಯವಿಲ್ಲ’ ಎಂದರು.

ಗುರು ತೇಜ್ ಬಹದ್ದೂರ್ ಅವರ ಸ್ಮರಣಾರ್ಥ ನಾಣ್ಯ ಮತ್ತು ಅಂಚೆ ಚೀಟಿಯನ್ನು ಪ್ರಧಾನಿ ಮೋದಿ ಅವರು ಈ ವೇಳೆ ಬಿಡುಗಡೆ ಮಾಡಿದರು.

ಕೈಗಾ: ಎರಡು ಅಣು ವಿದ್ಯುತ್ ಸ್ಥಾವರಗಳ ನಿರ್ಮಾಣಕ್ಕೆ ಸಮ್ಮತಿ

ನವದೆಹಲಿ (ಪಿಟಿಐ): ಕರ್ನಾಟಕದ ಕೈಗಾದಲ್ಲಿ ತಲಾ 700 ಮೆಗಾವ್ಯಾಟ್ ಸಾಮರ್ಥ್ಯದ ಎರಡು ಅಣು ವಿದ್ಯುತ್ ಸ್ಥಾವರಗಳನ್ನು ನಿರ್ಮಿಸುವ ಯೋಜನೆಗೆ ಅಣುಶಕ್ತಿ ನಿಯಂತ್ರಣ ಮಂಡಳಿಯು (ಎಇಆರ್‌ಬಿ)ಮಾರ್ಚ್ 31ರಂದು ಅನುಮತಿ ನೀಡಿದೆ.

ಕೈಗಾದಲ್ಲಿ 5 ಮತ್ತು 6ನೇ ಸ್ಥಾವರದ ನಿರ್ಮಾಣಕ್ಕೆ ಅನುಮೋದನೆ ದೊರೆತಿದ್ದು ಭಾರತೀಯ ಅಣುಶಕ್ತಿ ವಿದ್ಯುತ್ ನಿಗಮವು (ಎನ್‌ಪಿಸಿಐಎಲ್) ಉದ್ದೇಶಿತ ಎರಡೂ ಸ್ಥಾವರಗಳನ್ನು ನಿರ್ಮಿಸಲಿದೆ. ಹಾಲಿ ಇರುವ ತಲಾ 220 ಮೆಗಾವ್ಯಾಟ್ ಸಾಮರ್ಥ್ಯದ ನಾಲ್ಕು ಸ್ಥಾವರಗಳಿಂದ ಪ್ರತ್ಯೇಕವಾಗಿ ಇದು ಸ್ಥಾಪನೆಯಾಗಲಿದೆ. ವಿಕಿರಣ ವಾಹಕ ನಿಯಂತ್ರಣ ಘಟಕ, ನಿಯಂತ್ರಣ ವ್ಯವಸ್ಥೆಯ ಮೇಲ್ವಿಚಾರಣೆ ವ್ಯವಸ್ಥೆ ಕಾರ್ಯಾರಂಭ ಮಾಡಿದೆ ಎಂದು ಎನ್‌ಪಿಸಿಐಎಲ್ ತಿಳಿಸಿದೆ.

ಎರಡು ನೂತನ ಸ್ಥಾವರಗಳ ನಿರ್ಮಾಣ ಮುಂದಿನ ವರ್ಷ ಆರಂಭವಾಗಲಿದೆ ಎಂದು ಸರ್ಕಾರ ಸಂಸತ್ತಿನಲ್ಲಿ ಕಳೆದ ತಿಂಗಳು ತಿಳಿಸಿತ್ತು. ವೆಚ್ಚ ನಿಯಂತ್ರಣ, ನಿರ್ಮಾಣ ಸಮಯ ತಗ್ಗಿಸಲು ₹ 1.05 ಲಕ್ಷ ಕೋಟಿ ವೆಚ್ಚದಲ್ಲಿ 700 ಮೆಗಾವ್ಯಾಟ್ ಸಾಮರ್ಥ್ಯದ 10 ಸ್ಥಾವರಗಳನ್ನು ತ್ವರಿತಗತಿಯಲ್ಲಿ ನಿರ್ಮಿಸಲು ಕೇಂದ್ರ ಸಚಿವ ಸಂಪುಟ ಜೂನ್ 2017ರಲ್ಲಿ ಒಪ್ಪಿಗೆ ನೀಡಿತ್ತು.

ಪ್ರಶಸ್ತಿಗೆ ಆಯ್ಕೆಯಾದ ಸಿಬ್ಬಂದಿಗೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್, ಬಿಎಂಟಿಸಿ ನಿರ್ದೇಶಕಿ(ಭದ್ರತಾ ಮತ್ತು ಜಾಗೃತ) ಜಿ.ರಾಧಿಕಾ ಅವರು ಪ್ರಶಸ್ತಿ ಪತ್ರಗಳನ್ನು ವಿತರಿಸಿದರು

ಇಂಧನ ಕ್ಷಮತೆ: 12 ಘಟಕಗಳಿಗೆ ಪ್ರಶಸ್ತಿ

ಬೆಂಗಳೂರು: ಇಂಧನ ಬಳಕೆ ಕ್ಷಮತೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಸಾರಿಗೆ ಸಂಸ್ಥೆಯ 12 ಘಟಕಗಳಿಗೆ ಪೆಟ್ರೋಲಿಯಂ ಸಂರಕ್ಷಣಾ ಸಂಶೋಧನಾ ಸಂಸ್ಥೆಯು(ಪಿಸಿಆರ್‌ಎ) ತಲಾ ₹75 ಸಾವಿರ ನಗದು ಒಳಗೊಂಡ ಪ್ರಶಸ್ತಿ ನೀಡಿದೆ.

ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಅಡಿಯಲ್ಲಿ ಈ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದ್ದು, ಪ್ರತಿವರ್ಷ ಸಾರ್ವಜನಿಕ ವಲಯದ ಸಂಸ್ಥೆಗಳಲ್ಲಿ ಇಂಧನ ಕ್ಷಮತಾ ಮಹೋತ್ಸವ ಏರ್ಪಡಿಸುತ್ತಿದೆ.

ಈ ವರ್ಷ ಕೆಎಸ್‌ಆರ್‌ಟಿಸಿಯ ಮಂಗಳೂರು ವಿಭಾಗದ ಘಟಕ-2, ಮೈಸೂರು ವಿಭಾಗದ ಬನ್ನಿಮಂಟಪ ಘಟಕ, ಬೆಂಗಳೂರು ಕೇಂದ್ರೀಯ ವಿಭಾಗ ಘಟಕ-2, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಹುಬ್ಬಳಿ ಗ್ರಾಮಾಂತರ ಘಟಕ, ಬೀಳಗಿ ಘಟಕ, ಚಿಕ್ಕೋಡಿ ಘಟಕ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಕಲಬುರ್ಗಿ ಘಟಕ, ಕುರಗೋಡು ಘಟಕ, ವಿಜಯಪುರ ಘಟಕ, ಬಿಎಂಟಿಸಿಯ ಬೈರತಿ(ಘಟಕ-48), ಕೆಂಗೇರಿ - 2 (ಘಟಕ-37), ಕಲ್ಯಾಣನಗರ ಘಟಕ -33 ಪ್ರಶಸ್ತಿಗೆ ಆಯ್ಕೆಯಾಗಿವೆ.

ಘಟಕದ ಸಿಬ್ಬಂದಿಗೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬು-ಕುಮಾರ್ ಅವರು ಪ್ರಶಸ್ತಿ ಪ್ರದಾನ ಮಾಡಿದರು. ‘ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್‌ಗಳ ಕಾರ್ಯಾಚರಣೆಯಿಂದ ದಿನಕ್ಕೆ ಸುಮಾರು ₹8 ಕೋಟಿ ಮೊತ್ತದ ಡೀಸೆಲ್ ಖರ್ಚಾಗುತ್ತಿದೆ. ಒಂದೊಂದು ಹನಿ ಡೀಸೆಲ್ ಕೂಡ ಅಮೂಲ್ಯ’ ಎಂದರು.

ಲಲಿತಕಲಾ ಅಕಾಡೆಮಿಯ 2021ನೇ ಸಾಲಿನ ಪ್ರಶಸ್ತಿ ಪ್ರಕಟ

ಆರು ಕಲಾವಿದರಿಗೆ ‘ಗೌರವ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಸ್ಮಿತಾ ಕಾರಿಯಪ್ಪ

ಜಯಕುಮಾರ್ ಜಿ


ಬಿ. ದೇವರಾಜ

ಆರ್. ರಾಜ

ಅನಿರುದ್ಧ ಜೋಶಿ

ಸುಭಾಶ್ ಚಂದ್ರ ಕೆಂಬಾವಿ

ಬೆಂಗಳೂರು: 2021ನೇ ಸಾಲಿನ ‘ಗೌರವ ಪ್ರಶಸ್ತಿ’ಗೆ ಆರು ಕಲಾವಿದರನ್ನು ಕರ್ನಾಟಕ ಲಲಿತಕಲಾ ಅಕಾಡೆಮಿ ಆಯ್ಕೆ ಮಾಡಿದೆ.

ಸುದ್ದಿಗೋಷ್ಠಿಯಲ್ಲಿ ಪ್ರಶಸ್ತಿಗೆ ಆಯ್ಕೆಯಾದವರ ಕುರಿತು ಮಾಹಿತಿ ನೀಡಿದ ಅಕಾಡೆಮಿ ಅಧ್ಯಕ್ಷ ಡಿ. ಮಹೇಂದ್ರ, ‘ಪ್ರತಿವರ್ಷ ಮೂವರು ಕಲಾವಿದರಿಗೆ ವಾರ್ಷಿಕ ಗೌರವ ಪ್ರಶಸ್ತಿ ನೀಡಲಾಗುತ್ತಿತ್ತು. ಆದರೆ, ಈ ಸಾಲಿನಲ್ಲಿ 50ನೇ ವಾರ್ಷಿಕ ಕಲಾ ಪ್ರದರ್ಶನದ ಸುವರ್ಣ ಸಂದರ್ಭದ ನೆನಪಿಗಾಗಿ ಈ ಸಂಖ್ಯೆಯನ್ನು ಆರಕ್ಕೆ ಹೆಚ್ಚಿಸಲಾಗಿದೆ’ ಎಂದರು.

‘ರಾಷ್ಟ್ರೀಯ, ಅಂತರರಾಷ್ಟ್ರೀಯ ಕಲಾಪ್ರದರ್ಶನಗಳಲ್ಲಿ ಸಾಧನೆ ಮಾಡಿದ ಆರ್. ರಾಜ (ಬೆಂಗಳೂರು), ಜಯಕುಮಾರ್ ಜಿ. (ಬೆಂಗಳೂರು), ಸುಭಾಶ್ ಚಂದ್ರ ಕೆಂಬಾವಿ (ವಿಜಯಪುರ), ಅನಿರುದ್ಧ ಜೋಶಿ (ಬೀದರ್), ಸ್ಮಿತಾ ಕಾರಿಯಪ್ಪ (ಕೊಡಗು) ಮತ್ತು ಬಿ. ದೇವರಾಜ (ರಾಮನಗರ) ಅವರಿಗೆ 2021ನೇ ಸಾಲಿನ ಗೌರವ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಪ್ರಶಸ್ತಿಯು ತಲಾ ₹ 50 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ’ ಎಂದರು.

‘50ನೇ ಸುವರ್ಣ ವಾರ್ಷಿಕ ಕಲಾ ಬಹುಮಾನ ಸ್ಪರ್ಧೆಗೆ ಬಂದಿದ್ದ ಕಲಾಕೃತಿಗಳಲ್ಲಿ 85 ಕಲಾಕೃತಿಗಳನ್ನು ಪ್ರದರ್ಶನಕ್ಕೆ ಆಯ್ಕೆ ಮಾಡಿ, ಅದರಲ್ಲಿ ಉತ್ತಮ 10 ಕಲಾಕೃತಿಗಳಿಗೆ ತಲಾ ₹ 25 ಸಾವಿರ ನಗದು ಹಾಗೂ ಸ್ಮರಣಿಕೆ ನೀಡಲಾಗುತ್ತದೆ. ಅಲ್ಲದೆ, ಸುವರ್ಣ ಸಂದರ್ಭದ ನೆನಪಿಗಾಗಿ ವಿಶೇಷ ಮನ್ನಣೆ ನೀಡಿ 5 ಕಲಾಕೃತಿಗಳಿಗೆ ಪ್ರಶಸ್ತಿ ಪತ್ರ, ಸ್ಮರಣಿಕೆ ಮತ್ತು ಪಾರಿತೋಷಕ ನೀಡಲಾಗುವುದು’ ಎಂದರು.

ವಾರ್ಷಿಕ 'ಕಲಾಪ್ರದರ್ಶನದ ಬಹುಮಾನ' ಪಡೆದವರು: ನವೀನ್ ಕುಮಾರ್ ಬಿ. (ತುಮಕೂರು), ಜಿ.ಎಸ್.ಬಿ. ಅಗ್ನಿಹೋತ್ರಿ (ಉತ್ತರ ಕನ್ನಡ), ರಮೇಶ ಪರಸಪ್ಪ ಗಾರವಾಡ (ಗದಗ), ಕೆ.ವಿ. ಕಾಳೆ (ಬಳ್ಳಾರಿ), ನವೀನ್ ಕುಮಾರ್ ಪಿ. (ಬೆಂಗಳೂರು), ರಾಮಕೃಷ್ಣ ನಾಯಕ್ (ಮಂಗಳೂರು), ಶಿವಯೋಗಿ ಅಣ್ಣಾನವರ್ (ಬೆಳಗಾವಿ), ವಿಶ್ವನಾಥ ಎಚ್.ಎಂ, (ಬಾಗಲಕೋಟೆ), ಮಡಿವಾಳಪ್ಪ ಎಸ್. ಲಂಗೋಟಿ (ಹಾವೇರಿ), ಸುನಿಲ್ ಮಿಶ್ರ (ಬೆಂಗಳೂರು).

ಮೆಚ್ಚುಗೆ ಪಡೆದ ಕಲಾವಿದರು: ವಿಶಾಲ ಕೆ. (ಬೆಂಗಳೂರು), ಲಕ್ಷ್ಮಣ ಕಬಾಡಿ (ಬೆಂಗಳೂರು), ಪವನ್ ಕುಮಾರ್ ಡಿ. (ಕಲಬುರಗಿ), ನರಸಿಂಹ ಮೂರ್ತಿ (ತುಮಕೂರು), ಅಂಬರಾಯ ಚಿನ್ನಮಳ್ಳಿ (ಕಲಬುರಗಿ).

ಸಂತೋಷ್ ಆತ್ಮಹತ್ಯೆ: ದೂರು ಸಲ್ಲಿಕೆ

ಕಾಮಗಾರಿ ಒಪ್ಪಿಗೆ ಆದೇಶ ನಕಲಿ: ಎಫ್‌ಐಆರ್

ಬೆಂಗಳೂರು: ‘ಬೆಳಗಾವಿ ತಾಲ್ಲೂಕಿನ ಹಿಂಡಲಗಾ ಗ್ರಾಮದಲ್ಲಿ ರಸ್ತೆ ಕಾಮಗಾರಿಗಳ ನಿರ್ವಹಣೆ ಕುರಿತಂತೆ ‘ಅನುಮೋದನೆಗಾಗಿ ಆದೇಶಿಸಲಾಗಿದೆ’ ಎಂದು ಹಸಿರು ಶಾಯಿಯಲ್ಲಿ ಷರಾ ಇರುವ ನಕಲಿ ಆದೇಶದ ಬಗ್ಗೆ ವಿಧಾನಸೌಧ ಠಾಣೆಯಲ್ಲಿ ಗುರುವಾರ ಎಫ್‌ಐಆರ್ ದಾಖಲಾಗಿದೆ.

'ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಅಧಿಕಾರಿಗಳು ನಕಲಿ ಆದೇಶದ ಬಗ್ಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಆತ್ಮಹತ್ಯೆ ಮಾಡಿಕೊಂಡ ಗುತ್ತಿಗೆದಾರ ಸಂತೋಷ್ ಪಾಟೀಲ ಅವರಿಗೆ 108 ಕಾಮಗಾರಿಗಳ ಬಿಲ್ ಬಾಕಿ ಇತ್ತು ಎಂದು ಆರೋಪಿಸಲಾಗಿತ್ತು. ಕಾರ್ಯಾದೇಶ ಇಲ್ಲದೇ, ಕಾಮಗಾರಿ ನಡೆಸಿದ್ದಾರೆ ಎಂದು ಕೆಲವರು ದೂರಿದ್ದರು. ಈ ಬೆಳವಣಿಗೆ ಬೆನ್ನಲ್ಲೇ, ಕಾಮಗಾರಿಗಳ ಅನುಮೋದನೆ ಕುರಿತು ಇಲಾಖೆ ಸಂಶಯ ವ್ಯಕ್ತಪಡಿಸಿದೆ.

‘ಈ ಕಾಮಗಾರಿಗೆ ಸಂಬಂಧಿಸಿದಂತೆ 2021ರ ಫೆ. 15ರಂದು ಬೆಳಗಾವಿ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಆಶಾ ಪ್ರಶಾಂತ್‌ರಾವ್ ಐಹೊಳೆ ಅವರು ಇಲಾಖೆಗೆ ಬರೆದಿದ್ದಾರೆ ಎನ್ನಲಾದ ಪತ್ರದಲ್ಲಿ ಹಸಿರು ಶಾಯಿಯಲ್ಲಿ ‘ಆದೇಶದ ಪ್ರತಿಗಳನ್ನು 2021ರ ಮಾರ್ಚ್ 5ರಂದು ನೀಡಲಾಗುವುದು’ ಮತ್ತು ಕೊನೆಯ ಪುಟದಲ್ಲಿ ‘ಅನುಮೋದನೆಗಾಗಿ ಆದೇಶಿಸಲಾಗಿದೆ’ ಎಂದು ನಮೂದಿಸಲಾಗಿದೆ. ಆದರೆ, ಇದು ಯಾರದ್ದೋ ಕೃತ್ಯವಾಗಿದೆ’ ಎಂದು ಇಲಾಖೆಯ ಅಧಿಕಾರಿಗಳು ದೂರಿನಲ್ಲಿ ತಿಳಿಸಿದ್ದಾರೆ. ‘ಆಶಾ ಪ್ರಶಾಂತ್‌ರಾವ್ ಐಹೊಳೆ ಅವರ ಪತ್ರವು ಇ– ಆಫೀಸ್‌ನಲ್ಲಿ 2021ರ ಫೆ. 17ರಂದು ಸ್ವೀಕೃತ ಆಗಿದೆ. ಈ ಪತ್ರದ ಮೇಲೆ ಹಸಿರು ಶಾಯಿಯಲ್ಲಿರುವ ಅಂಶವನ್ನು ಇಲಾಖೆಯ ಯಾವುದೇ ಅಧಿಕಾರಿ ಅಥವಾ ಸಿಬ್ಬಂದಿ ನಮೂದಿಸಿಲ್ಲ. ವಾಸ್ತವವಾಗಿ ಇಲಾಖೆಯಲ್ಲಿ ಸ್ವೀಕೃತಿಗೊಂಡ ಪತ್ರಗಳ ಮೇಲೆ ಮೊಹರು ಹಾಕಿರುವ ಪತ್ರಗಳು ಅರ್ಜಿದಾರರ ಪ್ರತಿಯಾಗಿದೆ. ಇದರ ಮೇಲೆ ಕಚೇರಿಯ ಟಿಪ್ಪಣಿಯಾಗಲಿ, ಷರಾ ಆಗಲಿ ನಮೂದಿಸುವುದಿಲ್ಲ. ಹೀಗಾಗಿ ಹಸಿರು ಶಾಯಿಯಲ್ಲಿ ನಮೂದಿಸಿರುವುದು ನಕಲಿ’ ಎಂದಿದ್ದಾರೆ.

‘ಈ ರೀತಿ ಷರಾ ಮೂಲಕ ಅನುಮೋದನೆ ನೀಡುವುದು ನಿಯಮಬಾಹಿರ. ಅಲ್ಲದೆ, ಸರ್ಕಾರದಲ್ಲಿ ಸ್ವೀಕೃತವಾದ ಪ್ರಸ್ತಾವನೆಗಳನ್ನು ಕ್ರೋಡೀಕರಿಸಿ ಅನುದಾನ ಲಭ್ಯತೆ ಆಧಾರದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಂಡು ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿ ಸರ್ಕಾರಿ ಆದೇಶ ಹೊರಡಿಸಲಾಗುತ್ತದೆ. ಈ ಅರ್ಜಿ ಸ್ವೀಕೃತ ಆಗಿದ್ದರೂ ಅನುದಾನ ಕೊರತೆಯಿಂದ ಪರಿಗಣಿಸದೆ ವಿಲೇ ಮಾಡಲಾಗಿದೆ’ ಎಂದೂ ಅವರು ವಿವರಿಸಿದ್ದಾರೆ.

ಪಿಯುಸಿ ಪರೀಕ್ಷೆ: ಲಸಿಕೆ ಪಡೆದ ವರದಿ ಕಡ್ಡಾಯವಲ್ಲ

ಬೆಂಗಳೂರು: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ರಾಜ್ಯದಾದ್ಯಂತ ಶುಕ್ರವಾರ ಆರಂಭವಾಗುತ್ತಿದ್ದು, ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಕೋವಿಡ್ ಲಸಿಕೆ ಪಡೆದ ವರದಿ ಕಡ್ಡಾಯವಲ್ಲ. ಆದರೆ, ಪರೀಕ್ಷಾ ಕೇಂದ್ರದಲ್ಲಿ ಆರೋಗ್ಯ ತಪಾಸಣೆ ಕಡ್ಡಾಯ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ತಿಳಿಸಿದೆ.

ಪರೀಕ್ಷೆಗೆ ಆರೋಗ್ಯ ಇಲಾಖೆ ಹಾಗೂ ತಾಂತ್ರಿಕ ಸಲಹಾ ಸಮಿತಿ ಎಸ್‌ಒಪಿ ಜಾರಿ ಮಾಡಿದೆ. ಅದರಲ್ಲಿ ಪ್ರಮುಖವಾಗಿ ಪರೀಕ್ಷಾ ಕೇಂದ್ರದಲ್ಲಿ ಆರೋಗ್ಯ ತಪಾಸಣೆ ಕಡ್ಡಾಯವಾಗಿದೆ. ಲಸಿಕೆ ಪಡೆದ ಪ್ರಮಾಣಪತ್ರವನ್ನೂ ಪರಿಶೀಲಿಸುವಂತೆ ಸಲಹೆ ನೀಡಿದೆ. ಆದರೆ, ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಲಸಿಕೆ ಪಡೆದ ವರದಿ ಕಡ್ಡಾಯ ಅಲ್ಲ ಎಂದು ಸ್ಪಷ್ಟಪಡಿಸಿದೆ.

ಮುನ್ನೆಚ್ಚರಿಕೆ ಕ್ರಮವಾಗಿ ವಿದ್ಯಾರ್ಥಿಗಳು ಮಾಸ್ಕ್ ಧರಿಸುವುದು, ಅಂತರ ಕಾಪಾಡುವುದು ಹಾಗೂ ಸ್ಯಾನಿಟೈಸ್ ಮಾಡುವುದು ಕಡ್ಡಾಯ. ಅದರ ಹೊರತಾಗಿ, ಯಾವುದಾದರೂ ವಿದ್ಯಾರ್ಥಿಗೆ ಕೋವಿಡ್ ಸೋಂಕು ದೃಢಪಟ್ಟರೆ ಪ್ರತ್ಯೇಕ ಕೊಠಡಿಯಲ್ಲಿ ವ್ಯವಸ್ಥೆ ಮಾಡಲಾಗುವುದು ಎಂದು ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಹಿಜಾಬ್– ಪ್ರವೇಶ ಪತ್ರ ಪಡೆಯದ ವಿದ್ಯಾರ್ಥಿನಿಯರು 4

ಎಂ.ಆರ್.ದೊರೆಸ್ವಾಮಿ ಅವರು ನಟ ಪ್ರಕಾಶ್ ಬೆಳವಾಡಿ ಅವರನ್ನು ಸನ್ಮಾನಿಸಿದರು. (ಎಡದಿಂದ) ಡೀನ್ ಡಾ.ವಿ.ಕೃಷ್ಣ, ಕುಲಪತಿ ಜೆ.ಸೂರ್ಯಪ್ರಸಾದ್, ಹಾಗೂ ಕುಲಸಚಿವ ಡಾ.ಕೆ.ಎಸ್.ಶ್ರೀಧರ್ ಇದ್ದರು – ಪ್ರಜಾವಾಣಿ ಚಿತ್ರ

ವಿದ್ಯಾರ್ಥಿಗಳು ಕೌಶಲಾಭಿವೃದ್ಧಿಯತ್ತ ಗಮನ ಹರಿಸಲಿ: ದೊರೆಸ್ವಾಮಿ

ಬೆಂಗಳೂರು: ‘ವಿದ್ಯಾರ್ಥಿಗಳು ಪಠ್ಯಬದ್ಧ ಚಟುವಟಿಕೆಗಳ ಜೊತೆಗೆ ಕೌಶಲಾಭಿವೃದ್ಧಿಯತ್ತಲೂ ಹೆಚ್ಚಿನ ಗಮನ ಕೇಂದ್ರೀಕರಿಸಬೇಕು’ ಎಂದು ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಎಂ.ಆರ್.ದೊರೆಸ್ವಾಮಿ ತಿಳಿಸಿದರು.

ವಿಶ್ವವಿದ್ಯಾಲಯ ಆಯೋಜಿಸಿರುವ ‘ಆತ್ಮತೃಷ-2022’ ಟೆಕ್ನೋ ಸಾಂಸ್ಕೃತಿಕ ಉತ್ಸವದ ಉದ್ಘಾಟನೆ ಕಾರ್ಯಕ್ರಮದಲ್ಲಿ ಗುರುವಾರ ಮಾತನಾಡಿದರು.

‘ಕೋವಿಡ್‌ನಿಂದಾಗಿ ವಿದ್ಯಾರ್ಥಿಗಳು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಿರಲಿಲ್ಲ. ಈಗ ಕೋವಿಡ್ ಕಡಿಮೆಯಾಗಿದೆ. ಹೀಗಾಗಿ ‘ಆತ್ಮತೃಷ’ ಮೂಲಕ ಅವರಿಗೆ ವೇದಿಕೆ ಕಲ್ಪಿಸಿದ್ದೇವೆ. ಇದೇ 23 ಮತ್ತು 24ರಂದು ಕಾರ್ಯಕ್ರಮ ನಡೆಯಲಿದೆ’ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ನಟ ಪ್ರಕಾಶ್ ಬೆಳವಾಡಿ ಅವರು ಸಿನಿಮಾ ಕ್ಷೇತ್ರ ಹಾಗೂ ಅಲ್ಲಿ ಬಳಕೆಯಾಗುತ್ತಿರುವ ತಾಂತ್ರಿಕ ಸೂಕ್ಷ್ಮತೆ ಕುರಿತ ಹಲವು ಮಾಹಿತಿಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು.

ಸಂಜೆ 6 ಗಂಟೆಗೆ ನಡೆದ ಕಾರ್ಯಕ್ರಮದಲ್ಲಿ ವಿಜಯನಗರ ಬಿಂಬ ತಂಡದವರು ‘ಶುದ್ಧಗೆ’ ಕಿರು ನಾಟಕ ಪ್ರದರ್ಶಿಸಿದರು.

ಒಕ್ಕಲಿಗರ ಸಂಘ: 6ನೇ ವೇತನ ಶ್ರೇಣಿ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘದ ನೌಕರರ ಬಹುದಿನಗಳ ಬೇಡಿಕೆಯಾದ ಆರನೇ ವೇತನ ಶ್ರೇಣಿಯನ್ನು ಸಂಘವು ಜುಲೈ 1 ರಿಂದ ಜಾರಿಗೊಳಿಸಲಿದೆ.

ಈ ಸಂಬಂಧ ಸಂಘದ ಆಡಳಿತ ಮಂಡಳಿ ಆದೇಶ ಹೊರಡಿಸಿದೆ. ಈ ನಿರ್ಧಾರದಿಂದ 1,500 ಕ್ಕೂ ಹೆಚ್ಚು ನೌಕರರಿಗೆ ಅನುಕೂಲವಾಗಲಿದೆ. ಅಲ್ಲದೆ, ಕ್ರೋಡೀಕೃತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿದ್ದ 400 ಕ್ಕೂ ಹೆಚ್ಚು ನೌಕರರನ್ನು ಕಾಯಂಗೊಳಿಸಲೂ ಸಂಘ ನಿರ್ಧರಿಸಿದೆ.

ಹೊಸ ನಿರ್ದೇಶನ ಜುಲೈ 1ರಿಂದ ಜಾರಿಗೆ

ಕೋರಿಕೆ ಇಲ್ಲದೆ ಕ್ರೆಡಿಟ್ ಕಾರ್ಡ್ ವಿತರಣೆಗೆ ಆರ್‌ಬಿಐ ನಿರ್ಬಂಧ

ಪ್ರಜಾವಾಣಿ ವಾರ್ತೆ

ಮುಂಬೈ (ಪಿಟಿಐ): ಗ್ರಾಹಕರಿಂದ ಕೋರಿಕೆ ಇಲ್ಲದಿದ್ದರೆ ಕ್ರೆಡಿಟ್ ಕಾರ್ಡ್ ನೀಡಬಾರದು, ಗ್ರಾಹಕರಿಂದ ಒಪ್ಪಿಗೆ ಪಡೆಯದೆ ಹಾಲಿ ಇರುವ ಕ್ರೆಡಿಟ್ ಕಾರ್ಡ್‌ಗಳನ್ನು ಮೇಲ್ದರ್ಜೆಗೆ ಏರಿಸಬಾರದು ಎಂದು ಆರ್‌ಬಿಐ, ಕ್ರೆಡಿಟ್ ಕಾರ್ಡ್ ನೀಡುವ ಕಂಪನಿಗಳಿಗೆ ಸೂಚಿಸಿದೆ. ಈ ನಿಯಮ ಉಲ್ಲಂಘಿಸಿದರೆ ಕಂಪನಿಗಳು, ಕ್ರೆಡಿಟ್ ಕಾರ್ಡ್ ಬಿಲ್ ಮೊತ್ತದ ಎರಡರಷ್ಟನ್ನು ದಂಡದ ರೂಪದಲ್ಲಿ ಪಾವತಿಸಬೇಕು ಎಂದು ಹೇಳಿದೆ.

ಬಾಕಿ ಮೊತ್ತ ವಸೂಲು ಮಾಡುವ ಸಂದರ್ಭದಲ್ಲಿ ಗ್ರಾಹಕರಿಗೆ ಬೆದರಿಕೆ ಒಡ್ಡಬಾರದು, ಅವರಿಗೆ ಕಿರುಕುಳ ನೀಡಬಾರದು ಎಂದು ಕಾರ್ಡ್ ವಿತರಣಾ ಕಂಪನಿಗಳಿಗೆ ಹಾಗೂ ಮಧ್ಯವರ್ತಿಯಾಗಿ ಕೆಲಸ ಮಾಡುವ ಏಜೆಂಟ್‌ಗಳಿಗೆ ತಾಕೀತು ಮಾಡಿದೆ.

‘ಗ್ರಾಹಕರಿಂದ ಕೋರಿಕೆ ಇಲ್ಲದೆ ಕ್ರೆಡಿಟ್ ಕಾರ್ಡ್ ವಿತರಿಸುವುದು, ಮೇಲ್ದರ್ಜೆಗೆ ಏರಿಸುವುದನ್ನು ನಿರ್ಬಂಧಿಸಲಾಗಿದೆ’ ಎಂದು ಹೇಳಿದೆ. ಈ ನಿರ್ದೇಶನಗಳು ಜುಲೈ 1ರಿಂದ ಜಾರಿಗೆ ಬರಲಿವೆ.

‘ಕೋರಿಕೆ ಸಲ್ಲಿಸದಿದ್ದರೂ ಕಾರ್ಡ್ ಪಡೆದಲ್ಲಿ ಅಂತಹ ವ್ಯಕ್ತಿಯು ಆರ್‌ಬಿಐ ಒಂಬುಡ್ಸ್‌ಮನ್ ಮೊರೆ ಹೋಗಬಹುದು. ಕ್ರೆಡಿಟ್ ಕಾರ್ಡ್ ನೀಡಿದ ಕಂಪನಿ ಗ್ರಾಹಕರಿಗೆ ಪಾವತಿಸಬೇಕಿರುವ ಪರಿಹಾರ ಮೊತ್ತವನ್ನು ಒಂಬುಡ್ಸ್‌ಮನ್ ತೀರ್ಮಾನಿಸುತ್ತಾರೆ’ ಎಂದು ಆರ್‌ಬಿಐ ಹೇಳಿದೆ. ಬ್ಯಾಂಕೇತರ ಹಣಕಾಸು ಸಂಸ್ಥೆಗಳು ತನ್ನ ಅನುಮತಿ ಇಲ್ಲದೆ ಕ್ರೆಡಿಟ್ ಕಾರ್ಡ್ ವಹಿವಾಟು ಶುರುಮಾಡುವಂತೆ ಇಲ್ಲ ಎಂದು ಹೇಳಿದೆ.

‘ಕಾರ್ಡ್ ನೀಡುವ ಕಂಪನಿಗಳು, ಅವುಗಳು ನೇಮಕ ಮಾಡುವ ಏಜೆಂಟ್‌ಗಳು ಬಾಕಿ ಮೊತ್ತ ವಸೂಲು ಮಾಡಲು ಗ್ರಾಹಕರನ್ನು ಬೆದರಿಸುವ ಕೆಲಸಕ್ಕೆ ಇಳಿಯುವಂತಿಲ್ಲ.’ ಎಂದು ಕೂಡ ಆರ್‌ಬಿಐ ನಿರ್ದೇಶನ ನೀಡಿದೆ.

ಸಂಕ್ಷಿಪ್ತ ಸುದ್ದಿ

ಆರೋಗ್ಯ ಇಲಾಖೆ: ಹಾಜರಾತಿ ಆಧರಿಸಿ ವೇತನ

ಬೆಂಗಳೂರು: ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಗುಣಾತ್ಮಕ ಬದಲಾವಣೆ ತರಲು ಎಲ್ಲ ಹಂತದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಬಯೋಮೆಟ್ರಿಕ್ ಹಾಜರಾತಿ ಆಧರಿಸಿ ವೇತನ ಪಾವತಿಸುವ ವ್ಯವಸ್ಥೆ ಕಡ್ಡಾಯಗೊಳಿಸುವ ತೀರ್ಮಾನವನ್ನು ಇಲಾಖೆ ಕೈಗೊಂಡಿದೆ.

ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿದ ಸಚಿವ ಡಾ. ಕೆ.ಸುಧಾಕರ್, ಸಭೆ ಬಳಿಕ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ಆಸ್ಪತ್ರೆ, ಇಲಾಖೆ ಕಚೇರಿ ಮತ್ತು ವೈದ್ಯಕೀಯ ಸಂಸ್ಥೆಗಳಲ್ಲಿ ವೈದ್ಯರು, ಅಧಿಕಾರಿಗಳು ಮತ್ತು ಸಿಬ್ಬಂದಿ ಕರ್ತವ್ಯದ ವೇಳೆಯಲ್ಲಿ ಹಾಜರಿಲ್ಲದಿರುವ ಬಗ್ಗೆ ಸಾರ್ವಜನಿಕರು ಮತ್ತು ಚುನಾಯಿತ ಪ್ರತಿನಿಧಿಗಳಿಂದ ದೂರುಗಳು ಬಂದ ಕಾರಣ ಈ ಕ್ರಮ ತೆಗೆದುಕೊಳ್ಳಲಾಗಿದೆ. ಎಂದರು.

ಸಹಾಯಕ ಪ್ರಾಧ್ಯಾಪಕ ಹುದ್ದೆ: ಮರು ಪರೀಕ್ಷೆಗೆ ಆಗ್ರಹ

ಬೆಂಗಳೂರು: ‘ಸರ್ಕಾರಿ ಪ್ರಥಮ ದರ್ಜೆಗಳ 1,242 ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿಗೆ ನಡೆದ ಪರೀಕ್ಷೆಯಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ (ಕೆಇಎ) ಆಗಿರುವ ಲೋಪಗಳು ಮತ್ತು ಅಕ್ರಮ ಆರೋಪಗಳ ಕುರಿತು ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ. ಈ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಅವರು ಪತ್ರ ಬರೆದಿದ್ದಾರೆ.

ಕಸಾಪ ದತ್ತಿ ಪ್ರಶಸ್ತಿಗೆ ಆಯ್ಕೆ

ಪ್ರಜಾವಾಣಿ ವಾರ್ತೆ

ಅಕ್ಕೈ ಪದ್ಮಸಾಲಿ

ಮನೋಹರ ಚಂದ್ರ ಪ್ರಸಾದ್

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ ನೀಡುವ ಫಾದರ್ ಚಸರಾ ಕನ್ನಡ ಸಂಸ್ಕೃತಿ ದತ್ತಿ ಪ್ರಶಸ್ತಿಗೆ ಸಾಮಾಜಿಕ ಕಾರ್ಯಕರ್ತರಾದ ಡಾ.ಅಕ್ಕೈ ಪದ್ಮಸಾಲಿ ಹಾಗೂ ರೆವರೆಂಡ್ ಡಾ.ಡಿ.ಮನೋಹರಚಂದ್ರ ಪ್ರಸಾದ್ ಅವರನ್ನು ಆಯ್ಕೆ ಮಾಡಲಾಗಿದೆ.

ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿ ಸಭೆಯಲ್ಲಿ 2022ರ ಸಾಲಿನ ಫಾದರ್ ಚಸರಾ ಕನ್ನಡ ಸಂಸ್ಕೃತಿ ದತ್ತಿ ಪ್ರಶಸ್ತಿಗೆ ಇಬ್ಬರನ್ನೂ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. ಪ್ರಶಸ್ತಿ ತಲಾ ₹ 10 ಸಾವಿರ ನಗದು ಜೊತೆಗೆ ಸ್ಮರಣಿಕೆ ಒಳಗೊಂಡಿರುತ್ತದೆ.

2011ರ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿ ಆದೇಶ: ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಎಸ್‌ಸಿ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗೆ 2011ರಲ್ಲಿ ನಡೆಸಿದ್ದ ಪರೀಕ್ಷೆಯಲ್ಲಿ ಅಂತಿಮ ಪಟ್ಟಿಯಲ್ಲಿದ್ದ 362 ಅಭ್ಯರ್ಥಿಗಳ ಆಯ್ಕೆ ಸಿಂಧುಗೊಳಿಸಿ ನೇಮಕಾತಿ ಆದೇಶ ನೀಡಲು ರಾಜ್ಯ ಸರ್ಕಾರ ಜಾರಿಗೆ ತಂದಿರುವ ಕಾಯ್ದೆಯ ಸಿಂಧುತ್ವ ಪ್ರಶ್ನಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಸಾಮಾಜಿಕ ಕಾರ್ಯಕರ್ತ ಮೊಹಮ್ಮದ್ ಆರಿಫ್ ಜಮೀಲ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿಅರ್ಜಿವಜಾಗೊಳಿಸಿತು. ಆಯ್ಕೆ ಸಿಂಧುಗೊಳಿಸಲು ಸರ್ಕಾರವು ‘ಕರ್ನಾಟಕ ನಾಗರಿಕ ಸೇವೆಗಳ 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ಗಳ ಆಯ್ಕೆ ಮತ್ತು ನೇಮಕಾತಿ ಸಿಂಧುಗೊಳಿಸುವಿಕೆ ಕಾಯ್ದೆ-2022’ ಜಾರಿಗೆ ತಂದಿತ್ತು.

ಕೆಎಟಿ ಆದೇಶ: ಏತನ್ಮಧ್ಯೆ ಕೆಎಟಿಯಲ್ಲೂ ಗುರುವಾರ ಇದೇ ವಿಷಯಕ್ಕೆ ಸಂಬಂಧಿಸಿದ ಅರ್ಜಿ ವಿಚಾರಣೆ ನಡೆಯಿತು. ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಅರುಣ್ ಶ್ಯಾಮ್, ಹೈಕೋರ್ಟ್ ವಿಭಾಗೀಯ ನ್ಯಾಯಪೀಠವು ಪಿಐಎಲ್ ವಜಾಗೊಳಿಸಿರುವ ವಿಚಾರವನ್ನು ಕೆಎಟಿ ನ್ಯಾಯಪೀಠದ ಗಮನಕ್ಕೆ ತಂದರು. ಇದನ್ನು ಪರಿಗಣಿಸಿದ ಕೆಎಟಿ ಪೀಠ, ಅರ್ಜಿದಾರರ ಮಧ್ಯಂತರ ಮನವಿ ಪುರಸ್ಕರಿಸಲು ನಿರಾಕರಿಸಿತು. ‘ಕಾಯ್ದೆಯ ಅನುಸಾರ ಸರ್ಕಾರ ನೇಮಕಾತಿ ಆದೇಶ ನೀಡಬಹುದು. ಆದರೆ, ನೇಮಕಾತಿ ಆದೇಶ ಈ ಅರ್ಜಿ ಸಂಬಂಧ ಕೆಎಟಿ ಕೈಗೊಳ್ಳುವ ಅಂತಿಮ ನಿರ್ಧಾರಕ್ಕೆ ಒಳಪಟ್ಟಿರಲಿದೆ’ ಎಂದು ಸ್ಪಷ್ಟಪಡಿಸಿತು.

ಹಳೇ ಹುಬ್ಬಳ್ಳಿ ಗಲಭೆ: ಘಟನಾ ಸ್ಥಳಗಳಿಗೆ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಭೇಟಿ

ಆಯೋಗದಿಂದ ಸರ್ಕಾರಕ್ಕೆ ವರದಿ: ಅಜೀಂ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಗಲಭೆಗೆ ಸಂಬಂಧಿಸಿದಂತೆ ವಿವಿಧ ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ಶೀಘ್ರದಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗುವುದು’ ಎಂದು ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅಬ್ದುಲ್ ಅಜೀಂ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪ್ರಕರಣದ ತನಿಖೆ ನಡೆಸುತ್ತಿರುವ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾಹಿತಿ ಪಡೆದಿದ್ದು, ಘಟನಾ ಸ್ಥಳಗಳಿಗೂ ಭೇಟಿ ನೀಡಿದ್ದೇನೆ. ಇಂತಹ ಘಟನೆಗಳು ಮರುಕಳಿಸದಂತೆ ಎಲ್ಲಾ ಸಮುದಾಯದವರನ್ನೊಳಗೊಂಡ ಶಾಂತಿ ಸಮಿತಿ ರಚಿಸಬೇಕು ಎಂದು ಪೊಲೀಸರಿಗೆ ಸಲಹೆ ನೀಡಿದ್ದೇನೆ’ ಎಂದರು.

‘ಏಳು ರಸ್ತೆಗಳು ಸೇರುವ ಜಾಗದಲ್ಲಿ ಘಟನೆ ನಡೆದಿದೆ. ಉದ್ರಿಕ್ತರು ಆಕ್ಷೇಪಾರ್ಹ ಸ್ಟೇಟಸ್ ಹಾಕಿದ್ದ ಆರೋಪಿಯನ್ನು ತಮ್ಮ ವಶಕ್ಕೆ ಕೇಳಿದ್ದಾರೆ. ಆತನ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ಹೇಳಿ ಪೊಲೀಸರು ಸಮಾಧಾನ ಪಡಿಸಲು ಮುಂದಾದಾಗ ಗಲಭೆ ನಡೆಸಿದ್ದಾರೆ. ಘಟನೆಯಲ್ಲಿ ಪೊಲೀಸ್ ಕಮಿಷನರ್ ಲಾಭೂ ರಾಮ್ ಸೇರಿದಂತೆ 12 ಸಿಬ್ಬಂದಿಗೆ ಗಾಯವಾಗಿದೆ’ ಎಂದರು.

ಕಲ್ಲು ತೂರುವುದು ಸಂವಿಧಾನಕ್ಕೆ ಅಗೌರವ: ‘ಪೊಲೀಸ್ ಠಾಣೆಗೆ ಕಲ್ಲು ತೂರುವುದು ಮತ್ತು ಹಲ್ಲೆ ನಡೆಸುವುದು ಸಂವಿಧಾನಕ್ಕೆ ಅಗೌರವ ತೋರುವ ಕೃತ್ಯ. ಗಲಭೆ ನಡೆಯದಂತೆ ನೀವೂ ಮುನ್ನೆಚ್ಚರಿಕೆ ವಹಿಸಬೇಕು ಎಂದು ಸಮುದಾಯದ ಮುಖಂಡರಿಗೆ ಸಲಹೆ ನೀಡಿದ್ದೇನೆ. ಹಿಂದೂ ಮತ್ತು ಮುಸಲ್ಮಾನರನ್ನು ಭಾಷೆ ಮೇಲೆ ಗುರುತು ಹಿಡಿಯಲಾಗದಂತೆ ಹುಬ್ಬಳ್ಳಿ ಮತ್ತು ಧಾರವಾಡದ ಜನ ಬದುಕುತ್ತಿದ್ದಾರೆ. ಯಾರೇ ಸತ್ತರೂ, ಎರಡೂ ಸಮುದಾಯದ ಜನರು ಬಂದು ಹೆಗಲು ಕೊಡಬೇಕು. ಕಿಡಿಗೇಡಿಗಳು ಶೇಕಡ ಒಂದೆರಡರಷ್ಟು ಮಂದಿ ಮಾತ್ರ ಇದ್ದಾರೆ. ಇಲ್ಲಿ ಹಿಂದೂ ಮತ್ತು ಮುಸ್ಲಿಮರು ರಕ್ತಸಂಬಂಧಿಗಳಂತೆ ಇದ್ದಾರೆ. ಅದರಂತೆ ನಾವು ಭಾರತೀಯರು ಎಂಬ ಭಾವನೆ ಬೆಳೆಸಿಕೊಂಡು ಬದುಕಬೇಕು’ ಎಂದರು.

ಘಟನಾ ಸ್ಥಳಗಳಿವೆ ಭೇಟಿ: ನಂತರ ಘಟನೆ ನಡೆದ ಹಳೇ ಹುಬ್ಬಳ್ಳಿಯ ಇಂಡಿ ಪಂಪ್ ವೃತ್ತ, ಪೊಲೀಸ್ ಠಾಣೆ, ಕಲ್ಲು ತೂರಾಟದಿಂದ ಹಾನಿಗೊಂಡ ದಿಡ್ಡಿ ಓಣಿಯ ಹನುಮಾನ್ ದೇವಸ್ಥಾನ ಮತ್ತು ಆಸ್ಪತ್ರೆಗೆ ಭೇಟಿ ನೀಡಿದರು. ಠಾಣೆಯಿಂದ ದೇವಸ್ಥಾನದವರೆಗೆ ನಡೆದುಕೊಂಡ ಹೋದ ಅವರು, ದೇವರಿಗೆ ನಮಸ್ಕರಿಸಿ ದೇವಸ್ಥಾನದ ಟ್ರಸ್ಟ್‌ನ ಪದಾಧಿಕಾರಿಗಳಿಂದ ಹಾನಿ ಕುರಿತು ಮಾಹಿತಿ ಪಡೆದರು.

‘ದೇಗುಲದ ಮೇಲೆ ಕಲ್ಲು ತೂರಿದ್ದರಿಂದ ಕಿಟಕಿ ಗಾಜುಗಳು ಪುಡಿಯಾಗಿವೆ. ದೇಗುಲದ ಬಾಗಿಲು ಹಾಕಿದ್ದರಿಂದ ಹೆಚ್ಚಿನ ಹಾನಿಯಾಗಿಲ್ಲ’ ಎಂದು ದೇವಸ್ಥಾನದ ಟ್ರಸ್ಟಿ ಮಂಜುನಾಥ ಶಿರೂರ, ಅರ್ಚಕ ಪ್ರಕಾಶ ಬಾದ್ರಿ ತಿಳಿಸಿದರು.

ವಿಡಿಯೊ ಮಾಡಿದ್ದೆಲ್ಲಿ? ಯಾವಾಗ?

ಹುಬ್ಬಳ್ಳಿ: ಗಲಭೆಯ ಪ್ರಮುಖ ಆರೋಪಿ ವಸೀಂ ಪಠಾಣನನ್ನು ಪೊಲೀಸರು ಬುಧವಾರ ರಾತ್ರಿ ಬಂಧಿಸಿದ್ದಾರೆ. ಆದರೆ, ಆತ ‘ಗಲಭೆಗೆ ನಾನು ಕಾರಣನಲ್ಲ’ ಎಂಬ ವಿಡಿಯೊ ಗುರುವಾರ ವೈರಲ್ ಆಗಿದೆ. ಹಾಗಾಗಿ, ಆತ ವಿಡಿಯೊ ಮಾಡಿದ್ದೆಲ್ಲಿ? ಅದು ಗುರುವಾರ ವೈರಲ್ ಆಗಿದ್ದು ಹೇಗೆ ಎಂಬ ಚರ್ಚೆ ನಡೆದಿದೆ.

ಪೊಲೀಸರ ಬಂಧನಕ್ಕೂ ಮುನ್ನವೇ ವಸೀಂ ವಿಡಿಯೊ ಮಾಡಿದ್ದನೇ? ಬಂಧನ ಸುಳಿವಿನ ಹಿನ್ನೆಲೆಯಲ್ಲಿ ವಿಡಿಯೊ ಮಾಡಲಾಗಿದೆಯೇ? ಎಂಬ ಬಗ್ಗೆ ತನಿಖೆ ಮಾಡಲಾಗುತ್ತಿದೆ.

ಶುಕ್ರವಾರ, ಏಪ್ರಿಲ್ 22, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 111 | ಪುಟ 18
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ರೊಮ್ಯಾಂಟಿಕ್ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಅಜಯ್ ರಾವ್ ಈಗ 'ಶೋಕಿವಾಲ'ನಾಗಿ ಸಂಜನಾ ಆನಂದ್ ಜತೆ ನಗಿಸಲು ಬಂದಿದ್ದಾರೆ

ಆಳ-ಅಗಲ ಪತ್ರಿಕೆಗಳಿಗೆ ಮುದ್ರಣ ಕಾಗದದ ಹೊರೆ
ಸೇವಾಸಿಂಧು ಪೋರ್ಟಲ್‌ಗೆ ಪ್ರಶಸ್ತಿ 9
'ನನ್ನ ಬಂಧಿಸಲು ಸಿದ್ದರಾಮಯ್ಯ ಯತ್ನಿಸಿದ್ದರು' 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,911 ▲	17,392 ▲	₹54,280 (ಬೆಂಗಳೂರು)	₹69,600 (ಬೆಂಗಳೂರು) ▼	76.17 ▲

ಇದೇ 25ರಿಂದ ಸ್ವಯಂ ನಕ್ಷೆ ತಯಾರಿಸುವ ವ್ಯವಸ್ಥೆ ಜಾರಿ

ನಿಮ್ಮ ಪೋಡಿ ನೀವೇ ಮಾಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂ ಒಡೆತನ ಹೊಂದಿರುವವರು ತಮ್ಮ ಸ್ವಂತ ಜಮೀನಿನ 11 ಇ ಸ್ಕೆಚ್, ಪೋಡಿ, ಭೂಪರಿವರ್ತನಾ ಪೂರ್ವ ಸ್ಕೆಚ್‌ಗಳನ್ನು (ನಕ್ಷೆ) ತಾವೇ ತಯಾರಿಸಿಕೊಳ್ಳಬಹುದಾದ ಸ್ವಯಂ ಸೇವೆಯ ಹೊಸ ವ್ಯವಸ್ಥೆಯೊಂದನ್ನು ಕಂದಾಯ ಇಲಾಖೆ ಸಿದ್ಧಪಡಿಸಿದ್ದು, ಇದೇ 25ರಿಂದ ಜಾರಿ ಬರಲಿದೆ.

ಇದಕ್ಕಾಗಿ ಕಂದಾಯ ಇಲಾಖೆ 'ಸ್ವಾವಲಂಬಿ' ಹೆಸರಿನ ಆ್ಯಪ್ ಅಭಿವೃದ್ಧಿಪಡಿಸಿದೆ. ಈ ಆ್ಯಪ್ ನಿರ್ವಹಣೆ ಗೊತ್ತಿದ್ದರೆ ಸ್ವತಃ ತಾವೇ ರೆವಿನ್ಯೂ ಸ್ಕೆಚ್ ತಯಾರಿಸಬಹುದು, ಇಲ್ಲವೇ ಬಲ್ಲವರಿಂದ ಸ್ಕೆಚ್ ಸಿದ್ಧಪಡಿಸಿಕೊಳ್ಳಲೂಬಹುದು ಎಂದು ಕಂದಾಯ ಸಚಿವ ಆರ್.ಅಶೋಕ 'ಪ್ರಜಾವಾಣಿ'ಗೆ ತಿಳಿಸಿದರು.

ಒಂದು ಕುಟುಂಬದ ಸದಸ್ಯರು ಮನೆಯಲ್ಲೇ ಕುಳಿತು ತಮ್ಮ ಜಮೀನು ಭಾಗ ಮಾಡಿಕೊಳ್ಳಬಹುದು. ಉದಾಹರಣೆಗೆ ಐದು ಎಕರೆ ಜಮೀನು ಇದ್ದರೆ ಯಾರಿಗೆ ಎಷ್ಟು ಭಾಗ ಎಂಬುದನ್ನು ಮನೆಯವರೇ ನಿರ್ಧರಿಸಿ ಆ್ಯಪ್ ಮೂಲಕ ಅದಕ್ಕೆ ತಕ್ಕಂತೆ ಸ್ಥಳದಲ್ಲೇ ಸ್ಕೆಚ್ ಮಾಡಬಹುದು. ಇದಕ್ಕಾಗಿ ಸರ್ವೇಯರ್‌ಗಳನ್ನು ಕರೆಸಬೇಕಾಗಿಲ್ಲ. ಸ್ಕೆಚ್ ಸಿದ್ಧಪಡಿಸಿದ ಬಳಿಕ ಭೂದಾಖಲೆಗಳ ಕಚೇರಿಗೆ ಅಪ್‌ಲೋಡ್ ಮಾಡಿದರೆ ಸಾಕು. ಆ ನಂತರ ನೋಂದಣಿ ಇಲಾಖೆಯಲ್ಲಿ ಆ ಸ್ಕೆಚ್‌ನ ಗಡಿಗಳಿಗೆ (ಬೌಂಡರಿ) ಅನುಗುಣವಾಗಿ ನೋಂದಣಿ ಮಾಡಲಾಗುತ್ತದೆ ಎಂದು ಅವರು ವಿವರಿಸಿದರು.

ಆಸ್ತಿ ಹಿಸ್ಸೆ (ಭಾಗ) ಮಾಡಲು ಸರ್ವೆ ನಡೆಸಿ, ಸ್ಕೆಚ್ ಮಾಡಿ, ನೋಂದಣಿ ಮಾಡಿ ಪಹಣಿ ಪಡೆಯಲು ಕನಿಷ್ಠ 6 ತಿಂಗಳಿಂದ ಒಂದು ವರ್ಷ ಬೇಕಾಗುತ್ತದೆ. ಹೊಸ ವ್ಯವಸ್ಥೆಯಿಂದ ಸಮಯ ಮತ್ತು ಹಣ ಉಳಿಯುತ್ತದೆ, ಕಚೇರಿಗಳಿಗೆ ವೃಥಾ ವರ್ಷಗಟ್ಟಲೆ ಅಲೆಯುವ ಅಗತ್ಯವಿಲ್ಲ ಎಂದರು.

'ಜಮೀನಿಗೆ ಸಂಬಂಧಿಸಿದ ಗಡಿ ಸ್ಕೆಚ್ ಅನ್ನು ಕಂದಾಯ ಇಲಾಖೆಯ ಭೂದಾಖಲೆಗಳ ವಿಭಾಗವೇ ಕೊಡುತ್ತದೆ. ಅಳತೆಯ ಭಾಗವನ್ನು ಜಮೀನಿಗೆ ಸಂಬಂಧಪಟ್ಟರೇ ಮಾಡಿಕೊಳ್ಳಬೇಕು. ಬೌಂಡರಿ ಸರಿಯಾಗಿದ್ದರೆ ಸಾಕು, ಒಳಗೆ ಹೇಗೆ ಹಂಚಿಕೆ ಮಾಡಿಕೊಂಡಿದ್ದಾರೆ ಎಂಬುದನ್ನು ನೋಡಲು ಹೋಗುವುದಿಲ್ಲ' ಎಂದು ಅಶೋಕ ಹೇಳಿದರು.

'ಸ್ವಯಂ ಸೇವೆ' ಯಾವುದಕ್ಕೆಲ್ಲ ಅನ್ವಯ

- 11 ಇ ಸ್ಕೆಚ್– ನಾಗರಿಕರು ತಮ್ಮ ಜಮೀನಿನ ಒಂದು ಭಾಗವನ್ನು ಮಾರಾಟ ಮಾಡಲು ನೋಂದಣಿಗೆ ಸ್ಕೆಚ್ ಸಿದ್ಧಪಡಿಸುವುದು
- ತತ್ಕಾಲ್ ಪೋಡಿ– ಜಮೀನಿನಲ್ಲಿ ಪೋಡಿ(ಭಾಗ) ಮಾಡಿಕೊಡುವ ಬಗ್ಗೆ ಸ್ಕೆಚ್ ತಯಾರಿಸುವುದು
- ಭೂಪರಿವರ್ತನಾ ಪೂರ್ವ ಸ್ಕೆಚ್– ಕೃಷಿ ಜಮೀನಿನ ಒಂದು ಭಾಗವನ್ನು ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಸಿಕೊಳ್ಳಲು ಸ್ಕೆಚ್
- ವಿಭಾಗ– ಹಾಲಿ ಹೊಂದಿರುವ ಕೃಷಿ ಜಮೀನಿನಲ್ಲಿ ತಮ್ಮ ಶಾಸನಾತ್ಮಕ ಹಕ್ಕಿನಂತೆ ವೈಯಕ್ತಿಕ ಭಾಗಾಂಶ ತೋರಿಸಲು ಸ್ಕೆಚ್
- **ಏಕ ಮಾಲೀಕತ್ವದ ಪಹಣಿ (ಆರ್‌ಟಿಸಿ):** ಏಕ ಮಾಲೀಕತ್ವದ ಪಹಣಿ ಹೊಂದಿರುವ ನಾಗರಿಕರು ಇತರರ ಜಮೀನಿನ ಹಕ್ಕುಗಳಲ್ಲಿ ಮತ್ತು ನಕ್ಷೆಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ. ಆದರೆ, ತನ್ನ ಸ್ವಂತ ಜಮೀನಿನಲ್ಲಿ 11 ಇ, ಪೋಡಿ, ವಿಭಜನೆ, ಭೂಪರಿವರ್ತನೆಗಾಗಿ ತನ್ನದೇ ಸ್ವಂತ ಸ್ಕೆಚ್ ಮಾಡಿಕೊಳ್ಳಲು ಸಂಪೂರ್ಣ ಸ್ವತಂತ್ರ. ಇದಕ್ಕಾಗಿ ಸ್ಕೆಚ್ ಕೋರಿ ಮೋಜಣಿ ವ್ಯವಸ್ಥೆಯಡಿ ಇ-ಸಹಿ ಅಥವಾ ಆಧಾರ್ ಕೆವೈಸಿ ಮೂಲಕ ತನ್ನ ಗುರುತನ್ನು ದೃಢೀಕರಿಸುವ ಮೂಲಕ ಅರ್ಜಿ ಸಲ್ಲಿಸಬೇಕು. ಮೊಬೈಲ್ ಸಂಖ್ಯೆ ಕಡ್ಡಾಯ.
- **ಬಹುಮಾಲೀಕತ್ವದ ಪಹಣಿ:** ಬಹುಮಾಲೀಕತ್ವವಿರುವ ಪಹಣಿಯ ಹಕ್ಕುದಾರರ ಪೈಕಿ ಒಬ್ಬ ಹಕ್ಕುದಾರ ಸ್ಕೆಚ್ ಕೋರಿ ಮೋಜಣಿ ವ್ಯವಸ್ಥೆಯಡಿ ಇ-ಸಹಿ ಅಥವಾ ಆಧಾರ್ ಕೆವೈಸಿ ಮೂಲಕ ತನ್ನ ಗುರುತನ್ನು ದೃಢೀಕರಿಸುವ ಮೂಲಕ ಅರ್ಜಿ ಸಲ್ಲಿಸಬೇಕು. ಮೊಬೈಲ್ ಸಂಖ್ಯೆ ಕಡ್ಡಾಯ.

ರೈತರು, ನಾಗರಿಕರು ತಮ್ಮ ಜಮೀನಿನ ಸ್ಕೆಚ್ ತಾವೇ ಸಿದ್ಧಪಡಿಸಿಕೊಳ್ಳಲು ಸಾಧ್ಯವಾಗಿಸಿರುವುದು ಕ್ರಾಂತಿಕಾರಿ ಹೆಜ್ಜೆ. ಇಂತಹ ಹಲವು ಕಾರ್ಯಕ್ರಮಗಳನ್ನು ಸದ್ಯವೇ ಜಾರಿ ಮಾಡಲಿದ್ದೇವೆ
ಆರ್.ಅಶೋಕ, ಕಂದಾಯ ಸಚಿವ

ಆಸ್ತಿ ಖರೀದಿ: ಶೇ 10 ರಿಯಾಯ್ತಿ ಮುಂದುವರಿಕೆ

ರಾಜ್ಯದಾದ್ಯಂತ ಎಲ್ಲ ಸ್ವತ್ತುಗಳ ಮಾರಾಟ ಮತ್ತು ಖರೀದಿ ಮಾಡುವವರಿಗೆ ಮಾರ್ಗಸೂಚಿ ದರದಲ್ಲಿ ಶೇ 10 ರಿಯಾಯಿತಿಯನ್ನು ಇದೇ ಜುಲೈ 24 ರವರೆಗೆ ಮುಂದುವರಿಸಿ ಕಂದಾಯ ಇಲಾಖೆ ಆದೇಶ ಹೊರಡಿಸಿದೆ.

ಸರ್ಕಾರ ಈ ಹಿಂದೆ 2022 ರ ಜನವರಿ 1 ರಿಂದ ಮಾರ್ಚ್ 31 ರವರೆಗೆ ರಿಯಾಯ್ತಿಯನ್ನು ಘೋಷಿಸಿತ್ತು. ರಿಯಾಯ್ತಿ ಮುಂದುವರಿಸಬೇಕು ಎಂಬ ಒತ್ತಾಯ ಸಾರ್ವಜನಿಕರಿಂದ ಬಂದ ಕಾರಣ ಮುಂದುವರಿಸಲು ತೀರ್ಮಾನಿಸಲಾಗಿದೆ ಎಂದು ಸಚಿವ ಅಶೋಕ ತಿಳಿಸಿದ್ದಾರೆ.

ಗನ್‌ಮ್ಯಾನ್ ಸೇರಿ ಮತ್ತೆ ಇಬ್ಬರ ಬಂಧನ

ಪಿಎಸ್‌ಐ ಪರೀಕ್ಷೆ ಅಕ್ರಮ: ಕಲ್ಯಾಣ ಕರ್ನಾಟಕ ಭಾಗದಲ್ಲೇ ಹೆಚ್ಚು ಅಂಕ ಗಳಿಸಿದ್ದ

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿಗೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ಅಫಜಲಪುರ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಂ.ವೈ.ಪಾಟೀಲ ಅವರ ಗನ್‌ಮ್ಯಾನ್ ಹಯ್ಯಾಳಿ ದೇಸಾಯಿ ಮತ್ತು ಸಿಎಆರ್ ಪೊಲೀಸ್ ಕಾನ್‌ಸ್ಟೆಬಲ್ ರುದ್ರಗೌಡ ಪಾಟೀಲ ಅವರನ್ನು ಬಂಧಿಸಿದ್ದಾರೆ.

ಶಾಸಕರ ಜೊತೆಗೆ ಕಾರಿನಲ್ಲಿ ಹೋಗುತ್ತಿರುವಾಗ ನಗರದ ರಾಮಮಂದಿರ ಬಳಿ ಸಿಐಡಿ ಅಧಿಕಾರಿಗಳು ದೇಸಾಯಿ ಹಯ್ಯಾಳಿ ಅವರನ್ನು ವಶಕ್ಕೆ ಪಡೆದರು. ಇದರೊಂದಿಗೆ ಪ್ರಕರಣ ಸಂಬಂಧ ಬಂಧಿತರ ಸಂಖ್ಯೆ ಹತ್ತಕ್ಕೆ ಏರಿದೆ.

ಗನ್‌ಮ್ಯಾನ್ ದೇಸಾಯಿ ಕಲ್ಯಾಣ ಕರ್ನಾಟಕ ಭಾಗದಲ್ಲೇ ಪಿಎಸ್‌ಐ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ಆಯ್ಕೆಯಾಗಿದ್ದ ಎಂದು ತಿಳಿದುಬಂದಿದೆ.

ಸದ್ಯ ಕಲಬುರಗಿಯ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಮೂವರು ಪರೀಕ್ಷಾ ಮೇಲ್ವಿಚಾರಕಿಯರು, ಮೂವರು ಅಭ್ಯರ್ಥಿಗಳು ಹಾಗೂ ಶಾಲೆಯ ಮುಖ್ಯಸ್ಥೆ ದಿವ್ಯಾ ಹಾಗರಗಿ ಅವರ ಪತಿ ರಾಜೇಶ್ ಹಾಗರಗಿಯನ್ನು ಬಂಧಿಸಲಾಗಿದೆ.

ರಕ್ಷಿಸುವ ಪ್ರಶ್ನೆಯೇ ಇಲ್ಲ: 'ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣದಲ್ಲಿ ಭಾಗಿಯಾದವರು ಯಾರೇ ಆಗಿದ್ದರೂ ಅವರನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದರು.

ಬಿಜೆಪಿ ಸಂಘಟನಾ ಸಭೆಯಲ್ಲಿ ಭಾಗವಹಿಸಲು ಗುರುವಾರ ಆಗಮಿಸಿರುವ ಅವರು, 'ತನಿಖೆ ನಡೆಯುತ್ತಿದೆ. ಪ್ರಕರಣದ ಆರೋಪಿ ದಿವ್ಯಾ ಹಾಗರಗಿಗೆ ಪಕ್ಷದಲ್ಲಿ ಯಾವುದೇ ಸ್ಥಾನ ವಹಿಸಿರಲಿಲ್ಲ. ಅವರನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲ' ಎಂದರು.

ನೇಮಕಾತಿಗೆ ಮರುಪರೀಕ್ಷೆ ನಡೆಸುವ ಬೇಡಿಕೆಗೆ ಅವರು, 'ತನಿಖಾ ವರದಿ ಬಂದ ಬಳಿಕ ಮುಂದಿನ ನಿರ್ಧಾರ ತೆಗೆದುಕೊಳ್ಳುತ್ತೇವೆ. ಮಧ್ಯಂತರ ವರದಿ ನೀಡಲು ಸೂಚಿಸಲಾಗಿದೆ' ಎಂದರು.

'ಹಿಂದೆಯೂ ನೇಮಕಾತಿ ವೇಳೆ ಹಗರಣ ನಡೆದಿದ್ದು, ಕಾಂಗ್ರೆಸ್ ಸರ್ಕಾರ ಮುಚ್ಚಿ ಹಾಕಿದ್ದು ಗೊತ್ತಿಲ್ಲವೇ? ಮೂರು–ನಾಲ್ಕು ಬಾರಿ ಮರು ಪರೀಕ್ಷೆಗಳು ನಡೆದಿವೆ' ಎಂದು ಪ್ರತಿಕ್ರಿಯಿಸಿದರು.

ಪಿಎಸ್‌ಐ: ಕೆಲ ಅಭ್ಯರ್ಥಿಗಳ 'ಒಎಂಆರ್' ವ್ಯತ್ಯಾಸ

ಬೆಂಗಳೂರು: 545 ಪಿಎಸ್‌ಐ ನೇಮಕಾತಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿದ್ದ 100 ಅಭ್ಯರ್ಥಿಗಳ ವಿಚಾರಣೆಯನ್ನು ಸಿಐಡಿ ಅಧಿಕಾರಿಗಳು ಪೂರ್ಣಗೊಳಿಸಿದ್ದು, ಕೆಲ ಅಭ್ಯರ್ಥಿಗಳ 'ಒಎಂಆರ್' ಪ್ರತಿಯಲ್ಲಿ ವ್ಯತ್ಯಾಸ ಕಂಡುಬಂದಿರುವುದಾಗಿ ಗೊತ್ತಾಗಿದೆ.

ಮೊದಲ ಹಂತದಲ್ಲಿ 50 ಅಭ್ಯರ್ಥಿಗಳನ್ನು ಬುಧವಾರ ವಿಚಾರಣೆ ನಡೆಸಿದ್ದ ಸಿಐಡಿ ಅಧಿಕಾರಿಗಳು, ಗುರುವಾರ ಎರಡನೇ ಸುತ್ತಿನಲ್ಲಿ ಮತ್ತೆ 50 ಅಭ್ಯರ್ಥಿಗಳ ವಿಚಾರಣೆ ನಡೆಸಿದರು.

ಅರಮನೆ ರಸ್ತೆಯ ಸಿಐಡಿ ಕಚೇರಿಯಲ್ಲಿ ಗುರುವಾರ ಸಂಜೆಯವರೆಗೂ ಅಭ್ಯರ್ಥಿಗಳು ವಿಚಾರಣೆ ಎದುರಿಸಿದರು. ಪರೀಕ್ಷೆ ಪ್ರವೇಶ ಪತ್ರ ಹಾಗೂ ಒಎಂಆರ್ ಕಾರ್ಬನ್ ಪ್ರತಿಗಳನ್ನು ಅಧಿಕಾರಿಗಳಿಗೆ ನೀಡಿದರು.

'ಪೊಲೀಸ್ ನೇಮಕಾತಿ ವಿಭಾಗದಲ್ಲಿರುವ ಪ್ರವೇಶ ಪತ್ರ ಹಾಗೂ ಒಎಂಆರ್ ಪ್ರತಿ ಸೇರಿ ಹಲವು ದಾಖಲೆಗಳನ್ನು, ಅಭ್ಯರ್ಥಿಗಳ ಬಳಿ ಇರುವ ದಾಖಲೆಗಳ ಜೊತೆ ಹೋಲಿಕೆ ಮಾಡಿ ಪರಿಶೀಲಿಸಲಾಗುತ್ತಿದೆ. ಕೆಲವರ ಮೇಲೆ ಅನುಮಾನ ಬಂದಿದ್ದು, ಅವರನ್ನು ಪುನಃ ವಿಚಾರಣೆ ನಡೆಸಲಾಗುವುದು' ಎಂದು ಸಿಐಡಿ ಮೂಲಗಳು ಹೇಳಿವೆ.

'ಅಕ್ರಮ ಎಸಗಿದ್ದ ಕೆಲ ಅಭ್ಯರ್ಥಿಗಳನ್ನು ಈಗಾಗಲೇ ಬಂಧಿಸಲಾಗಿದೆ. ಮತ್ತಷ್ಟು ಮಂದಿ ಭಾಗಿಯಾಗಿರುವ ಅನುಮಾನವಿದ್ದು, ವಿಶೇಷ ತಂಡಗಳು ತನಿಖೆ ಮುಂದುವರಿಸಿವೆ' ಎಂದೂ ತಿಳಿಸಿವೆ.

ಶುಕ್ರವಾರವೂ ವಿಚಾರಣೆ : ಪೊಲೀಸ್ ನೇಮಕಾತಿ ವಿಭಾಗ ಬಿಡುಗಡೆ ಮಾಡಿದ್ದ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿದ್ದ ಎಲ್ಲ ಅಭ್ಯರ್ಥಿಗಳ ದಾಖಲೆಗಳನ್ನು ಸಿಐಡಿ ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ಶುಕ್ರವಾರವೂ ಮತ್ತಷ್ಟು ಅಭ್ಯರ್ಥಿಗಳು ವಿಚಾರಣೆಗೆ ಹಾಜರಾಗುವ ಸಾಧ್ಯತೆ ಇದೆ.

ರಾಜ್ಯ ಪಠ್ಯಕ್ರಮದ ಶಾಲೆಗಳಲ್ಲಿ ಏಕರೂಪದ ಶೈಕ್ಷಣಿಕ ಚಟುವಟಿಕೆ

ಮೇ 16ರಿಂದ ಶಾಲೆಗಳು ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ 2022–23 ನೇ ಸಾಲಿನ ಶೈಕ್ಷಣಿಕ ವರ್ಷ ಮೇ 16 ರಿಂದ ಆರಂಭವಾಗಲಿದ್ದು, ಏಕರೂಪದ ಶೈಕ್ಷಣಿಕ ಚಟುವಟಿಕೆಗಳನ್ನು ಜಾರಿಯಾಗಲಿದೆ.

ಈ ಸಂಬಂಧ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಶೈಕ್ಷಣಿಕ ವೇಳಾಪಟ್ಟಿ ಹೊರಡಿಸಿದ್ದಾರೆ. ಶೈಕ್ಷಣಿಕ ವರ್ಷದಲ್ಲಿ ಲಭ್ಯವಿರುವ 330 ದಿನಗಳಲ್ಲಿ 60 ಸರ್ಕಾರಿ ರಜಾ ದಿನಗಳಿದ್ದು, ದಸರಾ ರಜೆ, ವಿವೇಚನಾ ರಜೆ ಮತ್ತು ಇತರ ಚಟುವಟಿಕೆಗಳ ಸಂದರ್ಭದ ರಜೆಗಳನ್ನು ಕಳೆದು ಒಟ್ಟು 228 ದಿನಗಳು ತರಗತಿಗಳು ನಡೆಯಲಿವೆ.

ಶಾಲಾ ಕರ್ತವ್ಯದ ದಿನಗಳು	
ಮೊದಲ ಅವಧಿ	16.05.2022 - 02.10.2022
ಎರಡನೇ ಅವಧಿ	17.10.2022 - 10.04.2023
ರಜಾ ದಿನಗಳು	
ದಸರಾ ರಜೆ	03.10.2022 - 16.10.2022
ಬೇಸಿಗೆ ರಜೆ	11.04.2023 - 28.05.2023

ಕೋವಿಡ್ ವರ್ಷಗಳಲ್ಲಿ ಶಾಲೆಗಳನ್ನು ಸ್ಥಗಿತಗೊಳಿಸಿದ್ದರಿಂದ ಶೇ 50 ರಿಂದ 60 ರಷ್ಟು ದಿನಗಳು ಮಾತ್ರ ಭೌತಿಕವಾಗಿ ತರಗತಿಗಳನ್ನು ನಡೆಸಲು ಸಾಧ್ಯವಾಗಿತ್ತು. ಆ ಸಂದರ್ಭದಲ್ಲಿ ಆನ್‌ಲೈನ್ ಕಲಿಕೆ ಸೇರಿದಂತೆ ವಿವಿಧ ಪರ್ಯಾಯ ವಿಧಾನಗಳಲ್ಲಿ ಶಿಕ್ಷಣ ನೀಡಲಾಗಿದೆ. ಇದರಿಂದ ವಿದ್ಯಾರ್ಥಿಗಳ ಕಲಿಕೆಗೆ ಹಿನ್ನಡೆಯಾಗಿದೆ. ಕಲಿಕೆಯ ಕೊರತೆಯನ್ನು ನೀಗಿಸಲು ಶೈಕ್ಷಣಿಕ ವರ್ಷದ ಪೂರ್ಣಾವಧಿಗೆ 'ಕಲಿಕಾ ಚೇತರಿಕೆ' ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಆದ್ದರಿಂದ ಈ ಶೈಕ್ಷಣಿಕ ವರ್ಷವನ್ನು 'ಕಲಿಕಾ ಚೇತರಿಕೆ ವರ್ಷ'ವೆಂದು ಕಾರ್ಯಸೂಚಿ ರೂಪಿಸಲಾಗಿದೆ ಎಂದು ಸುತ್ತೋಲೆ ವಿವರಿಸಿದೆ.

4ನೇ ಪುಟ ನೋಡಿ

ಕೆನರಾ ಬ್ಯಾಂಕ್ Canara Bank
Government of India Undertaking
Together We Can
ಗೃಹ ಸಾಲ 6.65% ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
*ಷರತ್ತುಗಳು ಅನ್ವಯಿಸುತ್ತವೆ
1800 425 0018

ಹುಬ್ಬಳ್ಳಿ ಹಿಂಸಾಚಾರ: ಬಂಧಿತರ ಸಂಖ್ಯೆ 134ಕ್ಕೆ ಏರಿಕೆ

ಪ್ರಮುಖ ಆರೋಪಿ ವಸೀಂ ಬಂಧನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನಗರದಲ್ಲಿ ನಡೆದ ಗಲಭೆಗೆ ಪ್ರಚೋದನೆ ನೀಡಿದ ಎನ್ನಲಾದ ಪ್ರಮುಖ ಆರೋಪಿ ವಸೀಂ ಪಠಾಣ್, ರೌಡಿ ಶೀಟರ್ ತುಫೈಲ್ ಮುಲ್ಲಾ ಸೇರಿದಂತೆ ಎಂಟು ಮಂದಿಯನ್ನು ಗುರುವಾರ ಪೊಲೀಸರು ಬಂಧಿಸಿದ್ದಾರೆ. ಪ್ರಮುಖ ಆರೋಪಿಗಳ ಬಂಧನದೊಂದಿಗೆ ಬಂಧಿತರ ಒಟ್ಟು ಸಂಖ್ಯೆ 134ಕ್ಕೆ ಏರಿಕೆಯಾಗಿದೆ.

ವಸೀಂ ಪಠಾಣ್

ಘಟನೆ ನಡೆದ ದಿನದಿಂದ ತಲೆಮರೆಸಿಕೊಂಡಿದ್ದ ವಸೀಂ ಬೆಳಗಾವಿಯಲ್ಲಿದ್ದಾನೆ ಎಂಬ ಮಾಹಿತಿ ಮೇರೆಗೆ, ಪೊಲೀಸರ ತಂಡ ಬುಧವಾರ ರಾತ್ರಿ ಆತನನ್ನು ಬಂಧಿಸಿ, ನಗರಕ್ಕೆ ಕರೆತಂದಿದೆ. ಹುಬ್ಬಳ್ಳಿಯ ಬೆಳವಣಿಗೆಗಳ ಬಗೆಗೆ ಮಾಹಿತಿ ಪಡೆಯಲು ತನ್ನ ಸಹಚರರಿಗೆ ಕರೆ ಮಾಡಿದ್ದ. ಮೊಬೈಲ್ ಕರೆಯಿಂದ ಸಿಕ್ಕ ಲೋಕೇಷನ್ ಸುಳಿವಿನ ಆಧಾರದ ಮೇಲೆ ಪೊಲೀಸರು ಬಂಧಿಸಿದ್ದಾರೆ.

ಗಲಭೆ ದಿನ ಹಳೇ ಹುಬ್ಬಳ್ಳಿ ಠಾಣೆ ಎದುರು ನಿಂತಿದ್ದ ಪೊಲೀಸ್ ವಾಹನ ಹತ್ತಿ ಸ್ಥಳದಲ್ಲಿ ಜಮಾಯಿಸಿದ್ದವರಿಗೆ ಪ್ರಚೋದನೆ ನೀಡಿದ್ದ ಎಂಬ ಆರೋಪ ವಸೀಂ ಮೇಲಿದೆ. ಇದರಿಂದ ರೊಚ್ಚಿಗೆದ್ದಿದ್ದ ಉದ್ರಿಕ್ತರ ಗುಂಪು ಪೊಲೀಸರ ಮೇಲೆಯೇ ಹಲ್ಲೆ ನಡೆಸಿ, ಕೊಲೆಗೆ ಯತ್ನಿಸಿತ್ತು ಎಂದು ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

4ನೇ ಪುಟ ನೋಡಿ

ಕಚೇರಿ ಹೊಂದಿದ್ದ ಆರೋಪಿ

ಮಂಟೂರ ರಸ್ತೆ ಮಿಲ್ಲತ್ ನಗರದ ವಸೀಂ ಪಠಾಣ್ ಮೂಲತಃ ಲಾರಿ ಚಾಲಕನಾಗಿದ್ದ. ನಂತರ ಮುಸ್ಲಿಮರನ್ನು ಹಜ್ ಯಾತ್ರೆಗೆ ಕರೆದೊಯ್ಯುವ ಕೆಲಸ ಮಾಡುತ್ತಿದ್ದ ಆತ, ಗಣೇಶಪೇಟೆಯಲ್ಲಿ ಕಚೇರಿ ಹೊಂದಿದ್ದ. ಧಾರ್ಮಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದು, ಕಾರ್ಯಕ್ರಮಗಳಿಗೆ ಜನರನ್ನು ಸೇರಿಸುವ ಕೆಲಸ ಮಾಡುತ್ತಿದ್ದ. ಆಜಾನ್ ಕೂಗುವ ಜೊತೆಗೆ, ಧರ್ಮಕ್ಕೆ ಸಂಬಂಧಿಸಿದ ಭಾಷಣ ಸಹ ಮಾಡುತ್ತಿದ್ದ ಎಂದು ಮೂಲಗಳು ತಿಳಿಸಿವೆ.

ರೈತ ಆತ್ಮಹತ್ಯೆ

ದೊಡ್ಡಬಳ್ಳಾಪುರ: ಐದನೇ ಹಂತದ ಕೈಗಾರಿಕಾ ವಲಯ ಸ್ಥಾಪನೆಗೆ ಭೂಮಿ ಸ್ವಾಧೀನಕ್ಕೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ನೀಡಿದ್ದ ನೋಟಿಸ್‌ನಿಂದ ಮನನೊಂದ ಕೊನಘಟ್ಟ ಗ್ರಾಮದ ರೈತ ಹನುಮಂತೇಗೌಡ (60) ಗುರುವಾರ ಜಮೀನಲ್ಲಿರುವ ಮರಕ್ಕೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 9

ಖಾಸಗೀಕರಣ: ಸರ್ಕಾರಿ ಕಂಪನಿಗಳಿಗೆ ಇಲ್ಲ ಖರೀದಿ ಅವಕಾಶ

ನವದೆಹಲಿ: ಖಾಸಗೀಕರಣ ಆಗಲಿರುವ ಕೇಂದ್ರ ಸರ್ಕಾರದ ಮಾಲೀಕತ್ವದ ಕಂಪನಿಗಳ ಖರೀದಿಗೆ ಸರ್ಕಾರದ ಇತರ ಕಂಪನಿಗಳು ಮುಂದಾಗುವಂತೆ ಇಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ. 11

ದಶಪಥ ರಸ್ತೆ ₹ 9,551 ಕೋಟಿ ಖರ್ಚು

ಮೈಸೂರು: 'ಮೈಸೂರು–ಬೆಂಗಳೂರು ದಶಪಥ ರಸ್ತೆ ಕಾಮಗಾರಿ ನಿರ್ಮಾಣಕ್ಕೆ ₹ 1,201 ಕೋಟಿ ಸೇರಿ ಒಟ್ಟು ₹ 9,551 ಕೋಟಿ ಖರ್ಚಾಗುತ್ತಿದ್ದು, ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು. ಈ ಮಾರ್ಗದಲ್ಲಿ ಹೆಲಿಪ್ಯಾಡ್ ಹಾಗೂ ಎರಡು ಕಡೆ ವಿಶ್ರಾಂತಿ ತಾಣ ನಿರ್ಮಿಸಲಾಗುವುದು' ಎಂದು ಸಂಸದ ಪ್ರತಾಪಸಿಂಹ ಗುರುವಾರ ತಿಳಿಸಿದರು.

'ಭೂಸ್ವಾಧೀನಕ್ಕೆ ₹464.34 ಕೋಟಿ, ಸಿವಿಲ್ ಕಾಮಗಾರಿಗಳಿಗೆ ₹ 726.42 ಕೋಟಿ ವ್ಯಯಿಸಲಾಗುತ್ತಿದೆ' ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಚಿನಕುರಳಿ
ಪ್ರಕಾಶ್ ಶೆಟ್ಟಿ



ಸೃಜನಾತ್ಮಕ ದೃಶ್ಯೀಕರಣ. ಹಾರ್ಲಿಕ್ಸ್ ದೈನಂದಿನ ಆಹಾರದ ಭಾಗವಾಗಿ ಸೇವಿಸಬೇಕಾದ ಪೌಷ್ಟಿಕ ಪಾನೀಯವಾಗಿದೆ.

ಸಂಕಲ್ಪ SANKALP Ministry of Skill Development & Entrepreneurship
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ,
ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ
ಕರ್ನಾಟಕ ಸರ್ಕಾರ
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ
ಕೌಶಲ್ಯ ರಥ
SKILL ON WHEELS
ಲೋಕಾರ್ಪಣೆ
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ಇವರಿಂದ

ದಿನಾಂಕ: 22.04.2022
ಸಮಯ: ಬೆಳಿಗ್ಗೆ 10:30ಕ್ಕೆ
ಸ್ಥಳ: ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಿನಿ ವಿಧಾನಸೌಧ, ಕಲಬುರಗಿ
ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು ರಾಜ್ಯದ ಗ್ರಾಮೀಣ ಭಾಗದ ಯುವ ಜನತೆಗೆ ಅವರಿರುವಲ್ಲಿಯೇ ತೆರಳಿ ಸೂಕ್ತ ಕೌಶಲ್ಯ ತರಬೇತಿಯ ಮೂಲಕ ಉತ್ತಮ ಜೀವನೋಪಾಯವನ್ನು ಕಲ್ಪಿಸಿಕೊಡಲಿದೆ ಕೌಶಲ್ಯ ರಥ.
ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ,ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಚಿವರಾದ ಡಾ. ಸಿ.ಎನ್. ಅಶ್ವತ್ಥ ನಾರಾಯಣ ಅವರು ಅಧಿಕಾರಿಗಳೊಂದಿಗೆ ಚರ್ಚಿಸುತ್ತಿರುವುದು.

ಕೌಶಲ್ಯ ರಥದಲ್ಲಿ ಉಚಿತವಾಗಿ ಲಭ್ಯವಿರುವ ತರಬೇತಿಗಳು
◆ ಎಲೆಕ್ಟ್ರಿಕಲ್ ಟೆಕ್ನಿಷಿಯನ್ ◆ ಸಹಾಯಕ ಬ್ಯುಟಿ ಥೆರಪಿಸ್ಟ್
ಡಾ.ಎಸ್. ಸೆಲ್ವಕುಮಾರ್ ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ
ಕೋವಿಡ್ –19 ಆತಂಕ ಬೇಡ ಮುನ್ನೆಚ್ಚರಿಕೆ ಇರಲಿ ಮಾಸ್ಕ್ ಧರಿಸಿ ದೈಹಿಕ ಅಂತರ ಪಾಲಿಸಿ ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಆಸ್ತಿ ತೆರಿಗೆ: ವಲಯ ಆಯ್ಕೆಗೆ ತಂತ್ರಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ತೆರಿಗೆ ವಲಯ ವರ್ಗೀಕರಣ ಆಯ್ಕೆಯಲ್ಲಿ ದುರುಪಯೋಗ ಮತ್ತು ಪಾಲಿಕೆ ವರಮಾನದಲ್ಲಿ ಸೋರಿಕೆ ಆಗುವುದನ್ನು ತಡೆಯಲು ಹೊಸ ತಾಂತ್ರಾಶವನ್ನು ಬಿಬಿಎಂಪಿ ಅಭಿವೃದ್ಧಿಪಡಿಸಿದೆ. ಈ ತಂತ್ರಾಂಶದಲ್ಲಿ ವಿಳಾಸ ನಮೂದಿಸಿದರೆ ವಲಯ ವರ್ಗೀಕರಣ ತನ್ನಿಂದ ತಾನೇ ಆಗಲಿದೆ.

ಆಸ್ತಿ ತೆರಿಗೆ ಲೆಕ್ಕಾಚಾರ ಮಾಡುವಲ್ಲಿ ವಲಯ ವರ್ಗೀಕರಣವು ಪ್ರಮುಖ ಪಾತ್ರ ವಹಿಸುತ್ತದೆ. ಪಾಲಿಕೆ ವ್ಯಾಪ್ತಿಯಲ್ಲಿರುವ ಬೀದಿಗಳು, ಪ್ರದೇಶಗಳು, ರಸ್ತೆಗಳನ್ನು ಆರು ವಲಯಗಳಾಗಿ(ಎ ಯಿಂದ ಎಫ್ ರವರೆಗೆ) ವಿಂಗಡಿಸಲಾಗಿದೆ. ಸ್ವತ್ತಿನ ಉಪಯೋಗ(ಸ್ವಂತ, ಬಾಡಿಗೆ) ಮತ್ತು ವಿವಿಧ ವರ್ಗಗಳ ಬಳಕೆಯ ಆಧಾರದ ಮೇಲೆ ವಲಯ 'ಎ' ಯಿಂದ 'ಎಫ್' ವರೆಗೆ ವಿವಿಧ ದರಗಳನ್ನು ನಿಗದಿಪಡಿಸಲಾಗಿದೆ.

'ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿ ಅಡಿಯಲ್ಲಿ ತೆರಿಗೆದಾರರೇ ತಮ್ಮಸ್ವತ್ತುಗಳಿಗೆ ಆಸ್ತಿ ತೆರಿಗೆ ಘೋಷಣೆ ಸಲ್ಲಿಸಬೇಕು. ಘೋಷಣೆ ಸಲ್ಲಿಸುವ ಸಮಯದಲ್ಲಿ ತಪ್ಪಾಗಿ ವಲಯ ವರ್ಗೀಕಣ ನಮೂದಿಸಿ ಕಡಿಮೆ ತೆರಿಗೆ ಪಾವತಿಸುತ್ತಿದ್ದಾರೆ. ಇದರಿಂದ ಪಾಲಿಕೆಗೆ ವರಮಾನದಲ್ಲಿ ಸೋರಿಕೆ ಉಂಟಾಗುತ್ತಿದೆ ಮತ್ತು ವಲಯ ವರ್ಗೀಕರಣದ ಆಯ್ಕೆಯಲ್ಲಿ ದುರುಪಯೋಗವೂ ಕಂಡು ಬಂದಿದೆ. ಆದ್ದರಿಂದ ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತರು(ಕಂದಾಯ) ತಿಳಿಸಿದ್ದಾರೆ.

ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ
ಪ್ರಾದೇಶಿಕ, ಪ್ರಾಮಾಣಿಕ, ಜನಪರ
KARNATAKA RASHTRA SAMITHI PARTY
ಭ್ರಷ್ಟರೇ, ಪವಿತ್ರವಾದ ರಾಜಕಾರಣವನ್ನು ಬಿಟ್ಟು ತೊಲಗಿ...
ನಾಡಪ್ರೇಮಿಗಳೇ, ಪ್ರಾಮಾಣಿಕ ರಾಜಕಾರಣಕ್ಕೆ ಮುಂದಾಗಿ...
KRS ಪಕ್ಷವು BBMP ಚುನಾವಣೆಗೆ ಸಜ್ಜಾಗಿದೆ.
ನೂರಕ್ಕೂ ಹೆಚ್ಚು ಸಂಭಾವ್ಯ ಅಭ್ಯರ್ಥಿಗಳ ಸಂದರ್ಶನ ಮಾಡಲಾಗಿದೆ.
ಉತ್ತಮ ಬೆಂಗಳೂರು ಕಟ್ಟಬಯಸುವ ನಾಯಕರು ನೀವಾಗಿದ್ದಲ್ಲಿ, ಸ್ವಚ್ಛ, ಪ್ರಾಮಾಣಿಕ, ಜನಪರ ರಾಜಕಾರಣದಲ್ಲಿ ವಿಶ್ವಾಸವಿದ್ದಲ್ಲಿ,

ರವಿ ಕೃಷ್ಣಾರೆಡ್ಡಿ
ರಾಜ್ಯಾಧ್ಯಕ್ಷರು
BBMP ಚುನಾವಣೆಗೆ ಸ್ಪರ್ಧಿಸಲು
■ ನೋಂದಾಯಿಸಿ: https://cybermatrix.in/bbmpelereg
■ 9611720802 ಗೆ "BBMP" ಎಂದು ವಾಟ್ಸಪ್ ಮಾಡಿ
■ ಪಕ್ಷದ ಕಚೇರಿಗೆ ಭೇಟಿ ಮಾಡಿ
■ ಪ್ರತಿ ತಿಂಗಳ ಮೊದಲನೇ ಭಾನುವಾರ ಸ್ಪರ್ಧಾಕಾಂಕ್ಷಿಗಳಿಗೆ ಪಕ್ಷದ ರಾಜಾಜಿನಗರ ಕಚೇರಿಯಲ್ಲಿ ಸಂದರ್ಶನ ನಡೆಯುತ್ತಿದೆ.
ಪಕ್ಷ ಸೇರಲು ನಮ್ಮನ್ನು ಸಂಪರ್ಕಿಸಿ 7204974572
No. 208, ಡಾ. ರಾಜಕುಮಾರ್ ರಸ್ತೆ, ಪ್ರಕಾಶ್ ನಗರ, ಬೆಂಗಳೂರು 560021. (ಐಸಿಐಸಿಐ ಬ್ಯಾಂಕ್ ಪಕ್ಕ).
@krs_party www.krsparty.org

ರಾಮಯ್ಯ: ಇಂದು ಅಂಚೆ ಚೀಟಿ ಬಿಡುಗಡೆ

ಬೆಂಗಳೂರು: ಎಂ.ಎಸ್.ರಾಮಯ್ಯನವರ ಜನ್ಮಶತಮಾನೋತ್ಸವದ ಪ್ರಯುಕ್ತ ಕರ್ನಾಟಕ ಅಂಚೆ ಇಲಾಖೆಯು ವಿಶೇಷ ಅಂಚೆ ಚೀಟಿ ಹಾಗೂ ಅಂಚೆ ಲಕೋಟೆ ಹೊರತಂದಿದ್ದು, ಅದರ ಬಿಡುಗಡೆ ಇದೇ 22ರಂದು ನಡೆಯಲಿದೆ.

'ನಗರದ ಪ್ರಧಾನ ಅಂಚೆ ಕಚೇರಿಯ (ಜಿಪಿಒ) ಮೇಘದೂತ ಸಭಾಂಗಣದಲ್ಲಿ ಮಧ್ಯಾಹ್ನ 12ಕ್ಕೆ ನಡೆಯುವ ಸಮಾರಂಭದಲ್ಲಿ ಕರ್ನಾಟಕ ವೃತ್ತದ ಚೀಫ್ ಪೋಸ್ಟ್‌ಮಾಸ್ಟರ್ ಜನರಲ್ ಎಸ್.ರಾಜೇಂದ್ರ ಕುಮಾರ್ ಅವರು ಅಂಚೆ ಚೀಟಿ ಹಾಗೂ ಲಕೋಟೆ ಬಿಡುಗಡೆ ಮಾಡಲಿದ್ದಾರೆ. ನಗರ ಪ್ರಧಾನ ಅಂಚೆ ಕಚೇರಿಯ ಪೋಸ್ಟ್ ಮಾಸ್ಟರ್ ಜನರಲ್ ಎಲ್. ಕೆ.ದಾಸ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

ಎಂ.ಎಸ್. ರಾಮಯ್ಯ

'ವಿಶೇಷ ಅಂಚೆ ಲಕೋಟೆಯು ನಗರದ ಪ್ರಧಾನ ಅಂಚೆ ಕಚೇರಿ, ಮಂಗಳೂರು, ಮೈಸೂರು, ಬೆಳಗಾವಿಯ ಕೇಂದ್ರ ಕಚೇರಿ ಹಾಗೂ ಇ-ಅಂಚೆ ಕಚೇರಿಯಲ್ಲಿ ಲಭ್ಯವಿರಲಿದೆ' ಎಂದು ಹೇಳಿದೆ.

ಇಂದಿನಿಂದ ಭಾನುವಾರದವರೆಗೆ ಕ್ರೆಡಾಯ್ ರಿಯಾಲ್ಟಿ ಎಕ್ಸ್‌ಪೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರೆಡಾಯ್ ಆಯೋಜಿಸುವ ರಿಯಾಲ್ಟಿ ಎಕ್ಸ್‌ಪೊ ಶುಕ್ರವಾರದಿಂದ ಭಾನುವಾರದವರೆಗೆ ನಗರದ ಮಾರತಹಳ್ಳಿಯ ರಾಡಿಸನ್ ಬ್ಲೂ ಹೋಟೆಲ್‌ನಲ್ಲಿ ನಡೆಯಲಿದೆ.

'2016ರಿಂದ ರಿಯಲ್ ಎಸ್ಟೇಟ್ ಉದ್ಯಮವು ಕಷ್ಟ ಎದುರಿಸುತ್ತಿದೆ. ಆದರೂ ನಾವು ನಮ್ಮ ಗ್ರಾಹಕರೊಂದಿಗೆ ನೇರವಾಗಿ ಮಾತುಕತೆ ನಡೆಸುತ್ತಿದ್ದೇವೆ. ಕೋವಿಡ್ ನಂತರದಲ್ಲಿ ಮನೆಗಳಿಂದ ಕೆಲಸ ಮಾಡುವ ಸಂಸ್ಕೃತಿ ಎಲ್ಲೆಡೆ ಬೆಳೆದಿದೆ. ಈ ಪರಿಸ್ಥಿತಿಯು ರಿಯಲ್ ಎಸ್ಟೇಟ್ ಉದ್ಯಮಕ್ಕೆ ಹೊಸ ಸವಾಲುಗಳನ್ನು ತಂದಿತ್ತಿದೆ. ಮನೆಯ ಒಳಗಿನ ವಿನ್ಯಾಸವನ್ನು ಮರುರೂಪಿಸಬೇಕಾದ ಅಗತ್ಯವನ್ನು ಸೃಷ್ಟಿಸಿದೆ ಎಂದು ನಾಗೇಂದ್ರಪ್ಪ ಅವರು ಹೇಳಿದ್ದಾರೆ.

ಹಣದುಬ್ಬರ ಹಾಗೂ ಇತರ ಕಾರಣಗಳಿಂದಾಗಿ ಮನೆ ನಿರ್ಮಾಣ ವೆಚ್ಚವು ತುಂಬಾ ಹೆಚ್ಚಾಗಿದೆ. ಹೀಗಾಗಿ ಬಿಲ್ಡರ್‌ಗಳು ವೆಚ್ಚದ ವಿಚಾರವಾಗಿ ತಂತಿ ಮೇಲಿನ ನಡಿಗೆಯಂತಹ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಕೈಗೆಟಕುವ ದರದ ಮನೆಗಳಿಗಾಗಿ ಪ್ರತ್ಯೇಕ ವಿಭಾಗ ಎಕ್ಸ್‌ಪೊದಲ್ಲಿ ಇರಲಿದೆ. ಬಿಲ್ಡರ್‌ಗಳ ಜೊತೆ ಗ್ರಾಹಕರು ನೇರವಾಗಿ ಮಾತುಕತೆ ನಡೆಸಲು ಈ ಎಕ್ಸ್‌ಪೊ ಒಳ್ಳೆಯ ವೇದಿಕೆ ಎಂದು ಕ್ರೆಡಾಯ್ ಪ್ರಕಟಣೆ ತಿಳಿಸಿದೆ.

FASHION exhibition
LAST 2 DAYS

sutraa™
Indian•Fashion•Exhibition
21ST - 22ND - 23RD
APRIL 2022 | 10AM - 8PM
SUMMER WEDDING SPECIAL
OVER 100 DESIGNERS
ETHNICS | TUNICS | GOWNS | DECORS
FOOTWEAR | BRIDAL WEAR | PURSES
FABRICS | COSTUMES | JEWELLERY
THE LaLiT ASHOK BANGALORE
+91 9831229017

ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಪ್ರಧಾನ ಕಚೇರಿ: ನಂ.14, "ರಜತ ಭವನ", 1ನೇ ಮುಖ್ಯರಸ್ತೆ, ಹಕ್ಕರಸ್ತೆ, ಹಂಪಿನಗರ, ವಿಜಯನಗರ, ಬೆಂಗಳೂರು–560 104.
ದೂರವಾಣಿ ಸಂಖ್ಯೆ: 41159606, 23300497, 23359600. E-mail: jscbinfo@jscbl.com
ಬ್ಯಾಂಕಿನ ಶಾಖೆಗಳು : ವಿಜಯನಗರ | ಮಹಾಲಕ್ಷ್ಮೀಪುರಂ | ಮೂಡಲಪಾಳ್ಯ | ರಾಜರಾಜೇಶ್ವರಿನಗರ | ಸುಂಕದಕಟ್ಟೆ

ನಿರ್ಮಾಣಗೊಳ್ಳುತ್ತಿರುವ ಬ್ಯಾಂಕಿನ 5ನೇ ಹೊಸ ಕಟ್ಟಡದ ಹೊರನೋಟ (ಕೇಂದ್ರ ಕಚೇರಿ)
ಬ್ಯಾಂಕಿನ ಸುವರ್ಣ ಮಹೋತ್ಸವ ಸಮಾರಂಭ
JANATHA SEVA CO-OPERATIVE BANK LIMITED Celebrating Golden Jubilee
ದಿನಾಂಕ: 23-04-2022, ಸಮಯ: ಬೆಳಿಗ್ಗೆ 10.30 ಗಂಟೆಗೆ
ಸ್ಥಳ: ಕಿಂಗ್ಸ್ ಕೋರ್ಟ್, 5ನೇ ದ್ವಾರ, ಅರಮನೆ ಮೈದಾನ, ಬೆಂಗಳೂರು.
ಕಾರ್ಯಕ್ರಮದ ಉದ್ಘಾಟನೆ | ಸ್ಮರಣ ಸಂಚಿಕೆ ಬಿಡುಗಡೆ | ನೂತನ ಕಟ್ಟಡದ ಶಂಕುಸ್ಥಾಪನೆ | ಬ್ಯಾಂಕಿನ ಸಾಕ್ಷ್ಯಚಿತ್ರ ಬಿಡುಗಡೆ | ಸನ್ಮಾನಿತರಿಗೆ ನೆನಪಿನ ಕಾಣಿಕೆ ಹಾಗೂ ಉಡುಗೊರೆ ವಿತರಣೆ

ಪರಮಪೂಜ್ಯ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಗಳು
ಪರಮಪೂಜ್ಯ ಶ್ರೀ ಶ್ರೀ ಸಿದ್ದಲಿಂಗ ಸ್ವಾಮೀಜಿಗಳು, ಶ್ರೀ ಸಿದ್ದಗಂಗಾ ಮಠ
ಸನ್ಮಾನ್ಯ ಶ್ರೀ ಹೆಚ್.ಡಿ.ದೇವೇಗೌಡರು, ಮಾಜಿ ಪ್ರಧಾನಮಂತ್ರಿಗಳು, ಭಾರತ ಸರ್ಕಾರ
ಸನ್ಮಾನ್ಯ ಶ್ರೀ ಎಸ್.ಟಿ.ಸೋಮಶೇಖರ್, ಸಹಕಾರ ಸಚಿವರು, ಕರ್ನಾಟಕ ಸರ್ಕಾರ
ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್, ಮಾಜಿ ಸಚಿವರು, ಹಾಗೂ ಅಧ್ಯಕ್ಷರು, ಕೆ.ಪಿ.ಸಿ.ಸಿ.
: ಮುಖ್ಯ ಅತಿಥಿಗಳು :

ಶ್ರೀ ಎಂ. ಕೃಷ್ಣಪ್ಪ | ಶ್ರೀ ವಿ. ಸೋಮಣ್ಣ | ಶ್ರೀ ಕೆ. ಗೋಪಾಲಯ್ಯ | ಶ್ರೀ ಆರ್. ಮುನಿರತ್ನ | ಶ್ರೀ ಹೆಚ್.ಕೆ. ಪಾಟೀಲ್ | ಶ್ರೀ ಜಿ.ಟಿ. ದೇವೇಗೌಡ | ಶ್ರೀ ಪ್ರಿಯಕೃಷ್ಣ
: ಅತಿಥಿಗಳು :

ಶ್ರೀ ಹೆಚ್.ಸಿ.ಗೋಪಾಲ್ ಅಧ್ಯಕ್ಷರು
ವಿಶೇಷ ಸೂಚನೆ: ಆಹ್ವಾನ ಪತ್ರಿಕೆ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿದ್ದು, ಅದು ತಲುಪದೇ ಇದ್ದಲ್ಲಿ ಈ ಪ್ರಕಟಣೆಯನ್ನೇ ಆಹ್ವಾನವೆಂದು ಪರಿಗಣಿಸಿ ಮಾನ್ಯ ಸದಸ್ಯರೆಲ್ಲರೂ ಕಾರ್ಯಕ್ರಮಕ್ಕೆ ಆಗಮಿಸಿ ಯಶಸ್ವಿಗೊಳಿಸಬೇಕೆಂದು ಈ ಮೂಲಕ ಕೋರುತ್ತೇವೆ.

4 ದಿನಗಳ ಫರ್ನಿಚರ್ ಶಾಪಿಂಗ್ ಫೆಸ್ಟಿವಲ್ ಇದೀಗ ಆರಂಭ!
FURNITURE FAIR™
ಇಂದಿನಿಂದ ಪ್ರಾರಂಭ
ಬೆಳಗ್ಗೆ 10.00 ರಿಂದ 8.30
INTERIOR & EXTERIOR EXHIBITION
ಭಾರಿ ರಿಯಾಯತಿ ಸೇಲ್
UPTO 70% OFF
ದಿನಾಂಕ ಮತ್ತು ಸ್ಥಳ
22 | 23 | 24 | 25 ಏಪ್ರಿಲ್ 2022
ತ್ರಿಪುರವಾಸಿನಿ ಅರಮನೆ ಮೈದಾನ
(ಮೇಖ್ರಿ ವೃತ್ತದ ಸಮೀಪ, ಬೆಂಗಳೂರು)
ಲಿವಿಂಗ್ ರೂಮ್ • ಡೈನಿಂಗ್ ಸೆಟ್ • ಬೆಡ್‌ರೂಮ್ • ಔಟ್‌ಡೋರ್ • ಹೋಮ್ ಡೆಕೋರ್ • ಬ್ರಾಸ್ & ಆಂಟಿಕ್ರಾಫ್ಟ್
• ರಿಕ್ಲೈನರ್ ಸೋಫಾ ಸೆಟ್ಸ್ • ಕಾರ್ಪೆಟ್ & ಕುಷನ್ಸ್ • ಮ್ಯಾಟ್ರೆಸ್ಸ್ • ಕರ್ಟನ್ಸ್ • ವಾಟರ್ ಫೌಂಟೈನ್ಸ್

exhibitions_iadsnevents
iadsnevents
Covid-19 protocol followed inside the venue
+91 93425 77908
ಪ್ರವೇಶ ಉಚಿತ
AN EVENT BY iads & events COMPLETE BUSINESS SOLUTIONS

ನಗರದಲ್ಲಿ ಇಂದು

ಪೊಲೀಸ್ ಸೇವಾ ಕವಾಯತು ಸಮಾರಂಭ: ಉಪಸ್ಥಿತಿ–ಪ್ರವೀಣ್ ಸೂದ್, ಆಯೋಜನೆ–ರಾಜ್ಯ ಪೊಲೀಸ್ ಇಲಾಖೆ, ಸ್ಥಳ–ಕೆ.ಎಸ್.ಆರ್.ಪಿ. 3ನೇ ಪಡೆಯ ಮೈದಾನ, ಕೋರಮಂಗಲ–ಬೆಳಿಗ್ಗೆ 7.45.

‘ಶಿಲ್ಪ ಗುರುಕುಲ’ ಘಟಿಕೋತ್ಸವ ಸಮಾರಂಭ: ಭಾಗವಹಿಸುವವರು–ಸಚಿವ ಎಂ.ಟಿ.ಬಿ.ನಾಗರಾಜ್, ಆಯೋಜನೆ–ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ, ಸ್ಥಳ–ಕೊಠಡಿ ಸಂಖ್ಯೆ 419, 4ನೇ ಮಹಡಿ, ವಿಕಾಸ ಸೌಧ–ಬೆಳಿಗ್ಗೆ 9.30.

ಇಂಡಿಯನ್ ಕ್ರಾಫ್ಟ್ ಕಲೆಕ್ಟಿವ್ 2ನೇ ಆವೃತ್ತಿ ಉದ್ಘಾಟನೆ: ಚಾಲನೆ ನೀಡುವವರು–ಅನ್ವಿತಾ ಸಾಗರ್, ಅಶೋಕ್ ಜಯರಾಮ್, ಆಯೋಜನೆ–ಇಂಡಿಯನ್ ಕ್ರಾಫ್ಟ್ ಕಲೆಕ್ಟಿವ್, ಸ್ಥಳ–ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ–ಮಧ್ಯಾಹ್ನ 12.15.

‘ನಾಡೋಜ’ ಪ್ರಶಸ್ತಿ ಪುರಸ್ಕೃತರಾಗಿರುವ ಗೊ.ರು.ಚನ್ನಬಸಪ್ಪನವರಿಗೆ ‘ಅಭಿನಂದನೆ ಸಮಾರಂಭ’: ಅಧ್ಯಕ್ಷತೆ–ಪಿ.ಜಿ.ಆರ್.ಸಿಂಧ್ಯ, ಅಭಿನಂದನಾ ನುಡಿ–ಕೊಂಡಜ್ಜಿ ಷಣ್ಮುಖಪ್ಪ, ಎಂ.ಎ.ಖಾಲಿದ್, ಆಯೋಜನೆ–ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್–ಕರ್ನಾಟಕ, ಸ್ಥಳ–ರಾಜ್ಯ ಕೇಂದ್ರ ಕಚೇರಿ, ಶಾಂತಿಗೃಹ, ಅರಮನೆ ರಸ್ತೆ–ಮಧ್ಯಾಹ್ನ 3.

ಸಹಕಾರ ರತ್ನ ಬಿ.ಎಚ್.ಕೃಷ್ಣಾರೆಡ್ಡಿ ಅಭಿಮಾನಿಗಳ ಬಳಗದಿಂದ ಅಭಿನಂದನಾ ಸಮಾರಂಭ: ಅಧ್ಯಕ್ಷತೆ–ಎಸ್.ಕೆ.ವೆಂಕಟರೆಡ್ಡಿ, ಅಭಿನಂದನೆ–ಬೆಳ್ಳೀಬಟ್ಲು ಹೆಂಜಾರೆಡ್ಡಿ ಕೃಷ್ಣಾರೆಡ್ಡಿ, ಆಯೋಜನೆ–ಸಹಕಾರ ರತ್ನ ಬಿ.ಎಚ್. ಕೃಷ್ಣಾರೆಡ್ಡಿ ಅಭಿಮಾನಿಗಳ ಬಳಗ, ಸ್ಥಳ–ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನ–ಸಂಜೆ 4.

‘ವಿಶ್ವ ಭೂ ದಿನಾಚರಣೆ’ ಅಂಗವಾಗಿ ಜಾಥಾ ಕಾರ್ಯಕ್ರಮ: ಚಾಲನೆ–ಸಚಿವ ಕೆ.ಸಿ.ನಾರಾಯಣಗೌಡ, ಆಯೋಜನೆ–ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸ್ಥಳ–ವಿಧಾನಸೌಧದ ಪೂರ್ವ ದ್ವಾರದ ಮುಂಭಾಗ– ಸಂಜೆ 4.

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಸಂಗೀತ ಕಾರ್ಯಕ್ರಮ–ಎಸ್.ಸಾಕೇತ್ ರಾಮನ್, ಎಚ್.ಕೆ.ವೆಂಕಟರಾಂ, ದಿಲ್ಲಿ ಸಾಯಿರಾಂ, ಗಿರಿಧರ್ ಉಡುಪ, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ –ಸಂಜೆ 5.

ನ್ಯಾಯಮೂರ್ತಿ ಎಸ್.ಸುಜಾತ ಅವರಿಗೆ ಬೀಳ್ಕೊಡುಗೆ ಹಾಗೂ ವಾರ್ಷಿಕೋತ್ಸವ ಸಮಾರಂಭ: ಮುಖ್ಯ ಅತಿಥಿ–ಹೈಕೋರ್ಟ್ ನ್ಯಾಯಮೂರ್ತಿ ಬಿ.ವೀರಪ್ಪ, ಉಪಸ್ಥಿತಿ–ಅನಿಲ್ ಬಿ.ಕಟ್ಟಿ, ಪ್ರಭುಲಿಂಗ ಕೆ.ನಾವದಗಿ, ಎಂ.ಬಿ.ನರಗುಂದ, ಉದಯ್ ಹೊಳ್ಳ, ಅಧ್ಯಕ್ಷತೆ–ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ–ವಕೀಲರ ಸಂಘ, ಸ್ಥಳ–ಸಿಟಿ ಸಿವಿಲ್ ಕೋರ್ಟ್–ಸಂಜೆ 5.

ಮಕ್ಕಳ ಅಭಿನಯ ಕಾರ್ಯಾಗಾರ: ಅತಿಥಿಗಳು–ಕುಶಾಲ್ ಗೌಡ, ಸೃಷ್ಟಿ, ರಾಮ್‌ಪವನ್, ಆಯೋಜನೆ–ಸ್ಟೇಜ್ ಬೆಂಗಳೂರು, ಸ್ಥಳ–1ನೇ ಮುಖ್ಯರಸ್ತೆ, ಪೈಪ್‌ಲೈನ್, ವಿಜಯನಗರ–ಬೆಳಿಗ್ಗೆ 10.30ರಿಂದ.

ವಿಂಧ್ಯಾ ಅಡಿಗ ಅವರಿಂದ ಹರಿನಾಮ ಸಂಕೀರ್ತನೆ: ವಾದ್ಯ ಸಹಕಾರ–ಅಮಿತ್ ಶರ್ಮಾ, ಶ್ರೀನಿವಾಸ ಕಾಖಂಡಕಿ, ಆಯೋಜನೆ–ತಿರುಮಲ ತಿರುಪತಿ ದೇವಸ್ಥಾನ, ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ–ರಾಘವೇಂದ್ರ ಸ್ವಾಮಿ ಮಠ, ಎನ್.ಆರ್. ಕಾಲೋನಿ –ಸಂಜೆ 6-30.

29ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಾರ್ಯಕ್ರಮ–ರವಿಕುಮಾರ್, ಶ್ರೀರಾಮ್ ಪ್ರಸಾದ್, ನಿಶಾಂತ್ ಚಂದ್ರನ್, ತುಮಕೂರು ಬಿ.ರವಿಶಂಕರ್, ಜಿ.ಎಸ್. ರಾಮಾನುಜಂ, ಆಯೋಜನೆ–ಶ್ರೀವಾಣಿ ಕಲಾ ಕೇಂದ್ರ, ಸ್ಥಳ–ಶ್ರೀವಾಣಿ ವಿದ್ಯಾ ಕೇಂದ್ರ, ಬಸವೇಶ್ವರನಗರ–5.30ರಿಂದ.

‘ವಾದ್ಯವೈಭವ–2022’ ಸಮಾರಂಭ: ಕಾರ್ಯಕ್ರಮ ನೀಡುವವರು–ಜ್ಯೋತಿ ಚೇತನ್, ಪಿ.ಶ್ರೀನಿವಾಸ ಮೂರ್ತಿ, ರಾಘವೇಂದ್ರ ಪ್ರಕಾಶ್, ಆಯೋಜನೆ–ಬೆಂಗಳೂರು ಗಾಯನ ಸಮಾಜ, ಸ್ಥಳ–ಗಾಯನ ಸಮಾಜದ ಸಭಾಂಗಣ, ಕೆ.ಆರ್. ರಸ್ತೆ–ಸಂಜೆ 6ರಿಂದ.

ಎಂ.ಎಸ್.ರಾಮಯ್ಯ ಜನ್ಮಶತಮಾನೋತ್ಸವದ ಪ್ರಯುಕ್ತ ವಿಶೇಷ ಅಂಚೆ ಚೀಟಿ ಹಾಗೂ ಅಂಚೆ ಲಕೋಟೆ ಬಿಡುಗಡೆ: ಬಿಡುಗಡೆ–ಕರ್ನಾಟಕ ವೃತ್ತದ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಎಸ್.ರಾಜೇಂದ್ರ ಕುಮಾರ್, ಮುಖ್ಯ ಅತಿಥಿ–ನಗರ ಪ್ರಧಾನ ಅಂಚೆ ಕಚೇರಿಯ ಪೋಸ್ಟ್‌ಮಾಸ್ಟರ್ ಜನರಲ್ ಎಲ್.ಕೆ.ದಾಸ್, ಆಯೋಜನೆ–ಕರ್ನಾಟಕ ಅಂಚೆ ಇಲಾಖೆ, ಸ್ಥಳ–ಮೇಘದೂತ ಸಭಾಂಗಣ, ಜಿಪಿಒ–ಮಧ್ಯಾಹ್ನ 12.

Amul The Taste of India
ಬಟರ್ ಸ್ಕಾಚ್
₹30* / 120 mL

ಅಮುಲ್ ಐಸ್‌ಕ್ರೀಮ್
*MRP (incl. of all taxes). Conditions apply.

49ನೇ ಜನ್ಮವಾರ್ಷಿಕೋತ್ಸವದ ಶುಭಾಶಯಗಳು

ಶ್ರೀ. ಸಿ. ಎನ್. ರವಿಕಿರಣ್
ಮಾಜಿ ಅಧ್ಯಕ್ಷರು, ಈಸ್ಟ್ ವೆಸ್ಟ್ ಸಮೂಹ ವಿದ್ಯಾಸಂಸ್ಥೆ, ಬೆಂಗಳೂರು.
ಲೇಟ್ ಸಿ.ಎಂ. ನಾಗರಾಜ್‌ರವರ ಸುಪುತ್ರರು
ಸಂಸ್ಥಾಪಕ ಅಧ್ಯಕ್ಷರು, ಈಸ್ಟ್ ವೆಸ್ಟ್ ಸಮೂಹ ವಿದ್ಯಾಸಂಸ್ಥೆ, ಬೆಂಗಳೂರು.
ಮಾಜಿ ಮಹಾಪೌರರು, ಮಹಾನಗರ ಪಾಲಿಕೆ, ಬೆಂಗಳೂರು.
ಹುಟ್ಟಿದಿರಿ ಶ್ರೀಮಂತರಾಗಿ, ಬದುಕಿದಿರಿ ಸಾಮಾನ್ಯರಾಗಿ,
ಸೇವೆಗೈದಿರಿ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಏಳಿಗೆಗಾಗಿ,
ನಿಮ್ಮ ಉನ್ನತ ಯೋಚನೆಗಳು ಬೆಳೆಯಲು ಕಾರಣವಾದವು
ಈಸ್ಟ್ ವೆಸ್ಟ್ ಸಮೂಹ ವಿದ್ಯಾಸಂಸ್ಥೆ ಬೃಹದಾಕಾರವಾಗಿ.
ಕಿರಣಗಳಿಂದ ತೇಜಸ್ಸು,
ರವಿಗೆ ಅದುವೇ ಶ್ರೇಯಸ್ಸು.
ಉಳಿಯಲಿ ಸದಾಕಾಲ ಎಲ್ಲರ ಮನದಲ್ಲೂ ನೀವು ಗಳಿಸಿದ ಕೀರ್ತಿ ಯಶಸ್ಸು.
ಹೆಸರಿಗೆ ತಕ್ಕಂತೆ ಬಾಳಿದ ನಿಮಗೆ “ರವಿಯ ಸಂಭ್ರಮ” ದ ಕೊಡುಗೆ.
ನಿಮಗೆ 49ನೇ ಜನ್ಮವಾರ್ಷಿಕೋತ್ಸವದ ಶುಭಾಶಯಗಳು
ಶುಭಾಶಯ ಕೋರುವವರು:
ಕುಟುಂಬ ಸದಸ್ಯರು, ಬಂಧುಗಳು, ಶಾಲಾ-ಕಾಲೇಜು ಸಿಬ್ಬಂದಿವರ್ಗದವರು ಮತ್ತು ಬಂಧು ಮಿತ್ರರು
EAST WEST 1968
EAST WEST GROUP OF INSTITUTIONS
Over 50 Years of Academic Excellence
Phone: 080-23288899 / 94482 24779
EW-22302

Reliance Growth is Life
Reliance Jewels BE THE MOMENT
ಕಚ್‌ನ ರಣ್‌ದಿಂದ ಸ್ಫೂರ್ತಿ ಪಡೆದ
ವಿಶಿಷ್ಟ ಅಕ್ಷಯ ತೃತೀಯ ಆಭರಣಗಳ ಸಂಗ್ರಹಣೆ

SETAT22CP
LIPPAN
RANNKAAR
KANN KANN MEIN KARIGARI
ಆಭರಣ ಸಂಗ್ರಹಣೆಯನ್ನು ಶೋಧಿಸಲು ಸ್ಕ್ಯಾನ್ ಮಾಡಿ ಮತ್ತು ವರ್ಚುಯಲ್ ಆಗಿ ಆಭರಣಗಳನ್ನು ಧರಿಸಿ ನೋಡಿ
ಈಗ ಇಲ್ಲೂ ಲಭ್ಯವಿದೆ: www.reliancejewels.com
ಅಕ್ಷಯ ತೃತೀಯ ಆಫರ್
25% ವರೆಗೆ ಕಡಿತ* ಚಿನ್ನದ ಆಭರಣಗಳ ತಯಾರಿಕೆಯ ಚಾರ್ಜುಗಳ ಮೇಲೆ ಮತ್ತು ವಜ್ರದ ಆಭರಣಗಳ ಬಿಲ್ಲಿನ ಮೌಲ್ಯದ ಮೇಲೆ
ಸೀಮಿತ ಅವಧಿಯ ಆಫರ್ | *ನಿಯಮಗಳು ಹಾಗೂ ಶರತ್ತುಗಳು ಅನ್ವಯಿಸುತ್ತವೆ
5% EXTRA CASHBACK# SBI card
#Min. Trxn.: ₹25,000; Max. Cashback: ₹2,500 per card account. Validity: 22 Apr - 03 May 2022. T&C Apply.
ಬೆಂಗಳೂರು: ಬನಶಂಕರಿ, ನಂ. 296, ರಾಮ್ ಟವರ್, 100 ಅಡಿ ರಿಂಗ್ ರೋಡ್, 3ನೇ ಸ್ಟೇಜ್, 4ನೇ ಫೇಸ್. ಫೋನ್ : 08026793505/08026793508 | ಜಯನಗರ, ನಂ. 18/35, 4ನೇ ಬ್ಲಾಕ್, 11ನೇ ಮೇನ್. ಫೋನ್: 080-41681803/08 | ಕೋರಮಂಗಲ, ನಂ. 612, 80 ಅಡಿ ರಸ್ತೆ, 4ನೇ ಬ್ಲಾಕ್, ಫೋನ್: 080-41244550 | ಮಲ್ಲೇಶ್ವರಮ್, ಮೊದಲ ಮಹಡಿ, ಮಂತ್ರಿ ಸ್ಕ್ವೇರ್ ಮಾಲ್, ಸಂಪಿಗೆ ರಸ್ತೆ. ಫೋನ್ : 080-22667110 | ಮಾರತಹಳ್ಳಿ, ಚಾಯ್ ಪಾಯಿಂಟ್ ಪಕ್ಕ, ಔಟರ್ ರಿಂಗ್ ರೋಡ್. ಫೋನ್: 08042072752/7892199488
ನಮ್ಮನ್ನು ಇಲ್ಲಿ ಫಾಲೋ ಮಾಡಿರಿ:

03.05.22 Akshaya Tadige PRE-BOOK NOW!
ಕೊಡುಗೆಗಳು ಆರಂಭವಾಗಿದೆ
₹10000/- ಕಡಿತ* ಪ್ರತಿ ಕ್ಯಾರಟ್‌ಗೆ ವಜ್ರದ ಆಭರಣಗಳ ಮೇಲೆ
₹ 300/- ಕಡಿತ* ಪ್ರತಿ ಗ್ರಾಮ್‌ಗೆ ಪ್ಲಾಟಿನಂ ಆಭರಣಗಳ ಮೇಲೆ
10% ಕಡಿತ* ಬೆಳ್ಳಿಯ ಮಜೂರಿಯ ಮೇಲೆ
ಚಿನ್ನದ ಆಭರಣಗಳ ಖರೀದಿಯ ಮೇಲೆ (ಕನಿಷ್ಟ 10 ಗ್ರಾಮ್)
ಸಮಾನ ತೂಕದ ಬೆಳ್ಳಿ, ಸಂಪೂರ್ಣ ಉಚಿತ
ಹಳೆಯ ಚಿನ್ನದ ಎಕ್ಸ್‌ಚೇಂಜ್ ಮೇಲೆ ಕಡಿತ ಇಲ್ಲ
ಈಗಲೇ ಮುಂಗಡ ಬುಕಿಂಗ್ ಮಾಡಿ!!!
ಬುಕಿಂಗ್ ದಿನದ ಬೆಲೆ ಮತ್ತು ಅಕ್ಷಯ ತೃತೀಯ ದಿನದ ಬೆಲೆಗಳ ನಡುವೆ ಕಡಿಮೆಯುಳ್ಳ ಬೆಲೆಯ ಲಾಭ ಪಡೆದುಕೊಳ್ಳಿ
ಕೊಡುಗೆಯು 03ನೇ ಮೇ 2022ರ ವರೆಗೆ ಮಾತ್ರ (ನಾವು 23ನೇ ಏಪ್ರಿಲ್ 2022 ರಂದು ಮುಚ್ಚಲಾಗುವುದು)
*OFFERS NOT APPLICABLE ON SOLITAIRES *CONDITIONS APPLY
NIKHAAR
ANTWERP BANGKOK BENGALURU DUBAI NEW YORK
THE CREATIVE JEWELLERY DESTINATION
Richmond Circle, Bengaluru Tel: +91 80 22103266/77/88
www.nikhaar.net /NikhaarJewelsBlr
/nikhaarjewelsindia /nikhaarjewels /user/nikhaarjewels

HONDA
FOR SUPREME BEINGS.
Experience the pure exhilarating rush of the advanced 5th Generation City. Crafted immaculately for Supreme Beings.
25 YEARS Honda in India
Honda Cars India Limited is proud to complete 25 years of its presence in India. Log on to www.hondacarindia.com for more details.

BENEFITS UP TO ₹30 000*
CITY RUSH OF SUPREMACY
LONGEST SEDAN IN THE SEGMENT* | 9 LED ARRAY HEADLAMPS, LED DRL & TURN SIGNAL
CONNECTED CAR WITH ALEXA REMOTE CAPABILITY & WORKS WITH OK GOOGLE^
NEXT GEN HONDA CONNECT+ WITH 5 YEAR SUBSCRIPTION
LONGEST TENURE UP TO 10 YEARSØ
LOW INTEREST RATE OF 6.75%Ø
INITIAL LOW EMI - ₹899Ø PER LAKH
Exclusive benefits for Teachers, Farmers, Doctors, Lawyers, Architects, Finance Professionals, Pensioners, Government Employees and Select Corporates. Select models available through GeM & CSD. T&C apply.
OUR DEALERSHIPS AND SERVICE CENTRES ARE FOLLOWING ALL PRECAUTIONS AGAINST COVID-19.
Routine sanitisation | Temperature check | Mandatory face mask | Social distancing | Contactless booking and delivery
Honda Auto Terrace | Honda ProCARE Customer Service | 3 Year Warranty Unlimited Kilometres# | Scan now to Book or Buy Honda From Home
*Scheme on select variants/models. ØLoan at the sole discretion of financier/bank partner. Offers and features are model, fuel type and variant specific. Offers include loyalty, exchange and consumer benefits. For Corporate Sales enquiries, write to corporatesales@hondacarindia.com. Images used are computer generated/enhanced for creative representation purposes and may vary from actual product due to printing constraints. Specifications and features are subject to change without prior notice. #Warranty of unlimited kilometres in a 3-year period from date of sale of new vehicle comes as part of standard purchase. *Segment is defined by midsize sedans with length usually up to 4 500 mm and engine size up to 1.5 litres. ^Amazon, Alexa, and all related logos are trademarks of Amazon.com, Inc., or its affiliates. Please refer to amazon.com for more details. Google is a trademark of Google LLC. +Connect Application is compatible with Apple iOS 11.0 and above, Android 7.0 and above. Connected services are subject to network availability, facility/transmission limitations as per government regulation and permissions in specific regions/locations. Terms and conditions apply.
Whitefield Honda: Whitefield Road 86575 89175
Magnum Honda: Mekhri Circle: 99000 29164, Kanakapura Rd: 98455 24394, Tumkur: 99160 04127
Dakshin Honda: Hosur Road: 86575 88495, Lavelle Road: 86575 89201, Mysore Road: 86575 89889
Brigade Honda: Yelahanka 86575 88450

ಭರವಸೆಯಾಗಿಯೇ ಉಳಿದ ರಾಜಕಾಲುವೆ ಅಭಿವೃದ್ಧಿಪಡಿಸುವ ಮುಖ್ಯಮಂತ್ರಿ ಘೋಷಣೆ

ಮಳೆ ಬಂದರೆ ಮತ್ತೆ ಮುಳುಗುವ ಆತಂಕ

● ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಆಕಾಶದಲ್ಲಿ ಮೋಡ ಕಟ್ಟಿದರೆ ಅಥವಾ ಗುಡುಗಿನ ಶಬ್ದ ಕೇಳಿದರೆ ನಗರದ ಹಲವು ಬಡಾವಣೆಗಳ ಜನ ಭಯದಲ್ಲಿ ರಾತ್ರಿ ಕಳೆಯುವ ಪರಿಸ್ಥಿತಿ ಸೃಷ್ಟಿಯಾಗಿದೆ. ಮನೆಗಳು ಮುಳುಗುವ ಆತಂಕದಲ್ಲಿ ಅರೆನಿದ್ರೆಯಲ್ಲೇ ಜೀವನ ಸಾಗಿಸಬೇಕಾಗಿದೆ.

ಜೋರು ಮಳೆ ಬಂತೆಂದರೆ ನಗರದ ಹೊರ ವಲಯದ ಒಂದಿಲ್ಲೊಂದು ಬಡಾವಣೆಗೆ ನೀರು ನುಗ್ಗುವುದು ಸಾಮಾನ್ಯ ಎನ್ನುವಂತಾಗಿದೆ. ಇದನ್ನು ತಪ್ಪಿಸಲು ₹1,560 ಕೋಟಿ ಮೊತ್ತದಲ್ಲಿ ರಾಜಕಾಲುವೆಗಳ ಅಭಿವೃದ್ಧಿಪಡಿಸುವ ಯೋಜನೆಯನ್ನು ಬಿಬಿಎಂಪಿ ರೂಪಿಸಿದೆ. ಕಳೆದ ವರ್ಷ ಮಳೆಯಿಂದ ಆಗಿದ್ದ ಹಾನಿ ವೀಕ್ಷಣೆ ಸಂದರ್ಭದಲ್ಲಿ ಅನುದಾನ ಬಿಡುಗಡೆ ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ ಮಾಡಿದ್ದರು. ಆದರೆ, ಅದು ಭರವಸೆಯಾಗಿಯೇ ಉಳಿದಿದೆ.

ದಾಸರಹಳ್ಳಿ, ಬೊಮ್ಮನಹಳ್ಳಿ, ರಾಜರಾಜೇಶ್ವರಿನಗರ, ಯಲಹಂಕ, ಕೆ.ಆರ್.ಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಲವು ಬಡಾವಣೆಗಳಲ್ಲಿ ಪ್ರತಿವರ್ಷ ಮಳೆ ನೀರು ನುಗ್ಗುತ್ತಿದೆ. ದಾಸರಹಳ್ಳಿ ವ್ಯಾಪ್ತಿಯ ರುಕ್ಮಿಣಿನಗರ, ಗುಂಡಪ್ಪ ಬಡಾವಣೆ, ಆರ್.ಆರ್. ಕಾಲೇಜು, ರಾಯಲ್ ಎನ್‌ಕ್ಲೇವ್, ಬಿಟಿಎಸ್ ಬಡಾವಣೆ, ರಾಜಗೋಪಾಲನಗರ, ಚೊಕ್ಕಸಂದ್ರ ಸೇರಿದಂತೆ ಒಟ್ಟು 16ಕ್ಕೂ ಹೆಚ್ಚು ಪ್ರದೇಶಗಳಲ್ಲಿ ರಾಜಕಾಲುವೆ ನೀರು ಜನರ ನೆಮ್ಮದಿಯನ್ನು ಕಸಿದುಕೊಂಡಿದೆ.

ರಾಯಲ್ ಎನ್‌ಕ್ಲೇವ್ ಬಡಾವಣೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಂಚಿನಲ್ಲಿದ್ದು, ನೀರು ಸರಾಗವಾಗಿ ಹರಿದು ಹೋಗಲು ಚರಂಡಿ ವ್ಯವಸ್ಥೆ ಇಲ್ಲದೆ ಸಮಸ್ಯೆ ಉದ್ಭವಿಸುತ್ತಿದೆ. ಇನ್ನೊಂದೆಡೆ ಕೆ.ಆರ್.ಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೆಣ್ಣೂರು–ಬಾಗಲೂರು ರಸ್ತೆಯಲ್ಲಿರುವ ರಾಜಕಾಲುವೆ ನೀರು ಪ್ರತಿವರ್ಷ ಹೊರಮಾವು–ವಡ್ಡರಪಾಳ್ಯಕ್ಕೆ ನುಗ್ಗುತ್ತಿದೆ.

ಕೇಂದ್ರೀಯ ವಿಹಾರದ ಬಳಿ ರಾಜಕಾಲುವೆ ವಿಸ್ತರಣೆ ಕಾಮಗಾರಿ ನಡೆಯುತ್ತಿರುವುದು –ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್‌.ಜಿ.

ಜಕ್ಕೂರಿನ ಜವಾಹರ ಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರದ (ಜೆಎನ್‌ಸಿಎಎಸ್‌ಆರ್) ಪ್ರಯೋಗಾಲಯಗಳು ಜಲಾವೃತಗೊಂಡು ದಶಕಗಳ ವೈಜ್ಞಾನಿಕ ಸಂಶೋಧನೆ ನೀರುಪಾಲಾಗಿತ್ತು. ಯಲಹಂಕ ಬಳಿಯ ಕೇಂದ್ರೀಯ ವಿಹಾರಕ್ಕೆ ರಾಜಕಾಲುವೆ ನೀರು ನುಗ್ಗಿ ಅವಾಂತರ ಸೃಷ್ಟಿಸಿತ್ತು. ಇಲ್ಲಿ ರಾಜಕಾಲುವೆ ವಿಸ್ತರಣೆ ಕಾಮಗಾರಿ ನಡೆಯುತ್ತಿದೆ.

‘ಈಗ ಕಾಮಗಾರಿ ಅಂತಿಮ ಹಂತದಲ್ಲಿದೆ. ರಾಷ್ಟ್ರೀಯ ಹೆದ್ದಾರಿ ತನಕ ಅಷ್ಟೇ ರಾಜಕಾಲುವೆ ನಿರ್ಮಾಣವಾಗಿದ್ದು, ಮುಂದಕ್ಕೆ ನೀರು ಹರಿದು ಹೋಗುವಂತೆ ಮಾಡಬೇಕಿದೆ. ಆ ಕಾಮಗಾರಿಯನ್ನು ನಿರ್ವಹಿಸಿದರೆ ಅನುಕೂಲ ಆಗಲಿದೆ’ ಎಂದು ಕೇಂದ್ರೀಯ ವಿಹಾರದ ಕಾರ್ಯದರ್ಶಿ ಕೃಷ್ಣ ಹೇಳಿದರು.

ಹೊಸಕೆರೆಹಳ್ಳಿ ಸಮೀಪದ ದತ್ತಾತ್ರೇಯ ಬಡಾವಣೆ, ಮಾನ್ಯತಾ ಟೆಕ್ ಪಾರ್ಕ್ ಹಿಂಭಾಗದ ಮರಿಯಣ್ಣನಪಾಳ್ಯ, ನಾಯಂಡಹಳ್ಳಿ ಬಳಿಯ ಪ್ರಮೋದ್ ಲೇಔಟ್, ಬೊಮ್ಮನಹಳ್ಳಿ ವ್ಯಾಪ್ತಿಯ ಎಚ್‌ಎಸ್‌ಆರ್ ಲೇಔಟ್, ಬಿಳೇಕಹಳ್ಳಿ, ಕೋಡಿಚಿಕ್ಕನಹಳ್ಳಿಯಲ್ಲೂ ಜನ ಆತಂಕದಲ್ಲಿ ದಿನ ದೂಡುತ್ತಿದ್ದಾರೆ.

ಹೊರ ವಲಯ ಒಳ ಬೇಗುದಿ

‘ಮನೆಗಳಿಗೆ ನೀರು ನುಗ್ಗಿದಾಗ ಬರುವ ಅಧಿಕಾರಿಗಳು ಮತ್ತು ರಾಜಕಾರಣಿಗಳು ಭರವಸೆ ನೀಡಿ ಹೋಗುತ್ತಾರೆ. ಆದರೆ, ರಾಜಕಾಲುವೆಗಳ ಸ್ಥಿತಿ ಮಾತ್ರ ಹಾಗೇ ಉಳಿದಿದೆ. ಮುಖ್ಯಮಂತ್ರಿ ಕಳೆದ ವರ್ಷ ನೀಡಿದ ಭರವಸೆಯೂ ಇದೇ ರೀತಿ ಆಗಿದೆ. ಈಗಾಗಲೇ ಮುಂಗಾರು ಪೂರ್ವ ಮಳೆ ಶುರುವಾಗಿದೆ, ಮಳೆಗಾಲ ಇನ್ನೆರಡು ತಿಂಗಳಲ್ಲಿ ಆರಂಭವಾಗಲಿದೆ. ಅನುದಾನವನ್ನೇ ಬಿಡುಗಡೆ ಮಾಡದಿದ್ದರೆ ರಾಜಕಾಲುವೆಗಳು ಅಭಿವೃದ್ಧಿ ಆಗುವುದು ಹೇಗೆ, ನಾವು ನೆಮ್ಮದಿಯಿಂದ ನಿದ್ರೆ ಮಾಡುವುದು ಯಾವಾಗ’ ಎಂದು ರುಕ್ಮಿಣಿನಗರದ ದಿನೇಶ್ ಪ್ರಶ್ನಿಸುತ್ತಾರೆ.

ಕ್ರಿಯಾ ಯೋಜನೆ ಸಿದ್ಧಪಡಿಸಿರುವ ಬಿಬಿಎಂಪಿ

ನಗರದಲ್ಲಿ 842 ಕಿ.ಮೀ. ಉದ್ದದ ನಾಲ್ಕು ಪ್ರಮುಖ ರಾಜಕಾಲುವೆಗಳು ಮತ್ತು ದ್ವಿತೀಯ ಹಂತದ 97 ಕಿ.ಮೀ ಉದ್ದದ ರಾಜಕಾಲುವೆಗಳಿವೆ. 2021ರ ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ಸುರಿದ ಮಳೆಯಿಂದಾಗಿ ಪಾಲಿಕೆ ವ್ಯಾಪ್ತಿಯಲ್ಲಿ ಹಲವು ತಗ್ಗು ಪ್ರದೇಶಗಳು ಜಲಾವೃತಗೊಂಡು ಪ್ರವಾಹ ಉಂಟಾಗಿತ್ತು. ಹಲವೆಡೆ ರಾಜಕಾಲುವೆಗಳ ತಡೆಗೋಡೆಗಳು ಶಿಥಿಲಗೊಂಡಿದ್ದವು.

ಮುಖ್ಯಮಂತ್ರಿ ನೀಡಿದ್ದ ಭರವಸೆ ಆಧರಿಸಿ ಪ್ರಥಮ ಹಂತದ 60.82 ಕಿ.ಮೀ ರಾಜಕಾಲುವೆಗಳು ಹಾಗೂ ದ್ವಿತೀಯ ಹಂತದ 97.10 ಕಿ.ಮೀ ರಾಜಕಾಲುವೆಗಳನ್ನು ಅಭಿವೃದ್ಧಿಪಡಿಸಲು ಒಟ್ಟು 292 ಕಾಮಗಾರಿಗಳನ್ನು ಕೈಗೊಳ್ಳಲು ಬಿಬಿಎಂಪಿ ಕ್ರಿಯಾ ಯೋಜನೆ ಸಿದ್ಧಪಡಿದೆ.

ಅನುದಾನ ಪಡೆಯಲು ಸರ್ಕಾರದೊಂದಿಗೆ ನಡೆಸಿರುವ ಸಮನ್ವಯದ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಂದ ಪ್ರತಿಕ್ರಿಯೆ ಪಡೆಯಲು ಪ್ರಯತ್ನಿಸಲಾಯಿತು. ಅವರು ಕರೆ ಸ್ವೀಕರಿಸಲಿಲ್ಲ.

‘ಎಂಡಿಎನ್ ರೂಲ್ ಆಫ್ ಲಾ’

‘ಬಾರುಕೋಲು’ ಕೃತಿ ಬಿಡುಗಡೆ: ಸಿದ್ದರಾಮಯ್ಯ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಪ್ಪಟ ಸಮಾಜವಾದಿ ಆಗಿದ್ದ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರ ‘ರೂಲ್ ಆಫ್ ಲಾ’ ಬಾರುಕೋಲು ಆಗಿತ್ತು. ಅವರ ವಿಚಾರಧಾರೆ ಹಾಗೂ ಚಿಂತನೆಗಳು ಇಂದಿನ ಸಮಾಜಕ್ಕೆ ಅಗತ್ಯವಾಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸಿದ್ದರಾಮಯ್ಯ ಅವರ ನಿವಾಸದಲ್ಲಿ ಗುರುವಾರ ಆಯೋಜಿಸಿದ್ದ ಸರಳ ಕಾರ್ಯಕ್ರಮದಲ್ಲಿ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಚಿಂತನೆಯ ‘ಬಾರುಕೋಲು’ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು.

'ಪ್ರಜಾಪ್ರಭುತ್ವ, ಕೃಷಿ, ಭ್ರಷ್ಟಾಚಾರ, ಅಧಿಕಾರಿಗಳ ನಡೆ ಬಗ್ಗೆ ನಂಜುಂಡಸ್ವಾಮಿ ಅವರು ತಮ್ಮದೇ ಆದ ವಿಚಾರಧಾರೆಗಳನ್ನು ಹೊಂದಿದ್ದರು. ಅನ್ಯಾಯಕ್ಕೆ ಒಳಗಾದವರ ಪರ ನಿಂತು ಸರ್ಕಾರ ಹಾಗೂ ಅಧಿಕಾರಿಗಳಿಗೆ ಬಾರುಕೋಲು ಬೀಸುತ್ತಿದ್ದರು’ ಎಂದು ನಂಜುಂಡಸ್ವಾಮಿ ಜೊತೆಗಿನ ದಿನಗಳನ್ನು ಮೆಲುಕು ಹಾಕಿದರು.

ಗಾಂಧಿಭವನ ಬಳಿ ಇರುವ ತಮ್ಮ ಸರ್ಕಾರಿ ನಿವಾಸದಲ್ಲಿ ‘ಬಾರುಕೋಲು’ ಪುಸ್ತಕ ಬಿಡುಗಡೆಗೊಳಿಸಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಕೀಲ ರವಿವರ್ಮಕುಮಾರ್ ಅವರಿಗೆ ಪುಸ್ತಕದ ಪ್ರತಿಯೊಂದನ್ನು ನೀಡಿದರು. ನಟರಾಜ್ ಹುಳಿಯಾರ್, ನಂಜುಂಡಸ್ವಾಮಿಯವರ ಪುತ್ರಿ ಚುಕ್ಕಿ ಹಾಗೂ ಅವರ ಪತಿ ಲ್ಯೂಕಾ ಮೊಂಥಾನರಿ ಇದ್ದರು – ಪ್ರಜಾವಾಣಿ ಚಿತ್ರ

ವಕೀಲ ರವಿವರ್ಮಕುಮಾರ್, ‘ಪ್ರೊ. ನಂಜುಂಡಸ್ವಾಮಿ ಅವರು ಜ್ವಲಂತ ಸಮಸ್ಯೆಗಳಿಗೆ ಉತ್ತರ ಹುಡುಕಲು ಹೋರಾಟ ನಡೆಸಿದವರು ಎಂದು ಅಭಿಪ್ರಾಯಪಟ್ಟರು.

ನಂಜುಂಡಸ್ವಾಮಿಯವರ ಪುತ್ರಿ ಚುಕ್ಕಿ, ತಾವು ಸಂಗ್ರಹಿಸಿಟ್ಟಿದ್ದ ತಂದೆಯ ಬಾರುಕೋಲನ್ನು ಸಿದ್ದರಾಮಯ್ಯ ಅವರಿಗೆ ನೀಡಿದರು. ಅದನ್ನು ಹೆಗಲ ಮೇಲೆ ಹಾಕಿಕೊಂಡ ಸಿದ್ದರಾಮಯ್ಯ, ‘ಇದರಿಂದ ಸರ್ಕಾರಕ್ಕೆ ಹೊಡೆಯಬೇಕಾ?’ ಎಂದರು.

ಪುಸ್ತಕ ಪರಿಚಯ :
ಪ್ರೊ. ಎಂ.ಡಿ. ನಂಜುಂಡಸ್ವಾಮಿ ಚಿಂತನೆ ‘ಬಾರುಕೋಲು’
ಸಂಪಾದನೆ : ನಟರಾಜ್ ಹುಳಿಯಾರ್ ಹಾಗೂ ರವಿಕುಮಾರ್ ಬಾಗಿ
ಪುಟಗಳು : 238
ದರ : ₹ 200
ಪ್ರಕಾಶಕರು: ಪಲ್ಲವ ಪ್ರಕಾಶನ, ಚನ್ನಪಟ್ಟಣ

ರಸ್ತೆಗುಂಡಿ ಮುಚ್ಚಲು ಎಆರ್‌ಟಿಎಸ್‌ಗೆ ಕಾರ್ಯಾದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ರಸ್ತೆ ಗುಂಡಿ ಮುಚ್ಚುವ ಕಾಮಗಾರಿ ಕೈಗೆತ್ತಿಕೊಳ್ಳಲು, ಅಮೆರಿಕನ್ ರೋಡ್ ಟೆಕ್ನಾಲಜೀಸ್ ಸಲ್ಯೂಷನ್ಸ್ (ಎಆರ್‌ಟಿಎಸ್) ಸಂಸ್ಥೆಗೆ ಇದೇ 20ರಂದು ತಾತ್ಕಾಲಿಕ ಕಾರ್ಯಾದೇಶ ನೀಡಲಾಗಿದೆ’ ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹೈಕೋರ್ಟ್‌ಗೆ ತಿಳಿಸಿದೆ.

ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ರಸ್ತೆ ಗುಂಡಿ ಮುಚ್ಚುವುದಕ್ಕೆ ಸಂಬಂಧಿಸಿದಂತೆ ವಿಜಯನ್ ಮೆನನ್ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಕಾರ್ಯಾದೇಶ ನೀಡಿರುವ ಬಗ್ಗೆ ಬಿಬಿಎಂಪಿ ವಕೀಲರು ನೀಡಿದ ಮಾಹಿತಿ ದಾಖಲಿಸಿಕೊಂಡ ನ್ಯಾಯಪೀಠ, ‘ಎಆರ್‌ಟಿಎಸ್ ಸಂಸ್ಥೆಯು ತಕ್ಷಣವೇ ನಗರದ ಪ್ರಮುಖ ರಸ್ತೆಗಳಲ್ಲಿನ ಗುಂಡಿ ಮುಚ್ಚುವ ಕೆಲಸ ಆರಂಭಿಸಬೇಕು’ ಎಂದು ನಿರ್ದೇಶಿಸಿತು.

ಪುನರ್ ಪರಿಗಣಿಸಿ: ‘ರಸ್ತೆ ಗುಂಡಿ ಮುಚ್ಚುವ ಪೈಥಾನ್ ಯಂತ್ರಕ್ಕೆ ಪ್ರತಿ ಗಂಟೆಗೆ ಎಷ್ಟು ಹಣ ಪಾವತಿಸಬೇಕು ಎಂಬುದನ್ನು ಬಿಬಿಎಂಪಿ ಮುಖ್ಯ ಆಯುಕ್ತರು ಪುನರ್ ಪರಿಗಣಿಸಬೇಕು’ ಎಂದು ನ್ಯಾಯಪೀಠ ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ಮೇ 31ಕ್ಕೆ ಮುಂದೂಡಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

REQUIRED
We are looking for
ACCOUNTANT
Minimum 8-9 years experience (preferred candidates worked with CA / Auditors) Core
CORE RESPONSIBILITIES: Tally E Invoicing Manage all accounting transactions. Prepare MIS Reports. BRS. Handle monthly, quarterly and annual closings. Reconcile accounts payable and receivable. Ensure timely Bank payments. Compute taxes and prepare tax returns. Import / export documentation will be added advantage.
Interested candidates email your CV to amodvig@gmail.com
ROUNAQH

Hospital & Medical Jobs

LOOKING FOR:
FULL TIME CONSULTANTS
GENERAL MEDICINE, GENERAL SURGERY, OBSTETRICS & GYN (FRESH GRADUATES PREFERRED) - ACCOMODATION & PERKS
DUTY DOCTORS
MBBS
PHYSIOTHERAPISTS
BPT/MPT
NURSING STAFF
GNM (TRAINEES CAN APPLY)
RADIOLOGY TECHNICIAN
DMRT/TRAINEES
ACCOUNTANT/PRO
FRONT OFFICE
EXECUTIVES
send CV to:
Dr KANTHI KIRAN G, 2046, 4TH B CROSS, YELAHANKA NEW TOWN, BANGALORE - 560064
hr.rakshahealthcare@hotmail.com
whats app: 8217657491

General

SUN Resolution Professional Private Limited (Insolvency Professional Entity)
-An Insolvency Professional Entity Required a Qualified CA/CS/ICWA/GIP for Insolvency & Bankruptcy work for their Bengaluru office, Interested candidate are requested to mail your resume on ibc2016consultancy@gmail.com
Contact No. 7208633626 (S. Kumar)

Marketing & Sales

POSITION: SENIOR Sales Executive Bike is Must Preference to insurance background candidates. Salary: 20,000+ Plus incentive Job Location: Bangalore Send CV to richard.emmanuel@letstransport.team / 7259837095

Part-Time Jobs

REPUTED MNC Company Will Provide Work From Home, Earn 30 to 35K Malleswaram: 7019215243/ 9886641282

PUBLIC NOTICE

ELCITA
TENDERS INVITED BY ELECTRONICS CITY INDUSTRIAL TOWNSHIP AUTHORITY (ELCITA), BANGALORE
ELECTRONICS CITY INDUSTRIAL TOWNSHIP AUTHORITY (ELCITA), having its office at Sy. No. 7 (P), West Phase, Electronics City, Bangalore: 560 100 is invited tenders as detailed below:

Sl.No	Tender name	Tender number	Last date to apply	Closing timings
1	Construction of RWH systems at West Phase, Electronics City, within the jurisdiction of "e-City Industrial Township Area" Bengaluru-560100.	ELCITA/UDD/2022-23/OW/WORK_INDENT1611	28/04/2021	17:00:00

Details of the Tenders can be downloaded from the e-procurement website eproc.karnataka.gov.in under Urban Development Department- Electronics city Industrial Township Authority. Also, details are available in www.elcita.in
For queries Contact: 080-4660 2222 / write to : elect.mgmt@elcita.in and operation.mgr@elcita.in
Chief Executive Officer
Electronics City Industrial Township Authority (ELCITA)
7 (P), West Phase, Electronics City, Bangalore: 560 100 Website: www.elcita.in
Phone: 080-4660 2222

REAL ESTATE SELLING

Commerical

Rajajinagar

FOR SALE: Five years old commercial building on BDA plot Opp Narang theatre, Rajajinagar to fetch around Rs 1.60 lac rent. Owner 9880274337

R T Nagar

COMMERCIAL UNIT in Munireddy Palya 1100 sqft 2 shutter shop with 2 BHK for Sale. Contact; 9448084300

Flat

CV Raman Nagar

PRESTIGE RAPPERSWIL, Super luxury 3 bedroom + maids room in CV Raman Nagar, off Indiranagar available for sale, Starting Price Rs. 2.67 Cr, for details, call: 7259665390

Frazer Town

LUXURIOUS READY 3 Bed Apartment with Staff Quarter in Frazer Town. Gated complex with swimming pool and clubhouse. Price Rs. 3.45 Cr. For details contact -9945039194

Mahalakshmi Layout

READY TO Move, 3 BHK Flats, 1 KM from Iskcon Temple & Metro Station, 94 Lakhs. Few Flats Left. 9845014364/ 9513999423

Whitefield

PRESTIGE WHITE MEADOWS, Super luxury Penthouse in Whitefield with Private Gym, Spa and Indoor Swimming Pool. Price Rs. 15 Cr. Call: 9108577397

Sites

Devanahalli

PRESTIGE GOLFSHIRE MARINA, Plot of 13345 Sft for sale on Nandi Hills Road, For details, call: 7259886212.

Abbigere

BBMP A Khata Sites For Sale In Abbigere, Behind Suvilas Apts, Luxury Developement With Bank Loans Call: 9090603050

Hosur Road

APPROX ONE Acre Industrial Land near Attibele Off: Hosur Road for Sale. Brokers Excuse. Contact: 9620938350/ 9844243147.

Hanumanthnagar

SALE BDA Allotted 30x41 North Facing Srinivasanagar 14,000 SFT, direct registration, No Brokers whatsapp 7760320891.

WEEKEND CORNER ಕ್ಲಾಸಿಫೈಡ್ಸ್

RENTAL PROPERTIES

Accommodation Available

Commercial

RENT FOR Commercial Use Ground, 1st, 2nd Floors 7200 sqft. Jayanagar 7th Block, Contact: 9449037775

Flats

FOR IMMEDIATE occupation 1bhk and study,Apt near Krishna Rao Park and Metro Station, Basavanagudi.Ideal for small family/couples.Contact 9845012723

Industrial And Factory

INDUSTRIAL BUILDING/ WAREHOUSE available for Rent
BEHIND HYUNDAI MOTOR FACTORY
CHENNAI
IRUNGATTUKOTTAI
57,000 Sq.Ft COVERED BUILDING & 25,000 Sq.Ft YARD with all facilities
72999 32779
98400 68646
rental@noble-logistics.com

PERSONAL

Change of Name

14825417H HAV SARVESH KUMAR 2ATC My FATHER Name records BINDRA PRASSAD Instead of VINDRA PRASAD Notary HARISHA G Bangalore

NILU DEVI, Wife/o, JC674255M, NB SUB, ANIL KUMAR SINGH Vill- Jamurna, Bhabhua, Ramgarh, Bihar have changed name from NILU DEVI to NILU KUMARI 21/04/2022 Notary K.V. Mani Bangalore

WE, (1) CHANDRASHEKHARA S.H. S/o Hanumanthappa.S, aged 43 years, (2)TRIVENI G.S. W/o Chandrashekhara S.H, aged 39years, both are R/at No.10, 9th Main, 10th Cross,2nd Block, Jayanagara, Bengaluru-560 011, we have changed our minor son's name from MANEETH SHERAGARU to MANEET SHERAGARU vide affidavit Dated:21.04.2022 Notary M.RAJENDRA, Bangalore

I, HIMAY Kiran Sharma (Dr.Himay Kiran Sharma) Residing at No. 397/A 4th Main, further extension Viveknagar, Bangalore 560047 have changed my name to Himay Sharma (Dr.Himay Sharma) and also changed my religion from Hindu to Islam. Vide affidavit dated 15-11-2020 before notary Mohammed Arshed Ahmed Bangalore.

I, REKHAVATHI NANDAKUMAR Residing at #2, 2nd Cross, 2nd Main, P&T Layout, Anandapura, T.C. Palya Main Road Bengaluru- 560036 have changed my name to REKHA JAIN vide affidavit dated 21/04/2022 before notary S Samuel Solomon Bangalore. Henceforth I shall be known as REKHA JAIN only.

I, PREETHA. S R/a. No. 97, 3rd Cross Nayandahalli Mysore Road Bangalore South, Bangalore- 560039, declare that my name is wrongly mentioned in some documents as PREETHA. N.C. instead of PREETHA. S, vide affidavit dated 21.04.2022, before notary Thippaswamy. T Bangalore. Henceforth I shall be known as PREETHA. S only.

I, PRAGATHI ARATHALA W/o. Pavan Kanipakam R/a #15, 1st Main, 1st Cross Konanakunte Extention Ganapathipura, Doddakalasandra Post, Bengaluru- 560062 Have Changed My Name After Marriage to PRAGATHI KANIPAKAM vide Affidavit Dated 20.04.2022 Before Notary L. Puttaraju Bengaluru

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Lost

LOST
I, Dwarakanath.P residing at 28/25, Sapthagiri Residency, 4th crs, K.V. Layout, Jayanagar 4th blk, East, Blr-11, have lost my father Late R.Padmanabha Rao's Original Sale Deed of the Property situated at Girinagar 1st stage, No. 12/A, 5th crs, 80 ft Road, J.P.Road, Girinagar 1st stage, Blr-85, Reg no: 863, dated 13-06-85 while in transit. Finders please Contact- 9845057089

LOST
I, MOHAN KUMAR K.
R/a 2nd Cross, Vinayakanagar, Devasandra, K.R. Pura, have lost my Blanksheet with Signature & Original Sale Deed dated 15-7-2002 of Site No.11412, Khata No.185/66/2, Document No. 5729/2002-03 Volume-2578, pages 125 to 130 dated 17-07-02 at Devasandra while shifting shop. Finders please contact: 7353131339.

BUSINESS

Business to Business

Electrical Goods/ Appliances

WE ARE SETTING UP 120ETARIES IN SOUTH NEEDED 120 IDLY DOSA MAKINMG MACHINES/120 DOSA TAWAS/240 KITCHEN SINKS/120STEAM IDLY STAINLESS MACHINE. SUBMIT TENDERS BY EMAIL WITH REFUNDABLE FEES OF ONE LAKH. EXAMINATION OF TENDERS 24TH MAY 2022 KMINGUVA@HOTMAIL.COM WHATS APP 8008811556

Business

START_THREAD Business at Home_forTassels,Machine Embroideries.Dealer_enquiry solicited.Gemini Rayon_Embroidery Threads.Call:8095809223

Finance

WANTED INVESTOR 12Cr, 16 Flats Buy Back After 48 Months 10Cr with Flat: 8892501007/9606701007

Others

WANTED A Running English Medium School & College (CBSE & ICSE) in & around Bangalore Contact 9448171416

Business Offers

Finance

NRI'S INVESTMENT And Finance Available On Low Interest Against Properties,Land & Building,Sites,Flats, Converted& Agriculture Lands Call: 7411265189

EDUCATIONAL

Admission

DIRECT FINAL: LLB (Can Practice) B.Tech/M.Tech Diploma, MBA/MSc, BCA, BBA, BSc, B.Com, D.Pharm/ B.Pharm, PU/ SSLC. Recognised Govt /UGC. Asha Academy, Bangalore. Ph: 9448460103/ 08026699786

DH DECCAN HERALD | ಪ್ರಜಾವಾಣಿ

BOOK YOUR REAL ESTATE
Classified Advertisement In Deccan Herald & Prajavani

SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಉತ್ತರಹಳ್ಳಿ ವಾರ್ಡ್‌ನ ಯಾದಲ ನಗರದ ಜನರ ದಿನ ನಿತ್ಯದ ಪರಿಸ್ಥಿತಿಯಿದು

ನೀರಿಗೆ ಹಾಹಾಕಾರ: ಖಾಲಿ ಕೊಡ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಒಂದು ಟ್ಯಾಂಕರ್ ನೀರಿಗೆ ₹700–₹800 ನೀಡಿ ಖರೀದಿಸುವ ಅನಿವಾರ್ಯ
- 'ನೀರಿಗಾಗಿಯೇ ಮಾಸಿಕ ₹2500 ವೆಚ್ಚ'
- ಜನ ಪ್ರತಿನಿಧಿಗಳ ಗಮನಕ್ಕೆ ತಂದರೂ ಸಂಕಷ್ಟ ಪರಿಹಾರ ಆಗಿಲ್ಲ: ಜನರ ಆಕ್ರೋಶ

ಬೆಂಗಳೂರು: 20 ದಿನಗಳಿಗೊಮ್ಮೆ ಬರುವ ನೀರು, ಟ್ಯಾಂಕರ್‌ಗಳಲ್ಲಿ ನೀರು ಖರೀದಿಸಿ ಕುಡಿಯುವ ಅನಿವಾರ್ಯತೆ, ಬಡವರೇ ವಾಸಿಸುವ ಬಡಾವಣೆಯಲ್ಲಿ ನೀರಿಗೆ ಹಾಹಾಕಾರ...

ಇದು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಉತ್ತರಹಳ್ಳಿ ವಾರ್ಡ್‌ನ ಯಾದಲ ನಗರದ ಸ್ಥಿತಿ. ನೀರಿಗಾಗಿ ನಿತ್ಯ ಪರದಾಡುವ ನಿವಾಸಿಗಳು ಗುರುವಾರ ಖಾಲಿ ಕೊಡ ಪ್ರದರ್ಶಿಸುವ ಮೂಲಕ ಪ್ರತಿಭಟನೆ ನಡೆಸಿದರು.

ಕೂಲಿ ಕಾರ್ಮಿಕರು, ಆಟೊರಿಕ್ಷಾ ಚಾಲಕರು, ಗಾರ್ಮೆಂಟ್ಸ್ ಕಾರ್ಖಾನೆಗಳ ಕಾರ್ಮಿಕರು ಸೇರಿ ಬಹುತೇಕ ಬಡವರೇ ವಾಸ ಇರುವ ಬಡಾವಣೆ ಇದು. ಇಲ್ಲಿ ಕುಡಿಯುವ ನೀರಿನ ಸಮಸ್ಯೆ ಈಗ ತೀವ್ರಗೊಂಡಿದೆ. ಟ್ಯಾಂಕರ್‌ಗಳಲ್ಲಿ ನಿವಾಸಿಗಳೇ ಹಣ ಕೊಟ್ಟು ನೀರು ತರಿಸಿಕೊಳ್ಳುತ್ತಿದ್ದಾರೆ. 'ಒಂದು ಟ್ಯಾಂಕರ್ ನೀರಿಗೆ ₹700ರಿಂದ ₹800 ನೀಡಿ ಖರೀದಿಸಬೇಕಾಗಿದ್ದು, ಜೀವನ ನಿರ್ವಹಣೆ ಕಷ್ಟವಾಗಿದೆ. ಸಮಸ್ಯೆ ಬಗ್ಗೆ ಶಾಸಕ ಎಂ. ಕೃಷ್ಣಪ್ಪ ಮತ್ತು ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ' ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

'ಶಾಸಕ ಎಂ.ಕೃಷ್ಣಪ್ಪ ಅವರ ಮನೆಗೆ ಹೋಗಿ ಸಮಸ್ಯೆ ವಿವರಿಸಿದ್ದೇವೆ. ಆದರೂ ಪರಿಹಾರವಾಗಿಲ್ಲ. ತಿಂಗಳಿಗೆ ₹2,500 ಖರ್ಚು ಮಾಡಿ ನೀರು ಖರೀದಿಸಿ ಜೀವನ ಸಾಗಿಸುತ್ತಿದ್ದೇವೆ' ಎಂದು ನಿವಾಸಿ ಪಟೇಲ್ ರವಿ ಹೇಳಿದರು.

'ಕೆಲಸಕ್ಕೆ ಹೋಗದೆ ನೀರಿಗಾಗಿ ದಿನವಿಡೀ ಕಾದು ಕುಳಿತುಕೊಳ್ಳುತ್ತಿದ್ದೇವೆ. ನೀರಿಗಾಗಿ ಅಲೆದಾಡಿ ಸುಸ್ತಾಗಿದ್ದೇವೆ. ಇದೇ ರೀತಿ ನಿರ್ಲಕ್ಷ್ಯ ವಹಿಸಿದರೆ ರಸ್ತೆ ಸಂಚಾರ ತಡೆದು ಪ್ರತಿಭಟನೆ ನಡೆಸುತ್ತೇವೆ. ಅದಕ್ಕೂ ಮಣಿಯದಿದ್ದರೆ ಬಿಬಿಎಂಪಿ ಮತ್ತು ಜಲ ಮಂಡಳಿ ಕಚೇರಿ ಎದುರು ಖಾಲಿ ಕೊಡ ಹಿಡಿದು ಪ್ರತಿಭಟನೆ ನಡೆಸುತ್ತೇವೆ' ಎಂದು ಲತಾ, ಲಕ್ಷ್ಮಮ್ಮ, ಸರೋಜಾ ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮುಖಂಡ ಆರ್. ಕೆ.ರಮೇಶ್ ಮಾತನಾಡಿ, 'ಈ ಕ್ಷೇತ್ರದಿಂದ ಏಳು ಬಾರಿ ಬಿಜೆಪಿಯ ಶಾಸಕರೇ ಆಯ್ಕೆಯಾಗಿದ್ದಾರೆ. ಇಷ್ಟಾದರೂ ಕ್ಷೇತ್ರ ಅಭಿವೃದ್ಧಿಯಿಂದ ವಂಚಿತವಾಗಿದೆ' ಎಂದರು.

ಉತ್ತರಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಕುಮಾರ್, ಉತ್ತರಹಳ್ಳಿ ಹೋಬಳಿ ಒಕ್ಕಲಿಗರ ಸಂಘದ ಅಧ್ಯಕ್ಷ ಬೈರಪ್ಪ, ಕಾಂಗ್ರೆಸ್ ವಾರ್ಡ್ ಘಟಕದ ಅಧ್ಯಕ್ಷ ಗುಂಡುಮಣಿ ಶ್ರೀನಿವಾಸ್ , ಕಾಂಗ್ರೆಸ್ ಮುಖಂಡರಾದ ಕೆ.ಉಮಾದೇವಿ, ಕೆ.ಈಶ್ವರ್, ಬಾಲಕೃಷ್ಣ, ಯೋಗಾಸಿಂಹ, ಉತ್ತರಹಳ್ಳಿ ವಾಲ್ಮೀಕಿ ಸಂಘದ ಅಧ್ಯಕ್ಷ ಮಂಜುನಾಥ್ ಪ್ರತಿಭಟನೆಗೆ ಸಾಥ್ ನೀಡಿದ್ದರು.

ಯಾದಲ ಬಡಾವಣೆಯಲ್ಲಿ ಖಾಲಿ ಕೊಡದೊಂದಿಗೆ ಪ್ರತಿಭಟನೆ ನಡೆಸಿದ ನಿವಾಸಿಗಳು

ಕರ್ತವ್ಯ ಲೋಪ: ಮಂಡೂರು ಪಿಡಿಒ ಅಮಾನತು

ಕೆ.ಆರ್.ಪುರ: ಮಂಡೂರು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೆಂಕಟರಂಗನ್ ಅವರನ್ನು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಕರ್ತವ್ಯಲೋಪ ಕಾರಣಕ್ಕೆ ಈ ಕ್ರಮಕೈಗೊಳ್ಳಲಾಗಿದೆ. ಮಂಡೂರಿನ ನಿವಾಸಿ ವಾಸುದೇವ್ ಅವರು ತಮ್ಮ ಮಗಳಿಗೆ 2019ರಲ್ಲಿ ಪಿತ್ರಾರ್ಜಿತವಾಗಿ ಬಂದ 3,300 ಅಡಿ ವಿಸ್ತೀರ್ಣದ ನಿವೇಶನವನ್ನು ದಾನ ನೀಡಲಾಗಿತ್ತು. ತಂದೆ ಹೆಸರಿನಿಂದ ಮಗಳ ಹೆಸರಿಗೆ ಖಾತೆ ಬದಲಾವಣೆ ಮಾಡಿಸಲು ಪಂಚಾಯತಿಗೆ ಹೋದ ಸಂದರ್ಭದಲ್ಲಿ ಪಿಡಿಒ ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ವಾಸುದೇವ ಅವರು ಎಸಿಬಿಗೆ ದೂರು ನೀಡಿದ್ದರು. ಆದರೆ ಮಾಹಿತಿ ಸೋರಿಕೆಯಾಗಿದ್ದರಿಂದ ಪಿಡಿಒ ಹಣ ಪಡೆಯಲು ನಿರಾಕರಿಸಿದ್ದರು. ಆದರೆ, ವಾಸುದೇವ್‌ಅವರಬಳಿಮೊಬೈಲ್‌ನಲ್ಲಿ ಮಾತನಾಡಿರುವ ಆಡಿಯೊ ಮತ್ತು ವಿಡಿಯೊ ದಾಖಲೆಗಳನ್ನು ಆಧರಿಸಿ ಎಸಿಬಿ ಅಧಿಕಾರಿಗಳು ಪ್ರಕರಣವನ್ನು ದಾಖಲಿಸಿಕೊಂಡಿದ್ದರು. ಹೀಗಾಗಿ, ಜಿ.ಪಂ ಸಿಇಒ ಅಮಾನತುಗೊಳಿಸಿ ಆದೇಶಿಸಿದ್ದಾರೆ.

ಪ್ರಕಟಣೆ

ಟಿಮ್‌ಕೆನ್ ಇಂಡಿಯಾ ನಿಯಮಿತ
CIN - L29130KA1996PLC048230
ನೋಂದಣಿ ಕಛೇರಿ: ಸಂಖ್ಯೆ. 39–42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು–560 100 ದೂರವಾಣಿ : 080–41362000 ಫ್ಯಾಕ್ಸ್ : 080–41362010
ವೆಬ್‌ಸೈಟ್ : www.timken.com/en-in ಇ–ಮೇಲ್: tilinvestor@timken.com

ಈ ಪ್ರಕಾರವಾದ 39 ಷೇರು ಸರ್ಟಿಫಿಕೇಟುಗಳು ಪ್ರತಿ ಷೇರಿಗೆ ರೂ.10/– ರಂತೆ ಕಂಪನಿಯ ಒಟ್ಟಾರೆ 2578 ಈಕ್ವಿಟಿ ಷೇರುಗಳನ್ನು ಹೊಂದಿರುವ ಸಂಖ್ಯೆಗಳು. ಹಾಗೂ 12790, 225883, 20218, 178041, 178042, 178043, 178044, 82260, 153163, 46458, 111414, 111415, 80158, 57843, 40050, 104442, 104443, 27640, 93056, 93057, 38922, 44883, 60823, 24162, 41248, 48308, 113650, 80714, 151120, 151121, 36214, 100970, 100971, 21480, 136409, 61697, 128781, 128782 ಹಾಗೂ 66537 ಮತ್ತು ಮೀರಾ ಅಗರ್‌ವಾಲ್, ಪ್ರಕಾಶ್‌ಚಂದ್ರ ಡಿ ಪಟೇಲ್, ಅಲೋಕ್ ಕುಮಾರ್ ಚೌಧರಿ, ಅರ್ಚನ ನರೇಶ್ ಖೇಮ್ಕ ಜೊತೆಯಲ್ಲಿ ನರೇಶ್ ಕುಮಾರ್ ಖೇಮ್ಕ, ಹೇಮಾಲ್ ಭೂಪೇಂದ್ರ ಮೆಹ್ತಾ ಜೊತೆಯಲ್ಲಿ ಭೂಪೇಂದ್ರ ಮನ್ಸುಕ್‌ಲಾಲ್ ಮೆಹ್ತ, ಪ್ರೀತೇಶ್ ಕುಮಾರ್ ಪಟೇಲ್, ಕುಲಿನ್ ವೀರ್‌ಚಂದ್ ಘಟಾಲಿಯ ಜೊತೆಯಲ್ಲಿ ವನ ಕುಲಿನ್ ಘಟಾಲಿಯ, ಸೋಮನಾಥ್ ಪಾಲಿತ್ ಜೊತೆಯಲ್ಲಿ ಗಾಯತ್ರಿ ಪಾಲಿತ್ ಜೊತೆಯಲ್ಲಿ ಸುನಿಲ್ ಕುಮಾರ್ ಪೌಲಿತ್, ಪರಂಜೀತ್ ಖೌರ್ ಬಾತ್ರಾ ಜೊತೆಯಲ್ಲಿ ಹನ್‌ವಂತ್ ಬೀರ್ ಸಿಂಗ್ ಬಾತ್ರಾ, ಸಚ್ಚಿದಾನಂದ, ಸುಮನ್ ಗುಪ್ತ, ಸುಧೀರ್ ಗುಪ್ತ, ಪ್ರವೀಣ್ ಮಿಟ್ಟಲ್, ಅಜಿಜಲಿ ಎ ದೋಶಿ ಜೊತೆಯಲ್ಲಿ ಅಮೀತ್ ಡಿ ದೋಶಿ, ಈಶ್ವರ್ ಸಿಂಗ್ ಗುಪ್ತ, ಸುರಿಂದರ್ ಸಿಂಗ್ ಕೋಚಾರ್ ಜೊತೆಯಲ್ಲಿ ಗುರುವಿಂದರ್ ಸಿಂಗ್ ಕೋಚಾರ್, ಆಶಿಶ್ ಬಿ ಜನಿ ಜೊತೆಯಲ್ಲಿ ಲತಾ ಬಿ ಜನಿ, ಗುಪ್ತ ಜೈದ್ರಾ ಪ್ರಸಾದ ಜೊತೆಯಲ್ಲಿ ಮಾಲ ಗುಪ್ತ, ತರುಣ್ ಕಾಂತಿ ದಾಸ್‌ಗುಪ್ತ ಜೊತೆಯಲ್ಲಿ ಕಮಲ ದಾಸ್‌ಗುಪ್ತ, ಹೀನಾ ಥಕ್ಕರ್, ಪುಷ್ಪ ಶ್ರೀವಾಸ್ತವ ಮತ್ತು ನುಜಹರ್ತ್ ನಜೀರ್ ನಜ್‌ರಾನ ಇವರ ಹೆಸರುಗಳಲ್ಲಿ ನೋಂದಾಯಿತವಾದ ಟಿಮ್‌ಕೆನ್ ಇಂಡಿಯಾ ನಿಯಮಿತದ ಡಿಸ್ಟಿಂಕ್ಟಿವ್ ಸಂಖ್ಯೆಗಳು. 35277801–900, 68105072– 102, 36020601–700, 62236786–885, 62236886–935, 62236936–945, 62236946–950, 42224801–900, 44453959–962, 38644601–700, 43261753–802, 43261803–806, 42014601–700, 39783101–200, 38003801–900, 43061227–276, 43061277–280, 36762801–900, 42732555–604, 42732605–608, 37891001–1100, 38487101–200, 40081101–200, 36415001–100, 38123601–700, 38829601–700, 43325713–716, 42070201–300,44395877–926, 44395927–930, 37620201–300, 42961549–598, 42961599–602 36146801–900, 43975979–6028, 40168501–600, 43758848–897, 43758898–901, 40652501–600 ಮತ್ತು 39418501–600 ಗಳನ್ನು ಒಳಗೊಂಡ ಎಲ್ಲಾ ಷೇರು ಸರ್ಟಿಫಿಕೇಟುಗಳು ಕಾಣೆಯಾಗಿದ್ದು, ಮೇಲೆ ತಿಳಿಸಿರುವ ಎಲ್ಲಾ ಷೇರುದಾರರಿಂದ ಇದರ ಬದಲಾಗಿ ಷೇರು ಸರ್ಟಿಫಿಕೇಟುಗಳ ಪ್ರತಿಗಳನ್ನು ನೀಡಲು ಕಂಪನಿಯು ಅರ್ಜಿಗಳನ್ನು ಸ್ವೀಕರಿಸಿದೆ ಎಂದು ಈ ಮೂಲಕ ಪ್ರಕಟಿಸಲಾಗಿದೆ. ಸದರಿ ಪ್ರಕಟಣೆಯಲ್ಲಿ ತಿಳಿಸಿರುವಂತೆ ಮೂಲ ಷೇರು ಸರ್ಟಿಫಿಕೇಟುಗಳ ಕಣ್ಮರೆ ಬದಲಾಗಿ ಸರ್ಟಿಫಿಕೇಟುಗಳ ಪ್ರತಿಯನ್ನು ನೀಡಲು ಯಾವುದೇ ವ್ಯಕ್ತಿಗೆ (ಗಳಿಗೆ) ಆಕ್ಷೇಪಣೆಗಳು ಇದ್ದಲ್ಲಿ, ಈ ಪ್ರಕಟಣೆಯು ಪ್ರಕಟಗೊಂಡ 7 ದಿನದೊಳಗೆ ಮೇಲೆ ತಿಳಿಸಿರುವ ವಿಳಾಸಕ್ಕೆ ತನ್ನ/ತಮ್ಮ/ಅವರ ಆಕ್ಷೇಪಣೆಗಳನ್ನು ಕಂಪನಿಗೆ ಸಲ್ಲಿಸಬೇಕು ಎಂಬುದಾಗಿ ಇದರಲ್ಲಿ ಸೂಚಿಸಿರುವಂತೆ ನಿಮ್ಮನ್ನು/ತಮ್ಮನ್ನು ವಿನಂತಿಸಲಾಗಿದೆ. ತದನಂತರ ಕಂಪನಿಯು ಕಳೆದು ಹೋಗಿರುವ ಮೂಲ ಷೇರು ಸರ್ಟಿಫಿಕೇಟುಗಳಿಗೆ ಬದಲಾಗಿ ಸರ್ಟಿಫಿಕೇಟುಗಳ ಪ್ರತಿಯನ್ನು ನೀಡಲು ತೀರ್ಮಾನಿಸುತ್ತದೆ. ಸಾರ್ವಜನಿಕರು ಕಳೆದು ಹೋಗಿರುವ ಮೇಲಿನ ಷೇರು ಸರ್ಟಿಫಿಕೇಟುಗಳೊಂದಿಗೆ ಯಾವುದೇ ರೀತಿಯಲ್ಲೂ ಸಹ ವ್ಯವಹರಿಸಬಾರದೆಂದು ಎಚ್ಚರಿಕೆ ನೀಡಲಾಗುತ್ತಿದೆ.

ಟಿಮ್‌ಕೆನ್ ಇಂಡಿಯಾ ನಿಯಮಿತ ಪರವಾಗಿ
ಸ್ಥಳ: ಬೆಂಗಳೂರು ಸಹಿ/– ಮಂದಾರ್ ವಸಮತ್‌ಕರ್
ದಿನಾಂಕ: 21.04.2022 ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ–ಕಾಂಪ್ಲಯನ್ಸ್

ಅತಿಯಾದ ಮೊಬೈಲ್ ಬಳಕೆ–ಪತ್ನಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ವನಜಾಕ್ಷಿ (31) ಎನ್ನುವವರನ್ನು ಕತ್ತು ಹಿಸುಕಿ ಕೊಲೆ ಮಾಡಲಾಗಿದ್ದು, ಈ ಸಂಬಂಧ ಪತಿ ಅಶೋಕ (37) ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ತುಮಕೂರು ಜಿಲ್ಲೆಯ ಹುಲಿಯೂರುದುರ್ಗ ತಾಲ್ಲೂಕಿನ ಕೆಂಚಾಪುರದ ಅಶೋಕ, ಕಾರು ಚಾಲಕ. ಪತ್ನಿ ವನಜಾಕ್ಷಿ ಅವರನ್ನು ಏ. 17ರಂದು ಕೊಲೆ ಮಾಡಿ ಪರಾರಿಯಾಗಿದ್ದ. ಆತನನ್ನು ಗುರುವಾರ ಬಂಧಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಅಶೋಕ ಹಾಗೂ ವನಜಾಕ್ಷಿ ಹಲವು ವರ್ಷಗಳ ಹಿಂದೆ ಮದುವೆಯಾಗಿದ್ದರು. ಅವರಿಗೆ ಮೂವರು ಮಕ್ಕಳಿದ್ದು, ಅವರ ಅಜ್ಜಿ ಊರಿನಲ್ಲಿದ್ದರು. ದಂಪತಿ ಮಾತ್ರ ಕಾವೇರಿಪುರದ ಬಾಡಿಗೆ ಮನೆಯೊಂದರಲ್ಲಿ ವಾಸವಿದ್ದರು. ವನಜಾಕ್ಷಿ, ಗಾರ್ಮೆಂಟ್ಸ್ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು' ಎಂದರು.

'ವನಜಾಕ್ಷಿ ಅವರು ಹೆಚ್ಚು ಮೊಬೈಲ್ ಬಳಸುತ್ತಿದ್ದರು. ಸ್ನೇಹಿತರ ಜೊತೆ ನಿರಂತರವಾಗಿ ಮಾತನಾಡುತ್ತಿದ್ದರು. ಇದನ್ನು ಪ್ರಶ್ನಿಸಿದ್ದ ಅಶೋಕ, ಹಲವು ಬಾರಿ ಜಗಳ ತೆಗೆದಿದ್ದ. ಪತ್ನಿ ಮೊಬೈಲ್‌ಗೆ ಬರುತ್ತಿದ್ದ ಕರೆಗಳನ್ನು ನೋಡಿ, ಯಾರ ಜೊತೆ ಮಾತನಾಡುತ್ತಿದ್ದಿಯಾ? ಎಂಬುದಾಗಿ ಶೀಲ ಶಂಕಿಸಿ ಹಲ್ಲೆ ಸಹ ಮಾಡುತ್ತಿದ್ದ' ಎಂದಿದ್ದಾರೆ.

ಏಪ್ರಿಲ್ 17ರಂದು ಕೆಲಸ ಮುಗಿಸಿಕೊಂಡು ಅಶೋಕ ಮನೆಗೆ ಬಂದಿದ್ದ. ಅದೇ ವೇಳೆಯೇ ವನಜಾಕ್ಷಿ ಮೊಬೈಲ್‌ನಲ್ಲಿ ಮಾತನಾಡುತ್ತ ನಿಂತಿದ್ದರು. ಅದನ್ನು ನೋಡಿದ್ದ ಆರೋಪಿ, ಪುನಃ ಜಗಳ ತೆಗೆದಿದ್ದ. ಪತ್ನಿಯ ಕತ್ತು ಹಿಸುಕಿಕೊಂದಿದ್ದ. ಮೃತದೇಹವನ್ನು ಮನೆಯಲ್ಲೇ ಬಿಟ್ಟು ಬಾಗಿಲು ಹಾಕಿ ಪರಾರಿಯಾಗಿದ್ದ.

'ಮನೆಯಿಂದ ದುರ್ನಾತ ಬರುತ್ತಿದ್ದ ಬಗ್ಗೆ ಸ್ಥಳೀಯರು ಮಾಹಿತಿ ನೀಡಿದ್ದರು. ಬುಧವಾರ (ಏಪ್ರಿಲ್ 20) ಸಂಜೆ ಮನೆ ಬಳಿ ಹೋಗಿದ್ದ ಸಿಬ್ಬಂದಿ, ಬಾಗಿಲು ತೆರೆದು ನೋಡಿದಾಗ ಕೊಳೆತ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ' ಎಂದರು.

ಸಂಬಂಧಿಕರ ಮನೆಯಲ್ಲಿದ್ದ: 'ಪತ್ನಿ ಕೊಂದ ನಂತರ ಆರೋಪಿ, ಮಾಗಡಿ ತಾಲ್ಲೂಕಿನಲ್ಲಿರುವ ಸಂಬಂಧಿಕರೊಬ್ಬರ ಮನೆಗೆ ಹೋಗಿ ಅವಿತುಕೊಂಡಿದ್ದ. ಅಲ್ಲಿಗೆ ತೆರಳಿದ ಸಿಬ್ಬಂದಿ ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆ ತಂದಿದ್ದಾರೆ' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

ನೀರಿನ ಸಂಪಿಗೆ ಬಿದ್ದು ಬಾಲಕ ಸಾವು

ಬೆಂಗಳೂರು: ನಿರ್ಮಾಣ ಹಂತದ ಕಟ್ಟಡದ ನೀರಿನ ಸಂಪಿನಲ್ಲಿ ಬಿದ್ದು ಏಳು ವರ್ಷದ ಬಾಲಕ ಅಯ್ಯಪ್ಪ (7) ಮೃತಪಟ್ಟಿದ್ದು, ಈ ಬಗ್ಗೆ ಸೋಲದೇವನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಅಯ್ಯಪ್ಪನ ತಂದೆ– ತಾಯಿ, ರಾಯಚೂರಿನವರು. ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಕಟ್ಟಡ ನಿರ್ಮಾಣ ಕಾರ್ಮಿಕರಾಗಿ ಕೆಲಸಕ್ಕೆ ಸೇರಿದ್ದರು' ಎಂದು ಪೊಲೀಸರು ಹೇಳಿದರು.

'ಠಾಣೆ ವ್ಯಾಪ್ತಿಯ ಗುಡ್ಡೆ ಬಸವೇಶ್ವರಕೇರಿಯಲ್ಲಿ ಕಟ್ಟಡ ನಿರ್ಮಿಸಲಾಗುತ್ತಿದೆ. ಅಲ್ಲಿಯೇ ಬಾಲಕನ ತಂದೆ–ತಾಯಿ ಕೆಲಸ ಮಾಡುತ್ತಿದ್ದರು. ಆಟವಾಡುತ್ತಿದ್ದ ಬಾಲಕ, ಆಯತಪ್ಪಿ ನೀರಿನ ಸಂಪಿಗೆ ಬಿದ್ದು ಮೃತಪಟ್ಟಿದ್ದಾನೆ. ಪೋಷಕರು ಹಾಗೂ ಪ್ರತ್ಯಕ್ಷದರ್ಶಿಗಳ ಹೇಳಿಕೆ ಆಧರಿಸಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದೂ ತಿಳಿಸಿದರು.

ವಾರಕ್ಕೊಮ್ಮೆ ನಗರಕ್ಕೆ ಬಂದು ಕಳ್ಳತನ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಮೂವರನ್ನು ರಾಜರಾಜೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬಿಲಾಲ್ ಮಂಡಲ್, ಸಲೀಂ ರಫೀಕ್, ವಿನೋದ್ ರಾಜ್ ಬಂಧಿತರು. ಇವರಿಂದ ₹ 28 ಲಕ್ಷ ಮೌಲ್ಯದ ಚಿನ್ನಾಭರಣ, ಬೆಳ್ಳಿ ಸಾಮಗ್ರಿ, ಕಾರು ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ನಿವಾಸಿಯೊಬ್ಬರು ಮಾರ್ಚ್ 26ರಂದು ಮನೆಗೆ ಬೀಗ ಹಾಕಿಕೊಂಡು ಕುಟುಂಬ ಸಮೇತ ದೇವಸ್ಥಾನಕ್ಕೆ ಹೋಗಿದ್ದರು. ಎರಡು ದಿನ ಬಿಟ್ಟು ಮನೆಗೆ ವಾಪಸು ಬಂದಿದ್ದಾಗ, ವಸ್ತುಗಳು ಚೆಲ್ಲಾಪಿಲ್ಲಿ ಆಗಿ ಬಿದ್ದಿದ್ದನ್ನು ನೋಡಿದ್ದರು. ಪರಿಶೀಲಿಸಿದಾಗ, ಕಳ್ಳತನ ಆಗಿರುವುದು ಗೊತ್ತಾಗಿತ್ತು. ಆ ಬಗ್ಗೆ ದೂರು ನೀಡಿದ್ದರು.'

'ತನಿಖೆ ಕೈಗೊಂಡಿದ್ದ ವಿಶೇಷ ತಂಡ, ಪುರಾವೆಗಳನ್ನು ಸಂಗ್ರಹಿಸಿ ಆರೋಪಿಗಳನ್ನು ಬಂಧಿಸಿದೆ' ಎಂದೂ ತಿಳಿಸಿದರು.

ವಿಮಾನದಲ್ಲಿ ಪ್ರಯಾಣ: 'ಮುಂಬೈ ನಿವಾಸಿಗಳಾದ ಬಿಲಾಲ್ ಮಂಡಲ್ ಹಾಗೂ ಸಲೀಂ ರಫೀಕ್, ಪ್ರತ್ಯೇಕ ಕಳ್ಳತನ ಪ್ರಕರಣಗಳಲ್ಲಿ ಜೈಲು ಸೇರಿದ್ದರು. ಅಲ್ಲಿಯೇ ಪರಸ್ಪರ ಪರಿಚಯವಾಗಿ, ಜಾಮೀನು ಮೇಲೆ ಹೊರಬಂದಿದ್ದರು. ನಂತರ, ಜಂಟಿಯಾಗಿ ಕಳ್ಳತನ ಮಾಡಲಾರಂಭಿಸಿದ್ದರು' ಎಂದು ಪೊಲೀಸರು ಹೇಳಿದರು.

'ಕಳ್ಳತನದಿಂದ ಬಂದ ಹಣದಲ್ಲಿ ಆರೋಪಿಗಳು, ಐಷಾರಾಮಿ ಜೀವನ ನಡೆಸುತ್ತಿದ್ದರು. ಹಣ ಖಾಲಿಯಾಗುತ್ತಿದ್ದಂತೆ ವಾರಕ್ಕೊಮ್ಮೆ ವಿಮಾನದಲ್ಲಿ ನಗರಕ್ಕೆ ಬರುತ್ತಿದ್ದರು. ಬಿಡದಿ ನಿವಾಸಿ ವಿನೋದ್ ರಾಜ್ ಸಹಕಾರದಿಂದ ಮನೆಗಳನ್ನು ಗುರುತಿಸಿ ಕಳ್ಳತನ ಮಾಡಿಕೊಂಡು ಪರಾರಿಯಾಗುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

ಕೆಎಸ್‌ಡಿಎಲ್‌ನಲ್ಲಿ ಭ್ರಷ್ಟಾಚಾರ: ಕಡಿವಾಣ ಹಾಕದಿದ್ದರೆ ಹೋರಾಟ

ಬೆಂಗಳೂರು: 'ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದಲ್ಲಿ (ಕೆಎಸ್‌ಡಿಎಲ್) ಭ್ರಷ್ಟಾಚಾರ ವ್ಯಾಪಕವಾಗಿ ನಡೆಯುತ್ತಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇದಕ್ಕೆ ಕಡಿವಾಣ ಹಾಕದಿದ್ದರೆ ರಾಜಭವನದ ಎದುರು ಪ್ರತಿಭಟನೆ ನಡೆಸಲಾಗುತ್ತದೆ' ಎಂದು ಕೆಎಸ್‌ಡಿಎಲ್ ನೌಕರರ ಒಕ್ಕೂಟ ಎಚ್ಚರಿಸಿದೆ.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಜಿ.ಆರ್.ಶಿವಶಂಕರ್, '106 ವರ್ಷಗಳ ಇತಿಹಾಸವಿರುವ ಕೆಎಸ್‌ಡಿಎಲ್, ಆರಂಭದಲ್ಲಿ ನಷ್ಟದ ಹಾದಿ ಹಿಡಿದಿತ್ತು. ಇತ್ತೀಚಿನ ವರ್ಷಗಳಲ್ಲಿ ನಿರಂತರವಾಗಿ ಲಾಭಗಳಿಸುತ್ತಿದೆ. ಸಂಸ್ಥೆ ವತಿಯಿಂದ ಮುಖ್ಯಮಂತ್ರಿ ಪರಿಹಾರ ನಿಧಿಗೆ ಕೋಟ್ಯಂತರ ರೂಪಾಯಿ ಹಣವನ್ನೂ ನೀಡಲಾಗುತ್ತಿದೆ. ಕಾಯಂ ನೌಕರರು, ಗುತ್ತಿಗೆ ಹಾಗೂ ಹೊರಗುತ್ತಿಗೆ ಕಾರ್ಮಿಕರ ಕಠಿಣ ಪರಿಶ್ರಮದಿಂದ ಈ ಪ್ರಗತಿ ಸಾಧ್ಯವಾಗಿದೆ' ಎಂದರು.

'ಸಂಸ್ಥೆಯ ಚುಕ್ಕಾಣಿ ಹಿಡಿದವರ ಪೈಕಿ ಕೆಲ ಐಎಫ್‌ಎಸ್ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ. ಆಡಳಿತ ಮಂಡಳಿಯ ಅಧಿಕಾರಿಗಳು ಅವರೊಂದಿಗೆ ಕೈಜೋಡಿಸಿದ್ದಾರೆ. ಈಗಿನ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಟಿ.ಶಿರೂರ, ಹಾಲಿ ಅಧ್ಯಕ್ಷ ಹಾಗೂ ಆಡಳಿತ ಮಂಡಳಿ ಸದಸ್ಯರಿಗೆ ದಾಖಲೆ ಸಮೇತ ದೂರು ನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಆರೋಪಿಸಿದರು.

₹ 70 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವ್ಯವಸ್ಥಿತವಾಗಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ನೈಜೀರಿಯಾ ಪ್ರಜೆ ಚಿಮಾ ಅಜೋಕುನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಈತನಿಂದ ₹ 70 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

'ಆರೋಪಿ ಚಿಮಾ, ಕೆಲ ತಿಂಗಳ ಹಿಂದಷ್ಟೇ ನಗರಕ್ಕೆ ಬಂದು ಬಾಣಸವಾಡಿಯಲ್ಲಿ ವಾಸವಿದ್ದ. ಪರಿಚಯಸ್ಥರಿಂದ ಡ್ರಗ್ಸ್ ಖರೀದಿಸಿ ಸಂಗ್ರಹಿಸಿಟ್ಟುಕೊಂಡು ಮಾರುತ್ತಿದ್ದ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಕಾರ್ಯಾಚರಣೆ ನಡೆಸಿ ಚಿಮಾನನ್ನು ಬಂಧಿಸಲಾಗಿದೆ. ಎಂಡಿಎಂಎ ಡ್ರಗ್ಸ್, ಮೊಬೈಲ್ ಹಾಗೂ ತೂಕದ ಯಂತ್ರವನ್ನು ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

'ಪ್ರತಿ ಗ್ರಾಂ.ಗೆ ₹ 5,000ರಿಂದ ₹8,000 ದರದಲ್ಲಿ ಆರೋಪಿ ಡ್ರಗ್ಸ್ ಮಾರುತ್ತಿದ್ದ. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಹಾಗೂ ಇತರರು ಆರೋಪಿಗಳ ಕಡೆ ಡ್ರಗ್ ಖರೀದಿಸುತ್ತಿದ್ದರು' ಎಂದೂ ಸಿಸಿಬಿ ಪೊಲೀಸರು ಹೇಳಿದರು.

ಡ್ರ್ಯಾಗರ್‌ನಿಂದ ಇರಿದು, ಆಸ್ಪತ್ರೆಗೆ ಹೊತ್ತೊಯ್ದ!

ಬೆಂಗಳೂರು: ರಾಜಗೋಪಾಲನಗರ ಠಾಣೆ ವ್ಯಾಪ್ತಿಯಲ್ಲಿ ಸೂರಿ ಎಂಬುವವರಿಗೆ ಡ್ರ್ಯಾಗರ್‌ನಿಂದ ಇರಿದು ಕೊಲೆಗೆ ಯತ್ನಿಸಿದ್ದ ಆರೋಪದಡಿ ಮುನಿ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಮುನಿ, ಏ. 18ರಂದು ಸೂರಿ ಜೊತೆ ಜಗಳ ತೆಗೆದು ಡ್ರ್ಯಾಗರ್‌ನಿಂದ ಇರಿದಿದ್ದ. ತೀವ್ರ ಗಾಯಗೊಂಡ ಸೂರಿಯನ್ನು ಆರೋಪಿ ಮುನಿಯೇ ಹೊತ್ತು ಹೋಗಿ ಆಸ್ಪತ್ರೆಗೆ ದಾಖಲಿಸಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

ನೈರುತ್ಯ ರೈಲ್ವೆ

Azadi Ka Amrit Mahotsav

ಟೆಂಡರ್ ಪ್ರಕಟಣೆ ಸಂ.: 02/2022 ದಿನಾಂಕ: 18.04.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳಗಿನ ಐಟಂ ಪೂರೈಕೆಗಾಗಿ ಇ–ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ, **ಟೆಂಡರ್ ಮುಕ್ತಾಯ ಸಮಯ 14:00 ಗಂಟೆ**

ಟೆಂಡರ್ ಸಂ.	ಕಾಮಗಾರಿಯ ವಿವರ	ಪ್ರಮಾಣ	ಕೊನೆ ದಿನಾಂಕ
17211049	ಏರ್ ಕಂಪ್ರೆಸರ್‌ನ ಸ್ಪ್ರಿಂಗ್ ವಾಲ್ವ್ ಸ್ಟೇನ್ಲೆಸ್ ಸ್ಟೀಲ್	7287 ಸಂಖ್ಯೆ	09.05.2022
83223000	ಪರಿಸರ ಸ್ನೇಹಿ ಪೇಪರ್ ಪ್ಯಾಕಿಂಗ್ (ಬೆಡ್ ರೋಲ್ ಕವರ್)	6317148 ಸಂಖ್ಯೆ	04.05.2022
45221604	ಪೂರ್ಣಗೊಂಡ ಬ್ಯಾಟರಿ ಬಾಕ್ಸ್ 110 V DC	200 ಸಂಖ್ಯೆ	09.05.2022
93221016 A	ಇಂಪ್ರೆಗ್ನೆಟೆಡ್ ಕಂಪ್ರೆಸ್ಡ್ ಲ್ಯಾಮಿನೇಟ್‌ಗಳು	1500 ಸಂಖ್ಯೆ	09.05.2022
33225006	ಇಂಟರ್ ಕಾರ್ ಗ್ಯಾಂಗ್‌ವೇ ಮೌಂಟಿಂಗ್	60 ಜೊತೆ	16.05.2022
30221327	ರಬ್ಬರ್ ಸ್ಪ್ರಿಂಗ್ ಪ್ಯಾಕ್ 1000 ಕಿಲೋಗ್ರಾಂ ಸಾಮರ್ಥ್ಯ	2560 ಜೊತೆ	13.05.2022

ಹೆಚ್ಚಿನ ಮಾಹಿತಿಗಾಗಿ www.ireps.gov.in ಲಾಗ್‌ಆನ್ ಮಾಡಿ

ಪಿಯುಬಿ/42/ಎಎಎಲ್/ಜಿಆರ್‌ಬಿ/ಎಸ್‌ಡಬ್ಲ್ಯುಆರ್/2022–23 ಪ್ರಧಾನ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ಹುಬ್ಬಳ್ಳಿ

S.W.Railways sw_rly SWRRLY southwesternrailway SWRRLY

Azadi Ka Amrit Mahotsav | icmr INDIAN COUNCIL OF MEDICAL RESEARCH | NCDIR NATIONAL CENTRE FOR DISEASE INFORMATICS AND RESEARCH | NATIONAL CANCER REGISTRY PROGRAMME India

Dept. of Health Research, MoH&FW, Govt. of India,
Nirmal Bhawan - ICMR Complex, Poojanahalli Road,
Kannamangala Post, Bengaluru–562 110, Telephone: 080-22176400

Advertisement No. 5/2022

Online applications are invited from eligible candidates for various contractual project posts i.e. Project Scientist B (Non-Medical), Project Scientist - B (Medical), Project Scientist - C (Non-Medical), Project Scientist C (Medical), Project Technical Officer, Computer Programmer (grade B), Project Admin Assistant and Project Section Officer. Interested and eligible candidates can apply online. Detailed advertisement and other terms and conditions can be viewed/downloaded from the websites **www.ncdirindia.org/ www.icmr.nic.in**

Sd/-
Director

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 02–ಎಸ್‌ಎನ್‌ಟಿ–ಎಂವೈಎಸ್–2022
ದಿನಾಂಕ : 13–04–2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಕೆಲಸದ ಹೆಸರು	ಅಂದಾಜು ಮೌಲ್ಯ
1	ಮೈಸೂರು ವಿಭಾಗದ ಮೈಸೂರು, ದಾವಣಗೆರೆ, ಶಿವಮೊಗ್ಗ, ಅರಸೀಕೆರೆ, ಭದ್ರಾವತಿ, ಸುಬ್ರಹ್ಮಣ್ಯ ರಸ್ತೆ, ಬೀರೂರು, ಹರಿಹರ ಮತ್ತು ಹಾವೇರಿಯಲ್ಲಿ ಎರಡು ವರ್ಷಗಳ ಅವಧಿಗೆ ಎಎಸ್‌ಎಸ್‌ಎಐಇ ತಯಾರಿಕೆಯ ಐಪಿಐಎಸ್ ನ ಸಮಗ್ರ ವಾರ್ಷಿಕ ನಿರ್ವಹಣಾ ಗುತ್ತಿಗೆ.	ರೂ. 58,39,104/–
2	ಮೈಸೂರು ವಿಭಾಗದ ಅರಸೀಕೆರೆ ಮತ್ತು ಭದ್ರಾವತಿ ನಿಲ್ದಾಣಗಳಲ್ಲಿ ಎರಡು ವರ್ಷಗಳ ಅವಧಿಗೆ ಎಫ್ರಾನಿಕ್ಸ್ ತಯಾರಿಕೆಯ ಐಪಿಐಎಸ್ ನ ಸಮಗ್ರ ವಾರ್ಷಿಕ ನಿರ್ವಹಣಾ ಗುತ್ತಿಗೆ.	ರೂ. 14,96,568/–
3	ಮೈಸೂರು ವಿಭಾಗದ ಹಾಸನ, ಶಿವಮೊಗ್ಗ, ದಾವಣಗೆರೆ ಮತ್ತು ತಿಪಟೂರು ನಿಲ್ದಾಣಗಳಲ್ಲಿ ಎರಡು ವರ್ಷಗಳ ಅವಧಿಗೆ ಎಂಐಸಿ ತಯಾರಿಕೆಯ ಐಪಿಐಎಸ್ ನ ಸಮಗ್ರ ವಾರ್ಷಿಕ ನಿರ್ವಹಣಾ ಗುತ್ತಿಗೆ.	ರೂ. 35,61,384/–
4	ಮೈಸೂರು ವಿಭಾಗದ ಹಾಸನ ನಿಲ್ದಾಣದಲ್ಲಿ ಎರಡು ವರ್ಷಗಳ ಅವಧಿಗೆ ಸೂರ್ಯ ತಯಾರಿಕೆಯ ಐಪಿಐಎಸ್ ನ ಸಮಗ್ರ ವಾರ್ಷಿಕ ನಿರ್ವಹಣಾ ಗುತ್ತಿಗೆ.	ರೂ. 6,31,704/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **10–05–2022ರಂದು 11:00 ಗಂಟೆವರೆಗೆ.**

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಇಂಜಿನಿಯರ್, ಮೈಸೂರು

ಪಿಯುಬಿ/39/ಎಎಸ್/ಜಿಆರ್‌ಬಿ/ಎಸ್‌ಡಬ್ಲ್ಯುಆರ್/2022–23

S.W.Railways SWRRLY SWRRLY

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಮಹಾನಗರ ಆಯುಕ್ತರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052 ದೂರವಾಣಿ ಸಂಖ್ಯೆ: 22263479

ಸಂಖ್ಯೆ : STRRPA/TP/LAO/15/2016-17 ದಿನಾಂಕ: 20.04.2022.

"ಸಾರ್ವಜನಿಕ ಪ್ರಕಟಣೆ"

- ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಚಿಕ್ಕಗಟ್ಟಿಗನಬ್ಬೆ ಗ್ರಾಮದ ಸ.ನಂ.32/1ಎರಲ್ಲಿ 2 ಎ–13 ಗುಂಟೆ, ಸ.ನಂ.33/1(ಭಾ)ರಲ್ಲಿ 0–09 ಗುಂಟೆ, ಸ.ನಂ.33/2ರಲ್ಲಿ 0–08 ಗುಂಟೆ, ಸ.ನಂ.34/1ರಲ್ಲಿ 0–03 ಗುಂಟೆ, ಸ.ನಂ.34/2ರಲ್ಲಿ 1 ಎ–08 ಗುಂಟೆ, ಸ.ನಂ.34/3ರಲ್ಲಿ 0–02 ಗುಂಟೆ, ಸ.ನಂ.34/4ರಲ್ಲಿ 0–02ಗುಂಟೆ, ಸ.ನಂ.35ರಲ್ಲಿ 2 ಎ–37 ಗುಂಟೆ, ಸ.ನಂ.40/2ಎರಲ್ಲಿ 0–31 ಗುಂಟೆ ಮತ್ತು 40/2ಬಿರಲ್ಲಿ 0–34 ಗುಂಟೆ ಒಟ್ಟು 12 ಎ–38¾ ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ಈಗಾಗಲೇ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆಯಾಗಿರುವ ವಿನ್ಯಾಸಕ್ಕೆ 0–27 ಗುಂಟೆ ಸೇರಿಸಿ ಒಟ್ಟು 13 ಎ–25¾ ಗುಂಟೆ ಪ್ರದೇಶಕ್ಕೆ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ ದಿನಾಂಕ: 31.03.2018ರಲ್ಲಿ ನೀಡಲಾಗಿರುವ ತಾತ್ಕಾಲಿಕ ಅನುಮೋದನೆಯನ್ನು ದಿನಾಂಕ: 13.10.2020 ಈ ಕಛೇರಿ ಆದೇಶದಲ್ಲಿ ಪರಿಷ್ಕೃತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆಯನ್ನು ತಾತ್ಕಾಲಿಕವಾಗಿ ವಜಾಗೊಳಿಸಲಾಗಿದೆ.
- ಅದರಂತೆ ದಿನಾಂಕ:13.10.2020ರ ಈ ಕಛೇರಿ ಪತ್ರದಲ್ಲಿ ಪರಿಷ್ಕೃತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆಯನ್ನು ತಾತ್ಕಾಲಿಕವಾಗಿ ವಜಾಗೊಳಿಸಿ ಆದೇಶ ಹೊರಡಿಸಿದ ನಂತರ ವಜಾಗೊಳಿಸಿದ ಆದೇಶವನ್ನು ಹಿಂಪಡೆಯುವ, ಅಥವಾ ಪ್ರಶ್ನಿತ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವ ಅಥವಾ ನಿವೇಶನಗಳ ಬಿಡುಗಡೆ ಮಾಡುವ ಕುರಿತು ಅಥವಾ ಇನ್ನೀತರೆ ಯಾವುದೇ ರೀತಿಯ ಆದೇಶಗಳನ್ನು ಈ ಕಛೇರಿಯಿಂದ ಹೊರಡಿಸಿರುವುದಿಲ್ಲ.
- ಮುಂದುವರೆದು, ಅಭಿವೃದ್ಧಿದಾರರಾದ ಎಸ್.ಎಲ್. ರೆಸಿಡೆನ್ಸಿಯಲ್ ಲೇಔಟ್ ಪ್ರೈ.ಲಿ. ರವರು ಈ ಕಛೇರಿಯಿಂದ ದಿನಾಂಕ:28.01.2022ರಲ್ಲಿ ಪ್ರಶ್ನಿತ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಲಾಗಿದೆ ಎಂದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ.13533/2020ರಲ್ಲಿ ದಾವೆಯನ್ನು ಹಿಂಪಡೆದಿರುತ್ತಾರೆ. ಆದರೆ ಈ ಕಛೇರಿಯಿಂದ ಯಾವುದೇ ಅನುಮೋದನೆ ಪತ್ರವನ್ನು ನೀಡಿರುವುದಾಗಲಿ ಅಥವಾ ವಜಾಗೊಳಿದ ಆದೇಶವನ್ನು ಹಿಂಪಡೆದಿರುವುದಾಗಲಿ ಆಗಿರುವುದಿಲ್ಲ ಅಲ್ಲದೆ ಅಂತಿಮ ವಿನ್ಯಾಸ ಅನುಮೋದನೆ ಪತ್ರವು ನಕಲಿಯಾಗಿದ್ದು, ಈ ಕಛೇರಿಯಿಂದ ಇಂತಹ ಯಾವುದೇ ಆದೇಶವನ್ನು ನೀಡಿರುವುದಿಲ್ಲ. ಈ ಸಂಬಂಧ ಅಭಿವೃದ್ಧಿದಾರರಾದ ಎಸ್.ಎಲ್. ರೆಸಿಡೆನ್ಸಿಯಲ್ ಲೇಔಟ್ ಪ್ರೈ.ಲಿ. ರವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಾಗಿದೆ. ಅಲ್ಲದೆ ಸದರಿ ವಿನ್ಯಾಸದಲ್ಲಿ ನಿವೇಶನಗಳನ್ನು ಖರೀದಿಸಿದಲ್ಲಿ ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

ಆದ್ದರಿಂದ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ ಈ ಕಛೇರಿಯ ಆದೇಶ ಸಂಖ್ಯೆ: STRRPA/TP/LAO/15/2016-17 ದಿನಾಂಕ: 13.10.2020 ರಂದು ಪರಿಷ್ಕೃತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆಯನ್ನು ತಾತ್ಕಾಲಿಕವಾಗಿ ವಜಾಗೊಳಿಸಲಾಗಿದೆ. ಹಾಗಾಗಿ ಸಾರ್ವಜನಿಕರು ಈ ವಿನ್ಯಾಸದಲ್ಲಿನ ಯಾವುದೇ ನಿವೇಶನಗಳನ್ನು ಖರೀದಿಸಬಾರದೆಂದು ಹಾಗೂ ಮುಂದೆ ಸಹ ಸದರಿ ಸರ್ವೆ ನಂಬರ್‌ಗಳಲ್ಲಿ ನಿವೇಶನಗಳನ್ನು ಖರೀದಿಸುವವರು ಈ ಕಛೇರಿಯಿಂದ ನಿರಾಕ್ಷೇಪಣಾ ಪತ್ರದ ಜೊತೆಗೆ ದಾಖಲೆಗಳನ್ನು ಪರಿಶೀಲಿಸಿಕೊಂಡು ನಿವೇಶನಗಳನ್ನು ಖರೀದಿಸಲು ಸೂಚಿಸಿದೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/236/ಆಕಾರ್/22–23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರದಲ್ಲಿ ಗುರುವಾರ ಎನ್‌ಎಂಐಎಂಎಸ್ ಡೀಮ್ಡ್ ಯೂನಿವರ್ಸಿಟಿಯ 11ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಕುಲಪತಿ ಡಾ. ರಮೇಶ್ ಭಟ್, ಐಬಿಎಂ ಅಧಿಕಾರಿ ಮೀನಾಕ್ಷಿ ಶ್ರೀನಿವಾಸನ್, ನಿರ್ದೇಶಕ ಡಾ. ರಾಜೇಂದ್ರ ನರಗುಂದಕರ್ ಇದ್ದರು.

ಎನ್‌ಎಂಐಎಂಎಸ್ 11ನೇ ಘಟಿಕೋತ್ಸವ

ಬೆಂಗಳೂರು: ಎಸ್‌ವಿಕೆಎಂನ ಎನ್‌ಎಂಐಎಂಎಸ್ ಡೀಮ್ಡ್ ಯೂನಿವರ್ಸಿಟಿಯ 11ನೇ ಘಟಿಕೋತ್ಸವ ನಗರದಲ್ಲಿ ಗುರುವಾರ ನಡೆಯಿತು.

ಮಾಸ್ಟರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ (ಎಂಬಿಎ), ಪಿಜಿಡಿಎಂ-ಎಕ್ಸಿ ಮತ್ತು ಬಿಜಿಡಿಬಿಎಫ್‌ಎಸ್ ಪ್ರೋಗ್ರಾಮ್ ಕೋರ್ಸ್‌ಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಸ್ಕೂಲ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್‌ನ ಬೆಂಗಳೂರು ಕ್ಯಾಂಪಸ್‌ನ ವಿದ್ಯಾರ್ಥಿಗಳನ್ನು ಘಟಿಕೋತ್ಸವದಲ್ಲಿ ಸನ್ಮಾನಿಸಲಾಯಿತು.

ಈ ಬಾರಿಯ ಘಟಿಕೋತ್ಸವದಲ್ಲಿ 214 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಎಂಬಿಎ- 11 ಪ್ರೋಗ್ರಾಮ್‌ನಲ್ಲಿ 175 ವಿದ್ಯಾರ್ಥಿಗಳು, ಪಿಜಿಡಿಎಂ ಎಕ್ಸಿಕ್ಯೂಟಿವ್‌ನಲ್ಲಿ 25 ಹಾಗೂ ಪಿಜಿಡಿಬಿಎಫ್‌ಎಸ್ 2 ಪ್ರೋಗ್ರಾಮ್‌ನಲ್ಲಿ 9 ವಿದ್ಯಾರ್ಥಿಗಳಿದ್ದರು. ಪೂರ್ಣಾವಧಿಯ ಎಂಬಿಎ 11 ಪ್ರೋಗ್ರಾಮ್‌ನಲ್ಲಿ ಮೊದಲ ಮೂರು ಸ್ಥಾನ ಗಳಿಸಿದ ಸಗುನ್ ಅಗರ್ವಾಲ್, ಗಾರ್ವಿ ಸಮಾರಿಯಾ, ಶ್ವೆಟ್ಲಾನಾ ಮಹಾಪಾತ್ರ, ಪಿಜಿಡಿಎಂ ಎಕ್ಸಿಕ್ಯೂಟಿವ್ 25 ಪ್ರೋಗ್ರಾಮ್‌ನಲ್ಲಿ ಮೊದಲ ಎರಡು ಸ್ಥಾನಗಳನ್ನು ಹಂಚಿಕೊಂಡ ರಾಜ್‌ಪ್ರತಾಪ್ ಸೋಳಂಕಿ, ಸುಧೀರ್ ಕುಮಾರ್ ಲೆಂಕಾ ಹಾಗೂ ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳ ವಿಷಯದ ಸ್ನಾತಕೋತ್ತರ ಡಿಪ್ಲೋಮಾದಲ್ಲಿ (ಪಿಜಿಡಿಎಫ್‌ಎಸ್ 2) ಮೊದಲ ಸ್ಥಾನ ಪಡೆದ ಸೌಮ್ಯ ಗಣೇಶ್ ಸ್ವರ್ಣ ಪದಕ ತಮ್ಮದಾಗಿಸಿಕೊಂಡರು.

ಕುಲಪತಿ ಡಾ. ರಮೇಶ್ ಭಟ್ ಪದವಿ ಪಡೆದ ವಿದ್ಯಾರ್ಥಿಗಳಿಗೆ ಪದವಿ ಪ್ರಶಸ್ತಿ ಪ್ರದಾನ ಮಾಡಿದರು. ಐಬಿಎಂ ಅಧಿಕಾರಿ ಮೀನಾಕ್ಷಿ ಶ್ರೀನಿವಾಸನ್, ಎನ್‌ಎಂಐಎಂಎಸ್ ಬೆಂಗಳೂರು ಕ್ಯಾಂಪಸ್ ನಿರ್ದೇಶಕ ಡಾ. ರಾಜೇಂದ್ರ ನರಗುಂದಕರ್ ಇದ್ದರು.

'ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನರು ಆರ್ಥಿಕವಾಗಿ ತತ್ತರಿಸಿದ್ದಾರೆ' ಎಂದು ಆರೋಪಿಸಿ ಜಯ ಕರ್ನಾಟಕ ಸಂಘಟನೆಯ ಮಹಿಳಾ ಘಟಕದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು 560 020.

ತಿದ್ದುಪಡಿ

ಈ ದಿನಪತ್ರಿಕೆಯಲ್ಲಿ ದಿನಾಂಕ: 08.04.2022 ರಂದು ಪ್ರಕಟಗೊಂಡ **ಇ–ಹರಾಜು ಪ್ರಕಟಣೆ ಸಂಖ್ಯೆ: ಬೆಂಅಪ್ರಾ/ಅಸ/ಇ–ಹರಾಜು/ಟಿ–01/2022–23 ದಿನಾಂಕ: 07.04.2022ಕ್ಕೆ** ಸಂಬಂಧಿಸಿದಂತೆ ಇ–ಹರಾಜಿನಿಂದ ಒಟ್ಟು 20 ನಿವೇಶನಗಳನ್ನು ಹಿಂಪಡೆಯಲಾಗಿದೆ ಮತ್ತು ಒಟ್ಟು 17 ನಿವೇಶನಗಳ ಅಳತೆಗಳನ್ನು ಸರಿಪಡಿಸಲಾಗಿದ್ದು ವಿವರಗಳು ಈಕೆಳಕಂಡತಿವೆ:

ಹಿಂಪಡೆಯಲಾದ ಒಟ್ಟು 20 ನಿವೇಶನಗಳ ವಿವರಗಳು: ಮುಂದುವರೆದ ಬನಶಂಕರಿ 6ನೇ ಹಂತ, 4ನೇ 'ಹೆಚ್' ಬ್ಲಾಕ್ (ಗುಬ್ಬಲಾಳ ಮತ್ತು ಹೊಸಹಳ್ಳಿ) **ನಿವೇಶನ ಸಂಖ್ಯೆ: 1578,** ಬನಶಂಕರಿ 6ನೇ ಹಂತ, 2ನೇ ಬ್ಲಾಕ್ (ತುರಹಳ್ಳಿ ಮತ್ತು ಹೆಮ್ಮಿಗೆಪುರ–2) **ನಿವೇಶನ ಸಂಖ್ಯೆ: 736,** ಅಂಜನಾಪುರ ಟೌನ್‌ಶಿಪ್, 7ನೇ ಬ್ಲಾಕ್ **ನಿವೇಶನ ಸಂಖ್ಯೆ: 60,** ನಾಡಪ್ರಭು ಕೆಂಪೇಗೌಡ ಬಡಾವಣೆ 7ನೇ ಬ್ಲಾಕ್ **ನಿವೇಶನಗಳ ಸಂಖ್ಯೆ: 1873, 1874, 1909, 1910,** ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆ 1ನೇ ಬ್ಲಾಕ್ **ನಿವೇಶನ ಸಂಖ್ಯೆ: 247,** ಜೆ.ಪಿ. ನಗರ 9ನೇ ಫೇಸ್, 1ನೇ ಬ್ಲಾಕ್ **ನಿವೇಶನ ಸಂಖ್ಯೆ: 142,** ಮುಂದುವರೆದ ಅಂಜನಾಪುರ ಬಡಾವಣೆ, 9ನೇ ಬ್ಲಾಕ್ **ನಿವೇಶನ ಸಂಖ್ಯೆ: 447,** ಬಿ.ಟಿ.ಎಂ. 4ನೇ ಹಂತ, 2ನೇ ಬ್ಲಾಕ್ **ನಿವೇಶನಗಳ ಸಂಖ್ಯೆ: 943/ಸಿ, 945/ಡಿ, 949/ಎ, 949/ಬಿ, 949/ಸಿ, 951/ಬಿ, 953/ಎ,** ಅರ್ಕಾವತಿ ಬಡಾವಣೆ 10ನೇ ಬ್ಲಾಕ್ **ನಿವೇಶನಗಳ ಸಂಖ್ಯೆ: 820/ಎ, 793/ಎ,** ಅರ್ಕಾವತಿ ಬಡಾವಣೆ 11ನೇ ಬ್ಲಾಕ್ **ನಿವೇಶನ ಸಂಖ್ಯೆ: ಆರ್‌ಹೆಚ್–121**

ಇ–ಹರಾಜಿನಿಂದ ಒಟ್ಟು 17 ನಿವೇಶನಗಳ ಅಳತೆಗಳನ್ನು ಸರಿಪಡಿಸಲಾದ ವಿವರಗಳು :

ಕ್ರ. ಸಂ.	ಬಡಾವಣೆಯ ವಿವರ	ನಿವೇಶನ ಸಂಖ್ಯೆ	ಪೂ–ಪ (ಮೀ.)	ಉ–ದ (ಮೀ.)	ಒಟ್ಟು ಅಳತೆ (ಚ.ಮೀ.)
1	ಅರ್ಕಾವತಿ ಬಡಾವಣೆ 2ನೇ ಬ್ಲಾಕ್	34	12.00	6.50	78.00
		2180	24.00	10.00	240.00
		2221	24.00	(10.50+10.00)/2	246.00
		2222	24.00	11.00+11.30)/2	267.60
		2260	24.00	(10.00+10.50)/2	246.00
2	ಮುಂದುವರೆದ ಅಂಜನಾಪುರ ಬಡಾವಣೆ, 11ನೇ ಬ್ಲಾಕ್	425	10.00	12.00	120.00
		426	(10.50+9.00)/2	12.00	117.00
3	ಅರ್ಕಾವತಿ ಬಡಾವಣೆ 15ನೇ ಬ್ಲಾಕ್	221/ಎ	32.80	(4.20+3.50)/2	126.28
		225	18.20	(12.50+11.70)/2	220.22
		238	14.80	(9.60+7.80)/2	128.76
		220	9.00	15.00	135.00
4	ಬನಶಂಕರಿ 6ನೇ ಹಂತ, 4ನೇ ಬ್ಲಾಕ್	1288	9.00	12.00	108.00
		1289	9.00	12.00	108.00
		1290	9.00	12.00	108.00
		1292	9.00	12.00	108.00
		1293	9.00	12.00	108.00
		1735	9.00	12.00	108.00

ಉಳಿದಂತೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಈ ಅನಾನುಕೂಲಕ್ಕಾಗಿ ಬಿಡಿಎ ವಿಷಾದಿಸುತ್ತದೆ.

ಸಹಿ/– ಅಭಿಯಂತರ ಸದಸ್ಯರು

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಮಹಾನಗರ ಆಯುಕ್ತರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052 ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/ಅನಧಿಕೃತಬಡಾವಣೆ/37&49/2021-22 ದಿನಾಂಕ: 20.04.2022.

"ಸಾರ್ವಜನಿಕ ಪ್ರಕಟಣೆ"

ಉಪನಗರ ವರ್ತುಲ ರಸ್ತೆ ಸ್ಥಳೀಯ ಯೋಜನಾ ಪ್ರದೇಶದಲ್ಲಿ ವಸತಿ ವಿನ್ಯಾಸ ಅಭಿವೃದ್ಧಿ ಅಥವಾ ಉಪವಿಭಜನೆ ಮಾಡುವ ಪೂರ್ವದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17(2ಎ) ರ ಅಡಿಯಲ್ಲಿ ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ತಾತ್ಕಾಲಿಕ ಬಡಾವಣೆ ನಕ್ಷೆಗೆ ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ. ತದನಂತರ, ವಸತಿ ವಿನ್ಯಾಸದ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣವಾಗಿ ಕಾರ್ಯಗತಗೊಳಿಸಿ, ಸಂಬಂಧಪಟ್ಟ ಪ್ರಾಧಿಕಾರ/ಏಜೆನ್ಸಿ/ಇಲಾಖೆಯಿಂದ ಕಾರ್ಯಪೂರ್ತಿ ಪ್ರಮಾಣಪತ್ರವನ್ನು ಪಡೆದುಕೊಂಡ ಮೇಲೆ ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ರಸ್ತೆಗಳು, ಉದ್ಯಾನಗಳನ್ನು ಮತ್ತು ಯೋಜನಾ ಪ್ರಾಧಿಕಾರಕ್ಕೆ ಉಪನಗರ ವರ್ತುಲ ರಸ್ತೆ ಭೂ ಬ್ಯಾಂಕ್ ಹಾಗೂ ನಾಗರೀಕ ಸೌಲಭ್ಯಗಳ ಪ್ರದೇಶಗಳನ್ನು ಬಿಟ್ಟುಕೊಟ್ಟು ನಂತರ ಹಾಗೂ ಅದನ್ನು ಅವರಿಗೆ ಹಸ್ತಾಂತರಿಸಿದ ನಂತರ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17(2ಬಿ) ರ ಅಡಿಯಲ್ಲಿ ನೋಂದಣಿ ಉದ್ದೇಶಕ್ಕಾಗಿ ಅಂತಿಮ ಬಡಾವಣೆ ನಕ್ಷೆಯ ಅನುಮೋದನೆ ಪಡೆಯಬೇಕಾಗಿರುತ್ತದೆ.

ಆದರೆ ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಚಂದನಹೊಸಹಳ್ಳಿ ಗ್ರಾಮದ ಸ.ನಂ.7/1, 7/2, 9, 10/1ಎ, 10/4, 20/1, 22/1ಬಿ2, 22/4, 22/7, 23/1, 24/1, 24/2, 25/1, 25/3, 26/2, 26/3, 46/2 ಮತ್ತು ಇತರೆ ಸರ್ವೆ ನಂಬರ್‌ಗಳಲ್ಲಿ ನಿಯಮಬಾಹಿರವಾಗಿ ಅನಧಿಕೃತ ಬಡಾವಣೆಗಳು ನಿರ್ಮಿಸುತ್ತಿದ್ದು, ಈ ಪ್ರಾಧಿಕಾರಕ್ಕೆ ಅನೇಕ ದೂರುಗಳು ಸ್ವೀಕೃತವಾಗುತ್ತಿರುತ್ತದೆ. ಈ ಕುರಿತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ತಹಶೀಲ್ದಾರ್, ಉಪನೋಂದಣಾಧಿಕಾರಿಗಳು, ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರುಗಳಿಗೆ ಮಾಹಿತಿಯನ್ನು ನೀಡಲು ಹಾಗೂ ಆಯಾ ಕಛೇರಿಗಳ ವ್ಯಾಪ್ತಿಯಲ್ಲಿ ಕ್ರಮವಹಿಸಲು ಈಗಾಗಲೇ ಸೂಚಿಸಲಾಗಿರುತ್ತದೆ.

ಆದ್ದರಿಂದ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಚಂದನಹೊಸಹಳ್ಳಿ ಗ್ರಾಮದ ಸ.ನಂ.7/1, 7/2, 9, 10/1ಎ, 10/4, 20/1, 22/1ಬಿ2, 22/4, 22/7, 23/1, 24/1, 24/2, 25/1, 25/3, 26/2, 26/3, 46/2 ಮತ್ತು ಇತರೆ ಸರ್ವೆ ನಂಬರ್‌ಗಳಲ್ಲಿ ನಿಯಮಬಾಹಿರವಾಗಿ ಅನಧಿಕೃತ ಬಡಾವಣೆಗಳು ನಿರ್ಮಾಣವಾಗುತ್ತಿರುತ್ತವೆ. ಹಾಗಾಗಿ ಸಾರ್ವಜನಿಕರು ಈ ವಿನ್ಯಾಸದಲ್ಲಿನ ಯಾವುದೇ ನಿವೇಶನಗಳನ್ನು ಖರೀದಿ ಮಾಡದಂತೆ ಹಾಗೂ ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಚಂದನಹೊಸಹಳ್ಳಿ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಬಡಾವಣೆಗಳಲ್ಲಿ ನಿವೇಶನಗಳನ್ನು ಖರೀದಿಸುವ ವೇಳೆ ಪ್ರಾಧಿಕಾರವನ್ನು ಸಂಪರ್ಕಿಸಿ ನಿರಾಕ್ಷೇಪಣಾ ಪತ್ರದೊಂದಿಗೆ ಅನುಮೋದಿತ ವಿನ್ಯಾಸವನ್ನು ದೃಢೀಕರಿಸಿಕೊಂಡು ಖರೀದಿಸಲು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ. ಅಲ್ಲದೇ ಈ ರೀತಿ ಅನಧಿಕೃತ ವಿನ್ಯಾಸದಲ್ಲಿ ನಿವೇಶನ ಖರೀದಿಸಿದಲ್ಲಿ ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

ಸಹಿ/– ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾಸಾಸಂಇ/ವಾ.ಪ್ರ/237/ಎಂಎಎ/2022–23

ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಾಜಕೀಯ ಕಹಳೆ ಮೊಳಗಿಸಿದ ದೆಹಲಿ ಸಿ.ಎಂ • ಬದಲಾವಣೆಯ ಸಂದೇಶ ಸಾರಿದ ಸಮಾವೇಶ

ಕರ್ನಾಟಕದಲ್ಲೂ ಎಎಪಿ ಸರ್ಕಾರ: ಕೇಜ್ರಿವಾಲ್

ಪ್ರಜಾವಾಣಿ ವಾರ್ತೆ

ಗುರುವಾರ ನಡೆದ ರೈತರ ಬೃಹತ್ ಸಮಾವೇಶದಲ್ಲಿ ಎಎಪಿ ಮುಖಂಡ ಎಚ್.ಡಿ. ಬಸವರಾಜು, ರೈತ ಮುಖಂಡ ಭಕ್ತರಹಳ್ಳಿ ಭೈರೇಗೌಡ, ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಎಎಪಿ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ, ರೈತ ಸಂಘದ ಎಚ್.ಆರ್. ಬಸವರಾಜಪ್ಪ ಹಸಿರು ಶಾಲು ಬೀಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ದೆಹಲಿ, ಪಂಜಾಬ್‌ನಲ್ಲಿ ಅಧಿಕಾರ ನಡೆಸುತ್ತಿರುವ ಆಮ್ ಆದ್ಮಿ ಪಕ್ಷ (ಎಎಪಿ) ಕರ್ನಾಟಕದಲ್ಲೂ ತನ್ನ ಕಾಲೂರುವ ಯತ್ನಕ್ಕೆ ಮುಂದಡಿ ಇಟ್ಟಿದ್ದು, 2023ರ ಚುನಾವಣೆಯಲ್ಲಿ ಕರ್ನಾಟಕ ರಾಜ್ಯ ರೈತಸಂಘ ಹಾಗೂ ಹಸಿರು ಸೇನೆ ಜತೆ ಒಗ್ಗೂಡಿ ಸ್ಪರ್ಧಿಸಲಿರುವುದಾಗಿ ಘೋಷಿಸಿದೆ.

ನಗರದ ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಡೆದ ರೈತರ ಬೃಹತ್ ಸಮಾವೇಶವನ್ನು ರಾಗಿಯ ರಾಶಿ ಪೂಜೆ ಮೂಲಕ ಉದ್ಘಾಟಿಸಿ ಮಾತನಾಡಿದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು, 'ಭ್ರಷ್ಟಾಚಾರ ಮುಕ್ತ ಆಡಳಿತ ನಡೆಸಲು ಕರ್ನಾಟಕದಲ್ಲಿ ಬದಲಾವಣೆ ಅಗತ್ಯ. ದೆಹಲಿ, ಪಂಜಾಬ್ ನಂತರ ಕರ್ನಾಟಕದಲ್ಲಿ ಸರ್ಕಾರ ರಚಿಸಲಿದ್ದೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ತಮ್ಮ ಭಾಷಣದುದ್ದಕ್ಕೂ ದೆಹಲಿಯಲ್ಲಿನ ಎಎಪಿ ಸರ್ಕಾರದ ಸಾಧನೆಗಳ ಆಡಳಿತ ಹಾಗೂ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿನ ಅಮೂಲಾಗ್ರ ಬದಲಾವಣೆಗಳನ್ನು ಉದಾಹರಣೆಗಳ ಸಮೇತ ವಿವರಿಸಿದ ಅವರು, 'ಕರ್ನಾಟಕದಲ್ಲಿ ಹಿಂದೆ ಶೇ 20ರಷ್ಟು ಕಮಿಷನ್ ಪಡೆಯುವ ಸರ್ಕಾರ ಇತ್ತು. ಈಗ ಶೇ 40ರಷ್ಟು ಕಮಿಷನ್ ಸರ್ಕಾರ ಇದೆ. ಆದರೆ, ದೆಹಲಿಯಲ್ಲಿ ಶೂನ್ಯ (ಶೇ 0) ಕಮಿಷನ್ ಪಡೆಯುವ ಸರ್ಕಾರ ಇದೆ. ನಮ್ಮದು ಅತ್ಯಂತ ಪ್ರಾಮಾಣಿಕ ಮತ್ತು ಭ್ರಷ್ಟಾಚಾರ ಮುಕ್ತ ಸರ್ಕಾರ' ಎಂದು ಪ್ರತಿಪಾದಿಸಿದರು.

'ನಾನು ಅತ್ಯಂತ ಪ್ರಾಮಾಣಿಕ ಎಂದು ಪ್ರಧಾನಿ ನರೇಂದ್ರ ಮೋದಿ ಅವರೇ ಪ್ರಮಾಣಪತ್ರ ನೀಡಿದ್ದಾರೆ. ನನ್ನ ಮನೆ ಮೇಲೆ ಸಿಬಿಐ, ಆದಾಯ ತೆರಿಗೆ ಸೇರಿದಂತೆ ಎಲ್ಲ ಇಲಾಖೆಗಳ ಮೂಲಕ ದಾಳಿ ನಡೆಸಲಾಯಿತು. ಆದರೆ, ಅವರಿಗೆ ಏನೂ ದೊರೆಯಲಿಲ್ಲ. ಇದೇ ರೀತಿ ನಮ್ಮ ಪಕ್ಷದ 20 ಶಾಸಕರ ಮನೆ ಮೇಲೆಯೂ ದಾಳಿ ನಡೆಸಲಾಯಿತು. ಅಲ್ಲಿಯೂ ಅವರಿಗೆ ಅಕ್ರಮದ ಹಣ ದೊರೆಯಲಿಲ್ಲ. ನನಗೆ ರಾಜಕೀಯ ಮಾಡಲು ಬರುವುದಿಲ್ಲ. ಆದರೆ, ನನಗೆ ಜನಸಾಮಾನ್ಯರ ನೋವುಗಳು, ಭಾವನೆಗಳು ಅರ್ಥವಾಗುತ್ತವೆ' ಎಂದರು.

'ನಾವು ಪ್ರಾಮಾಣಿಕರಾಗಿದ್ದೇವೆ. ಹೀಗಾಗಿಯೇ ಹಣ ಉಳಿಸಿ ಶಿಕ್ಷಣ, ಆರೋಗ್ಯ, ವಿದ್ಯುತ್, ನೀರು ಉಚಿತವಾಗಿ ನೀಡುತ್ತಿದ್ದೇವೆ. ಜತೆಗೆ, ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಸೌಲಭ್ಯವನ್ನು ಉಚಿತವಾಗಿ ಕಲ್ಪಿಸಿದ್ದೇವೆ. ನಮಗೆ ಗೂಂಡಾಗಿರಿ ಮಾಡಲು ಬರುವುದಿಲ್ಲ. ಶಾಲೆಗಳನ್ನು ನಿರ್ಮಿಸುವುದು ಮಾತ್ರ ಗೊತ್ತಿದೆ. ನಿಮಗೆ ಉತ್ತಮ ಶಾಲೆ ಮತ್ತು ಆಸ್ಪತ್ರೆಗಳು, ನೀರು, ವಿದ್ಯುತ್ ಬೇಕಾಗಿದ್ದರೆ ಆಮ್ ಆದ್ಮಿ ಪಕ್ಷವನ್ನು ಬೆಂಬಲಿಸಿ' ಎಂದರು.

'ನನ್ನ ತಂದೆ–ತಾಯಿ ಮಾತ್ರ ಮನೆಯಲ್ಲಿದ್ದಾಗ ಕೆಲ ಗೂಂಡಾಗಳು ದಾಳಿ ನಡೆಸಿದರು. ಆದರೆ, ಈ ಗೂಂಡಾಗಳನ್ನು ಬಿಜೆಪಿಗೆ ಸೇರಿಸಿಕೊಳ್ಳಲಾಯಿತು. ಗೂಂಡಾಗಳು, ಲಫಂಗರು, ಅತ್ಯಾಚಾರಿಗಳು, ಭ್ರಷ್ಟರನ್ನು ಬಿಜೆಪಿಗೆ ಸೇರಿಸಿಕೊಳ್ಳಲಾಗುತ್ತಿದೆ. ಯಾರಾದರೂ ಬಲತ್ಕಾರ ಮಾಡಿದರೆ ಅಂತವರನ್ನು ಮೆರವಣಿಗೆ ಮಾಡಿ ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳಲಾಗುತ್ತಿದೆ. ಉತ್ತರ ಪ್ರದೇಶ ಲಖಿಂಪುರದಲ್ಲಿ ರೈತರ ಮೇಲೆಯೇ ಜೀಪ್ ಹರಿಸಿದ ಪ್ರಕರಣದಲ್ಲೂ ಸರ್ಕಾರ ಮೌನವಹಿಸಿತು' ಎಂದು ವಾಗ್ದಾಳಿ ನಡೆಸಿದರು.

> **ಜನವಿರೋಧಿ ಸರ್ಕಾರ ಕೋಮುವಾದದ ವಿಷಬೀಜ ಬಿತ್ತುತ್ತಿದೆ. ದೆಹಲಿ, ಪಂಜಾಬ್ ನಂತರ ಕರ್ನಾಟಕದಲ್ಲಿ ಎಎಪಿ ಸರ್ಕಾರ ರಚನೆಯಾಗಬೇಕು**
> **ಎಚ್.ಆರ್.ಬಸವರಾಜಪ್ಪ,** ರೈತ ಮುಖಂಡ

> **ಹಸಿರು ಶಾಲು ವಿಧಾನಸಭೆ ಪ್ರವೇಶಿಸಬೇಕು. ಇದಕ್ಕಾಗಿ ಹೊಸ ರಾಜಕೀಯ ಪ್ರಕ್ರಿಯೆ ನಡೆಯಬೇಕಾಗಿದೆ. ಜಾತಿ, ಹಣ ಬಲವನ್ನು ಮತದಾರರು ತಿರಸ್ಕರಿಸಬೇಕು.**
> **ಪ್ರಕಾಶ್ ಕಮ್ಮರಡಿ,** ಕರ್ನಾಟಕ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ

ಎಎಪಿ ರೈತ ಸಂಘದ ರಾಜಕೀಯ ಮುಖವಾಣಿ: ಕೋಡಿಹಳ್ಳಿ

'ಆಮ್ ಆದ್ಮಿ ಪಕ್ಷ ರೈತ ಸಂಘದ ರಾಜಕೀಯ ಮುಖವಾಣಿಯಾಗಲಿದೆ. 2023ರ ವಿಧಾನಸಭೆ ಚುನಾವಣೆಯನ್ನು ಎಎಪಿ ಜತೆ ಕೈಜೋಡಿಸಿ ಎದುರಿಸಲಾಗುವುದು' ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ಸಮಾವೇಶದಲ್ಲಿ ಮಾತನಾಡಿದ ಅವರು, 'ನಮ್ಮ ಚುನಾವಣೆ ಅಸ್ತ್ರ ಪೊರಕೆ. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷಗಳ ಭ್ರಷ್ಟಾಚಾರವನ್ನು ಕಂಡ ಜನ ರೋಸಿಹೋಗಿದ್ದು, ರಾಜ್ಯಕ್ಕೆ ಪರ್ಯಾಯ ರಾಜಕಾರಣ ಬೇಕಾಗಿದೆ. ರೈತ ಸಂಘವು ಸ್ವತಂತ್ರವಾಗಿದ್ದುಕೊಂಡು ಕರ್ನಾಟಕದಲ್ಲಿ ಎಎಪಿ ಸರ್ಕಾರವನ್ನು ಅಸ್ತಿತ್ವಕ್ಕೆ ತರಲು ಶ್ರಮಿಸಲಿದೆ' ಎಂದರು.

'ಎಲ್ಲ ರಾಜಕೀಯ ಪಕ್ಷಗಳ ಉಸಿರಾಟವೇ ಭ್ರಷ್ಟಾಚಾರವಾಗಿದೆ. ಲೂಟಿ ಮಾಡುವುದನ್ನೇ ಮೈಗೂಡಿಸಿಕೊಂಡಿವೆ. ಬಿಜೆಪಿ ಆಡಳಿತ ನಡೆಸುತ್ತಿರುವ ಯಾವುದಾದರೂ ರಾಜ್ಯ ಭ್ರಷ್ಟಾಚಾರ ಮುಕ್ತವಾಗಿದೆಯೇ? ಇಂತಹ ಒಂದಾದರೂ ಉದಾಹರಣೆಯನ್ನು ಬಿಜೆಪಿ ನೀಡಲಿ. ಕರ್ನಾಟಕದಲ್ಲಿ ಶೇ 40 ಕಮಿಷನ್ ಪಡೆಯುವುದೇ ಸಾಧನೆಯಾಗಿದೆ. ಇದು ಕಾಂಗ್ರೆಸ್‌ಗೂ ಅನ್ವಯ' ಎಂದು ಕಿಡಿಕಾರಿದರು.

'ಸರ್ಕಾರಿ ಶಾಲೆ ಸೇರಿದ 4 ಲಕ್ಷ ಮಕ್ಕಳು'

ದೆಹಲಿಯಲ್ಲಿ ಐದು ವರ್ಷಗಳಲ್ಲಿ ಸರ್ಕಾರಿ ಶಾಲೆಗಳನ್ನು ಬದಲಾಯಿಸಿದ್ದೇವೆ. ಶಾಲೆಗಳಲ್ಲಿ ಈಜುಕೊಳ ಮತ್ತು ಲಿಫ್ಟ್ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಈ ವರ್ಷ ನಾಲ್ಕು ಲಕ್ಷ ವಿದ್ಯಾರ್ಥಿಗಳು ಖಾಸಗಿ ಶಾಲೆಗಳನ್ನು ತೊರೆದು ಸರ್ಕಾರಿ ಶಾಲೆಗಳಿಗೆ ದಾಖಲಾಗಿದ್ದಾರೆ' ಎಂದು ಅರವಿಂದ ಕೇಜ್ರಿವಾಲ್ ತಿಳಿಸಿದರು.

'ದೆಹಲಿಯಲ್ಲಿ ಆಸ್ಪತ್ರೆಗಳ ಪರಿಸ್ಥಿತಿಯೂ ಹದಗೆಟ್ಟಿತ್ತು, ಈಗ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಎಲ್ಲ ಕಾಯಿಲೆಗಳಿಗೆ ಉಚಿತ ಚಿಕಿತ್ಸೆ ನೀಡುತ್ತಿದ್ದೇವೆ. ಎರಡು ಕೋಟಿ ಮಂದಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ದಿನ 24 ಗಂಟೆಯೂ ಉಚಿತ ವಿದ್ಯುತ್ ದೊರೆಯುತ್ತಿದೆ. ಇದು ನಮ್ಮ ಮ್ಯಾಜಿಕ್. ಇಂತಹ ಬದಲಾವಣೆ ಕರ್ನಾಟಕದಲ್ಲೂ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

ಸುದ್ದಿ 2 ನಿಮಿಷ

'ಜನರಿಗೆ ತಿಳಿಸಿ, ಇಲ್ಲ ಧರಣಿ ಮಾಡ್ತೇನೆ'

ಲಕ್ಷ್ಮೇಶ್ವರ (ಗದಗ ಜಿಲ್ಲೆ): 'ಸಚಿವ ಸಿ.ಸಿ.ಪಾಟೀಲ ನನ್ನ ಪೂರ್ವಾಶ್ರಮ ಕುರಿತು ನಾಡಿನ ಜನರಿಗೆ ಬಹಿರಂಗಪಡಿಸದಿದ್ದರೆ ಏ. 27ರಂದು ನರಗುಂದದಲ್ಲಿ ಅವರ ಮನೆ ಎದುರು ಉಪವಾಸ ಸತ್ಯಾಗ್ರಹ ನಡೆಸುತ್ತೇನೆ' ಎಂದು ದಿಂಗಾಲೇಶ್ವರ ಶ್ರೀ ಎಚ್ಚರಿಸಿದರು.

ಬಾಲೆಹೊಸೂರಿನ ದಿಂಗಾಲೇಶ್ವರ ಮಠದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಅವರು, 'ಸಿ.ಸಿ.ಪಾಟೀಲ ಅವರು ನನ್ನ ಬಗ್ಗೆ ಕೀಳುಮಟ್ಟದ ಪದ ಬಳಸಿದ್ದಾರೆ. ಇದು ನನಗೆ ಮತ್ತು ಮಠದ ಭಕ್ತರಿಗೆ ಬಹಳ ನೋವು ತರಿಸಿದೆ' ಎಂದರು.

'ನನ್ನ ಪೂರ್ವಾಶ್ರಮ ಗೊತ್ತು ಎಂದಿರುವ ಸಚಿವರು ನನ್ನ ಮನೆಯ ಮಾಲೀಕ ಅಥವಾ ಜೀತದಾಳು ಆಗಿದ್ದರೆ' ಎಂದು ಪ್ರಶ್ನಿಸಿದರು.

'ಮೂರುಸಾವಿರ ಮಠದ ಪೀಠಕ್ಕಾಗಿ ದಿಂಗಾಲೇಶ್ವರ ಶ್ರೀಗಳು ಹಣ ಬಲ, ರೌಡಿಸಂ ಮಾಡಿದ್ದಾರೆ ಎಂದೂ ಹೇಳಿದ್ದಾರೆ. ಹಾಗಾಗಿ ನನ್ನ ಪೂರ್ವಾಶ್ರಮ ಮತ್ತು ನಾನು ಮಾಡಿರುವ ರೌಡಿಸಂ ಏನೆಂದು ಸಚಿವರು ತಿಳಿಸಲಿ' ಎಂದರು.

'ಅಲ್ಲದೇ ಸಚಿವರು ಬಾಲೆಹೊಸೂರಿಗೆ ಪೊಲೀಸರನ್ನು ಕಳಿಸಿ ನನ್ನ ಮೇಲೆ ಬೆದರಿಕೆ ತಂತ್ರ ಪ್ರಯೋಗಿಸುತ್ತಿದ್ದಾರೆ' ಎಂದು ಆರೋಪ ಮಾಡಿದ ಅವರು, 'ಯಾವುದೇ ಬೆದರಿಕೆಗೆ ಜಗ್ಗುವ ಸ್ವಾಮೀಜಿ ನಾನಲ್ಲ' ಎಂದರು.

'ಶಿರಹಟ್ಟಿ ಫಕ್ಕೀರೇಶ್ವರರ ಹೆಸರಲ್ಲಿ ಮಾಗಿ ಹುಣ್ಣಿಮೆ ದಿನವನ್ನು ಭಾವೈಕ್ಯ ದಿನವನ್ನಾಗಿ ಘೋಷಿಸದಿದ್ದರೆ ವಿಧಾನಸೌಧದ ಎದುರು ಹೋರಾಟ ಮಾಡಲಾಗುವುದು' ಎಂದೂ ಅವರು ಎಚ್ಚರಿಸಿದರು.

ಹಿಜಾಬ್ ವಿವಾದ: ಪ್ರವೇಶ ಪತ್ರ ಪಡೆಯದ ಆರು ವಿದ್ಯಾರ್ಥಿನಿಯರು

ಉಡುಪಿ: ಹಿಜಾಬ್‌ಗಾಗಿ ಹೋರಾಟ ನಡೆಸುತ್ತಿರುವ ಇಲ್ಲಿನ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನ ಆರು ವಿದ್ಯಾರ್ಥಿನಿಯರು ದ್ವಿತೀಯ ಪಿಯುಸಿ ಪರೀಕ್ಷೆಗೆ ಈವರೆಗೆ ಪ್ರವೇಶ ಪತ್ರ ಪಡೆದುಕೊಂಡಿಲ್ಲ ಎಂದು ಪ್ರಾಂಶುಪಾಲ ರುದ್ರೇಗೌಡ ತಿಳಿಸಿದರು.

ಏ. 22ರಿಂದ ಪಿಯುಸಿ ಪರೀಕ್ಷೆ ಆರಂಭವಾಗಲಿದೆ. ಪ್ರವೇಶ ಪತ್ರ ಪಡೆದುಕೊಳ್ಳುವಂತೆ ಮುಂಚಿತವಾಗಿ ವಿದ್ಯಾರ್ಥಿನಿಯರಿಗೆ ಸೂಚಿಸಲಾಗಿತ್ತು. ಆದರೆ, ಅವರಿಂದ ಸ್ಪಂದನೆ ಸಿಗಲಿಲ್ಲ ಎಂದು ತಿಳಿಸಿದರು.ಶುಕ್ರವಾರ ಪರೀಕ್ಷೆ ಆರಂಭವಾಗುವ ಮುನ್ನ ಬಂದರೂ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಪ್ರವೇಶ ಪತ್ರ ನೀಡುವುದಾಗಿ ಪ್ರಾಂಶುಪಾಲರು ತಿಳಿಸಿದರು.

ಅವಕಾಶಕ್ಕೆ ಟ್ವೀಟ್ ಮನವಿ: ಹಿಜಾಬ್ ಧರಿಸಿ ಪಿಯುಸಿ ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ವಿದ್ಯಾರ್ಥಿನಿಯರು ನಿರಂತರವಾಗಿ ಟ್ವೀಟ್ ಮೂಲಕ ಸರ್ಕಾರವನ್ನು ಒತ್ತಾಯಿಸಿದ್ದರು. 'ಮುಸ್ಲಿಂ ವಿದ್ಯಾರ್ಥಿನಿಯರ ಶೈಕ್ಷಣಿಕ ಭವಿಷ್ಯ ಹಾಳಾಗದಂತೆ ಕ್ರಮ ತೆಗೆದುಕೊಳ್ಳಬೇಕು' ಎಂದು ವಿದ್ಯಾರ್ಥಿನಿ ಅಲಿಯಾ ಅಸಾದಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಟ್ವೀಟ್ ಮೂಲಕ ಮನವಿ ಮಾಡಿದ್ದರು.

'ತುಂಡು ಬಟ್ಟೆ (ಹಿಜಾಬ್) ಕಾರಣಕ್ಕೆ ನಮಗೆ ಶಿಕ್ಷಣ ನಿರಾಕರಿಸುವುದು ಸರಿಯೇ' ಎಂದು ಸಚಿವ ಬಿ.ಸಿ.ನಾಗೇಶ್ ಅವರನ್ನು ಪ್ರಶ್ನಿಸಿದ್ದ ವಿದ್ಯಾರ್ಥಿನಿ ಅಲ್ಮಾಸ್, 'ಪರೀಕ್ಷೆಗೆ ಅವಕಾಶ ನಿರಾಕರಿಸಿದರೆ ಮಾಡಿಕೊಂಡಿರುವ ಸಿದ್ಧತೆಗಳೆಲ್ಲವೂ ವ್ಯರ್ಥವಾಗಲಿವೆ. ದಯವಿಟ್ಟು ಅನ್ಯಾಯ ಮಾಡಬೇಡಿ, ಪರೀಕ್ಷೆ ಬರೆಯಲು ಅವಕಾಶ ಕೊಡಿ' ಎಂದು ಮನವಿ ಮಾಡಿದ್ದರು.

ಸಿಡಿಲಿಗೆ ಕೃಷಿಕ ಸಾವು

ಹುಬ್ಬಳ್ಳಿ: ಹುಬ್ಬಳ್ಳಿ, ಧಾರವಾಡ, ಶಿರಸಿ, ವಿಜಯನಗರ ಸೇರಿ ವಿವಿ ಧೆಡೆ ಗುರುವಾರ ಗುಡುಗು ಸಹಿತ ಮಳೆಯಾಗಿದೆ. ವಿಜಯನಗರ ಜಿಲ್ಲೆಯ ಉತ್ತಂಗಿಯಲ್ಲಿ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಕೃಷಿಕ ಪಿಂಜಾರ್ ಇಸ್ಮಾಯಿಲ್ (58) ಸಿಡಿಲು ಬಡಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹರಪನಹಳ್ಳಿ ತಾಲ್ಲೂಕಿನ ಜಿತ್ತಿನಕಟ್ಟೆ ಗ್ರಾಮದಲ್ಲಿ ಆಟೊ ಮೇಲೆ ಮರ ಬಿದ್ದಿದೆ. ಜಿಲ್ಲೆಯ ಇಟ್ಟಿಗಿ, ಅರಸೀಕೆರೆ, ಕಾನಹೊಸಹಳ್ಳಿ ಸುತ್ತಮುತ್ತ ಉತ್ತಮ ಮಳೆಯಾಗಿದೆ.

ಪ್ರಮುಖ ಆರೋಪಿ ವಸೀಂ ಬಂಧನ

ಒಂದನೇ ಪುಟದಿಂದ

ವಿಡಿಯೊ ಹರಿಬಿಟ್ಟಿದ್ದ ಆರೋಪಿ: ಪೊಲೀಸರು ತನ್ನನ್ನು ಬಂಧಿಸುವುದಕ್ಕೆ ಮುಂಚೆ ಮಾಡಿರುವ ವಿಡಿಯೊದಲ್ಲಿ 'ಗಲಭೆ ಸಂದರ್ಭದಲ್ಲಿ ಉದ್ರಿಕ್ತರನ್ನು ನಾನು ಸಮಾಧಾನಪಡಿಸುತ್ತಿದ್ದೆ. ಎಲ್ಲರಿಗೂ ಕೇಳಲಿ ಎಂದು ಪೊಲೀಸರ ಸಲಹೆ ಮೇರೆಗೆ ವಾಹನದ ಮೇಲೆ ಹತ್ತಿದ್ದೆ. ಆದರೆ, ನನ್ನನ್ನೇ ಗಲಭೆಯ ಸಂಚುಕೋರ ಎಂದು ಬಿಂಬಿಸಲಾಗುತ್ತಿದೆ' ಎಂದು ವಸೀಂ ಹೇಳಿದ್ದಾನೆ.

'ತಪ್ಪಿತಸ್ಥನಾಗಿದ್ದರೆ ಕ್ರಮ ಕೈಗೊಳ್ಳಲಿ. ಹುಬ್ಬಳ್ಳಿ ವಾತಾವರಣ ಸರಿ ಇಲ್ಲ ಎಂದು ಕುಟುಂಬ ತಿಳಿಸಿದ್ದರಿಂದ ಪರಿಸ್ಥಿತಿ ತಿಳಿಯಾದಾಗ ಬರುವೆ' ಎಂದಿದ್ದ.

ರೌಡಿ ಶೀಟರ್ ಬಂಧನ: ರೌಡಿ ಶೀಟರ್, ಮುಲ್ಲಾ ಓಣಿಯ ತುಫೈಲ್ ಮುಲ್ಲಾ ಮತ್ತು ವಸೀಂ ಸಹಚರ ಹರಿಶ್ಚಂದ್ರ ಕಾಲೊನಿಯ ಅಬ್ದುಲ್ ಮಲಿಕ್ ಬೇಪಾರಿಯನ್ನು ಸಹ ಬಂಧಿಸಲಾಗಿದೆ. ಉದ್ರಿಕ್ತರ ಗುಂಪಿಗೆ ಪ್ರಚೋದನೆ ನೀಡಿದ್ದ ಆರೋಪದ ಮೇಲೆ ಎಐಎಂಐಎಂ ಮುಖಂಡರೊಂದಿಗೆ ಗುರುತಿಸಿಕೊಂಡಿದ್ದ ಮೊಹಮ್ಮದ್ ಆರೀಫ್ ಎಂಬಾತನನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಆದರೆ, ಆತನಿಗೂ, ಪಕ್ಷಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಆ ಪಕ್ಷದ ನಾಯಕರು ಸ್ಪಷ್ಟಪಡಿಸಿದ್ದಾರೆ.

ವಿಡಿಯೊ ಕಳಿಸಿದ್ದ ಸ್ನೇಹಿತನ ಬಂಧನ

ಹುಬ್ಬಳ್ಳಿ: ನಗರದಲ್ಲಿ ಗಲಭೆಗೆ ಕಾರಣವಾಗಿದ್ದ ವಿವಾದಾತ್ಮಕ ವಾಟ್ಸ್‌ಆ್ಯಪ್ ಸ್ಟೇಟಸ್‌ನ ಅನಿಮೆಟೆಡ್ ವಿಡಿಯೊವನ್ನು ಅಭಿಷೇಕ ಹಿರೇಮಠಗೆ ಕಳಿಸಿದ್ದ ಆತನ ಸ್ನೇಹಿತ ವೀರಭದ್ರ ಪಾಟೀಲ ಎಂಬಾತನನ್ನು ಹಳೇ ಹುಬ್ಬಳ್ಳಿ ಠಾಣೆ ಪೊಲೀಸರು ಗುರುವಾರ ಬಂಧಿಸಿದ್ದಾರೆ. ಆರೋಪಿಯನ್ನು ಕೋರ್ಟ್ ಎದುರು ಹಾಜರುಪಡಿಸಿದ್ದು, ಏ.30ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

2ಎ ಮೀಸಲಾತಿ ಕೊಟ್ಟರೆ ಹಿನ್ನಡೆ ಆಗುವುದೇ: ಸ್ವಾಮೀಜಿ ಪ್ರಶ್ನೆ

ಕೂಡಲಸಂಗಮ ಶ್ರೀ ಧರಣಿ ಆರಂಭ

ಪ್ರಜಾವಾಣಿ ವಾರ್ತೆ

ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿಗೆ ಆಗ್ರಹಪಡಿಸಿ ಹುನಗುಂದ ತಾಲ್ಲೂಕಿನ ಕೂಡಲಸಂಗಮದಲ್ಲಿ ಬಸವ ಜಯಮೃತ್ಯುಂಜಯ ಸ್ವಾಮೀಜಿ ಗುರುವಾರ ಧರಣಿ ಆರಂಭಿಸಿದರು. ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ ಮತ್ತು ಇತರರಿದ್ದರು

ಬಾಗಲಕೋಟೆ: 'ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಕೊಡದಂತೆ ಮುಖ್ಯಮಂತ್ರಿಗಳ ಮೇಲೆ ಯಾರಾದರೂ ಒತ್ತಡ ಹಾಕಿದ್ದಾರೆಯೇ? ಅದರಿಂದ ಅವರಿಗೆ ರಾಜಕೀಯವಾಗಿ ಹಿನ್ನಡೆ ಆಗಲಿದೆಯೇ? ಎಂಬುದನ್ನು ಬಸವರಾಜ ಬೊಮ್ಮಾಯಿ ಬಹಿರಂಗಪಡಿಸಲಿ' ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಆಗ್ರಹಿಸಿದರು.

ಕೂಡಲಸಂಗಮದ ಐಕ್ಯಮಂಟಪದ ಎದುರು ಗುರುವಾರದಿಂದ ಧರಣಿ ಆರಂಭಿಸಿರುವ ಅವರು, ಅದಕ್ಕೂ ಮುನ್ನ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

'ಬಜೆಟ್ ಅಧಿವೇಶನದಲ್ಲಿ ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಘೋಷಿಸುವುದಾಗಿ ಸರ್ಕಾರ ಹೇಳಿತ್ತು. ಈಗ ಮಾತು ತಪ್ಪಿದೆ. ಹೀಗಾಗಿ ಅನಿರ್ದಿಷ್ಟ ಅವಧಿಗೆ ಧರಣಿ ಆರಂಭಿಸಿದ್ದೇನೆ' ಎಂದರು.

ಡಿಸೆಂಬರ್ 12ರಂದು ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ನಡೆದ ಸಮಾಜದ ಶಾಸಕರು ಹಾಗೂ ಸಚಿವರ ದುಂಡು ಮೇಜಿನ ಸಭೆಯಲ್ಲಿ ಮೀಸಲಾತಿ ಕೊಡುವುದಾಗಿ ಮುಖ್ಯಮಂತ್ರಿ ಮಾತು ಕೊಟ್ಟಿದ್ದರು. ಅದನ್ನು ತಪ್ಪಿದ್ದಾರೆ. ಅಲ್ಲಿಯೇ ಘೋಷಿಸಿದ್ದಂತೆ ಈಗ ಮರಳಿ ಹೋರಾಟ ಆರಂಭಿಸಿದ್ದೇನೆ. ಮೀಸಲಾತಿ ಸಿಗುವವರೆಗೂ ಹೋರಾಟ ನಿಲ್ಲುವುದಿಲ್ಲ ಎಂದು ತಿಳಿಸಿದರು.

ಸಂಗಮನಾಥ ದೇವಾಲಯದ ಮುಖ್ಯಸ್ಥರು ಸ್ವತಃ ಮುಖ್ಯಮಂತ್ರಿ ಆಗಿರುವುದರಿಂದ ಅವರ ಗಮನ ಸೆಳೆಯಲು ಇಲ್ಲಿಯೇ ಧರಣಿ ನಡೆಸುತ್ತಿರುವುದಾಗಿ ಸ್ವಾಮೀಜಿ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು. ಧರಣಿಗೆ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಚಾಲನೆ ನೀಡಿದರು.

ರಥಕ್ಕೆ ಸಿಲುಕಿ ಸಾವು

ಹರಪನಹಳ್ಳಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಚಿಗಟೇರಿ ಗ್ರಾಮದಲ್ಲಿ ಗುರುವಾರ ನಡೆದ ನಾರದಮುನಿ ರಥೋತ್ಸವದ ವೇಳೆ ತೇರಿನ ಚಕ್ರಕ್ಕೆ ಸಿಲುಕಿ ಭಕ್ತರೊಬ್ಬರು ಮೃತಪಟ್ಟಿದ್ದಾರೆ. ದಾವಣಗೆರೆಯ ಸುರೇಶ್ ಬಸವನಗೌಡ (45) ಮೃತಪಟ್ಟವರು.

ಘಟನೆಯಿಂದ ಭಕ್ತರು ತೀವ್ರ ಆತಂಕಕ್ಕೆ ಒಳಗಾಗಿದ್ದರು. ಪೊಲೀಸರು ಜನರನ್ನು ನಿಯಂತ್ರಿಸಿ, ಶವ ತೆಗೆದು ಆಸ್ಪತ್ರೆಗೆ ಸಾಗಿಸಿದರು. ಬಳಿಕ ತೇರಿನ ಗಾಲಿಯನ್ನು ನೀರಿನಿಂದ ತೊಳೆದು ದೇವಸ್ಥಾನದವರೆಗೆ ಎಳೆಯಲಾಯಿತು.

ಕುಕ್ಕೆ: ಮೇ 25ರಂದು ಸಾಮೂಹಿಕ ವಿವಾಹ

ಸುಬ್ರಹ್ಮಣ್ಯ: ಕುಕ್ಕೆ ಸುಬ್ರಹ್ಮಣ್ಯ ದೇವಳದಲ್ಲಿ ಜನಸಾಮಾನ್ಯರ ಅನುಕೂಲಕ್ಕಾಗಿ ಮೇ 25ರಂದು 'ಸಪ್ತಪದಿ' ಸಾಮೂಹಿಕ ಸರಳ ವಿವಾಹ ಕಾರ್ಯಕ್ರಮ ಆಯೋಜಿಸಲಾಗಿದೆ. ಮೇ 25ರಂದು ವಿವಾಹ ನೆರವೇರಲಿದೆ. ಅರ್ಜಿ ಸಲ್ಲಿಸಲು ಮೇ 4 ಕಡೇ ದಿನ. ಮಾಹಿತಿಗೆ 08257-281224, 236200, 281700, 281423 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೇ 16 ರಿಂದ ಶಾಲೆಗಳು ಆರಂಭ

ಒಂದನೇ ಪುಟದಿಂದ

ಏಕರೂಪದ ಶೈಕ್ಷಣಿಕ ಚಟುವಟಿಕೆ: ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಈ ಶೈಕ್ಷಣಿಕ ಸಾಲಿನಲ್ಲಿ ಏಕರೂಪದ ಶೈಕ್ಷಣಿಕ ಚಟುವಟಿಕೆ ನಡೆಸಲಾಗುವುದು.ಇದಕ್ಕೆ ಪೂರಕವಾಗಿ ಕಲಿಕಾ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಶಾಲೆಯ ಪ್ರಾರಂಭೋತ್ಸವ ಯಾಂತ್ರಿಕ ಪ್ರಕ್ರಿಯೆ ಎಂದು ಪರಿಗಣಿಸದೇ ಮುಖ್ಯಶಿಕ್ಷಕರು, ಶಿಕ್ಷಕರು, ಎಸ್‌ಡಿಎಂಸಿ ಮತ್ತು ಪೋಷಕರು ಸೇರಿ ಶಾಲಾ ಮಕ್ಕಳನ್ನು ಗಣ್ಯ ಅತಿಥಿಗಳನ್ನು ಸ್ವಾಗತಿಸುವ ರೀತಿಯಲ್ಲಿ ಸ್ವಾಗತಿಸಬೇಕು. ಶಾಲೆಗಳನ್ನು ತಳಿರು ತೋರಣಗಳಿಂದ ಅಲಂಕರಿಸಿ ಭೌತಿಕ ವಾತಾವರಣವನ್ನು ಆಕರ್ಷಣೀಯವಾಗಿಸಬೇಕು. ಮೊದಲನೇ ದಿನದಿಂದಲೇ ಪಾಠ ಪ್ರವಚನ ಆರಂಭಿಸಲು ಸೂಚನೆ ನೀಡಲಾಗಿದೆ.

ಕಳೆದ ಸಾಲಿನಲ್ಲಿ ಶಾಲೆಗಳು ಭೌತಿಕವಾಗಿ ನಡೆಯದಿರುವುದು ಮತ್ತು ಮಕ್ಕಳು ಶಾಲೆಗೆ ನಿರಂತರವಾಗಿ ಹಾಜರಾಗದಿರುವುದರಿಂದ ದಾಖಲಾತಿ ಪ್ರಮಾಣ ಕಡಿಮೆ ಅಗುವ ಸಾಧ್ಯತೆ ಇದ್ದು, ಶಾಲೆಯಿಂದ ಮಕ್ಕಳು ಹೊರಗುಳಿಯುವ ಸಾಧ್ಯತೆಯೂ ಇದೆ. ಆದ್ದರಿಂದ ದಾಖಲಾತಿ ಆಂದೋಲನ ನಡೆಸಬೇಕು ಎಂದು ನಿರ್ದೇಶನ ನೀಡಲಾಗಿದೆ.

> **ಶೈಕ್ಷಣಿಕ ವೇಳಾಪಟ್ಟಿಯಲ್ಲಿ ದೀಪಾವಳಿ ಹಬ್ಬದ ರಜೆ ಸೇರಿಸಿಲ್ಲ. ಇತರ ಕಾರ್ಯಚಟುವಟಿಕೆಗಳಿಗೆ ಹೆಚ್ಚಿನ ರಜೆ ನೀಡಲಾಗಿದೆ. ಇದು ಸರಿಯಲ್ಲ**
> **ಡಿ. ಶಶಿಕುಮಾರ್,** ಪ್ರಧಾನ ಕಾರ್ಯದರ್ಶಿ, ಶಾಲಾ ಆಡಳಿತ ಮಂಡಳಿಗಳ ಸಂಘಟನೆ

ಕೋರ್ಟ್ ಸೂಚನೆ: ಸಮವಸ್ತ್ರ ನೀತಿ

ಮೇ 16 ರಿಂದ ಆರಂಭವಾಗುವ ಶೈಕ್ಷಣಿಕ ವರ್ಷಕ್ಕೆ ಸಮವಸ್ತ್ರ ನೀತಿಯನ್ನು ನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿರಲಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದ್ದಾರೆ.

ಹಿಜಾಬ್ ವಿಚಾರಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ ಆರಂಭವಾಗಬೇಕಾಗಿದೆ. ಶೈಕ್ಷಣಿಕ ವರ್ಷ ಆರಂಭ ಆಗುವುದರೊಳಗೆ ತೀರ್ಪು ಬರುವ ಸಾಧ್ಯತೆ ಇಲ್ಲ. ಅಲ್ಲಿಯವರೆಗೆ ಹೈಕೋರ್ಟ್ ನೀಡಿರುವ ನಿರ್ದೇಶನ ಪಾಲಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರವರ ಕಚೇರಿ
ಕನೀನಿನಿ, ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ, ತಾ:: ಹುಬ್ಬಳ್ಳಿ, ಜಿ: ಧಾರವಾಡ 580023.
Phone:-080-22283074-78 Fax:-080-22386015, ಫೋನ್ : 0836-2315225 ಫ್ಯಾಕ್ಸ್ :2315226.
e-mail :- knnl@knnlindia.com e-mail :-eemrbcc3byt@gmail.com
CIN:- U85110KA1998SGC024503. Website:- www.knnlindia.com

ಸಂ.ಕನೀನಿನಿ/ಮಬದವಿ–3/ಎ.ಇ–1/ಇ–ಟೆಂಡರ/2022–23/129 ದಿನಾಂಕ:–21/04/2022

ಟೆಂಡರ ಮುಂದೂಡಿಕೆ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ ಪೋರ್ಟಲ್ ಮುಖಾಂತರ)

ಈ ಕಚೇರಿ ಟೆಂಡರ ಪ್ರಕಟಣೆ **ಸಂ.01 ದಿನಾಂಕ: 01/04/2022** ಮತ್ತು ಟೆಂಡರ ಮುಂದೂಡಿಕೆ ಪ್ರಕಟಣೆ **ಸಂ.40 ದಿನಾಂಕ: 08/04/2022** ರಲ್ಲಿ ಪ್ರಕಟಿಸಲಾದ ಟೆಂಡರನಲ್ಲಿ ಒಂದು ಇಂಡೆಂಟ ನಂಬರಿನ **(33176)** ಕಾಮಗಾರಿಯನ್ನು ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿದೆ. ಇದರ ಬದಲಾದ ಟೆಂಡರ ವೇಳಾಪಟ್ಟಿ ಮತ್ತು ವಿವರ ಈ ಕೆಳಗಿನಂತಿದೆ.

ಇ–ಪೋರ್ಟಲ್ ಮೂಲಕ ಟೆಂಡರಗಳನ್ನು **ದಿನಾಂಕ: 10/05/2022 ರ 4.00 pm** ತನಕ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 12/05/2022** ರಂದು **ಮುಂಜಾನೆ: 11.00 am** ರಿಂದ. ಹಾಗೂ ಕಾಮಗಾರಿವಾರು ಇತರೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ ಪೋರ್ಟಲ್ ವೆಬಸೈಟ್ ಮುಖೇನ **http://eproc.karnataka.gov.in** ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: **0836–2315225** ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು
ಕನೀನಿನಿ, ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ
ವಾ.ಸಾ.ಇ/ಧಾ/90/2022–23/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಸರ್ವಜ್ಞನಗರ ವಿಭಾಗ,
7ನೇ ಮಹಡಿ, ಪಿ.ಯು. ಕಟ್ಟಡ, ಎಂ.ಜಿ. ರಸ್ತೆ, ಬೆಂಗಳೂರು – 560001.

ಸಂ: ಕಾಪಾಅ(ಸನವಿ)/ಇ–ಪ್ರೊಕ್/ಟೆಂಡ್/01/2022–23 ದಿನಾಂಕ:20.04..2022

ಟೆಂಡರ್‌ಗಾಗಿ ಆಹ್ವಾನ (ಎನ್‌ಐಟಿ)
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ, ಇವರು ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ 23, 24, 27, 28, 29, 30, 49, 59 ರಲ್ಲಿ ಅಂತರ್ಜಲ ಮರುಪೂರಣ ಸೌಲಭ್ಯ ಸೇರಿದಂತೆ ಕೊಳವೆಬಾವಿ ಮತ್ತು ಕೊಳವೆ ಮಾರ್ಗಗಳ ಜಾಲದ ಮುಖಾಂತರ ನೀರು ಸರಬರಾಜು ವ್ಯವಸ್ಥೆಯನ್ನು ಹೆಚ್ಚಿಸುವುದು.	150.00	2,25,000/-

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ದಿನಾಂಕ **25.04.2022ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. **2)** ಪೂರ್ವಭಾವಿ ಸಭೆ ದಿನಾಂಕ : **27.04.2022ರ ಬೆಳಿಗ್ಗೆ 11.30 ಗಂಟೆಗೆ 3)** ಭರ್ತಿ ಮಾಡಿದ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : **06.05.2022ರ ಸಂಜೆ 4.00 ಗಂಟೆಯವರೆಗೆ. 4)** ಟೆಂಡರ್‌ಗಳನ್ನು ತೆರೆಯುವ ದಿನಾಂಕ : **07.05.2022ರ ಸಂಜೆ 4.30 ಗಂಟೆಗೆ (ಸಾಧ್ಯವಾದಲ್ಲಿ).** ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಹಾಗೂ ವೆಬ್‌ಸೈಟ್: https:// eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ.
ತಾಲ್ಲೂಕು ಪಂಚಾಯತ್ ಕಾರ್ಯಾಲಯ, ಹೊಳಲ್ಕೆರೆ.
E-mail:-eo.holalkere@gmail.com Pho:- 08191-275208
ಸಂ:ತಾಪಂಹೊ/15ನೇಹಯೋ/ಇ–ಟೆಂಡರ್/ಸಿಆರ್–01/2022–23 ದಿ: 19.04.2022

ಟೆಂಡರ್ ಪ್ರಕಟಣೆ

2021–22ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ತಾಲ್ಲೂಕು ಪಂಚಾಯತ್ ಕಛೇರಿ ವ್ಯಾಪ್ತಿಯ ಬರುವ ಶೌಚಾಲಯಗಳ ನಿರ್ವಹಣೆಗೆ ಸಕ್ಕಿಂಗ್ ಜಕ್ಕಿಂಗ್ ಯಂತ್ರವನ್ನು ಇ–ಟೆಂಡರ್ ಮೂಲಕ ಖರೀದಿಸಲು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಚಿತ್ರದುರ್ಗ ರವರಿಂದ ಅನುಮೋದನೆ ನೀಡಿರುವುದರಿಂದ, ಅದರಂತೆ ಹೊಳಲ್ಕೆರೆ ತಾಲ್ಲೂಕು ಪಂಚಾಯತಿ ವ್ಯಾಪ್ತಿಗೆ ಒಂದು ಸಕ್ಕಿಂಗ್ ಜಕ್ಕಿಂಗ್ ಯಂತ್ರ ಖರೀದಿಸಲು ಇ–ಟೆಂಡರ್‌ನ್ನು ಕರೆಯಲಾಗಿದೆ. ಇಚ್ಛೆಯುಳ್ಳ ಸರಬರಾಜುದಾರರು ಇ–ಟೆಂಡರ್‌ನಲ್ಲಿ ಭಾಗವಹಿಸಲು ತಿಳಿಸಿದೆ. ವಿವರ:– (1) ಹೊಳಲ್ಕೆರೆ ತಾಲ್ಲೂಕು ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಶೌಚಾಲಯಗಳ ನಿರ್ವಹಣೆಗೆ ಸಕ್ಕಿಂಗ್/ಜಕ್ಕಿಂಗ್ ಯಂತ್ರ ಖರೀದಿ. ಅಂದಾಜು ಮೊತ್ತ ರೂ. 20.00 ಲಕ್ಷ ಮುಂಗಡ ಠೇವಣಿ:– 50,000–00
ಸದರಿ ಇ–ಟೆಂಡರ್ ಪ್ರಕ್ರಿಯೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದ ದಿನಾಂಕ: 25–04–2022 ರಿಂದ ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ–ಟೆಂಡರ್ ಭಾಗವಹಿಸಲು ಕೊನೆಯ ದಿನಾಂಕ: 02–05–2022 ರ ಸಂಜೆ 5.30 ಗಂಟೆಗೆ ಅಂತಿಮವಾಗಿರುತ್ತದೆ. ಇ–ಟೆಂಡರ್ ತಾಂತ್ರಿಕ ಲಕೋಟೆಯನ್ನು ದಿನಾಂಕ:04–05–2022ರಂದು ಬೆಳಿಗ್ಗೆ 11.00 ಗಂಟೆಗೆ, ಆರ್ಥಿಕ ಲಕೋಟೆಯನ್ನು ದಿನಾಂಕ: 05–05–2022 ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ: 08191 275208 ಮೊಬೈಲ್ ಸಂಖ್ಯೆ:– 9480861115/7406557525.
DIPR/CTA/MCA/47/2022-23
ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲ್ಲೂಕು ಪಂಚಾಯಿತಿ, ಹೊಳಲ್ಕೆರೆ.

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
4ನೇ ಮಹಡಿ, ಟಿಟಿಎಂಸಿ ಬಿಲ್ಡಿಂಗ್ 'ಎ' ಬ್ಲಾಕ್, ಬಿಎಂಟಿಸಿ ಬಿಲ್ಡಿಂಗ್, ಕೆ ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು–27 ದೂ: 22483641 ಫ್ಯಾ: 080 – 22483645

Notification No.KSBCL/DGMI/E-Pro/2021-22/19 Dated: 20-04-2022
ಟೆಂಡರ್‌ಗೆ ಆಹ್ವಾನ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾತ್ರ)

I 1. ಕಾರ್ಯನಿರ್ವಾಹಕ ನಿರ್ದೇಶಕರು (ಎಫ್&ಎ), ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ, ಬೆಂಗಳೂರು ಇವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಈ ಕೆಳಗಿನ ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರಂತೆ ಕರ್ನಾಟಕ ಕೆಪಿಡಬ್ಲ್ಯೂಡಿ/ಸಿಪಿಡಬ್ಲ್ಯೂಡಿ ಮತ್ತು ಎಂ.ಇ.ಎಸ್ ಯಲ್ಲಿ ನೋಂದಾಯಿಸಲಾದ ವರ್ಗ–I ಸಿವಿಲ್ ಗುತ್ತಿಗೆದಾರರು/ಸಂಸ್ಥೆಗಳಿಂದ ಎರಡು ಕವರ್ ಟೆಂಡರ್ ದಾಖಲೆ ವ್ಯವಸ್ಥೆಯಲ್ಲಿ ಐಟಂ ರೇಟ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಯಾವುದೇ ದಾಖಲೆಗಳನ್ನು ವೈಯಕ್ತಿಕವಾಗಿ ಸ್ವೀಕರಿಸಲಾಗುವುದಿಲ್ಲ. 2. ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಡೌನ್‌ಲೋಡ್ ಮಾಡಬೇಕು ಮತ್ತು ಸಲ್ಲಿಸಬೇಕು. 3. ಇತರ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ವೆಬ್‌ಸೈಟ್ ವಿಳಾಸ https://www.eproc.karnataka.gov.in ನಲ್ಲಿ ಪಡೆಯಬಹುದು.
II: **ಕಾಮಗಾರಿಯ ಹೆಸರು:** "ಬಳ್ಳಾರಿಯಲ್ಲಿ ಕೆಎಸ್‌ಬಿಸಿಎಲ್ ಗೋಡೌನ್ ಕಮ್ ಕಛೇರಿ ಸೌಲಭ್ಯದ ನಿರ್ಮಾಣ". **ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ):** 768.00. **ಇಎಮ್‌ಡಿ (ರೂ.):** 11,52,000/– **ಟೆಂಡರ್ ಪ್ರಕ್ರಿಯೆ ಶುಲ್ಕ (ರೂ.ಗಳಲ್ಲಿ):** (ಇ–ಪೋರ್ಟಲ್ ಪ್ರಕಾರ). **ಮುಕ್ತಾಯದ ಅವಧಿ:** 9 ತಿಂಗಳುಗಳು (ಮಾನ್ಸೂನ್ ಹೊರತುಪಡಿಸಿ).
ಕಾಮಗಾರಿಯ ವೇಳಾಪಟ್ಟಿ: 1. ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ: 13/05/2022 ಮಧ್ಯಾಹ್ನ 12.00 ಗಂಟೆಯವರೆಗೆ. **2. ಪೂರ್ವ ಬಿಡ್ ಸಭೆಯ ದಿನಾಂಕ:** 16/05/2022 ಸಂಜೆ 04.00 ಗಂಟೆಗೆ. **3. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ:** 23/05/2022 ರಿಂದ ಸಂಜೆ 04.00 ಗಂಟೆಗೆ. **4. ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:** 26/05/2022 ಸಂಜೆ 04.01 ಗಂಟೆಗೆ.

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು (ಎಫ್&ಎ)
ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
DIPR/CP/248/GREENFMC/2022-23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರರ ಕಛೇರಿ, ಕೃಭಾಜನಿನಿ, ಇಂಶಾಕಾ,
ನಿಮಪೋ, ವಿಭಾಗ ಸಂ:8,ಝಳಕಿ. ತಾ॥ ಇಂಡಿ, ಜಿ॥ ವಿಜಯಪೂರ.
ದೂರವಾಣಿ: 08422–282227 ಇ–ಮೇಲ್:eezalaki1@gmail.com
ಸಂಖ್ಯೆ: ಕೃಭಾಜನಿನಿ/ಇಂಶಾಕಾವಿ–8/ಝಳಕಿ/ಡಿಬಿ/ಟೆಂಡರ/2022–23/06
ದಿನಾಂಕ:04.04.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕೃಭಾಜನಿನಿ, ಇಂಶಾಕಾ, ನಿಮಪೋ, ವಿಭಾಗ ಸಂ: 8 ಝಳಕಿ ತಾ: ಇಂಡಿ ಇವರು ಶೇಕಡಾವಾರು ಟೆಂಡರನ್ನು ಆಹ್ವಾನಿಸಿರುತ್ತಾರೆ. ಕೆಟಿಪಿಪಿ ಕಾಯ್ದೆ ನಿಯಮ–28 ರನ್ವಯ ಒಂದು ಲಕೋಟೆ ಪದ್ಧತಿಯಡಿ ಇ.ಎಂ.ಡಿ. ಯೊಂದಿಗೆ, ಕೆ.ಪಿ.ಡಬ್ಲ್ಯೂ.ಡಿ.ದಡಿ ನೊಂದಣಿಯಾದ ಕ್ಲಾಸ–2 ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ 2021–22 ನೇ ಸಾಲಿನ 1 ಕಾಮಗಾರಿ ಇಂಡೆಂಟ್ ಸಂ: **21496** ಗೆ ರೂ : **24.26** ಲಕ್ಷಗಳ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ.
ಕಾಮಗಾರಿ ಮೊತ್ತದ ವಿವರ: ರೂ. 24.26 ಲಕ್ಷ. ಇ.ಎಂ.ಡಿ. ರೂ: 49,000/– ಟೆಂಡರಗೆ ಸಂಬಂಧಿಸಿದ ಮಾಹಿತಿಯನ್ನು ಕೆಳಕಂಡ ಕಛೇರಿಯಿಂದ ಅಥವಾ ವೆಬಸೈಟನಲ್ಲಿ http;//eproc.karnataka.gov.in ಪಡೆದುಕೊಳ್ಳಬಹುದು.
ಟೆಂಡರಿನ ವಿವಿಧ ಹಂತಗಳು: 1) ಟೆಂಡರ ಡಾಕ್ಯುಮೆಂಟನ್ನು **ಇ–ಪೋರ್ಟಲನಲ್ಲಿ ವೀಕ್ಷಿಸುವ ಮತ್ತು ಭರ್ತಿ ಮಾಡಿದ ಬಿಡನ್ನು ಸಲ್ಲಿಸುವ** ಕಾಲಾವಧಿಯು **ದಿನಾಂಕ: 22.04.2022** ರಿಂದ **28.04.2022** ರ ಸಾಯಂಕಾಲ 4.30 ಗಂಟೆಯವರೆಗೆ. 2) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **30.04.2022** ಬೆಳಗ್ಗೆ 11.00 ಗಂಟೆಗೆ. 3) ಷರತ್ತು ಬದ್ಧ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು, ಯಾವುದೇ ಕಾಮಗಾರಿ/ಗಳ ಒಪ್ಪಿಗೆ/ ತಿರಸ್ಕರಿಸುವ, ಅಥವಾ ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಅಧಿಕಾರ ಸಕ್ಷಮ ಪ್ರಾಧಿಕಾರಕ್ಕೆ ಇರುತ್ತದೆ.

ವಾಸಾಸಂಇ/ವಿಜಯಪುರ/50/ಎಂಸಿಎ/2022–23
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಕೃಭಾಜನಿನಿ, ಇಂಶಾಕಾ, ನಿಮಪೋ, ವಿಭಾಗ ಸಂ–8, ಝಳಕಿ

ವಾಣಿಜ್ಯ ತೆರಿಗೆಗಳ ಇಲಾಖೆ
ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ,
ವಾಣಿಜ್ಯ ತೆರಿಗೆಗಳ ಕಾರ್ಯಾಲಯ–1, ಗಾಂಧಿನಗರ, ಬೆಂಗಳೂರು–560 009.
ಸಂಖ್ಯೆ: ಪಿಟಿ/ಇತರೆ/2021–22 ದಿನಾಂಕ: 18–04–2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಕಾಯ್ದೆ 1976ರ ಪ್ರಕರಣ 10ರ ಅನ್ವಯ ವೃತ್ತಿ ತೆರಿಗೆ ಪಾವತಿ ಮಾಡುವ ಬಗ್ಗೆ.

1. ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಕಾಯ್ದೆ 1976ರ ಅಡಿಯಲ್ಲಿ ತೆರಿಗೆ ಪಾವತಿಸಲು ಬಾಧ್ಯಸ್ಥರಾಗಿರುವ ಎಲ್ಲಾ ವ್ಯಕ್ತಿಗಳು ನೋಂದಣಿ/ಎನ್‌ರೋಲ್‌ಮೆಂಟ್ ಪಡೆದುಕೊಂಡು ಸದರಿ ಅಧಿನಿಯಮದ ಮೇರೆಗೆ ರಿಟರ್ನ್ ಸಲ್ಲಿಸತಕ್ಕದ್ದು ಹಾಗೂ ತೆರಿಗೆ ಪಾವತಿಸತಕ್ಕದ್ದು.
2. ನೋಂದಣಿ ಪಡೆಯಲು ಬಾಧ್ಯತೆ ಹೊಂದಿರುವ ಪ್ರತಿ ಉದ್ಯೋಗದಾತ ಅಥವಾ ಎನ್‌ರೋಲ್‌ಮೆಂಟ್ ಮಾಡಿಕೊಳ್ಳಬೇಕಾದ ಉದ್ಯೋಗದಾತ/ಸ್ವಯಂ ಉದ್ಯೋಗ ನಡೆಸುವ ಪ್ರತೀ ವ್ಯಕ್ತಿಯು ತನ್ನ ವೃತ್ತಿ, ವ್ಯಾಪಾರ, ಆಜೀವಿಕೆ ಮತ್ತು ಉದ್ಯೋಗ ಪ್ರಾರಂಭಿಸಿದ **30 (ಮೂವತ್ತು)** ದಿನಗಳ ಒಳಗಾಗಿ ನೋಂದಣಿ/ಎನ್‌ರೋಲ್‌ಮೆಂಟನ್ನು ಆನ್‌ಲೈನ್ ಮುಖಾಂತರ ಪಡೆದು ತೆರಿಗೆ ಪಾವತಿಸತಕ್ಕದ್ದು.
3. ಈಗಾಗಲೇ ಎನ್‌ರೋಲ್‌ಮೆಂಟ್ ಹೊಂದಿರುವ ಉದ್ಯೋಗದಾತರು/ಸ್ವಯಂ ಉದ್ಯೋಗಸ್ಥರು **2022–2023ನೇ ಸಾಲಿನ ವೃತ್ತಿ ತೆರಿಗೆಯನ್ನು ದಿನಾಂಕ: 30–04–2022ರ ಒಳಗಾಗಿ ಪಾವತಿಸತಕ್ಕದ್ದು.**
4. ಸದರಿ ಕಾಯ್ದೆಯ ಕಲಂ 3ರಡಿ ನೋಂದಣಿ/ಎನ್‌ರೋಲ್‌ಮೆಂಟ್ ಬಾಧ್ಯತೆ ಮತ್ತು ಅದರ ಅನುಸೂಚಿಯ ಪ್ರಕಾರ ತೆರಿಗೆ ದರಗಳನ್ನು ತಿಳಿದುಕೊಳ್ಳಲು ಇಲಾಖೆಯ ವೆಬ್‌ಸೈಟ್ http://ctax.kar.nic.in ಅಥವಾ gst.kar.nic.in ಅಥವಾ http://pt.kar.nic.in ಇಲ್ಲಿಗೆ ಭೇಟಿ ನೀಡಬಹುದು.

ಸಹಿ/–
ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು.
ವಾಸಾಸಂಇ/ವಾ.ಪ್ರ/240/ಎಂಎಎ/22–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, 4 ಮತ್ತು 5ನೇ ಮಹಡಿ, 'ಈಸ್ಟ್ ವಿಂಗ್', ಖನಿಜ ಭವನ,
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560 001. ದೂರವಾಣಿ ಸಂ:080-22265383
ಫ್ಯಾಕ್ಸ್:080-22267901 ವೆಬ್‌ಸೈಟ್: www.kiadb.in
ಇ-ಮೇಲ್: ceoemkiadb@gmail.com
ಸಂ:ಕ.ಕೈ.ಪ್ರ.ಅ.ಮಂ/ಕೇ.ಕ/ಗಣಕ ಸಂ:35940/952/2022–23 ದಿನಾಂಕ:21.04.2022

ಅಧಿಸೂಚನೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಅಭಿವೃದ್ಧಿಪಡಿಸಿದ ಕೈಗಾರಿಕಾ ಪ್ರದೇಶಗಳಲ್ಲಿನ ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.

ಮಂಡಳಿಯು ಅಧಿಸೂಚನೆ ಸಂ:ಕ.ಕೈ.ಪ್ರ.ಅ.ಮಂ/ಕೇ.ಕ/ಗಣಕ ಸಂ:35940/17381/2021–22 ದಿನಾಂಕ:22–03–2022 ರ ಮೂಲಕ ಅಧಿಸೂಚನೆ ಹೊರಡಿಸಿ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಅಭಿವೃದ್ಧಿಪಡಿಸಿರುವ ಕೈಗಾರಿಕಾ ಪ್ರದೇಶಗಳಲ್ಲಿ ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಿ, ದಿನಾಂಕ:21.04.2022ರೊಳಗೆ ಅರ್ಜಿ ಸಲ್ಲಿಸಲು ತಿಳಿಸಲಾಗಿತ್ತು.
ಅರ್ಜಿ ಸಲ್ಲಿಸಲು ಈ ಹಿಂದೆ ನಿಗದಿಪಡಿಸಲಾಗಿದ್ದ ಕೊನೆಯ ದಿನಾಂಕವನ್ನು ದಿನಾಂಕ:10.05.2022 ರವರೆಗೆ ವಿಸ್ತರಿಸಲಾಗಿದೆ.
ಮೂಲ ಅಧಿಸೂಚನೆ ಸಂ:ಕ.ಕೈ.ಪ್ರ.ಅ.ಮಂ/ಕೇ.ಕ/ಗಣಕ ಸಂ:35940/17381/2021–22 ದಿನಾಂಕ:22.03.2022 ರಲ್ಲಿ ಸೂಚಿಸಿರುವ ಷರತ್ತು ಮತ್ತು ನಿಬಂಧನೆಗಳಂತೆ ಅರ್ಜಿ ಸಲ್ಲಿಸತಕ್ಕದ್ದು.
ಅರ್ಜಿದಾರರು ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ಮಂಡಳಿ ಕಛೇರಿಗಳಲ್ಲಿಯೂ ಸಹ ಸಂಪರ್ಕಿಸಬಹುದಾಗಿರುತ್ತದೆ.

ಕೆ.ಐ.ಎ.ಡಿ.ಬಿ. ಕಛೇರಿ	ದೂರವಾಣಿ ಸಂ:
ಕೇಂದ್ರ ಕಛೇರಿ, ಬೆಂಗಳೂರು	080–22265383
ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ ವಲಯ ಕಛೇರಿ, ಮೈಸೂರು	0821–2582014/ 4258831/2581802
ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ ವಲಯ ಕಛೇರಿ, ಹಾಸನ	08172–243110/ 243191 / 243658

ಅರ್ಜಿ ಶುಲ್ಕ ಸಲ್ಲಿಸದ ಹಾಗೂ ಇತರೆ ಅಪೂರ್ಣಗೊಂಡ ಅರ್ಜಿಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಹಕ್ಕು ಮಂಡಳಿಗಿರುತ್ತದೆ. ನಿವೇಶನ ಹಂಚಿಕೆಯ ವಿಷಯದಲ್ಲಿ ಮಂಡಳಿಯ ತೀರ್ಮಾನವೇ ಅಂತಿಮವಾಗಿರುತ್ತದೆ. ಹಾಗೂ ಇದಕ್ಕೆ ಎಲ್ಲಾ ಅರ್ಜಿದಾರರು ಬದ್ಧರಾಗಿರಬೇಕಾಗಿರುತ್ತದೆ.

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಮತ್ತು ಕಾರ್ಯನಿರ್ವಾಹಕ ಸದಸ್ಯರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ನಿಮಗೆ ನೀವೇ ಗುರುವಾಗಬಹುದು. ನಿಮ್ಮನ್ನು ನೀವು ಚೆನ್ನಾಗಿ ನಿಯಂತ್ರಣದಲ್ಲಿ ಇಟ್ಟುಕೊಳ್ಳುವಿರಾದರೆ, ಬೇರೆಲ್ಲೂ ಸಿಗಲಾರದಂತಹ ಗುರು ನಿಮಗೆ ದೊರಕಿದಂತೆಯೇ ಸರಿ.

–ಗೌತಮ ಬುದ್ಧ

ದೆಹಲಿ ಮತ್ತು ಇತರೆಡೆ ಹಿಂಸಾಚಾರ ಸಲ್ಲದ ನಡವಳಿಕೆ, ಮೂಡುವ ಪ್ರಶ್ನೆ

ರಾಜಧಾನಿ ದೆಹಲಿಯ ಜಹಾಂಗೀರ್‌ಪುರಿ ಪ್ರದೇಶದಲ್ಲಿ ಶನಿವಾರ ನಡೆದ ಕೋಮು ಹಿಂಸಾಚಾರ ಹಾಗೂ ನಂತರದ ಕೆಲವು ವಿದ್ಯಮಾನಗಳನ್ನು ದೇಶದ ಇತರ ಕಡೆಗಳಲ್ಲಿ ಇತ್ತೀಚಿನ ಕೆಲವು ವಾರಗಳಲ್ಲಿ ನಡೆದಿರುವ ಕೋಮು ಸಂಘರ್ಷಗಳಿಂದ ಪ್ರತ್ಯೇಕವಾಗಿಸಿ ನೋಡಲು ಆಗುವುದಿಲ್ಲ. ಈ ಎಲ್ಲ ಘಟನೆಗಳ ನಡುವೆ ಸಾಮ್ಯತೆ ಇದೆ. ಇಂತಹ ಘಟನೆಗಳ ನಂತರದಲ್ಲಿನ ಪ್ರತಿಕ್ರಿಯೆಗಳಲ್ಲಿಯೂ ಸಾಮ್ಯತೆ ಕಾಣಿಸುತ್ತಿದೆ. ಹಿಂದೂಗಳಿಗೆ ಧಾರ್ಮಿಕವಾಗಿ ಮುಖ್ಯವಾಗಿರುವ ರಾಮನವಮಿ, ಹನುಮಾನ್ ಜಯಂತಿಯಂತಹ ದಿನಗಳಂದು ಸಮಸ್ಯೆ ಸೃಷ್ಟಿಯಾಗುತ್ತದೆ. ಇಂತಹ ದಿನಗಳಂದು ಆಯೋಜಿಸುವ ಮೆರವಣಿಗೆಯು ಮಸೀದಿಗಳು ಇರುವ ರಸ್ತೆಯ ಮೂಲಕ ಅಥವಾ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಪ್ರದೇಶಗಳ ಮೂಲಕ ಸಾಗುತ್ತದೆ. ಜಹಾಂಗೀರ್‌ಪುರಿ ಹಿಂಸಾಚಾರದಲ್ಲಿಯೂ ಇದೇ ಆಗಿದೆ. ಪೊಲೀಸರಿಂದ ಅನುಮತಿಯನ್ನೇ ಪಡೆಯದೆ ಮೆರವಣಿಗೆಯು ಮಸೀದಿಯ ಪಕ್ಕದ ರಸ್ತೆಯ ಮೂಲಕ ಸಾಗಿತು. ಮೆರವಣಿಗೆಯಲ್ಲಿ ಇದ್ದವರು ಪ್ರಚೋದನಕಾರಿ ಘೋಷಣೆಗಳನ್ನು ಕೂಗಿದರು ಎಂಬ ವರದಿಗಳಿವೆ. ಈ ರೀತಿ ಘೋಷಣೆಗಳನ್ನು ಕೂಗುವುದು ಖಂಡಿತ ಸರಿಯಲ್ಲ. ಹಾಗೆಯೇ, ಮಸೀದಿಯಿಂದ ಕಲ್ಲು ಎಸೆಯುವುದು ಕೂಡ ಯಾವ ಕಾರಣಕ್ಕೂ ಒಪ್ಪುವಂಥದ್ದಲ್ಲ. ಕಲ್ಲು ತೂರಾಟದಲ್ಲಿ ಪೊಲೀಸರೂ ಸೇರಿದಂತೆ ಕೆಲವರು ಗಾಯಗೊಂಡರು.

ಜಹಾಂಗೀರ್‌ಪುರಿ ಮತ್ತು ದೇಶದ ಇತರ ಕೆಲವೆಡೆಗಳಲ್ಲಿ ಈಚೆಗೆ ನಡೆದ ಕೋಮು ಘರ್ಷಣೆಗಳು ಪೂರ್ವಯೋಜಿತ ಎಂಬಂತೆ ಕಾಣುತ್ತಿವೆ

ಈ ಘಟನೆಗೆ ಸಂಬಂಧಿಸಿದಂತೆ ಹಲವು ಪ್ರಶ್ನೆಗಳಿವೆ. ಅನುಮತಿ ಇಲ್ಲದಿದ್ದಾಗ ಮೆರವಣಿಗೆ ನಡೆಸಲು ಅವಕಾಶ ಕೊಟ್ಟಿದ್ದು ಏಕೆ? ಸಮಸ್ಯೆ ಸೃಷ್ಟಿಯಾಗಬಹುದಾದ ಪ್ರದೇಶಗಳ ಮೂಲಕ ಸಾಗಲು ಮೆರವಣಿಗೆಗೆ ಅವಕಾಶ ಕೊಟ್ಟಿದ್ದು ಹೇಗೆ? ಮೆರವಣಿಗೆಯಲ್ಲಿ ಸಾಗಿದವರು ಕೈಯಲ್ಲಿ ಆಯುಧ ಹಿಡಿದುಕೊಳ್ಳಲು ಹೇಗೆ ಸಾಧ್ಯವಾಯಿತು? ಮಸೀದಿಯ ಬಳಿಯಲ್ಲಿ ಪ್ರಚೋದನಕಾರಿಯಾಗಿ ಘೋಷಣೆ ಕೂಗಿದವರನ್ನು ಏಕೆ ನಿಯಂತ್ರಿಸಲಿಲ್ಲ? ಆರಂಭದಲ್ಲಿ ಹೇಳಿಕೆಯೊಂದರಲ್ಲಿ, ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದ ಹೆಸರನ್ನು ಉಲ್ಲೇಖಿಸಿದ್ದ ಪೊಲೀಸರು ನಂತರದಲ್ಲಿ ಆ ಹೆಸರುಗಳನ್ನು ತೆಗೆದಿದ್ದು ಏಕೆ? ಈ ಹಿಂದೆ ಹಿಂಸಾಚಾರಗಳು ನಡೆದ ಸಂದರ್ಭದಲ್ಲಿ ದೆಹಲಿ ಪೊಲೀಸರು ತೋರಿದ ನಡವಳಿಕೆಯು ಅನುಮಾನಕ್ಕೆ ಎಡೆಮಾಡಿಕೊಟ್ಟಿತ್ತು. ಹೀಗಾಗಿ ಇಂತಹ ಪ್ರಶ್ನೆಗಳು ಮುಖ್ಯವಾಗುತ್ತವೆ. ಮೆರವಣಿಗೆಯಲ್ಲಿ ಇದ್ದವರು ಪ್ರಚೋದನಕಾರಿಯಾಗಿ ಘೋಷಣೆ ಕೂಗಿದರು ಎಂಬ ಅಂಶವು ಎಫ್‌ಐಆರ್‌ನಲ್ಲಿ ಇಲ್ಲ. ಬದಲಿಗೆ, ಮೆರವಣಿಗೆಯಲ್ಲಿ ಇದ್ದವರು ಅನ್ಸಾರ್ ಮತ್ತು ಇತರ ಕೆಲವರ ಜೊತೆ ವಾದಕ್ಕೆ ಇಳಿದ ನಂತರದಲ್ಲಿ ಹಿಂಸಾಚಾರ ಶುರುವಾಯಿತು ಎಂದು ಅದರಲ್ಲಿ ಹೇಳಲಾಗಿದೆ. ಅನ್ಸಾರ್ ಯಾವ ಪಕ್ಷಕ್ಕೆ ಸೇರಿದ ವ್ಯಕ್ತಿ ಎಂಬ ವಿಚಾರವಾಗಿ ಬಿಜೆಪಿ ಹಾಗೂ ಎಎಪಿ ನಡುವೆ ಜಗಳ ಇದೆ. ಆತ ಬಿಜೆಪಿಗೆ ಸೇರಿದವ ಎಂದು ಎಎಪಿಯವರು, ಎಎಪಿ ಬೆಂಬಲಿಗ ಎಂದು ಬಿಜೆಪಿಯವರು ಸಾಬೀತು ಮಾಡಲು ಯತ್ನಿಸಿದ್ದಾರೆ.

ಜಹಾಂಗೀರ್‌ಪುರಿ ಮತ್ತು ದೇಶದ ಇತರ ಕೆಲವೆಡೆಗಳಲ್ಲಿ ಈಚೆಗೆ ನಡೆದ ಕೋಮು ಘರ್ಷಣೆಗಳು ಪೂರ್ವಯೋಜಿತ ಎಂಬಂತೆ ಕಾಣುತ್ತಿವೆ. ಅವು ಆ ಕ್ಷಣಕ್ಕೆ ಶುರುವಾದ ಗಲಾಟೆಗಳಂತೆ ಕಾಣುತ್ತಿಲ್ಲ. ಇವುಗಳ ಹಿಂದೆ ರಾಜಕೀಯ ಉದ್ದೇಶವಿದೆ. ಇಂತಹ ಘಟನೆಗಳಿಗೆ ಅಲ್ಪಸಂಖ್ಯಾತ ಸಮುದಾಯದವರು ಪ್ರತಿಕ್ರಿಯಿಸಬೇಕಾದ ಸಂದರ್ಭವನ್ನು ಸೃಷ್ಟಿಸಲಾಗುತ್ತದೆ. ಅವರು ಕಲ್ಲು ಎಸೆದು, ಗಲಭೆಕೋರರಾಗುವಂತೆ ಮಾಡಲಾಗುತ್ತದೆ. ಬಹುತೇಕ ಪ್ರಕರಣಗಳಲ್ಲಿ ಪೊಲೀಸರಿಂದ ಅಥವಾ ಇತರ ಪ್ರಾಧಿಕಾರಗಳಿಂದ ನ್ಯಾಯ ಸಿಗುವುದಿಲ್ಲ. ಹಿಂಸಾಚಾರ ನಡೆದ ಜಹಾಂಗೀರ್‌ಪುರಿ ಪ್ರದೇಶದಲ್ಲಿ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಅಲ್ಲಿ ಬುಧವಾರ ಅಕ್ರಮ ಕಟ್ಟಡಗಳ ತೆರವು ಕಾರ್ಯಾಚರಣೆ ನಡೆಸಲಾಗಿದೆ. ಕಾರ್ಯಾಚರಣೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದ ನಂತರವೂ 90 ನಿಮಿಷಗಳವರೆಗೆ ತೆರವು ಕಾರ್ಯ ನಿಂತಿರಲಿಲ್ಲ ಎಂದು ವರದಿಗಳು ಹೇಳುತ್ತಿವೆ. ಅಕ್ರಮ ಕಟ್ಟಡಗಳನ್ನು ಇಷ್ಟು ದಿನಗಳ ಕಾಲ ಏಕೆ ತೆರವು ಮಾಡಿರಲಿಲ್ಲ? ಜಹಾಂಗೀರ್‌ಪುರಿ ಗಲಭೆಯಲ್ಲಿ ಪಾಲ್ಗೊಂಡಿದ್ದ ಸಮಾಜಘಾತುಕರು ನಡೆಸಿದ ಒತ್ತುವರಿಗಳನ್ನು ಪತ್ತೆ ಮಾಡಿ, ಅವುಗಳನ್ನು ಧ್ವಂಸಗೊಳಿಸಿ ಎಂದು ಬಿಜೆಪಿ ನಾಯಕರಿಂದ ಪತ್ರ ಬರುವುದಕ್ಕೂ ಒತ್ತುವರಿ ತೆರವು ಕಾರ್ಯಾಚರಣೆಗೂ ಸಂಬಂಧ ಇದೆಯೇ? ಅಥವಾ ಎಲ್ಲ ಒತ್ತುವರಿಗಳನ್ನೂ ದೆಹಲಿಯ ಸ್ಥಳೀಯ ಆಡಳಿತವು ಮುತುವರ್ಜಿಯಿಂದ ತೆರವು ಮಾಡಲಿದೆಯೇ? ಗಲಭೆಗಳಲ್ಲಿ ಭಾಗಿಯಾದವರ ವಿರುದ್ಧ ಕ್ರಮ ಜರುಗಿಸಲು ನಿರ್ದಿಷ್ಟ ಕಾನೂನು ಇದೆ. ಅವರ ಮನೆ, ಸ್ವತ್ತು ಉರುಳಿಸುವ ಅವಕಾಶ ಕಾನೂನಿನಲ್ಲಿ ಇಲ್ಲ. ಹೀಗಿರುವಾಗ, ಕಾನೂನಿಗೆ ಅನುಗುಣವಾಗಿ ನಡೆದುಕೊಂಡು ಸಾರ್ವಜನಿಕರಿಗೆ ಮೇಲ್ಪಂಕ್ತಿ ಹಾಕಿಕೊಡಬೇಕಿದ್ದ ರಾಜಕೀಯ ಮುಖಂಡರು ಈ ಬಗೆಯ ಪತ್ರ ಬರೆಯುವುದು ಹೇಗೆ ಸರಿ? ಇಷ್ಟೆಲ್ಲ ಆಗುತ್ತಿದ್ದರೂ ಪ್ರಧಾನಿಯವರು ಏಕೆ ಮೌನವಾಗಿ ಇದ್ದಾರೆ?

ದಿನದ ಟ್ವೀಟ್

ಎಷ್ಟು ಕಾಲ ಬೇಕು?

ಅಮಿತಾಭ್ ಬಚ್ಚನ್ ಅವರು ಪಾನ್ ಮಸಾಲಾ ಬ್ರ್ಯಾಂಡ್ ಒಂದರ ಜೊತೆಗಿನ ಒಪ್ಪಂದ ರದ್ದು ಮಾಡಿ, ಕ್ಷಮೆ ಯಾಚಿಸಿ ಆರು ತಿಂಗಳಿಗೂ ಹೆಚ್ಚು ಸಮಯ ಆಗಿದೆ. ಆದರೆ ಟಿ.ವಿ.ಗಳಲ್ಲಿ ಈಗಲೂ ಅವರು ಇರುವ ಜಾಹೀರಾತು ಪ್ರಸಾರವಾಗುತ್ತಿದೆ. ಅಕ್ಷಯ್ ಕುಮಾರ್ ಅವರ ಕ್ಷಮಾಪಣೆಯು ಕಾರ್ಯರೂಪಕ್ಕೆ ಬರಲು ಎಷ್ಟು ಕಾಲ ಬೇಕಾಗುತ್ತದೆ ಎಂಬುದನ್ನು ನೋಡೋಣ.

ಧ್ರುವ ರಾಠೀ, ವಿಶ್ಲೇಷಕ

ಕಿಡಿನುಡಿ

ಅಧಿಕಾರದ ಮದ. ಹದಗೆಟ್ಟ ರಸ್ತೆಗಳ ಬಗ್ಗೆ ಪ್ರಶ್ನೆ ಮಾಡಿದ ಯುವಕನಿಗೆ ಪಾವಗಡದ ಕಾಂಗ್ರೆಸ್ ಶಾಸಕ ವೆಂಕಟರಮಣಪ್ಪ ಕಪಾಳಮೋಕ್ಷ ಮಾಡಿದ್ದಾರೆ. ಚುನಾವಣೆಯ ಸಮಯದಲ್ಲಿ ಮತದಾರರು ಈ ಕಪಾಳ ಮೋಕ್ಷವನ್ನು ಹಿಂದಿರುಗಿಸಲು ಮರೆಯಬಾರದು.

ಗೌತಮ್ ಮಾಚಯ್ಯ, ಪತ್ರಕರ್ತ

25 ವರ್ಷಗಳ ಹಿಂದೆ

ಮಂಗಳವಾರ, 22-4-1997

• **34 ಸದಸ್ಯರ ಗುಜ್ರಾಲ್ ಸಂಪುಟ ಅಸ್ತಿತ್ವಕ್ಕೆ**

ನವದೆಹಲಿ, ಏ. 21– ಭಾರತದ ಹನ್ನೆರಡನೆಯ ಪ್ರಧಾನ ಮಂತ್ರಿಯಾಗಿ ಇಂದ್ರಕುಮಾರ್ ಗುಜ್ರಾಲ್ ಅವರು ಇಂದು ಪ್ರಮಾಣ ವಚನ ಸ್ವೀಕರಿಸುವುದರೊಂದಿಗೆ ಸಂಯುಕ್ತರಂಗದ ನೂತನ ಸಚಿವ ಸಂಪುಟ ಇಂದು ವಿಧ್ಯುಕ್ತವಾಗಿ ಅಸ್ತಿತ್ವಕ್ಕೆ ಬಂದಿತು. ರಾಷ್ಟ್ರಪತಿ ಅವರ ಆದೇಶದಂತೆ ಪ್ರಧಾನಿ ಗುಜ್ರಾಲ್ ಅವರು ನಾಳೆಯೇ ಲೋಕಸಭೆಯಲ್ಲಿ ವಿಶ್ವಾಸಮತ ಯಾಚಿಸಲಿದ್ದಾರೆ.

ಪ್ರಧಾನಿ ಗುಜ್ರಾಲ್ ಅವರೊಂದಿಗೆ 33 ಸಚಿವರು ಪ್ರಮಾಣವಚನ ಸ್ವೀಕರಿಸಿದರು. ಎಚ್.ಡಿ. ದೇವೇಗೌಡ ಸಂಪುಟದಲ್ಲಿದ್ದ ಬಹುತೇಕ ಎಲ್ಲ ಸಚಿವರು ಮುಂದುವರಿದಿದ್ದಾರೆ. ಕರ್ನಾಟಕದ ಎಸ್.ಆರ್. ಬೊಮ್ಮಾಯಿ, ಆರ್.ಎಲ್. ಜಾಲಪ್ಪ ಮತ್ತು ಸಿ.ಎಂ. ಇಬ್ರಾಹಿಂ ಅವರು ಸಂಪುಟದಲ್ಲಿ ಇದ್ದು, ಅದೇ ಖಾತೆಗಳನ್ನು ಹೊಂದಿದ್ದಾರೆ.

• **ವಿಷಾದವಿಲ್ಲ: ದೇವೇಗೌಡ**

ನವದೆಹಲಿ, ಏ. 21 (ಪಿಟಿಐ, ಯುಎನ್‌ಐ)– ‘ನನಗೆ ವಿಷಾದವಿಲ್ಲ, ಯಾವುದೇ ರೀತಿಯ ಆಶಾಭಂಗವಾಗಿಲ್ಲ. ನನಗೆ ಯಾರ ವಿರುದ್ಧವೂ ದ್ವೇಷವಿಲ್ಲ’ ಇದು ಇಂದು ಪ್ರಧಾನಿ ಪದವಿಯಿಂದ ಬಿಡುಗಡೆ ಹೊಂದಿದ ಎಚ್.ಡಿ. ದೇವೇಗೌಡ ಅವರು ರಾಷ್ಟ್ರವನ್ನುದ್ದೇಶಿಸಿ ಬಾನುಲಿ ಮತ್ತು ದೂರದರ್ಶನಗಳಲ್ಲಿ ಮಾಡಿದ ಪ್ರಸಾರ ಭಾಷಣದಲ್ಲಿ ತಿಳಿಸಿದ ಮಾತುಗಳು.

50 ವರ್ಷಗಳ ಹಿಂದೆ

ಶನಿವಾರ, 22-4-1972

• **ಅಪೊಲೋ–16ರ ಗಗನಯಾತ್ರಿಗಳಿಂದ ಯಶಸ್ವೀ ಚಂದ್ರಸ್ಪರ್ಶ**

ಬಾಹ್ಯಾಕಾಶ ಕೇಂದ್ರ, ಏ. 21– ಅಪೊಲೋ–16ರ ಮಾತೃನೌಕೆಯು ಪ್ರಧಾನ ಎಂಜಿನ್‌ನಲ್ಲಿ ಉಂಟಾದ ತೊಂದರೆ ಫಲವಾಗಿ ತಲೆದೋರಿದ್ದ ಶಂಕೆ, ಆತಂಕಗಳ ಬಳಿಕ ಸುಮಾರು ಆರು ಗಂಟೆ ತಡವಾಗಿ ಇಂದು ಬೆಳಿಗ್ಗೆ 8 ಗಂಟೆ ಸುಮಾರಿನಲ್ಲಿ ಅಮೆರಿಕದ ಇಬ್ಬರು ಗಗನಯಾತ್ರಿಗಳು ಸುರಕ್ಷಿತವಾಗಿ ಚಂದ್ರನಲ್ಲಿ ಇಳಿದರು.

‘ಓರಿಯನ್’ ಚಂದ್ರನೌಕೆಯನ್ನು ಪೂರ್ವ ನಿರ್ಧರಿತ ಪಥಕ್ಕೆ ಬದಲಾಗಿ ಬೇರೊಂದು ಪಥದಿಂದ ಹೊರಟು ಚಂದ್ರನ ಪರ್ವತದ ಮೇಲೆ ಗಗನಯಾತ್ರಿಗಳಾದ ಚಾರ್ಲ್ಸ್ ಡ್ಯೂಕ್-ಜೂನಿಯರ್ ಹಾಗೂ ಜಾನ್ ಯಂಗ್ ಅವರು ಸುರಕ್ಷಿತವಾಗಿ ಇಳಿಸಿದರು. ಅವರಿಬ್ಬರು ಚಂದ್ರನಲ್ಲಿಳಿದ 9 ಮತ್ತು 10 ನೇ ಮಾನವರಾಗಿದ್ದಾರೆ. ಆದರೆ, ಚಂದ್ರನ ಪರ್ವತ ಪ್ರದೇಶದಲ್ಲಿಳಿದ ಪ್ರಥಮ ಮಾನವರು.

• **ಪರಿಸ್ಥಿತಿಯ ಸುಧಾರಣೆಗೆ ನೆರವಾಗಿ: ಮನ್ನಣೆ ಪಡೆದ ಸಂಸ್ಥೆಗಳಿಗೆ ಅರಸು ಕರೆ**

ಬೆಂಗಳೂರು, ಏ. 21– ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರ ನೀಡುವ ಹಣದ ದುರುಪಯೋಗ ಹಾಗೂ ನೌಕರರಿಗೆ ಪರಮಾವಧಿ ಮೋಸವಾಗುತ್ತಿರುವ ಪರಿಸ್ಥಿತಿಯನ್ನು ಸರಿಪಡಿಸಲು ನೆರವಾಗಬೇಕೆಂದು ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರು ಇಂದು ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಗಳ ಮಂಡಳಿಗೆ ಮನವಿ ಮಾಡಿದರು.

ನಮ್ಮ ಭೂಪಾರಂಪರಿಕ ತಾಣಗಳನ್ನು ರಕ್ಷಿಸಬೇಕಾದ ತುರ್ತು ಅಗತ್ಯ ಇದೆ

ಭೂರಮೆಯ ಚಿತ್ತಾರ ರಕ್ಷಿಸೋಣ ಬನ್ನಿ

ವಿಶ್ಲೇಷಣೆ

ಡಾ. ಬಿ.ಸಿ.ಪ್ರಭಾಕರ್
ಡಾ. ಕೆ.ಎನ್.ರಾಧಿಕಾ

ಇಂದು ಭೂದಿನ. ಗಾಳಿ, ನೀರು ಮತ್ತು ಮಣ್ಣಿನ ಮಹತ್ವವನ್ನು ಅರಿಯಬೇಕಾದ ದಿನ. ಮನುಷ್ಯನ ಚಿಂತನೆಗಳಿಗೆ, ಅನೇಕ ಪ್ರೇರಣೆಗಳಿಗೆ ಮತ್ತು ಕಲೆಯ ಆಸ್ವಾದನೆಗೆ ನಿಸರ್ಗ ಶಿಲಾ ವೈವಿಧ್ಯಗಳು ಕಾರಣವಾಗಿವೆ. ಹಾಗೆ ನೋಡಿದರೆ ಆದಿಮಾನವನಿಂದ ಆಧುನಿಕ ಮಾನವನವರೆಗೆ ಅವನು ವಿಕಾಸಗೊಂಡಿರುವುದಕ್ಕೆ ಅಸಂಖ್ಯ ಭೂಕ್ರಿಯೆಗಳು ಮತ್ತು ಭೂಪ್ರದೇಶಗಳೇ ಕಾರಣ. ಈ ಎಲ್ಲಾ ಭೂಪ್ರದೇಶಗಳನ್ನು ಕಾಪಾಡಿಕೊಳ್ಳುವ ಬಗ್ಗೆ ಇಂದು ಜಾಗೃತಿ ಮೂಡಿದೆ.

ಯುನೆಸ್ಕೊ ಅಡಿಯಲ್ಲಿ ಈವರೆಗೆ ಒಟ್ಟು 44 ಸದಸ್ಯ ದೇಶಗಳಲ್ಲಿ 161 ಭೂವನಗಳನ್ನು ಗುರುತಿಸಿ ಅಭಿವೃದ್ಧಿಪಡಿಸಲಾಗಿದ್ದು, ಅವು ಪ್ರವಾಸಿಗರ ಆಕರ್ಷಣೆಯ ಕೇಂದ್ರಗಳಾಗಿವೆ.

ಭಾರತದಲ್ಲಿ ಹಲವಾರು ಭೂಪಾರಂಪರಿಕ ತಾಣಗಳನ್ನು ಗುರುತಿಸಲಾಗಿದ್ದರೂ, ಒಂದೇ ಒಂದು ಭೂವನವನ್ನೂ ಗುರುತಿಸಿಲ್ಲ. ಕೊರಿಯಾ, ಜಪಾನ್‌ನಂತಹ ಸಣ್ಣ ದೇಶಗಳೂ ತಮ್ಮ ಭೂವನಗಳನ್ನು ಅಭಿವೃದ್ಧಿಪಡಿಸಿ ಪ್ರವಾಸಿ ಆಕರ್ಷಣೆಯ ತಾಣಗಳನ್ನಾಗಿಸಿವೆ. ನಮ್ಮಲ್ಲಿ ಭೂಸರ್ವೇಕ್ಷಣಾ ಇಲಾಖೆಯ ಪ್ರಯತ್ನದಿಂದ ಇದುವರೆಗೆ ಕೇವಲ 34 ಭೂಪಾರಂಪರಿಕ ಜಾಗಗಳನ್ನು ಗುರುತಿಸಲಾಗಿದ್ದರೂ ಅವುಗಳ ನಿರ್ವಹಣೆಗೆ ಸರ್ಕಾರಗಳು ಸೂಕ್ತ ಕ್ರಮ ಕೈಗೊಂಡಿಲ್ಲ. ದೇಶದ ಭೂವೈಶಾಲ್ಯವನ್ನು ಗಮನಿಸಿದಾಗ, ಇವುಗಳ ಸಂಖ್ಯೆ ಏನೇನೂ ಅಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಕರ್ನಾಟಕದಲ್ಲಿ ಸುಮಾರು 400 ಕೋಟಿ ವರ್ಷಗಳ ಹಿಂದಿನ ಶಿಲಾ ಸಮೂಹಗಳಿಂದ ಹಿಡಿದು ಸುಮಾರು 6 ಕೋಟಿ ವರ್ಷಗಳ ಹಿಂದಷ್ಟೇ ಉಂಟಾದ ಬೆಸಾಲ್ಟ್‌ಗಳೂ ಇವೆ. ಅಷ್ಟೇ ಅಲ್ಲದೆ ವೈವಿಧ್ಯಮಯ ಶಿಲೆಗಳು, ಅವುಗಳ ಮೇಲ್ಮೈಯಲ್ಲಿ ಉಂಟಾದ ವಿಶಿಷ್ಟ ರಚನೆಗಳು, ಅನೇಕ ಬಗೆಯ ಶಿಲಾ ಚಿತ್ತಾರಗಳು ಹಾಗೂ ಜೀವ ವಿಕಸನದ ಆರಂಭದಲ್ಲಿ ಉದ್ಭವವಾದ ಸ್ಟ್ರೊಮ್ಯಾಟೊಲೈಟ್ ಎಂಬ ಪಳೆಯುಳಿಕೆಗಳು ಇಲ್ಲಿವೆ. ಆದರೆ ಇದುವರೆಗೆ ಕೇವಲ ನಾಲ್ಕು ತಾಣಗಳನ್ನು, ಅಂದರೆ ಲಾಲ್‌ಬಾಗಿನ ಪೆನೆನ್ಸುಲಾರ್ ನೈಸ್, ಮರಡಿಹಳ್ಳಿಯ ಪಿಲ್ಲೋ ಲಾವಾಗಳು, ಸೇಂಟ್ ಮೇರಿ ದ್ವೀಪದ ಕಂಬಾಕೃತಿಯ ಬೆಸಾಲ್ಟ್ ಶಿಲೆಗಳು ಮತ್ತು ಕೆಜಿಎಫ್ ಬಳಿಯ ಪೈರೋಕ್ಲಾಸ್ಟಿಕ್ ಲಾವಾ ಶಿಲೆಗಳನ್ನು ಗುರುತಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಭೂಪರಂಪರೆಯ ತಾಣಗಳೆಂದು ರಾಜ್ಯದಲ್ಲಿ ಘೋಷಿಸಿ ಅಭಿವೃದ್ಧಿಪಡಿಸಬಹುದಾದ ಕೆಲವು ವಿಶಿಷ್ಟ ತಾಣಗಳನ್ನು ಹೀಗೆ ಗುರುತಿಸಬಹುದಾಗಿದೆ:

- ಸಂಡೂರಿನ ಕಂಗೊಳಿಸುವ ಕಾಡುಗಳು, ಗಿರಿ ಶಿಖರಗಳು, ಸಿಹಿನೀರ ಬುಗ್ಗೆಗಳು, ನದಿಗಳು ನಯನ ಮನೋಹರವಾದವು. ಆದ್ದರಿಂದಲೇ ಈ ತಾಣವನ್ನು ‘ಬಳ್ಳಾರಿಯ ಕಾಶ್ಮೀರ’ ಎಂದು ಕರೆಯುತ್ತಾರೆ. ಸಂಡೂರಿನಿಂದ 5 ಕಿ.ಮೀ. ದೂರದಲ್ಲಿರುವ ಭೀಮನ ಗಂಡಿ ಕಂದರದ ಮೂಲಕ ಹರಿಯುವ ಝರಿಯು ಮುಂದೆ ಸಾಗಿ ನಾರಿಹಳ್ಳವನ್ನು ಸೇರಿ ಮತ್ತೊಂದು ನಯನ ಮನೋಹರವಾದ ಕಣಿವೆ ಸೃಷ್ಟಿಯಾಗಿದೆ. ಇಲ್ಲಿ ಒಂದು ಸಣ್ಣ ಅಣೆಕಟ್ಟನ್ನು ಕೂಡಾ ನಿರ್ಮಿಸಿದ್ದು ಅದರ ಹಿನ್ನೀರಿನಲ್ಲಿ ಈ ಕಣಿವೆ ಸುಂದರವಾಗಿ ಕಾಣುತ್ತದೆ. ಪ್ರವಾಸಕ್ಕೆ ಮತ್ತು ಭೂವಿಜ್ಞಾನ ವಿದ್ಯಾರ್ಥಿಗಳ ಅಧ್ಯಯನಕ್ಕೆ ಇವು ಹೇಳಿ ಮಾಡಿಸಿದ ತಾಣಗಳಾಗಿವೆ. ವ್ಯಾಪಕ ಗಣಿಗಾರಿಕೆಯಲ್ಲಿ ತೊಡಗಿರುವ ಅನೇಕರಿಗೆ ಈ ಸ್ಥಳಗಳ ಮಹತ್ವದ ಅರಿವಿಲ್ಲದ ಕಾರಣ, ಅವುಗಳನ್ನು ತುರ್ತಾಗಿ ಸಂರಕ್ಷಿಸಬೇಕಾಗಿದೆ.
- ರಾಮನಗರದ ಗ್ರಾನೈಟ್ ಶೃಂಗಗಳ ಬೃಹತ್ ಗಾತ್ರ, ಕಡಿಬಂಡೆಗಳು, ಗೋಲಾಕೃತಿಯ ಆಕಾರಗಳು, ಕಡಿದಾದ ಇಳಿಜಾರುಗಳು ನೋಡುಗರನ್ನು ವಿಸ್ಮಯಗೊಳಿಸುತ್ತವೆ. ಈ ಶೃಂಗಶ್ರೇಣಿಯ ಅನೇಕ ಸ್ಥಳಗಳಲ್ಲಿ ಗುಡಿಗೋಪುರಗಳು, ಕೋಟೆ ಕೊತ್ತಲಗಳು ಇವೆ. ಇತ್ತೀಚಿನ ವರ್ಷಗಳಲ್ಲಿ ಟ್ರೆಕ್ಕಿಂಗ್‌ಗಾಗಿಯೂ ಈ ಶಿಖರಗಳು ಆಕರ್ಷಣೆಯ ಕೇಂದ್ರಗಳಾಗಿವೆ. ರಾಮನಗರದ ಸುತ್ತಮುತ್ತ ಈ ಶಿಲಾಸಮೂಹವು ಸುಮಾರು 50 ಚದರ ಕಿ.ಮೀ.ನಷ್ಟು ವ್ಯಾಪಿಸಿದೆ. ಬೆಂಗಳೂರು–ಮೈಸೂರು ನಡುವಿನ ಪ್ರದೇಶ ಬಹಳ ವೇಗವಾಗಿ ನಗರೀಕರಣಗೊಳ್ಳುತ್ತಿದ್ದು ಅಭಿವೃದ್ಧಿಯ ಹೆಸರಲ್ಲಿ ನಿಸರ್ಗ ಸಂಪತ್ತು ನಾಶವಾಗುತ್ತಿದೆ. ಗ್ರಾನೈಟ್ ಬಂಡೆಗಳಂತೂ ಕ್ರಶರ್‌ಗಳಿಗೆ ಸಿಲುಕಿ ಪುಡಿಪುಡಿಯಾಗುತ್ತಿವೆ. ಇಂತಹ ಚಟುವಟಿಕೆಗಳಿಂದ ರಾಮನಗರದ ಶೃಂಗಗಳನ್ನು ರಕ್ಷಿಸದಿದ್ದರೆ ನಮ್ಮ ಭವ್ಯ ನಿಸರ್ಗ ಪರಂಪರೆಯನ್ನು ಕಳೆದುಕೊಳ್ಳುತ್ತೇವೆ.
- ರಾಯಚೂರು ಜಿಲ್ಲೆಯ ಲಿಂಗಸುಗೂರಿನಿಂದ ತಾವರಗೇರಕ್ಕೆ ಹೋಗುವ ರಸ್ತೆಯ ಮಾರ್ಗದಲ್ಲಿ ಚಿತ್ತಾಕಾರದ ಬಂಡೆಗಳಿವೆ. ಅವು ಕೋಟ್ಯಂತರ ವರ್ಷಗಳ ಸವಕಳಿಯಿಂದ ಅನೇಕ ರೂಪಗಳನ್ನು ಪಡೆದುಕೊಂಡು ನೋಡುಗರನ್ನು ಚಕಿತಗೊಳಿಸುತ್ತವೆ. ಸುಮಾರು ಹತ್ತು ಚದರ ಕಿ.ಮೀ. ಪ್ರದೇಶದಲ್ಲಿ ಇವು ಹರಡಿವೆ. ಈ ತಾಣದ ಪ್ರಾಮುಖ್ಯತೆ ತಿಳಿಯದ ಅನೇಕ ಸ್ಥಳೀಯರು ಇವುಗಳನ್ನು ಮನೆಯ ಕಟ್ಟಡಕ್ಕೋ ರಸ್ತೆಗೆ ಜಲ್ಲಿಗಾಗಿಯೋ ಒಡೆದು ಹಾಳು ಮಾಡುತ್ತಿದ್ದಾರೆ. ಇವುಗಳನ್ನು ರಕ್ಷಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.
- ಸ್ಪಿನಿಫೆಕ್ಸ್ ಟೆಕ್ಸ್‌ಚರ್ ಎನ್ನುವುದು ಅತ್ಯಂತ ಪುರಾತನ ಶಿಲೆಗಳಲ್ಲಿ ಮಾತ್ರ ಕಂಡುಬರುವ ಒಂದು ರೀತಿಯ ಶಿಲಾ ವಿನ್ಯಾಸ. ಇಂತಹ ವಿಶಿಷ್ಟ ಶಿಲೆಗಳು ತುಮಕೂರು ಜಿಲ್ಲೆಯ ಬಾಣಸಂದ್ರದ ಹತ್ತಿರ ಮತ್ತು ಚಿತ್ರದುರ್ಗ ಜಿಲ್ಲೆಯ ಗಟ್ಟಿಹೊಸಹಳ್ಳಿ ಎಂಬಲ್ಲಿ ಕಂಡುಬಂದಿವೆ. ಈ ಅಮೂಲ್ಯ ಶಿಲೆಗಳ ಬಗ್ಗೆ ಅರಿವಿಲ್ಲದ ಜನರು ಅನೇಕ ಕಡೆ ಅವುಗಳನ್ನು ಒಡೆದುಹಾಕಿ ಹಾಳುಮಾಡಿದ್ದಾರೆ. ಅಳಿದುಳಿದವುಗಳನ್ನಾದರೂ ರಕ್ಷಿಸಿಕೊಳ್ಳಬೇಕಾಗಿದೆ. ಸ್ಥಳೀಯರಿಗೆ ಇವುಗಳ ಬಗ್ಗೆ ಜಾಗೃತಿ ಮೂಡಿಸುವುದೂ ಅಷ್ಟೇ ಮುಖ್ಯ.
- ಭೂಮಿಯ ಮೇಲಿನ ಜೀವ ವಿಕಾಸದ ಅನೇಕ ಕುರುಹುಗಳಲ್ಲಿ ಚಿತ್ರದುರ್ಗದ ಹಸಿರುಬೆಟ್ಟ ಶ್ರೇಣಿಯ ಸ್ಟ್ರೊಮ್ಯಾಟೊಲೈಟ್‌ಗಳು ಅಥವಾ ಪಳೆಯುಳಿಕೆಗಳು ಸೇರಿವೆ. ಚಿತ್ರದುರ್ಗದ ಕೊಂಡ್ಲಿ ಕ್ರಾಸ್‌ನಿಂದ ಸುಮಾರು 8 ಕಿ.ಮೀ. ದೂರದಲ್ಲಿರುವ ಓಬಳಾಪುರದ ಬಳಿ ಸುಣ್ಣದಕಲ್ಲು ನಿಕ್ಷೇಪಗಳಿರುವ ಪ್ರದೇಶದಲ್ಲಿ ಇವು ಕಂಡುಬಂದಿವೆ. ಸುಮಾರು ಒಂದು ಚದರ ಕಿ.ಮೀ. ವ್ಯಾಪ್ತಿಯಲ್ಲಿ ಹರಡಿರುವ ಇವು ಸಿಲಿಕಾನ್ ಬೆರೆತ ಸುಣ್ಣದಕಲ್ಲಿನಲ್ಲಿ ಹರಡಿಕೊಂಡಿದ್ದು ವಿವಿಧ ವಿನ್ಯಾಸಗಳನ್ನು ಕಾಣಬಹುದಾಗಿದೆ. ಈಗಾಗಲೇ ಇಲ್ಲಿ ಸುಣ್ಣದ ಕಲ್ಲಿಗಾಗಿ ಗಣಿಗಾರಿಕೆ ನಡೆಯುತ್ತಿದೆ. ಈ ಪಳೆಯುಳಿಕೆಗಳ ಮಹತ್ವ ತಿಳಿಯದ ಕೆಲಸಗಾರರು ಇವುಗಳನ್ನು ಒಡೆದುಹಾಕುವ ಅಪಾಯವಿದೆ.



ರಾಜ್ಯದಾದ್ಯಂತ ಇಂತಹ ಅನೇಕ ತಾಣಗಳಿದ್ದು, ತುರ್ತಾಗಿ ಅವುಗಳ ರಕ್ಷಣೆಗೆ ಮುಂದಾಗದಿದ್ದರೆ ಅವುಗಳನ್ನು ಶಾಶ್ವತವಾಗಿ ಕಳೆದುಕೊಳ್ಳಬೇಕಾಗಬಹುದು. ದೇಶದ ಭೂಪಾರಂಪರಿಕ ತಾಣಗಳನ್ನು ಗುರುತಿಸಿ ಘೋಷಿಸುವ ಹೊಣೆ ಭೂಸರ್ವೇಕ್ಷಣಾ ಇಲಾಖೆಯದು. ಆದರೆ ಅಗಾಧ ಕಾರ್ಯಬಾಹುಳ್ಯದ ದೆಸೆಯಿಂದ ಅದು ಈ ವಿಷಯಕ್ಕೆ ಹೆಚ್ಚು ಒತ್ತು ಕೊಟ್ಟಂತೆ ಕಾಣುತ್ತಿಲ್ಲ. ಆದ್ದರಿಂದ ಈ ಇಲಾಖೆಯ ಜೊತೆಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಶೈಕ್ಷಣಿಕ ಸಂಸ್ಥೆಗಳ ಭೂವಿಜ್ಞಾನ ವಿಭಾಗಗಳು, ಗಣಿ ಕಂಪನಿಗಳು ಸೇರಿದಂತೆ ಭೂವಿಜ್ಞಾನದಲ್ಲಿ ಆಸಕ್ತಿ ಹೊಂದಿರುವ ಎಲ್ಲರೂ ಕೈಜೋಡಿಸಬೇಕಾಗುತ್ತದೆ.

ಹಿಂದೆಲ್ಲ ವರ್ಷಕ್ಕೋ ಎರಡು ವರ್ಷಕ್ಕೋ ಪ್ರವಾಸ ಹೋಗುತ್ತಿದ್ದ ಭಾರತೀಯ ಕುಟುಂಬಗಳು ಇಂದು ವಾರಾಂತ್ಯದ ಪ್ರವಾಸ ಸಂಸ್ಕೃತಿಗೆ ಬದಲಾಗುತ್ತಿವೆ. ನಿಸರ್ಗವನ್ನು ಅನ್ವೇಷಿಸುವ ಕುತೂಹಲ ಯುವಜನರಲ್ಲಿ ಹೆಚ್ಚಾಗುತ್ತಿದೆ. ಈ ಬದಲಾವಣೆಯನ್ನು ಈಗ ಭೂವಿಜ್ಞಾನಿಗಳು ಉಪಯೋಗಿಸಿಕೊಂಡು, ಹೆಚ್ಚುಹೆಚ್ಚು ಪ್ರವಾಸಿಗರನ್ನು ಭೂಪಾರಂಪರಿಕ ತಾಣಗಳತ್ತ ಸೆಳೆಯುವಂತೆ ಮಾಡಿದರೆ, ನಿಸರ್ಗದ ಕೌತುಕಗಳನ್ನು ಸಾಮಾನ್ಯ ಜನರೂ ಆಸ್ವಾದಿಸಿದಂತೆ ಆಗುತ್ತದೆ, ಈ ಸ್ಥಳಗಳ ಸಂರಕ್ಷಣೆಯೂ ಆಗುತ್ತದೆ.

ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿಯ ಗುರಿಗಳಲ್ಲಿ, ಭೂಪಾರಂಪರಿಕ ತಾಣಗಳನ್ನು ಸಂರಕ್ಷಿಸುವ ಉದ್ದೇಶವೂ ಸೇರಿದೆ. ಹೇಗೆ ಅನೇಕ ಭೂಕ್ರಿಯೆಗಳು ಮನುಷ್ಯನ ಮತ್ತು ಅಸಂಖ್ಯ ಜೀವರಾಶಿಯ ಅಸ್ತಿತ್ವಕ್ಕೆ ಕಾರಣವಾಗಿ, ಭೂಮಿಯ 450 ಕೋಟಿ ವರ್ಷಗಳ ಇತಿಹಾಸವನ್ನು ಬಿಂಬಿಸುತ್ತವೆ ಎಂಬುದನ್ನು ಸಾರಲು ಇವು ಬಹಳ ಮುಖ್ಯ. ಆದ್ದರಿಂದ ಇವು ಸ್ಥಳೀಯವಾಗಿ ಅಥವಾ ದೇಶಕ್ಕಷ್ಟೇ ಅಲ್ಲದೆ ವಿಶ್ವದ ಸೀಮಾತೀತ ಭೂಪಾರಂಪರಿಕ ತಾಣಗಳೂ ಹೌದು.

ಲೇಖಕರು: ಭೂವಿಜ್ಞಾನಿಗಳು

ಚುರುಮುರಿ

ಶಕ್ತಿ ಪ್ರದರ್ಶನ!

• ಬಿ.ಎನ್. ಮಲ್ಲೇಶ್

ಬೆಂಗ್ಳೂರು ಹೆಂಗೈತಿ ಸಾಯದ್ರಗೆ ಒಂದ್ಸತಿ ನೋಡ್ಬೇಕು ಅಂತ ಬಾಳ ದಿವ್ಸದಿಂದ ತೆಲಿ ತಿಂತಿದ್ದ ತಿಪ್ಪಜ್ಜಿಯನ್ನು ಕೊನಿಗೂ ಬೆಂಗ್ಳೂರಿಗೆ ಕರ್ಕಂಡ್ ಬಂದ ಪತ್ರಕರ್ತ ತೆಪರೇಸಿ, ಆಟೊ ಹತ್ತಿ ಮನಿ ಅಡ್ರೆಸ್ ಹೇಳಿದ.

ಆಟೊ ಸ್ವಲ್ಪ ದೂರನು ಹೋಗಿರ್ಲಿಲ್ಲ. ಟ್ರಾಫಿಕ್ ಜಾಮ್ ಅಂತ ಡ್ರೈವರ್ ನಿಲ್ಲಿಸಿದ. ಅಜ್ಜಿಗೆ ಸಿಟ್ ಬಂತು. ‘ಲೇ ತಮಾ ಯಾಕಪ ಆಟ ನಿಲ್ಸಿದಿ? ಆಗ್ಲೇ ಮನಿ ಬಂತಾ?’ ಅಂತು.

‘ಇಲ್ಲ ಕಣಜ್ಜಿ, ಟ್ರಾಫಿಕ್ ಜಾಮು’ ಅಂದ ತೆಪರೇಸಿ ಹೊರಗಿಣುಕಿ ನೋಡಿ ‘ಓ... ಇದು ಮಂತ್ರಿಗಳ ಶಕ್ತಿ ಪ್ರದರ್ಶನ ಕಣಜ್ಜಿ, ರಾಜೀನಾಮೆ ಕೊಡಕೆ ಮೆರವಣಿಗೇಲಿ ಹೊಂಟುದಾರೆ’ ಎಂದ.

‘ಏನಂದಿ? ರಾಜಿನಾಮಿ ಕೊಡಕೂ ಮೆರವಣಿಗಿನಾ? ನಮ್ ಕಡಿ ಗೆದ್ದೋರು ಮೆರವಣಿಗಿ ಮಾಡ್ಕಳಾದು ನೋಡೀನಿ. ಇವರಿಗೇನು ತೆಲಿ ಗಿಲಿ ಕೆಟ್ಟೇತಾ?’ ಅಂತು ತಿಪ್ಪಜ್ಜಿ.

ಮುಂದೆ ವಿಧಾನಸೌಧ, ಲಾಲ್‌ಬಾಗು ಎಲ್ಲ ಆಟೊದಲ್ಲೇ ತೋರಿಸಿದ ತೆಪರೇಸಿ ‘ಅಜ್ಜಿ ಅಲ್ಲಿ ನೋಡು, ಅದೇ ಪರಪ್ಪನ ಅಗ್ರಹಾರ, ಅಂದ್ರೆ ಜೈಲು’ ಅಂದ. ಹೊರಗಿಣುಕಿದ ತಿಪ್ಪಜ್ಜಿ ‘ಅದೇನೋ ತೆಪರ, ಅಲ್ಲಿ ಅಟಕಂದು ಜನ ಸೇರಿದಾರೆ? ಅದ್ಯಾರೋ ಒಬ್ಬ ಯಾಕೆ ಎರಡು ಬೆಳ್ಳು ಅಲ್ಲಾಡಿಸ್ತಿದಾನೆ? ಪಾಪ ಪಾಯಿಖಾನೆಗೆ ಹೋಗಬೇಕಾಗಿತ್ತೇನೋ...’ ಅಂತು.

‘ಅಯ್ಯೋ ಅದು ವಿಜಯೋತ್ಸವ ಕಣಜ್ಜಿ, ಅವರು ತೋರಿಸ್ತಿರೋದು ವಿಕ್ಟರಿ ಸಿಂಬಲ್ಲು. ಜೈಲಿಗೋಗೋ ಮೊದ್ಲು ಸಂಭ್ರಮ...’ ಎಂದ ತೆಪರೇಸಿ.

‘ಥು ನಿನ್ ಮಕಕ್ಕಿಷ್ಟು... ಎಂಥ ಊರೋ ಇದು? ಜೈಲಿಗೋಗೋಕೂ ಸಂಭ್ರಮನಾ? ಏನ್ ತೆಲಿ ಕೆಟ್ ಜನಾನೋ ಇವ್ರು...’ ಅಜ್ಜಿ ರಾಂಗಾಯಿತು.

ಮುಂದೆ ರಸ್ತೆ ಬದಿ ಒಂದು ಬುಲ್ಡೋಜರ್ ಕಾಣಿಸಿ ‘ಅದೇನೋ ತೆಪರ?’ ಕೇಳಿತು ಅಜ್ಜಿ. ತೆಪರೇಸಿ ಹುಷಾರಾದ. ‘ಅದಾ? ಅದು ನಮ್ಮೂರದಲ್ಲ ಅಜ್ಜಿ, ಡೆಲ್ಲೀದು. ಜಾಸ್ತಿ ಮಾತಾಡೋರನ್ನ, ಗಲಾಟೆ ಮಾಡೋರನ್ನ ಗುಡುಚಾಪಿ ಎತ್ತೋ ಮಿಶಿನ್ನಂತೆ’ ಎಂದ. ಅಜ್ಜಿ ಮತ್ತೆ ಪಿಟಿಕ್ಕೆನ್ನಲಿಲ್ಲ!

ಸಂಗತ

ಪರೀಕ್ಷೆ: ಆತ್ಮಸಾಕ್ಷಿಗಿಂತ ಪಹರೆ ಬೇಕೇ?

ಪೂರ್ವಸಿದ್ಧತೆಗೆ ಗರಿ ಮೂಡದೆ ಗೆಲ್ಲುವ ಸಂಕಲ್ಪಕ್ಕೆ ಅರ್ಥವಿರದು

• ಯೋಗಾನಂದ

ಪರೀಕ್ಷೆ ಕುರಿತು ಆತಂಕಗೊಂಡ ದ್ವಿತೀಯ ಪಿಯು ವಿದ್ಯಾರ್ಥಿಗಳು ಕೆಲವರು ಸಾಮೂಹಿಕ ತೇರ್ಗಡೆ ಮಾಡುವಂತೆ ಪದವಿಪೂರ್ವ ಶಿಕ್ಷಣ ಇಲಾಖೆಯ ಸಹಾಯವಾಣಿಗೆ ಕರೆ ಮಾಡಿ ಮನವಿ ಮಾಡಿರುವುದು (ಪ್ರ.ವಾ., ಏ. 21) ಅಚ್ಚರಿಯ ಜೊತೆಗೆ ಬೇಸರ ತಂದಿತು. ‘ಪರೀಕ್ಷೆ’ ಎಂದರೆ ಮಕ್ಕಳೇಕೆ ಹೆದರುತ್ತಾರೆ?

ವಾಸ್ತವವೆಂದರೆ ಪರೀಕ್ಷಾ ಭಯ ಎನ್ನುವುದೇ ಹುಸಿ. ಮಕ್ಕಳು ಆ ಭ್ರಮೆಗೆ ಒಳಗಾಗುತ್ತಾರೆ ಇಲ್ಲವೇ ಅವರಲ್ಲಿ ಆ ಭೀತಿಯನ್ನು ಸೃಷ್ಟಿಸಲಾಗುತ್ತದೆ. ನಿನ್ನ ಹೆಸರೇನು, ವಾಸವೆಲ್ಲಿ, ಓದುತ್ತಿರುವುದು ಯಾವ ಶಾಲೆ, ಯಾವ ಕ್ರೀಡೆ ನಿನಗಿಷ್ಟ ಮುಂತಾದ ಪ್ರಶ್ನೆಗಳನ್ನು ಎದುರಿಸುವಷ್ಟೇ ಸಲೀಸಾಗಿ ಅವರು ಪರೀಕ್ಷೆಯನ್ನು ನಿರ್ವಹಿಸಬಲ್ಲರು. ಈ ವಿವರಗಳನ್ನೇನು ಅವರು ಉರು ಹೊಡೆದಿರುವುದಿಲ್ಲ! ಅವು ಮನಸ್ಸಿಗೆ ನಾಟಿರುತ್ತವೆ. ಹಾಗೆಯೇ ಆಯಾ ವಿಷಯದ ಅಧ್ಯಾಯದ ಅಂಶಗಳು ಮಕ್ಕಳು ಅಲ್ಪಸ್ವಲ್ಪ ಮನನ ಮಾಡಿಕೊಂಡರೂ ಸಹಜವಾಗಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲು ಖಂಡಿತ ಸಾಧ್ಯ.

ವಿಖ್ಯಾತ ವಿಜ್ಞಾನಿ ಐನ್‌ಸ್ಟೀನ್ ಅವರ ನುಡಿ ಮನನೀಯ: ‘ಎಲ್ಲರೂ ಮೇಧಾವಿಗಳೇ. ಆದರೆ ಮೀನನ್ನು ಮರವೇರುವುದೋ ಇಲ್ಲವೋ ಎಂದು ಪರೀಕ್ಷಿಸಲು ಮುಂದಾದರೆ ಅದು ತಾನು ಮೂರ್ಖ ಎಂದು ತನ್ನ ಜೀವನಪರ್ಯಂತವೂ ಭಾವಿಸುವುದು’. ಮಕ್ಕಳು ಸುಲಭವಾಗಿ ಚಾಂಚಲ್ಯಕ್ಕೆ ಒಳಗಾಗುತ್ತಾರೆ. ನಾಳೆ, ನಿನ್ನೆ ಕುರಿತು ಚಿಂತಿಸುವರೇ ವಿನಾ ಅತಿ ಮಹತ್ವದ್ದಾದ ಇಂದಿನ ಬಗ್ಗೆ ಅವರು ಅವಲೋಕಿಸರು. ಒತ್ತಡ, ದುಗುಡವನ್ನು ನಿಭಾಯಿಸಲಾರರು. ಇತಿಮಿತಿಗಳನ್ನು ಹಿರಿಯರು ವೈಭವೀಕರಿಸಿದರೆ ಅವರ ತಳಮಳ ಮತ್ತೂ ಹೆಚ್ಚೀತು. ಅವರಲ್ಲಿ ಧೈರ್ಯ ತುಂಬಬೇಕು. ಮರ್ಕಟ ಮನಸ್ಸನ್ನು ನಿಯಂತ್ರಿಸಿ ವರ್ತಮಾನದಲ್ಲಿ ಕ್ರಿಯಾಶೀಲರಾಗಿರುವಂತೆ ಪ್ರಭಾವಿಸಬೇಕು.

ದಿನದಲ್ಲಿ 24 ತಾಸುಗಳಿವೆ. ಎರಡು ತಾಸುಗಳು ವ್ಯರ್ಥವಾದರೆ ಚಿಂತಿಸದೆ ಉಳಿದ ಅಮೂಲ್ಯ ಸಮಯವನ್ನು ಸದುಪಯೋಗಿಸಿಕೊಳ್ಳುವುದು ವಿವೇಕ. ಪರೀಕ್ಷೆಯ ತಯಾರಿಗೆ ವಿಳಂಬ ಎನ್ನುವುದೇ ಇಲ್ಲ. ಪೂರ್ವಸಿದ್ಧತೆಗೆ ಗರಿ ಮೂಡದೆ ಗೆಲ್ಲುವ ಸಂಕಲ್ಪಕ್ಕೆ ಅರ್ಥವಿರದು. ನಮ್ಮ ಉತ್ತರಪತ್ರಿಕೆಯಲ್ಲಿ ದಾಖಲಿಸಬೇಕಾದ್ದು ನಾವು ಗಳಿಸಿದ ಅರಿವು, ಇತರರು ಗಳಿಸಿದ್ದಲ್ಲ. ಪ್ರಜ್ಞೆ, ಧ್ಯೇಯ ಈ ಮಟ್ಟದವರೆಗೆ ವಿಸ್ತಾರಗೊಂಡರೆ ಪರೀಕ್ಷಾ ವ್ಯವಸ್ಥೆಯಲ್ಲಿ ಬಹುಮಟ್ಟಿಗೆ ನಕಲು, ಅಕ್ರಮ ಶಮನವಾಗುವುದು.

ಅಬ್ಬಾ! ನಕಲು ತಡೆಯಲು ಅದೆಷ್ಟು ಮಾನವ ಸಂಪನ್ಮೂಲ ವ್ಯಯವಾಗುವುದು? ಒಂದು ಪರೀಕ್ಷಾ ಕೇಂದ್ರದ ಸಿಬ್ಬಂದಿ ನಿಯೋಜನೆ ಗಮನಿಸಿ. ಮುಖ್ಯ ಮೇಲ್ವಿಚಾರಕರು, ಕೊಠಡಿ ಮೇಲ್ವಿಚಾರಕರು, ಅವರಿಗೆ ಬಿಡುವು ನೀಡುವ ಮೇಲ್ವಿಚಾರಕರು, ಇನ್ನು ಜಾಗೃತ ಪಡೆಗಳು- ಸ್ಥಾನಿಕ ದಳ, ಅನಿರೀಕ್ಷಿತ ದಳ, ಇಲಾಖೆ ಅಥವಾ ವಿಶ್ವವಿದ್ಯಾಲಯ ರಚಿಸಿರುವ ದಳ... ಆಯಾ ದಿನ ಪರೀಕ್ಷೆ ಮುಗಿಯುತ್ತಲೆ ಶಿಕ್ಷಕರೊಬ್ಬರ ಉಸ್ತುವಾರಿಯಲ್ಲಿ ಉತ್ತರಪತ್ರಿಕೆಗಳ ಬಂಡಲ್ ವಿಲೇವಾರಿಯಾಗಬೇಕು. ಒಬ್ಬರೇ ಒಬ್ಬರು ಪರೀಕ್ಷೆಗೆ ಹಾಜರಿರಲಿ, 20ಕ್ಕೂ ಹೆಚ್ಚು ಮಂದಿ ಕೈಜೋಡಿಸಬೇಕು. ಈ ಪರಿಯ ಕಣ್ಗಾವಲು ಏಕೆ? ಮಕ್ಕಳು ನಂಬಲರ್ಹರಾದರೆ ನಿಸ್ಸಂದೇಹವಾಗಿ ಅಗತ್ಯವಿಲ್ಲ. ಮುಖ್ಯ ಅವರ ಅಂತಃಸಾಕ್ಷಿ ಮೆರೆಯಬೇಕಷ್ಟೆ.

ಶಿಕ್ಷಣ ತಜ್ಞ, ವಿಚಾರವಾದಿ ಡಾ. ಎಚ್. ನರಸಿಂಹಯ್ಯ ಅವರು ನ್ಯಾಷನಲ್ ಕಾಲೇಜಿನ ಪ್ರಾಚಾರ್ಯರಾಗಿದ್ದಾಗ ಕೊಠಡಿ ಮೇಲ್ವಿಚಾರಕರಿಲ್ಲದೆ ಪರೀಕ್ಷೆ ನಡೆಸುವ ಪ್ರಯೋಗ ಮಾಡಿ ಯಶಸ್ವಿಯಾಗಿದ್ದರು. ನಕಲು ಹತ್ತಿಕ್ಕಲು ಆತ್ಮಸಾಕ್ಷಿಗಿಂತ ಉಸಾಬರಿ ಬೇಕಿಲ್ಲ. ಒಂದು ದೇಶದ ಅವನತಿಗೆ ವೈರಿ ದೇಶಗಳು ಪ್ರಯೋಗಿಸಬಹುದಾದ ಬಾಂಬ್ ಅಥವಾ ಕ್ಷಿಪಣಿಗಳಷ್ಟೇ ಕಾರಣವಾಗಬೇಕಿಲ್ಲ. ದೇಶದಲ್ಲಿನ ಶಿಕ್ಷಣ ಮಟ್ಟ ಕುಸಿತ, ಪರೀಕ್ಷೆಗಳಲ್ಲಿನ ಅಕ್ರಮಗಳಿಂದಲೂ ಅದರ ವಿನಾಶ ಸಂಭಾವ್ಯ. ಕಾಪಿ ಮಾಡುವುದರಿಂದ ನಮ್ಮ ನೈಜ ಕಲಿಕೆಗೆ ನಾವೇ ಅಡ್ಡ ಬಂದಂತಾಗುವುದು. ನಕಲು ಎಸಗಿ ನಾವು ಮೋಸಗೊಳಿಸುವುದಾದರೂ ಯಾರನ್ನು? ಈ ಪ್ರಶ್ನೆಗೆ ಉತ್ತರ, ಅದು ನಮ್ಮನ್ನೇ!



ಕಲಿಯದಿದ್ದರೆ ಕಲಿಯದವರ ಹೊರತು ಬೇರೆ ಯಾರಿಗೂ ನಷ್ಟವಿಲ್ಲ. ನೀವು ಬರೆದ ಉತ್ತರಗಳನ್ನು ಬೇರೆಯವರಿಗೆ ತೋರಿಸುವುದೂ ಪ್ರಮಾದವೇ. ಅವರ ಕಲಿಯುವ ಶ್ರದ್ಧಾಸಕ್ತಿ, ಆತ್ಮವಿಶ್ವಾಸವನ್ನು ನೀವು ಅಪಹರಿಸಿದಂತಾದೀತು. ಪರೀಕ್ಷಾ ಅಕ್ರಮ ಸಮಾಜದ ನೈತಿಕ ತಳಹದಿ ಅಲುಗಾಡಿಸುವ ಅಪಾಯಕಾರಿ ಪೆಡಂಭೂತ. ಅದು ಯುವ ಮನಸ್ಸುಗಳಲ್ಲಿ ಹೊಣೆಗೇಡಿತನ ಮತ್ತು ಅಪರಾಧದ ಬೀಜ ಬಿತ್ತುತ್ತದೆ.

ಪರೀಕ್ಷಾ ಕೊಠಡಿಯಲ್ಲಿ ಸಹಪಾಠಿಗಳು ಒಂದು ಹೆಚ್ಚುವರಿ ಹಾಳೆ ಪಡೆದುಕೊಂಡರೂ ವಿಚಲಿತರಾಗುವ ವಿದ್ಯಾರ್ಥಿಗಳುಂಟು. ಉತ್ತರಪತ್ರಿಕೆಯ ತೂಕದಿಂದ ಅದರ ಸತ್ವ ನಿಷ್ಕರ್ಷೆಯಾಗದು! ನೀವು ಒಂದು ಹಾಳೆ ಕಡಿಮೆ ಪಡೆದ ಮಾತ್ರಕ್ಕೆ ನಿಮ್ಮಲ್ಲಿನ ಜ್ಞಾನ ಕಳಪೆ, ಕಡಿಮೆ ಎಂದಲ್ಲ. ಪರೀಕ್ಷೆಯಲ್ಲಿ ಉತ್ತೀರ್ಣತೆಗಿಂತ ಯಶಸ್ಸು, ಕೀರ್ತಿಯಿಲ್ಲ, ಅನುತ್ತೀರ್ಣತೆಗಿಂತ ವೈಫಲ್ಯ, ಅವಮಾನವಿಲ್ಲ ಎಂಬ ಪರಿಭಾವನೆಯಿಂದ ವಿದ್ಯಾರ್ಥಿಗಳನ್ನು ಬೋಧಕರು, ಪೋಷಕರು ಮುಕ್ತಗೊಳಿಸಬೇಕು. ಆಗ ಅವರಿಗೆ ಪರೀಕ್ಷೆ ಅಪಮಾರ್ಗಗಳಿಂದಲಾದರೂ ಸರಿಯೆ ಜಯಿಸುವಷ್ಟು ಅಮೂಲ್ಯವಲ್ಲ ಎನ್ನುವುದು ಮನವರಿಕೆಯಾದೀತು.

ಇಸವಿ 1965. ಮೈಸೂರಿನಲ್ಲಿ ಪಿಯು ರಸಾಯನಶಾಸ್ತ್ರ ಪರೀಕ್ಷೆ ಬರೆಯುವ ಸಂದರ್ಭ. ನಮಗೆ ಕೊಠಡಿ ಮೇಲ್ವಿಚಾರಕರಾಗಿದ್ದ ಪ್ರಾಧ್ಯಾಪಕರು ‘ಅಕ್ಕಪಕ್ಕದವರ ಉತ್ತರಗಳು ಸರಿಯೆಂಬ ಖಾತರಿಯೇನು? ಆದ್ದರಿಂದ ನಿಮ್ಮದೇ ತಪ್ಪುಗಳಿರಲಿ ಬಿಡಿ’ ಎನ್ನುತ್ತ ನಮ್ಮನ್ನು ನವಿರಾಗಿ ಎಚ್ಚರಿಸುತ್ತಿದ್ದರು.

ವಾಚಕರ ವಾಣಿ

ಜಾತ್ರೆ: ಸಮಷ್ಟಿ ಬದುಕಿನ ಸಾಂಸ್ಕೃತಿಕ ಮೊತ್ತ

ಜಾತ್ರೆ-ಉತ್ಸವಗಳು ಹಲವು ಧರ್ಮ, ನಂಬಿಕೆ, ಸಂಪ್ರದಾಯಗಳ ಭದ್ರ ಬುನಾದಿಯ ಮೇಲೆ ಬೆಳೆದುಬಂದಿದ್ದು, ಬಹುಮುಖಿ ಜೀವನದ ಸಮಾಗಮವಾಗಿವೆ. ಜಾತ್ರೆಯ ಇಂತಹ ಉದ್ದೇಶ ಕುರಿತ ಎಚ್.ಎಚ್.ನದಾಫ ಹತ್ತಿಮತ್ತೂರು ಅವರ ಲೇಖನ (ಸಂಗತ, ಏ. 20) ಅಂದಿನ ತಲೆಮಾರಿನವರು ಇಂದಿಗೂ ಉಳಿಸಿಕೊಟ್ಟಿರುವ ಸಾಂಪ್ರದಾಯಿಕ ಸರ್ವ ಸಮನ್ವಯಿಕ ಆಯಾಮವನ್ನು ತಿಳಿಸಿಕೊಟ್ಟಿದೆ. ಜಾತ್ರೆ ಎಂಬುದು ಒಂದು ಸಂಕೀರ್ಣ ಸಾಂಸ್ಕೃತಿಕ, ಸರ್ವಧರ್ಮ ಸಮ್ಮಿಳಿತ ಮೂಲೋದ್ದೇಶದ ಹಿನ್ನೆಲೆಯಲ್ಲಿಯೇ ಜರುಗುವ ಸಮಷ್ಟಿ ಬದುಕಿನ ಸಾಂಸ್ಕೃತಿಕ ಮೊತ್ತವೆಂದರೆ ಅತಿಶಯ ಎನಿಸದು. ಇಂಥ ಜಾತ್ರೆ, ಉತ್ಸವ, ಹಬ್ಬ-ಹರಿದಿನಗಳನ್ನು ಎಲ್ಲರೂ ಸಮಭಾವದಿಂದ, ಭಾವೈಕ್ಯದಿಂದ ಆಚರಿಸಿದಾಗಲೇ ಅದಕ್ಕೊಂದು ನಿಜವಾದ ಅರ್ಥ ಸಿಕ್ಕಿ ಹಿರಿಯರ ಸದಾಶಯ ಈಡೇರಲು ಸಾಧ್ಯ.

ಡಾ. ರಾಜಶೇಖರ ಸಿ.ಡಿ., ಈಚಲಯಲ್ಲಾಪುರ, ಹಾವೇರಿ

ರಾಜಕೀಯ ಅಂಶದ ಮೇಲುಗೈ?

‘ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಬಿಜೆಪಿ ಮುಖಂಡ ಬಿ.ಎಸ್.ಯಡಿಯೂರಪ್ಪ ಅವರ ಹೆಸರನ್ನು ರಾಜ್ಯ ಸರ್ಕಾರ ಅಂತಿಮಗೊಳಿಸಿ ಕೇಂದ್ರಕ್ಕೆ ಶಿಫಾರಸು ಮಾಡಿರುವುದಾಗಿ ವರದಿಯಾಗಿದೆ (ಪ್ರ.ವಾ., ಏ. 21). ಯಡಿಯೂರಪ್ಪ ಅವರು ಒಬ್ಬ ಸಕ್ರಿಯ ಜನನಾಯಕ ಹಾಗೂ ಮುತ್ಸದ್ದಿಯಾಗಿ ತಮ್ಮ ಅಧಿಕಾರಾವಧಿಯಲ್ಲಿ ರಾಜ್ಯದ ಹಿತ ಹಾಗೂ ರಾಜ್ಯದ ಜನರ ಶ್ರೇಯೋಭಿವೃದ್ಧಿಗಾಗಿ ನೀಡಿರುವ ಕೊಡುಗೆ ಶ್ಲಾಘನೀಯವಾದುದು. ಆದರೂ ಈ ವಿಷಯದಲ್ಲಿ ಒಟ್ಟಾರೆಯಾಗಿ ಶಿವಮೊಗ್ಗ ಜಿಲ್ಲೆ ಅಥವಾ ಪ್ರಾಂತ್ಯಕ್ಕೆ ಸಂಬಂಧಿಸಿದ ಚಾರಿತ್ರಿಕ, ಸಾಂಸ್ಕೃತಿಕ, ಸಾಹಿತ್ಯಕ ಹಿನ್ನೆಲೆಯ ನಾಡ ಹಿರಿಮೆಯ ಹೆಸರು, ವ್ಯಕ್ತಿತ್ವಗಳನ್ನು ಪರಿಗಣಿಸಬಹುದಾಗಿದ್ದ ಅವಕಾಶವನ್ನು ಮರೆಮಾಚಿ, ಬರೀ ರಾಜಕೀಯ ಅಂಶವನ್ನೇ ಪ್ರಧಾನವಾಗಿಸಿದಂತೆ ಕಂಡುಬರುತ್ತಿದೆ.

ಈಗಲೂ ಸರ್ಕಾರ ಈ ಬಗ್ಗೆ ಗಂಭೀರವಾಗಿ ಗಮನ ಹರಿಸುವುದಾದರೆ, ಚಾರಿತ್ರಿಕ ಹಿನ್ನೆಲೆಯ ಕೆಳದಿ ಚೆನ್ನಮ್ಮ, ಕೆಳದಿ ಶಿವಪ್ಪನಾಯಕ, ರಾಜ್ಯದ ಪ್ರಮುಖ ಜೀವ ಜಲಧಾರೆ ಶರಾವತಿ, ಸಾಹಿತ್ಯಕ ಮೇರು ವ್ಯಕ್ತಿತ್ವ ಕುವೆಂಪು, ಆಧ್ಯಾತ್ಮಿಕ ಪ್ರಭೆಗಳಾದ ಬಳ್ಳಿಗಾವೆಯ ಅಲ್ಲಮಪ್ರಭು, ಉಡುತಡಿಯ ಅಕ್ಕಮಹಾದೇವಿ ಮುಂತಾದವರಲ್ಲಿ ರಾಜ್ಯದ ಘನತೆಯನ್ನು ವಿಶ್ವದೆಲ್ಲೆಡೆ ಪಸರಿಸುವ ಯಾವುದಾದರೊಂದು ಸೂಕ್ತ ಹೆಸರನ್ನು ಪರಿಗಣಿಸಬೇಕು. ಆಗ ರಾಜ್ಯ ಸರ್ಕಾರಕ್ಕೆ ಹಾಗೂ ವೈಯಕ್ತಿಕವಾಗಿ ಯಡಿಯೂರಪ್ಪ ಅವರಿಗೂ ದುಪ್ಪಟ್ಟು ಗೌರವ ಸಂದಂತೆ ಆಗಬಹುದಲ್ಲವೇ?

ಗಿ.ಚನ್ನಬಸವ ಸ್ವಾಮಿ, ಕೆಂಗೇರಿ

ಮನುಕುಲಕೆ ಮಾದರಿ ‘ಪಕ್ಷಿಕೆರೆ’

ಭಲೆ ಭಲೆ! ‘ಪಕ್ಷಿಕೆರೆ’ (ಪ್ರ.ವಾ., ಏ. 21) ನಿನ್ನಲಿ
ಪಕ್ಷಪಾತವಿಲ್ಲ ಧರ್ಮಧರ್ಮಗಳ ನಡುವೆ
ಸರ್ವಧರ್ಮಗಳ ನೆಲೆವೀಡು ನೀನು
ನಿತ್ಯ ಉಸಿರಾಡುತಿರುವೆ ಪ್ರೀತಿ, ಬಾಂಧವ್ಯ
ಭಾವೈಕ್ಯ, ಧರ್ಮಸಮನ್ವಯ ಸಾರುತಿರುವೆ
ನಿತ್ಯ ಮೌನದಲಿ ಜಗಕೆ ಷರೀಫರಂತೆ
ಮನುಕುಲಕೆ ಮಾದರಿ ನಿನ್ನ ಋಜುನಡೆ
ಅಳಿಯಲಿ ಮತಭೇದ, ಚಿಗುರಲಿ ಸೋದರತೆ
ನಿಜದಲಿ ನಾಡಾಗಲಿ
ಸರ್ವಜನಾಂಗದ ಶಾಂತಿಯ ತೋಟ.

ಸಿ.ಪಿ.ಸಿದ್ಧಾಶ್ರಮ, ಮೈಸೂರು

ಪಠ್ಯಪುಸ್ತಕ ಮರಳಿಸುವ ಯೋಜನೆ ಜಾರಿಗೊಳ್ಳಲಿ

ಮುದ್ರಣ ಕಾಗದದ ತೀವ್ರ ಅಭಾವದಿಂದ ಈ ಬಾರಿ ರಾಜ್ಯದ ಶಾಲಾ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು ಸಿಗುವುದು ವಿಳಂಬವಾಗಲಿರುವುದು (ಪ್ರ.ವಾ., ಏ. 21) ಆತಂಕಕಾರಿ. ಕಾಡಿನ ನಾಶ, ಮರಗಳ ಮಾರಣಹೋಮ, ನೈಸರ್ಗಿಕ ಸಂಪನ್ಮೂಲಗಳ ಅತಿಬಳಕೆಯಿಂದ ಕಾಗದದ ಉತ್ಪಾದನೆ ಕುಂಠಿತವಾಗುತ್ತದೆ. ಅದಕ್ಕೆ ಕಡೇಪಕ್ಷ ಒಮ್ಮೆ ಕೊಟ್ಟ ಪಠ್ಯಪುಸ್ತಕವನ್ನು ಮರುಬಳಸುವಂತೆ (ಸರ್ಕಾರಿ ಶಾಲೆಗಳಲ್ಲಾದರೂ! ಉಚಿತವಾಗಿ ಕೊಡುವುದು ಸರ್ಕಾರ ತಾನೇ?) ಆದೇಶ ನೀಡಬೇಕು. ಬಳಸಿದ ಪುಸ್ತಕವನ್ನು ಶಾಲೆಗೆ ಮರಳಿಸಬೇಕೆಂಬ ನಿಯಮ ಜಾರಿಗೆ ತಂದರೆ, ಹೊಸದಾಗಿ ಆ ತರಗತಿಗೆ ಬರುವ ಮಕ್ಕಳಿಗೆ ಅವುಗಳನ್ನೇ ಕೊಡಲು ಸಾಧ್ಯವಾಗುತ್ತದೆ. ಇದರಿಂದ ಕಾಗದದ ಉಳಿತಾಯವಾಗಿ ಆರ್ಥಿಕ ಹೊರೆ ತಪ್ಪಿದಂತಾಗುತ್ತದೆ.

ಸಂತೆಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು

ನೈತಿಕ ಶಿಕ್ಷಣ: ಹುಡುಕಬೇಕಿದೆ ಪರ್ಯಾಯ ಮಾರ್ಗ

‘ನೈತಿಕ ಶಿಕ್ಷಣದ ತುರ್ತು ಅಗತ್ಯ ಮಕ್ಕಳಿಗಲ್ಲ, ರಾಜಕಾರಣಿಗಳಿಗೆ’ ಎಂಬ ಸಂಪಾದಕೀಯದಲ್ಲಿನ (ಪ್ರ.ವಾ., ಏ. 21) ವಿಚಾರಗಳ ಕುರಿತು ಭಿನ್ನಾಭಿಪ್ರಾಯಗಳಿಗೆ ಆಸ್ಪದವಿಲ್ಲ. ಆದರೂ ಈಗಿನ ರಾಜಕೀಯ ಸನ್ನಿವೇಶವನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಶಾಲಾ ಶಿಕ್ಷಣದಲ್ಲಿ ನೈತಿಕತೆಯನ್ನು ಬೋಧನಾ ವಿಷಯವನ್ನಾಗಿ ಅಳವಡಿಸಬೇಕು ಎನ್ನುವುದರಲ್ಲಿ ಈಗ ಅರ್ಥವಿಲ್ಲ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಈ ಸರ್ಕಾರದ ಮಾತಂತಿರಲಿ, ಈ ಹಿಂದೆ ಆಗಿಹೋದ, ಅದರಲ್ಲೂ 1980ರ ನಂತರದ ಯಾವ ಸರ್ಕಾರಗಳಿಗೂ ಮಕ್ಕಳಿಗೆ ನೈತಿಕತೆಯನ್ನು ಬೋಧಿಸುವ ಅಧಿಕಾರಾರ್ಹತೆ ಇರಲಿಲ್ಲ. ಮುಂದೆ ಚುನಾವಣೆಯ ನಂತರ ಅಧಿಕಾರಕ್ಕೆ ಬರಲಿರುವ ಸರ್ಕಾರದ ನೈತಿಕತೆ ಹೇಗಿರಬಹುದು ಎನ್ನುವುದರ ಸುಳಿವನ್ನು ವಿವಿಧ ರಾಜಕೀಯ ಪಕ್ಷಗಳ ನಾಯಕರ ಮಾತು, ನಡೆಗಳಿಂದ ಈಗಲೇ ಖಚಿತವಾಗಿ ಊಹಿಸಲು ಸಾಧ್ಯವಿದೆ!

ಅಂದರೆ, ನೈತಿಕ ಶಿಕ್ಷಣವೆನ್ನುವುದು ಇಂದಿನ ಕಲುಷಿತ ರಾಜಕೀಯ ಸಂದರ್ಭದಲ್ಲಿ ಒಂದು ಹುಸಿ ಕನಸು ಮಾತ್ರ. ಇದು ವಾಸ್ತವ. ಹೀಗಾಗಿ ಶಾಲಾ ಶಿಕ್ಷಣದಲ್ಲಿ ನೀತಿಬೋಧನೆ ಎನ್ನುವುದು ಕೇವಲ ಮರೀಚಿಕೆ ಎಂದಂತಾಗುತ್ತದೆ. ಆದರೆ ನಾವು ಇದನ್ನು ಒಪ್ಪಬಾರದು. ನೈತಿಕ ಶಿಕ್ಷಣವನ್ನು ನೆಲೆಗೊಳಿಸುವ ಪರ್ಯಾಯ ಮಾರ್ಗಗಳು ಯಾವುವು ಎನ್ನುವುದನ್ನು ರಾಜಕೀಯಮುಕ್ತ ಶಿಕ್ಷಣತಜ್ಞರು, ಮನೋವಿಜ್ಞಾನಿಗಳು ಮತ್ತು ಉತ್ತಮ ಬೋಧಕರನ್ನು ಒಳಗೊಂಡ ತಜ್ಞರ ತಂಡದ ಸಲಹೆಗಳನ್ನು ಸರ್ಕಾರ ಅಂಗೀಕರಿಸಲೇಬೇಕು ಎನ್ನುವಂಥ ವಾತಾವರಣ ನಿರ್ಮಾಣಗೊಳ್ಳಬೇಕು. ಆಗ ಮಾತ್ರವೇ ನೈತಿಕ ಶಿಕ್ಷಣವೆನ್ನುವುದು ಅರ್ಥಪೂರ್ಣ ಆಗುತ್ತದೆ.

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪತ್ರಿಕೆಗಳಿಗೆ ಮುದ್ರಣ ಕಾಗದದ ಹೊರೆ

• ಹಮೀದ್ ಕೆ. ,ಜಯಸಿಂಹ ಆರ್.

ಉಪಾಲಿ ನ್ಯೂಸ್‌ಪೇಪರ್ಸ್ ಲಿಮಿಟೆಡ್ ಸಂಸ್ಥೆಯ ದಿ ಐಲ್ಯಾಂಡ್ ಎಂಬ ಇಂಗ್ಲಿಷ್ ದಿನಪತ್ರಿಕೆ, ದಿವಾಯಿನಾ ಎಂಬ ಹೆಸರಿನ ಸಿಂಹಳ ಭಾಷೆಯ ದಿನಪತ್ರಿಕೆ ಪ್ರಕಟಣೆಯನ್ನು ನಿಲ್ಲಿಸುವುದಾಗಿ ಮಾರ್ಚ್ 26ರಂದು ಘೋಷಿಸಿದವು. ಶ್ರೀಲಂಕಾದ ವಿದೇಶಿ ವಿನಿಮಯ ಕೊರತೆ ಇದಕ್ಕೆ ಮುಖ್ಯ ಕಾರಣ. ಭಾರತದ ಮತ್ತು ಜಗತ್ತಿನ ಇತರ ಭಾಗಗಳ ಪತ್ರಿಕೆಗಳ ಪರಿಸ್ಥಿತಿಯೂ ಹೀಗೆಯೇ ಇದೆ. ಕಾರಣ ಮಾತ್ರ ಭಿನ್ನ. ಹಲವು ಪತ್ರಿಕೆಗಳು ಮುದ್ರಣ ನಿಲ್ಲಿಸುವ ಸ್ಥಿತಿ ಸದ್ಯದಲ್ಲಿಯೇ ಎದುರಾಗಬಹುದು ಎಂದು ಮುದ್ರಣ ಕ್ಷೇತ್ರದ ಪರಿಣತರು ಹೇಳುತ್ತಾರೆ. ಮುದ್ರಣ ಕಾಗದದ ಕೊರತೆ ಮತ್ತು ಕಾಗದದ ದರದಲ್ಲಿ ಆಗಿರುವ ಅತಿಯಾದ ಏರಿಕೆ ಇದಕ್ಕೆ ಕಾರಣ. ಮುದ್ರಣ ಕಾಗದದ ಕೊರತೆ ಮತ್ತು ದರ ಏರಿಕೆಯ ಹಿಂದೆ ಹಲವು ಕಾರಣಗಳು ಇವೆ.

ಕೋವಿಡ್ ಕರಿನೆರಳು

ಕೋವಿಡ್ ಕಾಲವು ದಿನಪತ್ರಿಕೆಗಳನ್ನು ದುಃಸ್ವಪ್ನದಂತೆ ಕಾಡಿದೆ. ಕೊರೊನಾ ಸೋಂಕು ಹರಡುವಿಕೆ ತಡೆಗಾಗಿ ಹೇರಿದ್ದ ಲಾಕ್‌ಡೌನ್‌ನಿಂದಾಗಿ ಪತ್ರಿಕೆಗಳ ಆದಾಯದ ಮುಖ್ಯ ಮೂಲವಾಗಿದ್ದ ಜಾಹೀರಾತು ಪ್ರಕಟಣೆಯು ಪಾತಾಳಕ್ಕೆ ಕುಸಿಯಿತು. ಕೋವಿಡ್ ವ್ಯಾಪಿಸಿದಂತೆಲ್ಲ ದಿನಪತ್ರಿಕೆಗಳ ಮೂಲಕವೇ ಕೊರೊನಾ ಸೋಂಕು ಹರಡುತ್ತಿದೆ ಎಂಬ ಅಪಪ್ರಚಾರವೂ ನಡೆಯಿತು. ಪತ್ರಿಕೆಯಿಂದ ಕೊರೊನಾ ವೈರಾಣು ಹರಡುವುದಿಲ್ಲ ಎಂದು ವೈದ್ಯರು ಮತ್ತು ಪರಿಣತರು ಸ್ಪಷ್ಟನೆ ಕೊಟ್ಟರೂ ಜನರಿಗೆ ಅದು ಮನದಟ್ಟಾಗಲು ಬಹಳ ಸಮಯವೇ ಬೇಕಾಯಿತು. ಹೀಗಾಗಿ, ಕೋವಿಡ್ ಅವಧಿಯಲ್ಲಿ ಜಾಹೀರಾತು ಮತ್ತು ಪ್ರಸರಣದ ವರಮಾನಕ್ಕೆ ದೊಡ್ಡ ಹೊಡೆತ ಬಿತ್ತು. ಅದೇ ಹೊತ್ತಿಗೆ ಮುದ್ರಣ ಕಾಗದದ ಬೆಲೆಯಲ್ಲಿ ಆದ ಏರಿಕೆ ಗಾಯದ ಮೇಲೆ ಬರೆ ಎಳೆದಂತಾಯಿತು.

ಕೋವಿಡ್ ಪೂರ್ವದಲ್ಲಿ ಅಂದರೆ, 2020ರ ಆರಂಭದಲ್ಲಿ ಒಂದು ಟನ್ ಮುದ್ರಣ ಕಾಗದದ ದರ ಸುಮಾರು 300 ಡಾಲರ್ (ಸುಮಾರು ₹23,000) ಇತ್ತು. ಜಗತ್ತಿನಾದ್ಯಂತ ಕೊರೊನಾ ಸೋಂಕು ವ್ಯಾಪಿಸಿದ ಬಳಿಕ ಮುದ್ರಣ ಕಾಗದದ ದರದಲ್ಲಿ ಏರಿಕೆ ಆಯಿತು. ಕೋವಿಡ್ ಮೊದಲ ಅಲೆಯ ಸಂದರ್ಭದಲ್ಲಿ ಒಂದು ಟನ್ ಕಾಗದದ ದರವು ಪ್ರತಿ ಟನ್‌ಗೆ 500ರಿಂದ 600 ಡಾಲರ್‌ಗೆ (ಸುಮಾರು ₹38,000ದಿಂದ ₹45,500) ಏರಿಕೆ ಆಯಿತು. ಕೋವಿಡ್‌ನ ಎರಡನೇ ಅಲೆಯ ಹೊತ್ತಿಗೆ ದರವು ಪ್ರತಿ ಟನ್‌ಗೆ 700ರಿಂದ 800 ಡಾಲರ್‌ಗೆ (ಸುಮಾರು ₹53,300ರಿಂದ ₹61,000) ಏರಿಕೆ ಆಯಿತು.

ಜಗತ್ತಿನ ವಿವಿಧ ಭಾಗಗಳಲ್ಲಿನ ಲಾಕ್‌ಡೌನ್ ಮತ್ತು ಅದರಿಂದಾದ ಸಂಚಾರ ಸ್ಥಗಿತದ ಸ್ಥಿತಿಯು ಮುದ್ರಣ ಕಾಗದ ಪೂರೈಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿತು. ಹಲವು ಪತ್ರಿಕೆಗಳು ತಾತ್ಕಾಲಿಕವಾಗಿ ಮುದ್ರಣ ನಿಲ್ಲಿಸಿದವು. ಕಾಗದ ತಯಾರಿಕೆಗೆ ಬಳಸುವ ಮರದ ತಿರುಳಿನ ಕೊರತೆ, ಕಾರ್ಮಿಕರ ಕೊರತೆ ಮತ್ತು ಕಾಗದದ ಪೂರೈಕೆಗೆ ಇದ್ದ ಅಡಚಣೆಯಿಂದಾಗಿ ಯುರೋಪ್‌ನ ಹಲವು ಕಾರ್ಖಾನೆಗಳು ಬಾಗಿಲು ಮುಚ್ಚಿದವು. ಹಡಗು ಸಂಚಾರ ಸ್ಥಗಿತ, ಕಾಗದ ಸಾಗಿಸಲು ಬಳಸುವ ಕಂಟೇನರ್‌ಗಳ ಕೊರತೆಯೂ ಪೂರೈಕೆಯ ಮೇಲೆ ಪರಿಣಾಮ ಬೀರಿದೆ. ಭಾರಿ ಸಂಖ್ಯೆಯ ಕಂಟೇನರ್‌ಗಳು ಚೀನಾದಲ್ಲಿಯೇ ಉಳಿದುಹೋದದ್ದು ಸಮಸ್ಯೆ ಸೃಷ್ಟಿಸಿತು. ಇದು ಕೋವಿಡ್ ಕಾಲದಲ್ಲಿ ಕಾಗದದ ದರದಲ್ಲಿ ತೀವ್ರ ಏರಿಕೆಯ ಹಿಂದಿನ ಕಾರಣಗಳು.

ಆಮದಿನ ಅವಲಂಬನೆ

ಭಾರತೀಯ ಮುದ್ರಣ ಕಾಗದ ತಯಾರಕರ ಸಂಘದ ವೆಬ್‌ಸೈಟ್‌ನಲ್ಲಿ ಇರುವ ಮಾಹಿತಿಯ ಪ್ರಕಾರ, ಭಾರತದ ಕಾಗದದ ಬೇಡಿಕೆಯ ಶೇ 56ರಷ್ಟನ್ನು ಆಮದು ಮಾಡಿಕೊಳ್ಳಲಾಗುತ್ತದೆ. 2017–18ರಲ್ಲಿ 10.7 ಲಕ್ಷ ಟನ್‌ಗಳಷ್ಟು ದೇಶೀಯವಾಗಿ ತಯಾರಿಸಲಾದ ಕಾಗದದ ಬಳಕೆ ಆಗಿದ್ದರೆ, 14.5 ಲಕ್ಷ ಟನ್ ಕಾಗದವನ್ನು ಆಮದು ಮಾಡಿಕೊಳ್ಳಲಾಗಿದೆ.

ಭಾರತಕ್ಕೆ ರಷ್ಯಾ ಮತ್ತು ಯುರೋಪ್‌ನಿಂದ ಮುದ್ರಣ ಕಾಗದ ಆಮದಾಗುತ್ತಿದೆ. ಒಟ್ಟು ಆಮದಿನಲ್ಲಿ ರಷ್ಯಾದ ಪಾಲು ಸುಮಾರು ಶೇ 50ರಷ್ಟಿದೆ. ಪತ್ರಿಕೆಗಳ ಮುದ್ರಣಕ್ಕೆ ವಿದೇಶಿ ಮುದ್ರಣ ಕಾಗದವೇ ಹೆಚ್ಚು ಬಳಕೆ ಆಗುತ್ತಿದೆ. ಒಟ್ಟು ಬಳಕೆಯಲ್ಲಿ ದೇಶೀ ತಯಾರಿಕೆಯ ಪಾಲು ಸುಮಾರು ಶೇ 44ರಷ್ಟಿದೆ. ಆದರೆ, ಪತ್ರಿಕೆಗಳ ಮುದ್ರಣಕ್ಕೆ ಇವು ಹೆಚ್ಚಾಗಿ ಬಳಕೆ ಆಗುತ್ತಿಲ್ಲ. ಭಾರತದಲ್ಲಿ ತಯಾರಾಗುವ ಮುದ್ರಣ ಕಾಗದದ ಗುಣಮಟ್ಟ ವಿದೇಶಿ ಕಾಗದದ ಗುಣಮಟ್ಟಕ್ಕೆ ಸರಿಸಾಟಿಯಾಗಿ ಇಲ್ಲ. ಭಾರತದಲ್ಲಿ ತಯಾರಾಗುವ ಕಾಗದದಲ್ಲಿ ಶೇ 58ರಷ್ಟು ಪುನರ್ಬಳಕೆ (ರೀಸೈಕಲ್ಡ್) ಕಾಗದ ಬಳಸಿ ತಯಾರಿಸಲಾಗುತ್ತಿದೆ. ಕೃಷಿ ಉತ್ಪನ್ನ ಬಳಸಿ ಶೇ 17ರಷ್ಟು ಮತ್ತು ಮರದ ತಿರುಳು ಬಳಸಿ ಶೇ 25ರಷ್ಟು ಕಾಗದ ತಯಾರಿಸಲಾಗುತ್ತಿದೆ. ಈ ಕಾಗದದ ಗುಣಮಟ್ಟವು ಕಡಿಮೆ.

ಜಿಎಸ್‌ಟಿ: ತೆರಿಗೆ ಏರಿಕೆಯ ಹೊಡೆತ

ದೇಶದಲ್ಲಿ ಜಿಎಸ್‌ಟಿ ಜಾರಿಗೆ ಬರುವ ಮುನ್ನ ಮುದ್ರಣ ಕಾಗದದ ಮೇಲೆ ಒಟ್ಟಾರೆ ಶೇ 3ರಷ್ಟು ತೆರಿಗೆ ಮಾತ್ರ ಬೀಳುತ್ತಿತ್ತು. ಆದರೆ, ಜಿಎಸ್‌ಟಿ ಜಾರಿಗೆ ಬಂದ ನಂತರ ಕಾಗದದ ಮೇಲೆ ಶೇ 5ರಷ್ಟು ತೆರಿಗೆ ಹೇರಲಾಯಿತು. ಇದರಿಂದ ಪತ್ರಿಕಾಲಯಗಳು ಕಾಗದದ ಮೇಲೆ ನೀಡಬೇಕಿದ್ದ ತೆರಿಗೆಯಲ್ಲಿ ಶೇ 68ರಷ್ಟು ಏರಿಕೆಯಾಯಿತು.

ತೆರಿಗೆ ಹೆಚ್ಚಳವನ್ನು ವಿರೋಧಿಸಿ ದೇಶದ ಪ್ರಮುಖ ಪತ್ರಿಕಾ ಸಂಸ್ಥೆಗಳು 2018ರಲ್ಲೇ ಜಿಎಸ್‌ಟಿ ಮಂಡಳಿಗೆ ಪತ್ರ ಬರೆದಿದ್ದವು. ತೆರಿಗೆಯನ್ನು ಕಡಿತ ಮಾಡುವಂತೆ ಕೋರಿದ್ದವು. ಆದರೆ ಸರ್ಕಾರವಾಗಲೀ, ಜಿಎಸ್‌ಟಿ ಮಂಡಳಿಯಾಗಲೀ ತೆರಿಗೆ ಕಡಿತ ಮಾಡುವುದನ್ನು ಪರಿಗಣಿಸಲೇ ಇಲ್ಲ. ಜಾಗತಿಕ ಮಾರುಕಟ್ಟೆಯಲ್ಲಿ ಕಾಗದದ ದರ ಏರಿಕೆಯಾದಂತೆ, ಅದರ ಮೇಲೆ ನೀಡಬೇಕಿದ್ದ ತೆರಿಗೆಯ ಮೊತ್ತವೂ ಭಾರಿ ಪ್ರಮಾಣದಲ್ಲಿ ಏರಿಕೆಯಾಯಿತು. ಕಾಗದದ ಒಟ್ಟಾರೆ ಬೆಲೆಯಲ್ಲಿ ಭಾರಿ ಏರಿಕೆಯಾಗಲು ಇದು ಸಹ ಕಾರಣವಾಯಿತು.

ಜಿಎಸ್‌ಟಿ ಜಾರಿಗೆ ಬರುವ ಮುನ್ನ ನೋಂದಾಯಿತ ಪತ್ರಿಕಾ ಸಂಸ್ಥೆಗಳು ಖರೀದಿಸುವ ಕಾಗದದ ಮೇಲೆ ಕಡಿಮೆ ದರದ ತೆರಿಗೆ ವಿಧಿಸಲಾಗುತ್ತಿತ್ತು. ಪುಸ್ತಕ ಪ್ರಕಾಶನ ಸಂಸ್ಥೆಗಳು ಮತ್ತು ಆರ್‌ಎನ್‌ಐನಲ್ಲಿ ನೋಂದಾಯಿಸಿಕೊಳ್ಳದೇ ಇರುವ ಸಂಸ್ಥೆಗಳಿಗೆ ಹೆಚ್ಚಿನ ದರದ ತೆರಿಗೆ ವಿಧಿಸಲಾಗುತ್ತಿತ್ತು. ಈ ಎರಡೂ ರೀತಿಯ ಖರೀದಿದಾರರ ನಡುವೆ ಸ್ಪಷ್ಟವಾದ ವ್ಯತ್ಯಾಸ ಇರುವಂತೆ ನಿಯಮಗಳನ್ನು ರೂಪಿಸಲಾಗಿತ್ತು.

ಜಿಎಸ್‌ಟಿಯಲ್ಲೂ ಆರ್‌ಎನ್‌ಐ ನೋಂದಾಯಿತ ಪತ್ರಿಕಾ ಸಂಸ್ಥೆಗಳಿಗೆ ಶೇ 5ರಷ್ಟು ಜಿಎಸ್‌ಟಿ ನಿಗದಿ ಮಾಡಲಾಗಿದೆ. ನೋಂದಾಯಿತವಲ್ಲದ ಸಂಸ್ಥೆಗಳು ಮತ್ತು ಪುಸ್ತಕ ಪ್ರಕಾಶನ ಸಂಸ್ಥೆಗಳಿಗೆ ಶೇ 12ರಷ್ಟು ಜಿಎಸ್‌ಟಿ ನಿಗದಿ ಮಾಡಲಾಗಿದೆ. ಆದರೆ, ಖರೀದಿ ವೇಳೆ ನೋಂದಾಯಿತ ಮತ್ತು ನೋಂದಾಯಿತವಲ್ಲದ ಸಂಸ್ಥೆಗಳನ್ನು ಗುರುತಿಸುವ ಹಾಗೂ ಇವುಗಳಿಗೆ ಪ್ರತ್ಯೇಕ ತೆರಿಗೆ ವಿಧಿಸುವ ವ್ಯವಸ್ಥೆಯನ್ನು ಕೈಬಿಡಲಾಗಿದೆ. ಹೀಗಾಗಿ ಪುಸ್ತಕ ಪ್ರಕಾಶನ ಸಂಸ್ಥೆಗಳು ಮತ್ತು ನೋಂದಾಯಿತವಲ್ಲದ ಸಂಸ್ಥೆಗಳು ಶೇ 5ರ ಜಿಎಸ್‌ಟಿಯಲ್ಲೇ ಮುದ್ರಣ ಕಾಗದ ಖರೀದಿಸುತ್ತಿವೆ. ಇದರಿಂದ ಪತ್ರಿಕಾ ಸಂಸ್ಥೆಗಳಿಗೆ ಕಾಗದವು ಅಗತ್ಯ ಪ್ರಮಾಣದಲ್ಲಿ ಲಭ್ಯವಾಗುತ್ತಿಲ್ಲ. ಈ ನ್ಯೂನತೆಗಳನ್ನು ಸರಿಪಡಿಸುವಂತೆ ಭಾರತೀಯ ಮುದ್ರಣ ಕಾಗದ ತಯಾರಕರ ಸಂಘಟನೆಯು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿತ್ತು. ಆದರೆ ಈ ಸಮಸ್ಯೆ ಇನ್ನೂ ಬಗೆಹರಿದಿಲ್ಲ.

ತೈಲ ದರ ಹೆಚ್ಚಳ

ಕೋವಿಡ್ ನಂತರದಲ್ಲಿ ಕಚ್ಚಾ ತೈಲದ ದರ ಏರಿಕೆಯಾಗುತ್ತಲೇ ಹೋಗಿದೆ. ಕಚ್ಚಾ ತೈಲದ ಬೆಲೆಯು 2021ರ ಏಪ್ರಿಲ್‌ನಲ್ಲಿ ಪ್ರತಿ ಬ್ಯಾರೆಲ್‌ಗೆ 53 ಡಾಲರ್ ಇತ್ತು. ಈಗ ಅದು 103 ಡಾಲರ್‌ಗೆ ಏರಿದೆ. ಹೀಗಾಗಿ, ಕಾಗದ ತಯಾರಿಕೆಯ ವೆಚ್ಚ ಭರಿಸಲಾಗದೆ ಕೆಲವು ಕಾಗದ ಕಾರ್ಖಾನೆಗಳು ತಾತ್ಕಾಲಿಕವಾಗಿ ಮುಚ್ಚಿವೆ. ತೈಲ ಮತ್ತು ಅನಿಲ ದರ ಏರಿಕೆಯ ಹೊರೆಯನ್ನು ನಿಭಾಯಿಸುವುದಕ್ಕಾಗಿ ಕೆಲವು ಕಂಪನಿಗಳು ಕಾಗದದ ಮೇಲೆ ಇಂಧನ ಸರ್‌ಚಾರ್ಜ್ ಹೆಚ್ಚಿಸಿವೆ. ಯುರೋಪ್‌ನ ವಿವಿಧ ದೇಶಗಳಲ್ಲಿ 13 ಕಾರ್ಖಾನೆಗಳನ್ನು ಹೊಂದಿರುವ ಯುಪಿಎಂ ಮಿಲ್ಸ್ ಪ್ರತಿ ಟನ್ ಮೇಲೆ 175 ಯೂರೊ (ಸುಮಾರು ₹14,500) ಸರ್‌ಚಾರ್ಜ್ ವಿಧಿಸುತ್ತಿದೆ.

ಆಮದು ಮಾಡಿಕೊಳ್ಳುವ ಮುದ್ರಣ ಕಾಗದದ ಮೇಲೆ ಶೇ 5ರಷ್ಟು ಆಮದು ಸುಂಕ ವಿಧಿಸಲಾಗುತ್ತಿದೆ. ಈ ಹೊರೆಯನ್ನು ತಗ್ಗಿಸಲು ಆಮದು ಸುಂಕವನ್ನು ಕಡಿತ ಮಾಡಿ ಎಂದು ಬಿಜೆಪಿ ಸಂಸದ ಸುಶೀಲ್ ಕುಮಾರ್ ಮೋದಿ ಅವರು ಕೇಂದ್ರ ಸರ್ಕಾರವನ್ನು ಈಚೆಗೆ ಆಗ್ರಹಿಸಿದ್ದರು.

ದರ ಗಗನಕ್ಕೇರಿಸಿದ ಸಮರ

ಉಕ್ರೇನ್ ಮೇಲೆ ರಷ್ಯಾ ನಡೆಸಿದ ದಾಳಿಯು ಮುದ್ರಣ ಕಾಗದದ ದರವನ್ನು ಗಗನಕ್ಕೇ ಏರಿಸಿಬಿಟ್ಟಿತು. ಈಗ ಒಂದು ಟನ್ ಮುದ್ರಣ ಕಾಗದದ ದರ 1,000ದಿಂದ 1,100 ಡಾಲರ್‌ಗೆ (ಸುಮಾರು ₹76,000ದಿಂದ ₹84,000) ಏರಿದೆ. ಇದು ಸಾರ್ವಕಾಲಿಕ ದಾಖಲೆ. ಬೇಡಿಕೆ ಮತ್ತು ಪೂರೈಕೆಯ ನಡುವೆ ತಾಳಮೇಳವೇ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ. ಮುದ್ರಣಕ್ಕೆ ಬೇಕಾದ ಕಾಗದವನ್ನು ಹೊಂದಿಸಿಕೊಳ್ಳುವುದು ದಿನಪತ್ರಿಕೆಗಳಿಗೆ ಬಹುದೊಡ್ಡ ಸವಾಲಾಗಿದೆ. ಕಾಗದ ತಯಾರಕರು ಹೇಳಿದ ದರ ಕೊಟ್ಟರೂ ಮುದ್ರಣ ಕಾಗದ ದೊರಕುತ್ತಿಲ್ಲ.

ರಷ್ಯಾದಿಂದ ಭಾರತಕ್ಕೆ ಕಾಗದದ ಆಮದು ಯುದ್ಧದ ಕಾರಣದಿಂದಾಗಿ ಸಂಪೂರ್ಣ ಸ್ಥಗಿತವಾಗಿದೆ. ಸೇಂಟ್ ಪೀಟರ್ಸ್‌ಬರ್ಗ್ ಬಂದರು ಮೂಲಕ ಭಾರತಕ್ಕೆ ಕಾಗದ ಪೂರೈಕೆ ಆಗುತ್ತಿತ್ತು. ಯುದ್ಧದ ಕಾರಣದಿಂದಾಗಿ ಸರಕು ಮತ್ತು ಹಡಗಿಗೆ ವಿಮೆ ಕೊಡಲು ಯಾವುದೇ ವಿಮಾ ಸಂಸ್ಥೆ ಮುಂದಾಗುತ್ತಿಲ್ಲ. ಹೀಗಾಗಿ ರಷ್ಯಾದಿಂದ ಕಾಗದದ ಪೂರೈಕೆ ಸದ್ಯಕ್ಕೆ ಸರಿ ಹೋಗುವ ಸಾಧ್ಯತೆ ಗೋಚರಿಸುತ್ತಿಲ್ಲ.

ರಷ್ಯಾ ಬಳಿಕ ಅತಿ ಹೆಚ್ಚು ಕಾಗದ ಪೂರೈಕೆ ಆಗುತ್ತಿರುವುದು ಯುರೋಪ್‌ನ ದೇಶಗಳಿಂದ. ಆದರೆ, ಯುರೋಪ್‌ನ ಯಾವುದೇ ದೇಶ ಈಗ ಭಾರತಕ್ಕೆ ಮುದ್ರಣ ಕಾಗದ ಪೂರೈಕೆ ಮಾಡುತ್ತಿಲ್ಲ. ಆಂತರಿಕ ಬಳಕೆಯ ಬಗ್ಗೆಯೇ ಅಲ್ಲಿನ ಕಾರ್ಖಾನೆಗಳು ಗಮನ ಕೇಂದ್ರೀಕರಿಸಿವೆ. ಯುರೋಪ್‌ನಿಂದ ಆಗುತ್ತಿದ್ದ ಕಾಗದ ಪೂರೈಕೆ ಸ್ಥಗಿತಗೊಂಡಿದ್ದು ಭಾರತದಲ್ಲಿನ ಕೊರತೆಯನ್ನು ಇನ್ನಷ್ಟು ಹೆಚ್ಚಿಸಿತು. ಕೆನಡಾ ಕೂಡ ಮುದ್ರಣ ಕಾಗದ ರಫ್ತು ಮಾಡುತ್ತಿದೆ. ಆದರೆ, ಜುಲೈವರೆಗೆ ಹೊಸ ಬೇಡಿಕೆ ಸ್ವೀಕರಿಸಲು ಸಾಧ್ಯವಿಲ್ಲ ಎಂದು ಅಲ್ಲಿನ ತಯಾರಕರು ಘೋಷಿಸಿದ್ದಾರೆ.

ಆಧಾರ: ಜಿಎಸ್‌ಟಿ ಮಂಡಳಿ, ಭಾರತೀಯ ನ್ಯೂಸ್‌ಪ್ರಿಂಟ್ ತಯಾರಕರ ಸಂಘಟನೆ, ಪಿಟಿಐ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ | 101

ಶಿವನನ್ನು ಆರಾಧಿಸುವ ಕ್ರಮ

ಶಿವನನ್ನು ಪೂಜಿಸಿದ ನಂತರ ಮುದ್ರೆಯೊಂದನ್ನು ಪ್ರದರ್ಶಿಸಿ, ಸಿದ್ಧಿಬುದ್ಧಿಯರಿಂದ ಕೂಡಿರುವ, ಸೋದರನಾದ ಕುಮಾರಸ್ವಾಮಿಯಿಂದೊಡಗೂಡಿದ, ವಿಘ್ನನಿವಾರಕನಾದ, ಲಕ್ಷಲಾಭಾದಿ ದೇವತೆಗಳಿಂದ ಪರಿವೃತನಾದ, ಮಹಾ ಗಣಪತಿಯನ್ನು ಪೂಜಿಸಿ 'ಓಂ ಸುಮುಖಾಯ ನಮಃ' ಎಂದು ಉಚ್ಚರಿಸಬೇಕು. ಮೊದಲು ಓಂಕಾರವೂ, ಕಡೆಯಲ್ಲಿ ನಮಃ ಎಂಬ ಶಬ್ದವೂ ಉಳ್ಳ ಚತುರ್ಥ್ಯಂತವಾದ ನಾಮಪದಗಳಿಂದ ನಮಸ್ಕರಿಸಬೇಕು.

ನಂತರ ಮಹೋದರನೆಂಬ ದ್ವಾರಪಾಲಕನನ್ನು ಪೂಜಿಸಿ, ಆಮೇಲೆ ಹಿಮವಂತನ ಮಗಳಾದ ಪಾರ್ವತಿಯನ್ನು ಪೂಜಿಸಬೇಕು. ಚಂದನ, ಕುಂಕುಮ, ಧೂಪದೀಪಗಳಿಂದ, ನಾನಾ ವಿಧವಾದ ನೈವೇದ್ಯಗಳಿಂದ, ಆಕೆಯನ್ನು ಅರ್ಚಿಸಿದ ಬಳಿಕ, ಶಿವನಿಗೆ ನಮಸ್ಕರಿಸಬೇಕು. ಸಾಧ್ಯವಾದರೆ ಮನೆಯಲ್ಲಿಯೇ ಮಣ್ಣಿನಿಂದಾಗಲಿ, ಚಿನ್ನದಿಂದಾಗಲಿ, ಬೆಳ್ಳಿಯಿಂದಾಗಲಿ, ಧಾತುಗಳಿಂದಾಗಲಿ, ಪಾದರಸದಿಂದಾಗಲಿ ಶಿವನ ಮೂರ್ತಿಯನ್ನು ಮಾಡಿ, ಭಕ್ತಿಯುಕ್ತನಾಗಿ ಮೂರ್ತಿಗೆ ನಮಸ್ಕರಿಸಿ ಪೂಜೆಯನ್ನು ಮಾಡಬೇಕು. ಆ ಮೂರ್ತಿಯೊಂದನ್ನು ಪೂಜಿಸಿದರೆ ಎಲ್ಲ ದೇವರನ್ನೂ ಪೂಜಿಸಿದಂತಾಗುವುದು.

ಮಣ್ಣಿನಿಂದ ಲಿಂಗವನ್ನು ಮಾಡಿಡಬೇಕು. ಮನೆಯಲ್ಲಿರುವವರು ನಿಯಮಬದ್ಧವಾಗಿದ್ದು, ವಿಧಿಪೂರ್ವಕವಾಗಿ ಎಲ್ಲವನ್ನೂ ಮಾಡಬೇಕು. ಭೂತಶುದ್ಧಿಯನ್ನು ಮಾಡಿದನಂತರ ಪ್ರಾಣಪ್ರತಿಷ್ಠೆಯನ್ನು ಮಾಡಬೇಕು. ಶಿವಾಲಯದಲ್ಲಿ ದಿಕ್ಪಾಲಕರನ್ನು ಸ್ಥಾಪಿಸಿ ಪೂಜಿಸಬೇಕು. ಮನೆಯಲ್ಲಿ ಶಿವನನ್ನು ಯಾವಾಗಲೂ ಮೂಲಮಂತ್ರದಿಂದ ಪೂಜಿಸಬೇಕು. ಮನೆಯಲ್ಲಿ ಮಾತ್ರ ಸರ್ವವಿಧದಿಂದಲೂ, ದ್ವಾರಪಾಲಕರಿರಬೇಕೆಂಬ ನಿಯಮವಿಲ್ಲ. ಮನೆಯಲ್ಲಿ ನಾವು ಯಾವ ಲಿಂಗವನ್ನು ಪೂಜಿಸುವೆವೋ ಅದರಲ್ಲೇ ಎಲ್ಲವೂ ಅಡಗಿರುವುದು.

ಪೂಜೆಯನ್ನು ಮಾಡುವಾಗ, ಅಂಗದೇವತೆಗಳೊಡನೆ, ಪರಿವಾರ ದೇವತೆಗಳೊಡನೆ, ಶಿವನನ್ನು ಆವಾಹಿಸಿ ಪೂಜಿಸಬೇಕು. ಇದರಲ್ಲಿ ನಿಯಮವೇನೂ ಇಲ್ಲ. ಶಿವನ ಸಾನ್ನಿಧ್ಯವನ್ನು ಕಲ್ಪಿಸಿದ ಬಳಿಕ ತನ್ನ ಆಸನದಲ್ಲಿ ಉತ್ತರಾಭಿಮುಖವಾಗಿ ಕುಳಿತು, ಮತ್ತೆ ಆಚಮನವನ್ನು ಮಾಡಬೇಕು. ಬಳಿಕ ಕೈಗಳನ್ನು ತೊಳೆದುಕೊಂಡು ಮೂಲಮಂತ್ರದಿಂದ ಹತ್ತು ಸಲ ಪ್ರಾಣಾಯಾಮವನ್ನು ಮಾಡಬೇಕು. ಪೂಜೆಗೆ ಅವಶ್ಯಕವಾದ ಮತ್ತು ಈಪ್ಸಿತವಾದ ಪಂಚಮುದ್ರೆಗಳನ್ನೆ ಪ್ರದರ್ಶಿಸಬೇಕು. ಬಳಿಕ ಪೂಜಾವಿಧಿಯನ್ನು ಆರಂಭಿಸಬೇಕು.

ಅಲ್ಲಿ ದೀಪವೊಂದನ್ನಿಟ್ಟು ಬೆಳಗಿಸಿ, ತನ್ನ ಗುರುವಿಗೆ ನಮಸ್ಕಾರವನ್ನು ಮಾಡಿ, ಪದ್ಮಾಸನವನ್ನೋ ಅಥವಾ ಭದ್ರಾಸನವನ್ನೋ, ಇಲ್ಲದಿದ್ದರೆ ಉತ್ತಾನಾಸನವನ್ನಾಗಲೀ, ಪರ್ಯಂಕಾಸನದಲ್ಲಿ ಕುಳಿತು ಪ್ರಯೋಗಾನುಸಾರವಾಗಿ ಪೂಜಾದಿಗಳನ್ನು ಮಾಡಬೇಕು. ಮನೆಯಲ್ಲಿ ಮಾಡುವ ಪೂಜೆಗೆ ಅಷ್ಟು ನಿಯಮವಿಲ್ಲ. ಬೇರೊಂದೆಡೆ ಸುಳಿಯದಂತೆ ಮನಸ್ಸನ್ನು ಹಿಡಿದುನಿಲ್ಲಿಸಿ, ಅರ್ಘ್ಯಪಾತ್ರದಿಂದ, ಲಿಂಗವನ್ನು ತೊಳೆಯಬೇಕು. ಪೂಜಾದ್ರವ್ಯಗಳೆಲ್ಲವನ್ನೂ ಹತ್ತಿರ ಇಟ್ಟುಕೊಂಡು ಮಂತ್ರದಿಂದ ಶಿವನನ್ನು ಆವಾಹಿಸಬೇಕು.

ಶಿವನು ಕೈಲಾಸಶಿಖರವಾಸಿಯಾಗಿ, ಪಾರ್ವತೀದೇವಿ ವಲ್ಲಭನಾಗಿ, ಮಹಾಶ್ರೇಷ್ಠನಾಗಿ, ನಿರ್ಗುಣನಾಗಿ, ಸಗುಣನಾಗಿಯೂ ಇರುವನು. ಐದು ಮುಖಗಳು, ಹತ್ತು ಬಾಹುಗಳು, ಮೂರು ಕಣ್ಣುಗಳು ಇವನಿಗಿರುವುವು. ವೃಷಭಧ್ವಜನಾದ ಈಶ್ವರನು, ಕರ್ಪೂರದಂತೆ ಶುಭ್ರವಾದ ಮೈಬಣ್ಣವುಳ್ಳವನು. ದಿವ್ಯವಾದ ಅಂಗಗಳಿಂದ ಒಪ್ಪುತ್ತಿರುವನು. ತಲೆಯಲ್ಲಿ ಚಂದ್ರಕಲೆಯನ್ನು ತಳೆದು, ಜಟಾಜೂಟವನ್ನು ಧರಿಸಿ, ವ್ಯಾಘ್ರಚರ್ಮವನ್ನು ಹೊದ್ದು, ಗಜಚರ್ಮವನ್ನು ಉಟ್ಟಿರುವನು. ಶುಭಕರವಾದ ವಾಸುಕಿಯಿಂದ ಸುತ್ತುವರಿಯಲ್ಪಟ್ಟ ಅವಯವಗಳುಳ್ಳವನು. ಪಿನಾಕವೇ ಮೊದಲಾದ ಆಯುಧಗಳನ್ನು ಧರಿಸಿರುವವನು.

ಯಾರ ಮುಂದೆ ಯಾವಾಗಲೂ ಅಷ್ಟಸಿದ್ಧಿಗಳು ನರ್ತನವನ್ನು ಮಾಡುತ್ತಿರುವರೋ, ಭಕ್ತರು ಗುಂಪು ಗುಂಪಾಗಿ ನಿಂತು, 'ಜಯ, ಜಯ' ಎಂದು ಉಚ್ಚರಿಸುತ್ತಿರುವರೋ, ಮತ್ತು ದುಸ್ಸಹವಾದ ತೇಜಸ್ಸಿನಿಂದ ಯಾರನ್ನು ನೋಡಲು ಸಾಧ್ಯವಿಲ್ಲವೋ, ಅಂತಹ ದೇವಸೇವಿತನೂ, ಎಲ್ಲ ಪ್ರಾಣಿಗಳಿಗೂ ರಕ್ಷಕನೂ, ಪ್ರಸನ್ನವಾದ ಮುಖಕಮಲವುಳ್ಳವನೂ, ವೇದಶಾಸ್ತ್ರಗಳಿಂದ ಸ್ತುತಿಸಲ್ಪಡುವ. ಬ್ರಹ್ಮವಿಷ್ಣುಗಳಿಂದ ಸ್ತೋತ್ರಮಾಡಲ್ಪಟ್ಟವನೂ, ಭಕ್ತವತ್ಸಲನೂ, ಆನಂದಸ್ವರೂಪನೂ ಆದ ಶಿವನನ್ನು ಆವಾಹಿಸುವೆ – ಎಂದು ಮನಸ್ಸಿನಲ್ಲಿ ಧ್ಯಾನಿಸಿ, ಆತನಿಗೆ ಆಸನವನ್ನು ಕಲ್ಪಿಸಬೇಕು. ಪಾದ್ಯವನ್ನು, ಅರ್ಘ್ಯವನ್ನು ನೀಡಬೇಕು. ಪರಮಾತ್ಮನಾದ ಶಂಭುವಿಗೆ ಆಚಮನವನ್ನು ಒಪ್ಪಿಸಿ ಸಂತೋಷದಿಂದ ಶಂಕರನನ್ನು ಪಂಚಾಮೃತದ್ರವ್ಯಗಳಿಂದ ಅಭಿಷೇಕ ಮಾಡಬೇಕು. ಉಚಿತವಾದ ವೇದಮಂತ್ರಗಳಾಗಲೀ, ಇಲ್ಲವೇ ಚತುರ್ಥ್ಯಂತವಾದ ಶಿವನ ನಾಮಮಂತ್ರಗಳಿಂದಾಗಲಿ, ಭಕ್ತಿಯಿಂದ ಶಿವನಿಗೆ ದ್ರವ್ಯಗಳನ್ನು ಅರ್ಪಿಸಬೇಕು. ತನಗೆ ಇಷ್ಟವಾದ ವಸ್ತುವಿನಿಂದ ಶಂಕರನ ಮೇಲೆ ಅಭಿಷೇಕವನ್ನು ಮಾಡಬೇಕು. ಬಳಿಕ 'ವಾರುಣ' ಎಂದರೆ ಶುದ್ಧೋದಕದಿಂದ ಶಿವನಿಗೆ ಸ್ನಾನ ಮಾಡಿಸಬೇಕು. ಸುವಾಸನಾಪೂರಿತವಾದ ಚಂದನವನ್ನೂ ಇತರ ಲೇಪಗಳನ್ನೂ ಪ್ರಯತ್ನಪೂರ್ವಕವಾಗಿ ಒಪ್ಪಿಸಿ ಸುಗಂಧಪೂರಿತವಾದ ನೀರು ಧಾರಾಕಾರವಾಗಿ ಬೀಳುವಂತೆ ಮಾಡಬೇಕು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

'ಕೇರಳದಲ್ಲಿನ ಪುರಾತನ ಹಿಂದೂ ದೇವಾಲಯವನ್ನು ಮುಸ್ಲಿಮರು ವಶಕ್ಕೆ ಪಡೆದಿದ್ದಾರೆ. ಹಿಂದೂಗಳು ಇದನ್ನು ವಿರೋಧಿಸಿದರೂ, ಅಲ್ಲಿನ ಕಮ್ಯುನಿಸ್ಟ್ ಸರ್ಕಾರವು ಕಣ್ಮುಚ್ಚಿ ಕುಳಿತಿದೆ' ಎಂಬ ವಿವರ ಇರುವ ಪೋಸ್ಟ್ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಇದರ ಜತೆಯಲ್ಲಿ ಮಸೀದಿಯೊಂದರ ವಿಡಿಯೊವನ್ನು ಹಂಚಿಕೊಳ್ಳಲಾಗಿದೆ.

'ಇದು ಸುಳ್ಳು ಸುದ್ದಿ. ಇದು ಕೇರಳದಲ್ಲಿನ ಪುರಾತನ ದೇವಾಲಯವಲ್ಲ. ಬದಲಿಗೆ ಮಂಗಳೂರಿನ ಬಂದರ್‌ನಲ್ಲಿರುವ ಝೀನತ್ ಬಕ್ಷ್ ಮಸೀದಿ. ಇದು 1,400 ವರ್ಷಗಳಷ್ಟು ಪುರಾತನವಾದುದು ಮತ್ತು ಕರ್ನಾಟಕದಲ್ಲೇ ಅತ್ಯಂತ ಹಳೆಯದ್ದು. ಟಿಪ್ಪು ಸುಲ್ತಾನ್ ಇದನ್ನು ನವೀಕರಣ ಮಾಡಿದ್ದ. ಈ ಮಸೀದಿಯ ಬಗ್ಗೆ ಥೌಸಂಡ್ಸ್ ಷೇಡ್ಸ್ ಆಫ್ ಇಂಡಿಯಾ ಎಂಬ ಇನ್‌ಸ್ಟಾಗ್ರಾಂ ಪುಟವು ಸಾಕ್ಷ್ಯಚಿತ್ರ ಪ್ರಸಾರ ಮಾಡಿತ್ತು. ಅದನ್ನೇ ಬಳಸಿಕೊಂಡು, ಮುಸ್ಲಿಮರು ಪುರಾತನ ಮಂದಿರವನ್ನು ವಶಕ್ಕೆ ಪಡೆದಿದ್ದಾರೆ ಎಂದು ಸುಳ್ಳು ಸುದ್ದಿ ಹಬ್ಬಿಸಲಾಗಿದೆ' ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಅಲುಗಿನ ಮೇಲಿನ ನಡೆ

ಕಾಷಾಯವೇಂ ತಪಸು? ಗೃಹಲೋಕನಿರ್ವಾಹ |
ವೇಷತಾಳದ ತಪಸು, ಕಠಿಣತರತಪಸು ||
ಲೇಸಿನಿಂದದು ಸಾಗೆ ಬೇಕು ಶಮ ದಮ ಸಮತೆ |
ಅಸಿಧಾರವ್ರತವೊ – ಮಂಕುತಿಮ್ಮ

ಪದ-ಅರ್ಥ: ಕಾಷಾಯ = ಕಾವಿಬಟ್ಟೆ, ಗೃಹಲೋಕನಿರ್ವಾಹ = ಗೃಹಲೋಕ(ಗೃಹಸ್ಥ ಜೀವನ) + ನಿರ್ವಾಹ(ನಿಭಾಯಿಸುವಿಕೆ), ಲೇಸಿನಿಂದದು = ಲೇಸಿನಿಂದ + ಅದು, ಶಮ = ಮನಸ್ಸಿನ ಶಾಂತತೆ, ದಮ = ಸಂಯಮ, ಇಂದ್ರಿಯ ನಿಗ್ರಹ, ಸಮತೆ = ಸಮಾನತೆ, ಅಸಿಧಾರವ್ರತ = ಅಸಿ(ಖಡ್ಗ) + ಧಾರ(ಖಡ್ಗದ ಹರಿತವಾದ ಅಂಚು) = ಖಡ್ಗದ ಹರಿತವಾದ ಅಲಗಿನ ಮೇಲೆ ನಡೆಯುವ ವ್ರತ.

ವಾಚ್ಯಾರ್ಥ: ತಪಸ್ಸು ಎಂದರೆ ಕಾವಿಬಟ್ಟೆ ಧರಿಸುವುದೇ? ಗೃಹಸ್ಥ ಜೀವನದ ಉಸ್ತುವಾರಿ ವೇಷಹಾಕದ ತಪಸ್ಸಿದ್ದಂತೆ. ಅದು ಕಠಿಣವಾದ ತಪಸ್ಸು. ಅದು ಸರಿಯಾಗಿ ನಡೆಯಬೇಕಾದರೆ ಶಾಂತಿ, ಸಂಯಮ ಮತ್ತು ಸಮಾನತೆಗಳು ಬೇಕು. ಇದೊಂದು ಹರಿತವಾದ ಕತ್ತಿಯ ಅಲುಗಿನ ಮೇಲೆ ನಡೆಯುವ ವ್ರತ.

ವಿವರಣೆ: ಸಂನ್ಯಾಸವೆಂದರೆ ಎಲ್ಲವನ್ನೂ ಬಿಡುವುದು. ಎಲ್ಲ ಮೋಹಗಳನ್ನು, ಅಹಂಕಾರ-ಅಸೂಯೆಗಳನ್ನು ತ್ಯಾಗ ಮಾಡಿದವನು ಸಂನ್ಯಾಸಿ. ಕಾಷಾಯವೇಷವನ್ನು ಹಾಕಿಕೊಂಡು ಶಿರೋಮುಂಡನ ಮಾಡಿಸಿಕೊಂಡವನು ಎಲ್ಲರೂ ಸಂನ್ಯಾಸಿಗಳೇ? ತಪಸ್ವಿಗಳೇ? ಅವಸರದಲ್ಲಿ, ಯಾವುದೋ ಆವೇಶದಲ್ಲಿ ಕಾವಿ ಧರಿಸಿ ಸಂನ್ಯಾಸಿಯಾದರೆ, ಕರ್ಮಾಧಿಕಾರ ಹೋಗುತ್ತದೆ, ಜ್ಞಾನಾಧಿಕಾರಿ ಬರುವ ಸಂಭವವಿಲ್ಲ. ಆದರೆ ಸಂಸಾರದ ನಿರ್ವಹಣೆ ನಿಜವಾಗಿಯೂ ಒಂದು ತಪಸ್ಸು. ಅದು ಕಾವಿಬಟ್ಟೆಯನ್ನು ಹಾಕದೆ ಮಾಡುವ ತಪಸ್ಸು. ಅದು ಸುಲಭವಲ್ಲ, ಕಷ್ಟಸಾಧ್ಯವಾದದ್ದು. ಅದಕ್ಕೇ ಬಸವಣ್ಣನವರು ಅದನ್ನು ಕರ್ತಾರನ ಕಮ್ಮಟವೆಂದು ಕರೆದರು. ಸಂಸಾರ ಒಂದು ಕಮ್ಮಾರನ ಕಾರ್ಯಕ್ಷೇತ್ರ. ಕಮ್ಮಾರನು ಕಬ್ಬಿಣವನ್ನು ಕಾಸಿ, ಹೊಡೆದು, ಮೆದುವಾಗಿ ಮಾಡುವಂತೆ ಸಂಸಾರತಾಪವು ಮನುಷ್ಯ ಸ್ವಭಾವವನ್ನು ಮೆದುಮಾಡುತ್ತದೆ. ಮಡದಿ ಮಕ್ಕಳ ಪೇಚಾಟ, ಬಂಧುಬಳಗದವರ ಕಚ್ಚಾಟ, ಅಂಗಡಿಯವರ ಕೂಡ ಗುದ್ದಾಟ, ಬ್ಯಾಂಕುಗಳಲ್ಲಿ ಒದ್ದಾಟ, ಆಫೀಸುಗಳಲ್ಲಿ ಹೊಡೆದಾಟ, ಈ ಎಲ್ಲ ಆಟಗಳು ಸೇರಿ ಜೀವದ ಗಟ್ಟಿಗಂಟುಗಳನ್ನು ಹಿಸುಕಿ, ಬೇಯಿಸಿ ಹಣ್ಣು ಮಾಡುತ್ತವೆ. ಬದುಕಿನ ಸೊಟ್ಟಗಳನ್ನು ಸರಿಮಾಡುತ್ತವೆ.

ಮಹಾರಾಷ್ಟ್ರದ ಸಿದ್ಧಗಿರಿ ಮಠದ ಸಂಪ್ರದಾಯದ, ಸುಮಾರು 1725ರಲ್ಲಿ ಇದ್ದ ಕಾಡಸಿದ್ಧೇಶ್ವರರ ವಚನ ಇದನ್ನು ತುಂಬ ಮನಮುಟ್ಟುವಂತೆ ಹೇಳುತ್ತದೆ.

'ಶಿವಶಿವಾ, ಈ ಸಂಸಾರದಂದುಗ ದುಃಖ ನಾನೆಂತು ಪೇಳ್ವೆ.
ಹೊನ್ನಿನ ವ್ಯಾಪಾರವ ಮಾಡಿ, ಧಾವತಿಯಿಂದ ಗಳಿಸುವುದು ದುಃಖ
ಆ ಹೊನ್ನು ಜೋಕೆ ಮಾಡುವುದು ದುಃಖ, ಹೊನ್ನು ಹೋದ ಮೇಲೆ ಅನೇಕ ದುಃಖ,
ಹೆಣ್ಣು ತರುವುದು ದುಃಖ, ಆ ಹೆಣ್ಣು ಅಳುವುದು ದುಃಖ
ಹೆಣ್ಣು ಸತ್ತು ಹೋದ ಮೇಲೆ ಅನೇಕ ದುಃಖ...'

ಹೀಗೆ ಅನೇಕ ಸಂಸಾರದುಃಖಗಳನ್ನು ವಿವರಿಸುತ್ತ ಹೋಗುತ್ತದೆ ವಚನ. ಈ ದುಃಖಗಳನ್ನೆಲ್ಲ ಪರಿಹರಿಸಿಕೊಂಡು, ಸಂತೋಷ, ಸಮಾಧಾನಗಳನ್ನು ಪಡೆಯುವುದು ನಿಜವಾದ ತಪಸ್ಸು. ಅದು ಸರಿಯಾಗಿ ನಡೆಯಬೇಕಾದರೆ ನಮಗೆ ಮೂರು ಪೂರ್ವ ಸಿದ್ಧತೆಗಳಿರಬೇಕು. ಮೊದಲನೆಯದು ಶಮ. ಶಮವೆಂದರೆ ಚಿಂತೆಗಳನ್ನು ಕಡಿಮೆ ಮಾಡಿಕೊಂಡು, ಮನಸ್ಸನ್ನು ಸ್ವಸ್ಥವಾಗಿರಿಸಿಕೊಳ್ಳುವುದು. ಎರಡನೆಯದು ದಮ. ದಮವೆಂದರೆ ಬಾಹ್ಯ ಇಂದ್ರಿಯಗಳನ್ನು ಹದ್ದಿನಲ್ಲಿ ಇಟ್ಟುಕೊಳ್ಳುವುದು. ಮೂರನೆಯದು ಸಮತೆ. ಸಮತೆಗೆ ಎರಡು ಅರ್ಥಗಳು. ಒಂದು, ಸುಖ-ದುಃಖ, ಲಾಭ-ನಷ್ಟ, ಪ್ರಿಯ-ಅಪ್ರಿಯ, ಶತ್ರು-ಸ್ನೇಹಿತ ಮುಂತಾದ ದ್ವಂದ್ವಗಳಲ್ಲಿ ವಿಕಾರವನ್ನು ಹೊಂದದೆ ಇರತಕ್ಕ ಸ್ಥಿತಿ. ಎರಡು, ಆತ್ಮವಸ್ತು ಸರ್ವಪ್ರಾಣಿಗಳಲ್ಲೂ ಇದೆ ಎಂದು ನಂಬಿ ನಡೆಯುವುದು. ಈ ಮೂರನ್ನೂ ಸಾಧಿಸಿ ನಡೆಯುವುದು, ಹರಿತವಾದ ಖಡ್ಗದ ಅಲುಗಿನ ಮೇಲೆ ನಡೆಯುವಷ್ಟೇ ಕಷ್ಟದ ಕಾರ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ಏಪ್ರಿಲ್ 22, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ಚೈತ್ರ ಕೃಷ್ಣ ಷಷ್ಠಿ ಗಂ. 08-43 ನಕ್ಷತ್ರ: ಪೂರ್ವಾಷಾಢ ಗಂ. 20-14 ಯೋಗ: ಶಿವ ಗಂ. 07-11 ಸಿದ್ಧ ಗಂ. 28-13 ಕರಣ: ವಣಿಜ ಗಂ. 08-43, ಮೇಷ ಮಾಸದ 08 ನೇ ದಿನ. ರಾಹುಕಾಲ : ಬೆಳಿಗ್ಗೆ 10:30 – 12:00 ಸೂರ್ಯೋದಯ : 06-17 ಸೂರ್ಯಾಸ್ತ : 06-41 ಮುಸ್ಲಿಂ ದಿನಾಂಕ : 20 ರಂಜಾನ್ ಅದೃಷ್ಟ ಸಂಖ್ಯೆ: 11, 13

ಮೇಷ: ನಿಯಮ, ನಿಷ್ಠೆಗಳಿಂದ ಅಧಿಕಾರದಲ್ಲಿ ಪದೋನ್ನತಿ. ವಿದೇಶ ಪ್ರಯಾಣದ ನಿಮ್ಮ ಹಲವು ವರ್ಷಗಳ ಕನಸು ನೆರವೇರುವ ಅವಕಾಶ. ನಾಸ್ತಿಕತೆಯನ್ನು ಬದಿಗಿಟ್ಟು ದೇವತಾರಾಧನೆಯ ಹಾದಿ ಹಿಡಿಯಿರಿ.

ವೃಷಭ: ಈ ದಿನ ಸಿಗುವ ಅನಿರೀಕ್ಷಿತ ಅವಕಾಶಗಳನ್ನು ಯಾವುದೇ ಮುಜುಗರವಿಲ್ಲದೆ ಬಳಸಿಕೊಳ್ಳದಿದ್ದರೆ ಪುನಃ ಪುನಃ ನಿಮ್ಮ ದಡ್ಡತನ ಪ್ರದರ್ಶಿಸಿದಂತಾಗುವುದು. ಬಂಧು ಮಿತ್ರರ ಸಹಾಯ ಸಹಕಾರಗಳು ಸಕಾಲಕ್ಕೆ ಒದಗುವುದು.

ಮಿಥುನ: ಆಸ್ತಿಯನ್ನು ಕೊಳ್ಳುವಾಗ ಎಲ್ಲಾ ವಿವರಗಳ ಬಗ್ಗೆ ಎರಡೆರಡು ಬಾರಿ ಮಾಹಿತಿ ಪಡೆದುಕೊಳ್ಳಿ. ಸರ್ಕಾರಿ ನೌಕರರಿಗೆ ಹೆಚ್ಚಿನ ಭತ್ಯೆ ದೊರೆಯಲಿದೆ. ಗೃಹ ನಿರ್ಮಾಣ ವಿಚಾರದಲ್ಲಿ ಹೆಚ್ಚಿನ ಆಸಕ್ತಿ ತೋರುವಿರಿ.

ಕರ್ಕಾಟಕ: ಮಿತ್ರವರ್ಗದ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುವ ಅವಕಾಶ ಬರುವುದು. ಮನೆಯಲ್ಲಿನ ಹೆಚ್ಚುವರಿ ಆದಾಯದಿಂದ ಹುಮ್ಮಸ್ಸು ಹೆಚ್ಚುವುದು. ಶ್ರಮದ ಬದುಕಿನಿಂದ ಹೊಸ ಘಟ್ಟವನ್ನು ತಲುಪುವಂತಾಗಲಿದೆ.

ಸಿಂಹ: ಗುಡಿ ಕೈಗಾರಿಕೆಯವರಿಗೆ ಈ ದಿನ ಸಾಕಷ್ಟು ಲಾಭ. ವಾಹನಾದಿಗಳ ಅಥವಾ ದೊಡ್ಡ ದೊಡ್ಡ ಯಂತ್ರಗಳಲ್ಲಿ ಕೆಲಸ ಮಾಡುವವರಿಗೆ ಜಾಗ್ರತೆ ಅಗತ್ಯ. ನಿಮ್ಮೆಲ್ಲಾ ಕೆಲಸಗಳಿಗೂ ಕುಟುಂಬ ವರ್ಗದವರ ಬೆಂಬಲವಿರುವುದು.

ಕನ್ಯಾ: ವಿದ್ಯಾರ್ಥಿ ವರ್ಗಕ್ಕೆ ಬಂದಿರುವ ಜವಾಬ್ದಾರಿಯುಕ್ತವಾದ ನಡವಳಿಕೆ ಮತ್ತು ಉತ್ಸಾಹದಿಂದ ಏಳಿಗೆಯ ಸೂಚನೆ. ರಫ್ತು ಕೆಲಸಗಳಲ್ಲಿ ಪ್ರಗತಿ. ನಿರುದ್ಯೋಗಿಗಳಿಗೆ ಉತ್ತಮ ಅವಕಾಶಗಳು ಒದಗಿ ಬರಲಿದೆ.

ತುಲಾ: ನಿಮ್ಮ ಯೋಜನೆಗಳು ನಿರಾತಂಕವಾಗಿ ಮುಂದುವರೆಯಲಿವೆ. ಸಾಧನೆ ಹಾಗೂ ಅಭಿವೃದ್ಧಿ ಸಾಧಿಸುವ ದಿನ. ಸಮಾಲೋಚಿಸಿ ನಿರ್ಧಾರ ಕೈಗೊಳ್ಳುವುದು ಸೂಕ್ತ. ಲೇವಾದೇವಿ ವ್ಯವಹಾರಗಳು ಮುಂದುವರೆಯುವುದು.

ವೃಶ್ಚಿಕ: ಆಹಾರದ ವಿಷಯದಲ್ಲಿ ರಾಜಿ ಮಾಡಿಕೊಳ್ಳಬೇಡಿ. ಕ್ರೀಡಾಪಟುಗಳಿಗೆ ದೇಹಬಾಧೆ ಕಾಣಿಸಬಹುದು. ನಿಮ್ಮ ವಾಸಸ್ಥಾನ ಅಥವಾ ಉದ್ಯೋಗ ಬದಲಾಗುವ ಸಂಭವ. ಹೊಸ ಉದ್ಯೋಗದಲ್ಲಿ ಸ್ವಾತಂತ್ರ್ಯವಿರುವುದು.

ಧನು: ಸರ್ಕಾರಿ ಅಧಿಕಾರಿಗಳು ಕಾನೂನು ವಿಷಯಗಳ ಬಗ್ಗೆ ಹೆಚ್ಚಿನ ಗಮನ ಹರಿಸಬೇಕಾಗಬಹುದು. ರಾಜಕೀಯ ಭವಿಷ್ಯದ ಬಗ್ಗೆ ನಿರ್ಧಾರ ಕೈಗೊಳ್ಳಲು ಚಿಂತನೆ ನಡೆಸುವಿರಿ. ಆರಕ್ಷಕ ಅಧಿಕಾರಿಗಳಿಗೆ ಒತ್ತಡ ಕಡಿಮೆಯಾಗಲಿದೆ.

ಮಕರ: ಸಮಯ ಪಾಲನೆ ಮಾಡುವುದನ್ನು ರೂಢಿಸಿಕೊಳ್ಳಿ. ವೈಯಕ್ತಿಕ ಕೆಲಸಗಳಿಗೆ ಮೇಲಧಿಕಾರಿಗಳಿಂದ ಯಾವುದೇ ಅಡಚಣೆ ಇರುವುದಿಲ್ಲ. ಮಕ್ಕಳ ಶೈಕ್ಷಣಿಕ ವಿಚಾರದಲ್ಲಿ ಹೆಚ್ಚಿನ ಮುತುವರ್ಜಿಯನ್ನು ತೋರಿಸಿ.

ಕುಂಭ: ಆಫೀಸಿನ ಕೆಲಸದ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮ ಮತ್ತು ಉತ್ಸಾಹವನ್ನು ಕೈಗೊಳ್ಳಬೇಕಾಗುವುದು. ಉದ್ಯೋಗದಲ್ಲಿ ಸ್ಥಳ ಬದಲಾವಣೆ ಉದ್ದೇಶವಿದ್ದರೆ, ಅಧಿಕಾರಿಗಳೊಡನೆ ಹೇಳಿಕೊಳ್ಳಲು ಹಿಂಜರಿಕೆ ಬೇಡ.

ಮೀನ: ಕೇವಲ ನಂಬಿಕೆಯಿಂದ ಮಾಡಿದ ವ್ಯವಹಾರದಲ್ಲಿ ಮೋಸ ಹೋಗುವ ಸಂಭವವಿದೆ. ದೀರ್ಘಕಾಲೀನ ಯೋಜನೆ ಫಲದಾಯಕವೆನಿಸಲಿದೆ. ಆಶಾವಾದಿಗಳಾಗಿರುವಿರಿ. ನಿಮ್ಮ ಸ್ಪರ್ಧಾಮನೋಭಾವ ತೀವ್ರಗೊಳ್ಳುವುದು.

ಪದಬಂಧ 4935

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಹೊರಗೆ ತಿರುಗಿದಾಗ ಆವರಿಸಿದ ಧೂಮ! (2)
5.ಅತ್ಯಂತ ಕೊನೆಯ ಮಿತಿ (5)
6.ಗಡಕ್ಕನೆ ಬಂದೆರಗಿದ ಗಂಡು ಬೆಕ್ಕು (3)
7.ಮರದ ಹತ್ತಿರ ಹಳ್ಳಿಗನಿದ್ದಾನೆ (3)
8.ಸಮಾಜದ ಎಲ್ಲರಿಗೂ ಸಂಬಂಧಿಸಿದ್ದು (5)
9.ಸಂವಿಧಾನದಲ್ಲಿಯೇ ರಾಜಿಯನ್ನು ಹುಡುಕಿ! (3)
10.ಆಳವಾದ ಗುಂಡಿ (3)
13.ಗಣಿತದಲ್ಲಿ ಎರಡು ರಾಶಿಗಳು ಸಮವೆಂದು ದೃಢೀಕರಿಸುವುದು (5)
14 ಮೊಟ್ಟೆ ಇಲ್ಲಿದೆ (2)

ಮೇಲಿಂದ ಕೆಳಕ್ಕೆ
1.ಕೊನೆಗೆ ಯೋಗವಿದ್ದದ್ದಕ್ಕೇ ಈ ಪ್ರಯೋಜನ! (4)
2.ಸತ್ತವರನ್ನು ಹೂಳುವ ಜಾಗ (3)
4.ಜಾಮೀನಾಗಿ ನಿಲ್ಲುವವನು (4)
5.ಕೊನೆ ಅಥವಾ ಅಂತ್ಯ (5)
7.ಈತ ಅಡುಗೆಯಲ್ಲಿ ನುರಿತವ (5)
9.ಸಂತನಲ್ಲಿ ಸಭ್ಯ ಅಡಗಿರುವನಲ್ಲಾ! (4)
11.ನಿಯಮ ಅಥವಾ ಹತೋಟಿಯಿದು (4)
12.ಕಣ ಕೊನೆಗಿದ್ದರೆ ಕಾಲಮ್ ಕಾಣುವುದೇ? (3)



4934ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಮಸ್ಥಿತಿ 3.ಮಂದಹಾಸ 5.ಮಸುಕು 7.ರಪ 9.ಸ್ಥಾನ 10.ಅಮಲು 11.ಮಾನ 12.ಟನ 14.ಪವನ 16.ಕಡುಜಾಣ 17.ಗತ್ಯಂತರ

ಮೇಲಿಂದ ಕೆಳಕ್ಕೆ: 1.ಸಸಾರ 2.ತಿಮ 3.ಮಂಕು 4.ಸದನ 6.ಸುವರ್ಣಮಹೋತ್ಸವ 8.ಪದವೀದಾನ 9.ಸ್ಥಾನಪಲ್ಲಟ 11.ಮಾದಕ 13.ನಗರ 14.ಪಣ 15.ನಗ

ಸುಡೊಕು 5321

			4		2		7	
3		6				2		5
	2			5			8	
8		5						1
			5	9	3		2	
7		2		6		5		4
				2		8		7
2		7					6	
6			7		9	4		

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5320 ಸುಡೊಕು

5	3	4	9	8	2	1	7	6
1	7	6	3	4	5	9	8	2
9	8	2	1	6	7	3	4	5
7	2	3	5	9	8	6	1	4
6	5	9	7	1	4	2	3	8
4	1	8	2	3	6	5	9	7
2	9	5	8	7	1	4	6	3
3	6	7	4	2	9	8	5	1
8	4	1	6	5	3	7	2	9

ಶೋಕಿವಾಲ

ಅಜಯ್ ರಾವ್, ಸಂಜನಾ ಆನಂದ್

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಪ್ರತಿಯೊಂದನ್ನೂ ಕಲಿಕೆ ಎಂದೇ ಭಾವಿಸುತ್ತಾ ಸಾಗುತ್ತಿರುವ ನಟ ಅಜಯ್ ರಾವ್ ಅವರು ಈಗ 'ಶೋಕಿವಾಲ'ನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಲವ್ವರ್‌ಬಾಯ್, ರೊಮ್ಯಾಂಟಿಕ್ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಅವರು ಈಗ ಹಾಸ್ಯಪ್ರಧಾನ ಪಾತ್ರದಲ್ಲಿ ಮೊದಲ ಬಾರಿ ಅಭಿನಯಿಸುತ್ತಿದ್ದಾರೆ.

'ನಿಜ ಕಲಾವಿದನಿಗೆ ಸಾವಿಲ್ಲ

ಶೋಕಿವಾಲನ ಮಾತು

ಶರತ್ ಹೆಗ್ಡೆ

● **ಸಿನಿ ಬದುಕು ಹೇಗಿದೆ?**

ಸದ್ಯ ಚೆನ್ನಾಗಿದೆ. ಸಾಕಷ್ಟು ಏರಿಳಿತ ಕಂಡಿದ್ದೇನೆ. ಪ್ರತಿಯೊಂದೂ ಕಲಿಕೆಯೇ ಆಗಿದೆ. ಗೆಲುವು, ಸೋಲು, ಸನ್ಮಾನ–ಅವಮಾನ ಎಲ್ಲವನ್ನೂ ನೋಡಿದ್ದೇನೆ. ಹಾಗಾಗಿ ಹೀಗೇ, ಇಂತಿಷ್ಟೇ ಎಂದು ಅಲ್ಲ. ಹಾಗಿದ್ದರೂ ಚಿತ್ರರಂಗ ನನ್ನನ್ನು ವಿಶ್ವಾಸದಿಂದ ಉಳಿಸಿಕೊಂಡಿದೆ. ನಿರ್ಮಾಪಕರು ನಂಬಿಕೆ ಇಟ್ಟು ಅವಕಾಶ ಕೊಡುತ್ತಿದ್ದಾರೆ. ಅಷ್ಟರಮಟ್ಟಿಗೆ ಈ ಚಿತ್ರರಂಗಕ್ಕೆ ನಾನು ಕೃತಜ್ಞನಾಗಿದ್ದೇನೆ.

● **ಯಾರು ಈ 'ಶೋಕಿವಾಲ'?**

ಎಲ್ಲರೂ ಅವರವರ ಬದುಕಿನ ಒಂದು ವಯಸ್ಸಿನಲ್ಲಿ 'ಶೋಕಿವಾಲ'ರೇ ಆಗಿರುತ್ತಾರೆ. ತುಂಟತನ, ಚೇಷ್ಟೆ, ಯಾಮಾರಿಸುವುದು, ಹಾಸ್ಯಪ್ರವೃತ್ತಿ ಇವೆಲ್ಲವೂ ಆ ಶೋಕಿತನದಲ್ಲಿ ಇರುತ್ತದೆ. ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಶೋಕಿ ಮಾಡುವುದಕ್ಕೇನೂ ಕಡಿಮೆ ಇರುವುದಿಲ್ಲ. ಇನ್ನೊಬ್ಬರನ್ನು ಯಾಮಾರಿಸುವುದರಲ್ಲೂ ಒಂದು ತರಹದ ಸವಿ ಇರುತ್ತದೆ. ಅದು ಯಾರಿಗೂ ಹಾನಿ ಮಾಡದ ಯಾಮಾರಿಸುವಿಕೆ. 'ಶೋಕಿವಾಲ'ನ ವಯಸ್ಸಿನಲ್ಲಿರುವವವರಿಗೆ ನಾವೂ ಹೀಗೆ ಇದ್ದೇವೆ ಅನಿಸುತ್ತದೆ. ಮಕ್ಕಳಿಗೆ ನಾವೂ ಹೀಗಾಗಬೇಕು ಅನಿಸುತ್ತದೆ. ಆ ವಯಸ್ಸು ಕಳೆದವರಿಗೆ ನಾವು ಹೀಗಿದ್ದೆವು ಅನಿಸುವ ಪಾತ್ರವಿದು.

● **ಏನು ಹೇಳಲು ಹೊರಟಿದ್ದೀರಿ?**

ಯಾವುದೇ ಗಂಭೀರ ಬೋಧನೆಗೆ ಹೋಗಿಲ್ಲ. ಸಣ್ಣ ಸಣ್ಣ ಸಂಗತಿಗಳನ್ನು ಸೂಕ್ಷ್ಮವಾಗಿ ಹೇಳುತ್ತಲೇ ಹೋಗಿದ್ದೇವೆ. ಒಟ್ಟಾರೆ ತುಂಬು ಮನರಂಜನಾ ಪ್ರಧಾನ ಚಿತ್ರ. ಹುಡುಗಿಯರಿಗಂತೂ ತುಂಬಾ ಇಷ್ಟವಾಗುತ್ತದೆ. ಶೋಕಿವಾಲ ಎಷ್ಟು ಹುಡುಗಿಯರ ಹಿಂದೆ ಬೀಳುತ್ತಾನೋ ಲೆಕ್ಕವಿಲ್ಲ. ನೋಡಿದಾಗ ಚಿಲ್ ಅನಿಸುವ ಸಿನಿಮಾ.

> ### ನಿರೀಕ್ಷೆ ಹುಸಿಗೊಳಿಸುವುದಿಲ್ಲ
>
> ಅಜಯ್ ಅವರನ್ನು ಮೊದಲ ಬಾರಿ ಕಾಮಿಡಿ ಜಾನರ್‌ನಲ್ಲಿ ನೋಡುತ್ತೀರಿ. ಹಳ್ಳಿಗಳಲ್ಲಿ ನಡೆಯುವ ಕಥೆ ಇದು. ಡಾ.ಟಿ.ಆರ್.ಚಂದ್ರಶೇಖರ್ ಈ ಚಿತ್ರ ನಿರ್ಮಿಸಿದ್ದಾರೆ. ಅಜಯ್, ಸಂಜನಾ ಆನಂದ್ ಜೊತೆ ಹಿರಿಯ ಕಲಾವಿದರ ದೊಡ್ಡ ತಾರಾಗಣವೇ ಇದೆ. ತಮಾಷೆಯನ್ನೇ ಭಿನ್ನವಾಗಿ ಹೇಳಿದ್ದೇವೆ. ಕಲಾವಿದರು, ತಂತ್ರಜ್ಞರೇ ಈ ಸಿನಿಮಾದ ಆಧಾರ ಸ್ತಂಭಗಳು. ಪ್ರೇಕ್ಷಕನ ನಿರೀಕ್ಷೆಯನ್ನು ಹುಸಿಗೊಳಿಸುವುದಿಲ್ಲ.
>
> – **ಜಾಕಿ (ಬಿ. ತಿಮ್ಮೇಗೌಡ)**, ಶೋಕಿವಾಲ ನಿರ್ದೇಶಕ

● **ನಿಮ್ಮ ಮತ್ತು ಸಂಜನಾ ಆನಂದ್ ಅವರ ಕಾಂಬಿನೇಷನ್ ಹೇಗಿದೆ?**

ತುಂಬಾ ಚೆನ್ನಾಗಿದೆ. ತೆರೆಯ ಮೇಲೆ ಅವರು ತುಂಬಾ ಮುದ್ದಾಗಿ ಕಾಣಿಸುತ್ತಾರೆ. 'ಶೋಕಿವಾಲ'ನಿಗೆ ತಕ್ಕ ಜೋಡಿಯಾಗಿ ಅವರು ಹೊಂದಾಣಿಕೆಯಿಂದ ತಮ್ಮ ಅಭಿನಯ ತೋರಿಸಿದ್ದಾರೆ. ಅವರ ಪಾತ್ರ ಖಂಡಿತವಾಗಿಯೂ ಎಲ್ಲರಿಗೂ ಇಷ್ಟವಾಗುತ್ತದೆ.

● **ಕೆಲವು ಚಿತ್ರಗಳ ಸಂದರ್ಭದಲ್ಲಿ ತಾವು ಚರ್ಚೆಗೆ ಒಳಗಾಗಿದ್ದೀರಿ? ನಿಮ್ಮ ನಿಲುವು ಏನು?**

ನನ್ನ ನಿಲುವು ಸಿನಿಮಾ ಪರವಾದ ಪ್ರಾಮಾಣಿಕತೆ. ನಮ್ಮ ಕೆಲಸಗಳು ಸಿನಿಮಾ ಮೇಲೆ ಪರಿಣಾಮ ಬೀರುತ್ತವೆ ಎಂದರೆ ಅದನ್ನು ನೇರವಾಗಿ ನಿರ್ಮಾಪಕರಿಗೆ ಹೇಳಿಬಿಡುತ್ತೇನೆ. ಏಕೆಂದರೆ ನಾಳೆ ಸಿನಿಮಾ ಏನಾದರೂ ಹೆಚ್ಚು ಕಡಿಮೆ ಆದರೆ 'ನನಗೆ ಮೊದಲೇ ಗೊತ್ತಿತ್ತು' ಎಂದು ಹೇಳುವಂತಾಗಬಾರದು. ತಪ್ಪುಗಳಾಗುವ ಸಾಧ್ಯತೆಯನ್ನು ತಡೆಯುವುದೇ ನನ್ನ ನೇರವಂತಿಕೆಯ ಉದ್ದೇಶ. ಅಲ್ಲಿ ನಾನು ಕೆಟ್ಟವನೆನಿಸಿಕೊಂಡರೂ ಚಿಂತೆಯಿಲ್ಲ. ಅದನ್ನು ಯಾರೂ 'ಅಹಂ' ನೆಲೆಯಲ್ಲಿ ತೆಗೆದುಕೊಳ್ಳಬಾರದು. ಹಾಗೆಂದು ನಾನು ಹೇಳಿದ್ದೇ ಅಂತಿಮ ಅಲ್ಲ. ನಿರ್ಧಾರ ನಿರ್ಮಾಪಕರದ್ದು. ನಾವು ಚರ್ಚೆಗೆ ಒಳಗಾಗಲೇಬೇಕು. ಇಲ್ಲವಾದರೆ ನಮಗೆ ಜೀವಂತಿಕೆ ಇರಬೇಕಲ್ಲವಾ?

ಚರ್ಚೆಯ ಮೂಲಕ ನಾವು ತೆರೆದುಕೊಳ್ಳಬೇಕು. ನಿಜವಾದ ಕಲಾವಿದ ಯಾವತ್ತೂ ಸಾಯುವುದಿಲ್ಲ. ಅದನ್ನು ನಮ್ಮ ಉದ್ಯಮದ ಹಿರಿಯ ಕಲಾವಿದರು ತೋರಿಸಿಕೊಟ್ಟಿದ್ದಾರೆ. ಹಾಗಾಗಿ ಚರ್ಚೆ, ಮಾತು ಜೀವಂತವಾಗಿರಲೇಬೇಕು.

● **'ಶೋಕಿವಾಲ'ನ ನಿರ್ದೇಶಕರು ಹೇಗಿದ್ದರು?**

ತುಂಬಾ ಫೋಕಸ್ಡ್ ವ್ಯಕ್ತಿ. ಚಿತ್ರದ ಮೇಲೆ ಗಮನ ಕೇಂದ್ರೀಕರಿಸಿದರೆ ಮುಗಿಯಿತು. ಅದು ಪೂರ್ಣಗೊಳ್ಳುವವರೆಗೆ ಬೇರೆ ವಿಚಾರಗಳೇ ಅವರಲ್ಲಿಲ್ಲ. ಅವರೊಂದಿಗೆ ಕೆಲಸ ಮಾಡಿದ್ದು ಒಳ್ಳೆಯ ಅನುಭವ.

● **ನಿಮ್ಮ ನಿರ್ಮಾಣ ಸಂಸ್ಥೆಯ ಯೋಜನೆಗಳು?**

ಶ್ರೀಕೃಷ್ಣ ಆರ್ಟ್ಸ್ ಆ್ಯಂಡ್ ಕ್ರಿಯೇಟರ್ಸ್ ಸಂಸ್ಥೆಯಿಂದ ಹೊಸ ಪ್ರಕಟಣೆ ಶೀಘ್ರವೇ ಹೊರಡಿಸುತ್ತೇವೆ. ಈಗ ಅವೆಲ್ಲವೂ ಮಾತುಕತೆಯ ಹಂತದಲ್ಲಿವೆ. ಒಳ್ಳೆಯ ಕಂಟೆಂಟನ್ನು ಸಿನಿ ಪ್ರೇಕ್ಷಕರಿಗೆ ಕೊಡುತ್ತೇವೆ. ❖

ಭೂಮಿಕಾ

ಮೇನಲ್ಲಿ 'ಚಂದ್ರಲೇಖ ರಿಟರ್ನ್ಸ್'

ಎನ್.ಓಂಪ್ರಕಾಶ್ ರಾವ್ ನಿರ್ದೇಶನದ 'ಚಂದ್ರಲೇಖ ರಿಟರ್ನ್ಸ್' ಚಿತ್ರದ ಚಿತ್ರೀಕರಣ ಮೇ 25 ರಂದು ಆರಂಭವಾಗಲಿದೆ. ಇದು ಅವರ ನಿರ್ದೇಶನದ 48ನೇ ಚಿತ್ರ.

'ಲವ್ ಮಾಕ್ಟೇಲ್' ಚಿತ್ರದ ಮೂಲಕ ಜನಪ್ರಿಯರಾಗಿರುವ ಅಭಿ ಈ ಚಿತ್ರದ ನಾಯಕನಾಗಿ ನಟಿಸುತ್ತಿದ್ದಾರೆ. ನೂತನ ಪ್ರತಿಭೆ ಭೂಮಿಕಾ ಎಲ್. ಮಧುಸೂದನ್ ಈ ಚಿತ್ರದ ನಾಯಕಿ. ಅನನ್ಯಾ ಪಂಡಿತ್, ರಂಗಾಯಣ ರಘು, ಅಚ್ಯುತಕುಮಾರ್, ಅವಿನಾಶ್, ಸುಧಾ ಬೆಳವಾಡಿ, ಅವಿನಾಶ್, ಸುಚೇಂದ್ರ ಪ್ರಸಾದ್, ಚಿತ್ರ ಶೆಣೈ, ಸಂಗೀತ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ.

ಹಾರರ್ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಓಂಪ್ರಕಾಶ್ ರಾವ್ ಅವರೇ ಕಥೆ, ಚಿತ್ರಕಥೆ ಬರೆದಿದ್ದಾರೆ. ಎಂ.ಎಸ್. ರಮೇಶ್ ಸಂಭಾಷಣೆ ಬರೆದಿದ್ದಾರೆ. ಅನೂಪ್ ಸೀಳಿನ್ ಸಂಗೀತ ನಿರ್ದೇಶನ, ರವಿಕುಮಾರ್ ಛಾಯಾಗ್ರಹಣ, ಲಕ್ಷ್ಮಣ್ ರೆಡ್ಡಿ ಸಂಕಲನ ಹಾಗೂ ರವಿವರ್ಮ ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಓಂಪ್ರೊಡಕ್ಷನ್ ಲಾಂಛನದಲ್ಲಿ ರಾವ್ ಅವರೇ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ.

'ರಾಜ್ ಸೌಂಡ್ಸ್'ನ ಮೈಕ್ ಚೆಕ್

ಕೋಸ್ಟಲ್‌ವುಡ್‌ನಲ್ಲಿ ಈಗ ಧ್ವನಿ–ಬೆಳಕು ಮೂಡಿದೆ. ಮೇ 20ರಂದು ರಾಜ್ 'ಸೌಂಡ್ಸ್ ಆ್ಯಂಡ್ ಲೈಟ್ಸ್' ತುಳು ಚಿತ್ರ ತೆರೆ ಬೆಳಗಲಿದೆ.

ರಾಜಣ್ಣನ ಮಗ ರಿಶಿ ಒಬ್ಬ ಕಾರ್ಯಕ್ರಮ ನಿರ್ವಾಹಕ (ಈವೆಂಟ್ ಮ್ಯಾನೇಜರ್). ತಾನೊಬ್ಬ ದೊಡ್ಡ ವ್ಯಕ್ತಿಯಾಗಬೇಕು ಎಂದು ಉದ್ದೇಶಿಸಿ ಸಾಕಷ್ಟು ಹೋರಾಟ ಮಾಡುತ್ತಿರುತ್ತಾನೆ. ಒಂದು ದೊಡ್ಡ ಕಾರ್ಯಕ್ರಮ ಆಯೋಜಿಸುವಲ್ಲಿ ರಿಶಿ ಯಶಸ್ವಿಯಾದನೇ ಇಲ್ಲವೇ ಎಂಬುದು ಚಿತ್ರದ ತಿರುಳು.

ಒಂದು ಮೊಟ್ಟೆಯ ಕಥೆ ಚಿತ್ರದ ನಿರ್ಮಾಣ ಸಂಸ್ಥೆಯೇ ಈ ಚಿತ್ರವನ್ನೂ ನಿರ್ಮಿಸಿದೆ.

ರಾಹುಲ್ ಅಮೀನ್ ಚಿತ್ರದ ನಿರ್ದೇಶಕರು. ವಿನೀತ್ ವಿ.ಜೆ. ಅವರ ಕತೆಯಿದೆ. ಕರೀಷ್ಮಾ ಅಮೀನ್, ವಿನೀತ್ ವಿ.ಜೆ. ಮತ್ತು ಅರವಿಂದ ಬೋಳಾರ್ ತಾರಾಗಣದಲ್ಲಿದ್ದಾರೆ. ವೈಭವ್ ಫ್ಲಿಕ್ಸ್ ಸಂಸ್ಥೆ, ಮ್ಯಾಂಗೋ ಪಿಕಲ್ ಬ್ಯಾನರ್ ಅಡಿ ಈ ಚಿತ್ರ ನಿರ್ಮಿಸುತ್ತಿದೆ. ❖

FORUM MALL PVR · ORION MALL PVR · VAISHNAVI MALL PVR · MARKET CITY PVR · REGALIA PVR · VR PVR · ARENA PVR · SPIRIT PVR · VEGA CITY PVR · VR Mall INOX · Mantri INOX · Central INOX · Swagath INOX · Garuda INOX · RMZ INOX · FORUM INOX · BROOKFIELD INOX · LIDO INOX · ETA Cinépolis · RMM Cinépolis · ORION EAST Cinépolis · SHANTINIKETAN Cinépolis · FUN Cinépolis

ARCH MALL GOPALAN CINEMAS · INNOVATION GOPALAN CINEMAS · LEGACY GOPALAN CINEMAS · GRAND GOPALAN CINEMAS · SIGNATURE · CARNIVAL · INNOVATIVE MULTIPLEX · KINO CINEMAS · SPI CINEMAS

ಮೈಸೂರು : DRC · sathyam · PVR · MYSURU VISION CINEMAS

ಶಿವಮೊಗ್ಗ : BIG Cinemas

ಗುಲ್ಬರ್ಗ : MUKTA A2 CINEMAS · SHETTY'S MULTIPLEX · MIRAJ CINEMAS

ಮಂಗಳೂರು : Bharath Cinemas · PVR · Cinépolis

ಉಡುಪಿ : Bharath Cinemas · BIG Cinemas

ಹಾಗೂ ರಾಜ್ಯಾದ್ಯಂತ ನಿಮ್ಮ ನೆಚ್ಚಿನ ಚಿತ್ರಮಂದಿರಗಳಲ್ಲಿ

ನಿರ್ದೇಶನ ಯೋಗರಾಜ್ ಭಟ್ ನಿರ್ಮಾಪಕರು ಶ್ರೀಮತಿ ಉಮಾ, ಎಂ. ರಮೇಶ್ ರೆಡ್ಡಿ

ಸಂಗೀತ ಅರ್ಜುನ್ ಜನ್ಯ ಛಾಯಾಗ್ರಹಣ ಸಂತೋಷ್ ರೈ ಪಾತಾಜೆ ಸಾಹಿತ್ಯ ಜಯಂತ್ ಕಾಯ್ಕಿಣಿ, ಯೋಗರಾಜ್ ಭಟ್

ಆದೇಶದ ಬಳಿಕವೂ ಜಹಾಂಗೀರ್‌ಪುರಿಯಲ್ಲಿ ತೆರವು ನಡೆಸಿದ್ದರೆ ಗಂಭೀರ ವಿಚಾರ: 'ಸುಪ್ರೀಂ'

ನೆಲಸಮ: ಯಥಾಸ್ಥಿತಿ ಆದೇಶ ವಿಸ್ತರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿಯ ಜಹಾಂಗೀರ್‌ಪುರಿಯಲ್ಲಿ ಉತ್ತರ ದೆಹಲಿ ಮಹಾನಗರ ಪಾಲಿಕೆ (ಎನ್‌ಡಿಎಂಸಿ) ಕೈಗೊಂಡಿದ್ದ 'ಒತ್ತುವರಿ ತೆರವು' ಕಾರ್ಯಾಚರಣೆ ಪ್ರದೇಶದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಬುಧವಾರ ನೀಡಿದ್ದ ಆದೇಶವನ್ನು ಮುಂದಿನ ಆದೇಶದವರೆಗೆ ಸುಪ್ರೀಂ ಕೋರ್ಟ್ ಗುರುವಾರ ವಿಸ್ತರಿಸಿದೆ. ಹನುಮ ಜಯಂತಿ ಮೆರವಣಿಗೆ ಸಂದರ್ಭದಲ್ಲಿ ಭಾರಿ ಸಂಘರ್ಷಕ್ಕೆ ಜಹಾಂಗೀರ್‌ಪುರಿ ಸಾಕ್ಷಿಯಾಗಿತ್ತು.

ನೆಲಸಮ ಕಾರ್ಯಾಚರಣೆಯ ಕಾನೂನು ಸಿಂಧುತ್ವ ಪ್ರಶ್ನಿಸಿ ಜಮೀಯತ್ ಉಲೇಮಾ ಎ ಹಿಂದ್, ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಮತ್ತು ಬಿ.ಆರ್. ಗವಾಯಿ ಅವರ ಪೀಠವು ಅರ್ಜಿಯ ವಿಚಾರಣೆ ನಡೆಸಿ, ಕೇಂದ್ರ ಸರ್ಕಾರ ಮತ್ತು ಸಂಬಂಧಿಸಿದ ಇತರ ಪ್ರಾಧಿಕಾರಗಳಿಗೆ ನೋಟಿಸ್ ನೀಡಿದೆ.

ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸುಪ್ರೀಂ ಕೋರ್ಟ್ ಬುಧವಾರ ಆದೇಶ ನೀಡಿದ್ದ ಬಳಿಕವೂ ನೆಲಸಮ ಕಾರ್ಯಾಚರಣೆಯನ್ನು ಮೇಯರ್ ಮತ್ತು ಅಧಿಕಾರಿಗಳು ಮುಂದುವರಿಸಿದ್ದರೆ, ಅದನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಪೀಠವು ಹೇಳಿದೆ. ಈ ತಿಂಗಳ ಆರಂಭದಲ್ಲಿ ರಾಮನವಮಿ ಮೆರವಣಿಗೆ ಸಂದರ್ಭದಲ್ಲಿ ಹಿಂಸಾಚಾರ ನಡೆದ ಮಧ್ಯಪ್ರದೇಶ, ಉತ್ತರ ಪ್ರದೇಶ ಮತ್ತು ಗುಜರಾತ್‌ನಲ್ಲಿಯೂ ಇಂತಹುದೇ ನೆಲಸಮ ಕಾರ್ಯಾಚರಣೆ ನಡೆದಿತ್ತು. ಆ ರಾಜ್ಯಗಳಿಗೂ ನೋಟಿಸ್ ನೀಡಲಾಗಿದೆ.

ನೆಲಸಮ ಕಾರ್ಯಾಚರಣೆ ನಡೆದ ಜಹಾಂಗೀರ್‌ಪುರಿಯಲ್ಲಿ ಗುರುವಾರ ಪೊಲೀಸರು ಭಾರಿ ಬಂದೋಬಸ್ತ್ ಏರ್ಪಡಿಸಿದ್ದರು ಪಿಟಿಐ ಚಿತ್ರ

ದೇಶದಾದ್ಯಂತ ನೆಲಸಮ ಕಾರ್ಯಾಚರಣೆಗೆ ತಡೆ ಕೊಡಬೇಕು ಎಂಬ ಬೇಡಿಕೆಯನ್ನು ಪೀಠವು ಮಾನ್ಯ ಮಾಡಲಿಲ್ಲ. ಎರಡು ವಾರದ ಬಳಿಕ ಪ್ರಕರಣದ ವಿಚಾರಣೆಯನ್ನು ನಿಗದಿ ಮಾಡಲಾಗಿದೆ.

ಸಾಂವಿಧಾನಿಕ ಮತ್ತು ರಾಷ್ಟ್ರೀಯ ಮಹತ್ವದ ದೂರಗಾಮಿ ಪ್ರಶ್ನೆಗಳನ್ನು ಈ ಪ್ರಕರಣವು ಎತ್ತಿದೆ. ಬುಲ್ಡೋಜರ್, ಸರ್ಕಾರದ ನೀತಿಯ ಭಾಗವಾಗಿಬಿಟ್ಟಿದೆ ಎಂದು ದೂರುದಾರರ ಪರವಾಗಿ ವಾದಿಸಿದ ಹಿರಿಯ ವಕೀಲ ದುಷ್ಯಂತ ದವೆ ಹೇಳಿದರು. ದೆಹಲಿ ಪುರಸಭೆ ಕಾಯ್ದೆಯ ಪ್ರಸ್ತಾವನೆಯನ್ನು ದವೆ ಉಲ್ಲೇಖಿಸಿದರು. ದೆಹಲಿಗೆ ಭಾರಿ ಪ್ರಮಾಣದಲ್ಲಿ ಜನರು ವಲಸೆ ಬಂದಿದ್ದಾರೆ. ದೆಹಲಿಯು ಮಾಸ್ಟರ್ ಪ್ಲಾನ್ ಅನ್ನು ಮೀರಿ ಬೆಳೆದಿದೆ ಎಂಬುದನ್ನು ಅವರು ವಿವರಿಸಿದರು.

ಮೇಲ್ವರ್ಗದ ಜನರು ವಾಸಿಸುವ ಸೈನಿಕ್ ಫಾರ್ಮ್ ಮತ್ತು ಗಾಲ್ಫ್ ಲಿಂಕ್ಸ್ ಪ್ರದೇಶದಲ್ಲಿರುವ ಅಕ್ರಮ ಕಟ್ಟಡಗಳನ್ನು ಏಕೆ ತೆರವು ಮಾಡಿಲ್ಲ ಎಂದು ಅವರು ಪ್ರಶ್ನಿಸಿದರು.

> **ದೆಹಲಿಯಲ್ಲಿನ 731 ಅನಧಿಕೃತ ಕಾಲೊನಿಗಳಲ್ಲಿ 50 ಲಕ್ಷ ಜನ ಇದ್ದಾರೆ. ಹಾಗಿರುವಾಗ ಒಂದು ಕಾಲೊನಿ ಮತ್ತು ಒಂದು ಸಮುದಾಯವನ್ನು ಮಾತ್ರ ಗುರಿ ಮಾಡಲು ಹೇಗೆ ಸಾಧ್ಯ?**
> **ದುಷ್ಯಂತ ದವೆ,** ದೂರುದಾರರ ಪರ ವಕೀಲ

'ಜಹಾಂಗೀರ್‌ಪುರಿಯಲ್ಲಿರುವ ಹಲವು ಮನೆಗಳು 30 ವರ್ಷಕ್ಕೂ ಹಳೆಯವು, ಕೆಲವು ಅಂಗಡಿಗಳು 50 ವರ್ಷಕ್ಕೂ ಹಳೆಯವು. ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದ್ದೇವೆ. ಇಂತಹುದಕ್ಕೆ (ನೆಲಸಮ ಕಾರ್ಯಾಚರಣೆ) ಅವಕಾಶ ಕೊಡಲು ಹೇಗೆ ಸಾಧ್ಯ' ಎಂದು ಅವರು ಕೇಳಿದರು. ನೆಲಸಮಕ್ಕೆ ಮೊದಲು ನೋಟಿಸ್ ಕೊಟ್ಟಿಲ್ಲ ಮತ್ತು ವಿವರಣೆ ನೀಡಲು ಅವಕಾಶವನ್ನೇ ಕೊಟ್ಟಿಲ್ಲ ಎಂದರು.

ಒತ್ತುವರಿಯು ದೇಶದಾದ್ಯಂತ ಇರುವ ಸಮಸ್ಯೆಯಾಗಿದೆ. ಆದರೆ, ಮುಸ್ಲಿಮರನ್ನು ಅದರ ಜತೆಗೆ ತಳಕು ಹಾಕವುದು ಸಮಸ್ಯೆಯಾಗಿದೆ ಎಂದು ದೂರುದಾರರ ಪರವಾಗಿ ವಾದಿಸಿದ ಇನ್ನೊಬ್ಬ ಹಿರಿಯ ವಕೀಲ ಕಪಿಲ್ ಸಿಬಲ್ ಹೇಳಿದರು.

ಮಧ್ಯಪ್ರದೇಶದ ಖರ್ಗೋನ್‌ನಲ್ಲಿ ಇದೇ ರೀತಿ ನಡೆದ ನೆಲಸಮ ಕಾರ್ಯಾಚರಣೆಯನ್ನು ಸಿಬಲ್ ಉಲ್ಲೇಖಿಸಿದರು. ಸಂಘರ್ಷದ ಬಳಿಕ ದೇಶದ ಎಲ್ಲೆಡೆಯೂ ಇದು ಘಟಿಸುತ್ತಿದೆ. ಒಂದು ಸಮುದಾಯದ ಜನರ ಮನೆಗಳನ್ನು ಮಾತ್ರ ಉರುಳಿಸಲಾಗುತ್ತಿದೆ ಎಂದರು.

ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ದೂರಿನ ವಿಚಾರಣಾರ್ಹತೆಯನ್ನೇ ಪ್ರಶ್ನಿಸಿದರು. ದೆಹಲಿ ಹೈಕೋರ್ಟ್ ನೀಡಿದ್ದ ನಿರ್ದೇಶನ ಪ್ರಕಾರ, ಜನವರಿ 19ರಂದೇ ತೆರವು ಕಾರ್ಯಾಚರಣೆ ಆರಂಭವಾಗಿದೆ. ಫೆಬ್ರುವರಿ ಮತ್ತು ಮಾರ್ಚ್‌ನಲ್ಲಿಯೂ ಕಾರ್ಯಾಚರಣೆ ನಡೆದಿದೆ. ಖರ್ಗೋನ್‌ನಲ್ಲಿ ಹಿಂದೂಗಳ 88 ಮತ್ತು ಮುಸ್ಲಿಮರ 26 ಮನೆಗಳನ್ನು ನೆಲಸಮ ಮಾಡಲಾಗಿದೆ ಎಂದು ಅವರು ಹೇಳಿದರು.

ಸಾರ್ವಜನಿಕ ಸ್ಥಳದಲ್ಲಿ ಇರಿಸಲಾಗಿರುವ ಮೇಜು, ಕುರ್ಚಿ ಮತ್ತು ಇತರ ವಸ್ತುಗಳನ್ನು ತೆರವು ಮಾಡಲು ನೋಟಿಸ್ ನೀಡುವ ಅಗತ್ಯ ಇಲ್ಲ ಎಂದು ಮೆಹ್ತಾ ವಾದಿಸಿದರು. ಮನೆ ಕೆಡಹುವ ಸಂದರ್ಭದಲ್ಲಿ ನೋಟಿಸ್ ನೀಡಲಾಗಿದೆ ಎಂದರು.

- 'ರೋಹಿಂಗ್ಯಾ ಸಮುದಾಯದವರು ಮತ್ತು ಬಾಂಗ್ಲಾದೇಶೀಯರ ಅಕ್ರಮ ಒತ್ತುವರಿಯನ್ನು ತೆರವು ಮಾಡುವಂತೆ ಪೂರ್ವ ಮತ್ತು ದಕ್ಷಿಣ ದೆಹಲಿಯ ಮೇಯರ್‌ಗಳಿಗೂ ಪತ್ರ ಬರೆಯುತ್ತೇನೆ' ಎಂದು ದೆಹಲಿ ಬಿಜೆಪಿ ಘಟಕದ ಅಧ್ಯಕ್ಷ ಆದೇಶ್ ಗುಪ್ತಾ ಹೇಳಿದ್ದಾರೆ. ಜಹಾಂಗೀರ್‌ಪುರಿಯಲ್ಲಿ ಅಕ್ರಮ ಕಟ್ಟಡ ನೆಲಸಮ ಮಾಡುವಂತೆ ಆದೇಶ್ ಅವರು ಉತ್ತರ ದೆಹಲಿ ಮಹಾನಗರ ಪಾಲಿಕೆ ಮೇಯರ್‌ಗೆ ಪತ್ರ ಬರೆದಿದ್ದರು
- ಶನಿವಾರ ಹಿಂಸಾಚಾರ ನಡೆದ ಜಹಾಂಗೀರ್‌ಪುರಿಯ ಸಿ ಬ್ಲಾಕ್‌ನಲ್ಲಿ ಗುರುವಾರ ಭಾರಿ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಬ್ಯಾರಿಕೇಡ್‌ಗಳನ್ನು ಹಾಕಲಾಗಿತ್ತು. ಮಾಧ್ಯಮ ಪ್ರತಿನಿಧಿಗಳು ಈ ಪ್ರದೇಶಕ್ಕೆ ಹೋಗುವುದನ್ನು ತಡೆಯಲಾಗಿತ್ತು. ಇಲ್ಲಿನ ನಿವಾಸಿಗಳು ಮನೆಯಲ್ಲಿಯೇ ಉಳಿದರು. ಡ್ರೋನ್ ಮೂಲಕವೂ ನಿಗಾ ಇರಿಸಲಾಗಿದೆ
- ಕಾಂಗ್ರೆಸ್ ಮುಖಂಡರ ನಿಯೋಗವೊಂದು ಜಹಾಂಗೀರ್‌ಪುರಿಗೆ ಗುರುವಾರ ಭೇಟಿ ಕೊಟ್ಟಿದೆ. ಆದರೆ, ನೆಲಸಮ ಕಾರ್ಯಾಚರಣೆ ನಡೆದ ಸ್ಥಳಕ್ಕೆ ಹೋಗಲು ಪೊಲೀಸರು ಅವಕಾಶ ಕೊಡಲಿಲ್ಲ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅಜಯ್ ಮಾಕನ್, ಕಾಂಗ್ರೆಸ್‌ನ ದೆಹಲಿ ಘಟಕದ ಉಸ್ತುವಾರಿ ಶಕ್ತಿಸಿಂಹ ಗೋಹಿಲ್ ನಿಯೋಗದಲ್ಲಿ ಇದ್ದರು
- ಸಮಾಜವಾದಿ ಪಕ್ಷದ ಐವರು ಸದಸ್ಯರ ಸಮಿತಿಯು ಜಹಾಂಗೀರ್‌ಪುರಿಗೆ ಶುಕ್ರವಾರ ಭೇಟಿ ನೀಡಲಿದೆ. ಎನ್‌ಡಿಎಂಸಿ ನಡೆಸಿದ ನೆಲಸಮ ಕಾರ್ಯಾಚರಣೆಯ ಬಗ್ಗೆ ತನಿಖೆ ನಡೆಸಲಿದೆ ಎಂದು ಪಕ್ಷವು ಹೇಳಿದೆ

ಬೋರಿಸ್ ಜಾನ್ಸನ್–ಅದಾನಿ ಭೇಟಿ

ಅಹಮದಾಬಾದ್ (ಪಿಟಿಐ): ಎರಡು ದಿನಗಳ ಭಾರತ ಭೇಟಿಗಾಗಿ ಇಲ್ಲಿಗೆ ಗುರುವಾರ ಬಂದಿಳಿದ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು, ಉದ್ಯಮಿ ಗೌತಮ್ ಅದಾನಿ ಅವರ ಜತೆ ದೀರ್ಘ ಮಾತುಕತೆ ನಡೆಸಿದ್ದಾರೆ. ಈ ಬಗ್ಗೆ ಟ್ವೀಟ್ ಮಾಡಿರುವ ಅದಾನಿ, 'ರಕ್ಷಣೆ ಮತ್ತು ಬಾಹ್ಯಾಕಾಶ ತಂತ್ರಜ್ಞಾನಗಳನ್ನು ಬ್ರಿಟನ್ ಕಂಪನಿಗಳ ಜತೆಗೆ ಜಂಟಿಯಾಗಿ ಅಭಿವೃದ್ಧಿಪಡಿಸಲು ದುಡಿಯುತ್ತೇವೆ' ಎಂದು ಹೇಳಿದ್ದಾರೆ.

ಬ್ರಿಟನ್‌ನ ಪ್ರಧಾನಿಯೊಬ್ಬರು ಗುಜರಾತ್‌ಗೆ ಭೇಟಿ ನೀಡಿದ್ದು ಇದೇ ಮೊದಲು.

ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಜಾನ್ಸನ್ ಅವರಿಗೆ, ಶಾಂತಿಗ್ರಾಮದಲ್ಲಿನ ಅದಾನಿ ಕೇಂದ್ರ ಕಚೇರಿಯಲ್ಲಿ ಆತಿಥ್ಯ ಏರ್ಪಡಿಸಲಾಗಿತ್ತು. ಅದಾನಿ ಕೇಂದ್ರ ಕಚೇರಿಯಲ್ಲಿಯೇ ಜಾನ್ಸನ್ ಮತ್ತು ಗೌತಮ್ ಅದಾನಿ ಅವರು ಮಾತುಕತೆ ನಡೆಸಿದರು. ಬ್ರಿಟನ್‌ನ ಕಂಪನಿಗಳ ಸಹಯೋಗದಲ್ಲಿ ಅದಾನಿ ಸಮೂಹ ಸಂಸ್ಥೆಗಳು ಇಂಧನ, ವಿದ್ಯುಚ್ಛಕ್ತಿ, ರಕ್ಷಣೆ ಮತ್ತು ಬಾಹ್ಯಾಕಾಶ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಬಗ್ಗೆ ಮಾತುಕತೆ ನಡೆಯಿತು ಎಂದು ಮೂಲಗಳು ಹೇಳಿವೆ.

'ಹವಾಮಾನ ವೈಪರೀತ್ಯ ನಿಯಂತ್ರಣ ಮತ್ತು ಸುಸ್ಥಿರ ಅಭಿವೃದ್ಧಿಯ ಕಾರ್ಯಸೂಚಿಯ ಅಡಿಯಲ್ಲಿ ನವೀಕರಿಸಬಹುದಾದ ಇಂಧನ, ಹಸಿರು ಜಲಜನಕ ಮತ್ತು ಹೊಸ ಇಂಧನ ಪರಿಕಲ್ಪನೆಗಳ ಬಗ್ಗೆ ಚರ್ಚಿಸಲಾಯಿತು' ಎಂದು ಅದಾನಿ ಅವರು ಟ್ವೀಟ್ ಮಾಡಿದ್ದಾರೆ.

ಈ ಭೇಟಿಯ ನಂತರ ಜಾನ್ಸನ್ ಅವರು ವಡೋದರಾ ಜಿಲ್ಲೆಯ ಹಾಲೋಲ್‌ನಲ್ಲಿ ಬ್ರಿಟನ್ ಕಂಪನಿ ಜೆಸಿಬಿ, ಆರಂಭಿಸಿರುವ ಬಿಡಿಭಾಗಗಳ ಕಾರ್ಖಾನೆಯ ಉದ್ಘಾಟನೆಗೆ ತೆರಳಿದರು. ಈ ಕಾರ್ಖಾನೆಯಲ್ಲಿ ತಯಾರಾಗುವ ಜೆಸಿಬಿ ಯಂತ್ರಗಳ ಬಿಡಿಭಾಗಗಳನ್ನು, ವಿಶ್ವದೆಲ್ಲೆಡೆಗೆ ಪೂರೈಸಲಾಗುತ್ತದೆ ಎಂದು ಕಂಪನಿಯು ಹೇಳಿದೆ.

ಇದರ ಮಧ್ಯೆ ಜಾನ್ಸನ್ ಅವರು ಸಬರಮತಿ ಆಶ್ರಮಕ್ಕೂ ಭೇಟಿ ನೀಡಿದ್ದಾರೆ.

ಉದ್ಯಮಿ ಗೌತಮ್ ಅದಾನಿ ಮತ್ತು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ನಡುವೆ ಮಾತುಕತೆ –ಪಿಟಿಐ ಚಿತ್ರ

ಮುಖ್ಯಾಂಶಗಳು

- ಪ್ರಧಾನಿ ಮೋದಿ–ಜಾನ್ಸನ್ ಭೇಟಿಯು ದೆಹಲಿಯಲ್ಲಿ ಶುಕ್ರವಾರ ನಡೆಯಲಿದೆ
- ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳ ಬಗ್ಗೆ ಚರ್ಚೆ ಸಾಧ್ಯತೆ

> **ಗುಜರಾತ್‌ನ ಭೇಟಿ ಚೆನ್ನಾಗಿತ್ತು. ಬ್ರಿಟನ್‌ನಲ್ಲಿ ಗುಜರಾತಿಗಳು ಬಹುಸಂಖ್ಯೆಯಲ್ಲಿದ್ದಾರೆ. ಎರಡೂ ದೇಶಗಳ ಮಧ್ಯೆ ಗುಜರಾತಿಗಳು ಸೇತುವೆಯಂತಿದ್ದಾರೆ**
> **ಬೋರಿಸ್ ಜಾನ್ಸನ್,** ಬ್ರಿಟನ್ ಪ್ರಧಾನಿ

ಶುಕ್ರವಾರ ದೆಹಲಿಗೆ ತೆರಳಲಿರುವ ಜಾನ್ಸನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಜತೆ ಮಾತುಕತೆ ನಡೆಸಲಿದ್ದಾರೆ. 'ಉಕ್ರೇನ್ ವಿಚಾರವಾಗಿ ಭಾರತದೊಂದಿಗೆ ಈಗಾಗಲೇ ರಾಜತಾಂತ್ರಿಕ ಮಟ್ಟದಲ್ಲಿ ಮಾತುಕತೆ ನಡೆಸಿದ್ದೇವೆ. ರಷ್ಯಾ ಮತ್ತು ಭಾರತದ ನಡುವಣ ಸಂಬಂಧ ಭಿನ್ನವಾದುದು ಎಂಬುದನ್ನು ಜಗತ್ತು ಅರ್ಥಮಾಡಿಕೊಳ್ಳುತ್ತದೆ ಎಂದು ಭಾವಿಸಿದ್ದೇವೆ' ಎಂದು ಅವರು ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದಾರೆ.

ಭಾರತೀಯರಿಗೆ ಅತಿ ಹೆಚ್ಚು ಕುಶಲ ವೃತ್ತಿಪರ ವೀಸಾ: ಬೋರಿಸ್ ಜಾನ್ಸನ್ ಒಲವು

ಲಂಡನ್(ಪಿಟಿಐ): ಭಾರತ– ಬ್ರಿಟನ್ ನಡುವಿನ ಮಹತ್ವಾಕಾಂಕ್ಷೆಯ ಮುಕ್ತ ವ್ಯಾಪಾರ ಒಪ್ಪಂದ(ಎಫ್‌ಟಿಎ) ತ್ವರಿತಗೊಳಿಸುವ ಭಾಗವಾಗಿ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು, ಭಾರತೀಯರಿಗೆ ಹೆಚ್ಚಿನ ಕುಶಲ ವೃತ್ತಿಪರ ವೀಸಾಗಳನ್ನು ನೀಡಲು ಬೆಂಬಲ ವ್ಯಕ್ತಪಡಿಸಿದ್ದಾರೆ.

ಬುಧವಾರ ರಾತ್ರಿ ಭಾರತದ ಪ್ರವಾಸ ಕೈಗೊಳ್ಳುವ ವೇಳೆ ಬ್ರಿಟನ್ ಪತ್ರಕರ್ತರ ಜೊತೆ ಮಾತನಾಡಿದ ಅವರು, ಬ್ರಿಟನ್‌ನಲ್ಲಿ ಮಾಹಿತಿ ತಂತ್ರಜ್ಞಾನ ಹಾಗೂ ಪ್ರೊಗ್ರಾಮಿಂಗ್ ವಲಯದಲ್ಲಿ ಪರಿಣಿತರ ಸಂಖ್ಯೆ ವಿರಳವಾಗಿದೆ ಎಂಬುದನ್ನು ಒಪ್ಪಿಕೊಂಡರು. ಅಲ್ಲದೆ ಕೌಶಲ್ಯ ಹೊಂದಿದ ಸಾವಿರಾರು ನೌಕರರ ಅಗತ್ಯ ಬ್ರಿಟನ್‌ಗಿದೆ ಎಂದು ಅವರು ಹೇಳಿದರು.

ಬ್ರಿಟನ್‌ನ ಗೃಹ ಕಾರ್ಯಾಲಯದ ಅಂಕಿಅಂಶಗಳ ಪ್ರಕಾರ, ಹೆಚ್ಚು ಪ್ರಮಾಣದ ಕುಶಲ ವೃತ್ತಿಪರ ವೀಸಾಗಳನ್ನು ಭಾರತೀಯರಿಗೆ ನೀಡಲಾಗಿದೆ. ಕಳೆದ ವರ್ಷ 67,839 ಮಂದಿಗೆ ಕುಶಲ ವೃತ್ತಿಪರ ವೀಸಾಗಳನ್ನು ನೀಡಲಾಗಿದ್ದು, 2019ರ ವರ್ಷಕ್ಕೆ ಹೋಲಿಸಿದರೆ, ಇದು ಶೇ 14ರಷ್ಟು ಹೆಚ್ಚು.

ಏತನ್ಮಧ್ಯೆ, ಭಾರತ ಮತ್ತು ಬ್ರಿಟನ್ ಮಧ್ಯೆ 3ನೇ ಸುತ್ತಿನ ಮುಕ್ತ ವ್ಯಾಪಾರ ಒಪ್ಪಂದದ ಮಾತುಕತೆ ನಡೆಯಲಿದೆ. ಈ ವರ್ಷದ ಅಂತ್ಯದಲ್ಲಿ ಈ ಕುರಿತು ಅಂತಿಮ ನಿರ್ಣಯ ಕೈಗೊಳ್ಳುವ ವಿಶ್ವಾಸವನ್ನು ಪ್ರಧಾನಿ ಜಾನ್ಸನ್ ವ್ಯಕ್ತಪಡಿಸಿದ್ದಾರೆ. ಆದಾಗ್ಯೂ, ನಮಗೆ ಈ ವಿಚಾರದಲ್ಲಿ ಆತುರವೇನೂ ಇಲ್ಲ ಎಂದು ಹೇಳಿದ್ದಾರೆ.

ಭೂಸ್ವಾಧೀನ ನೋಟಿಸ್: ರೈತ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಐದನೇ ಹಂತದ ಕೈಗಾರಿಕಾ ವಲಯ ಸ್ಥಾಪನೆಗೆ ಭೂಮಿ ಸ್ವಾಧೀನಕ್ಕೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ನೀಡಿದ್ದ ನೋಟಿಸ್‌ನಿಂದ ಮನನೊಂದ ಕೊನಘಟ್ಟ ಗ್ರಾಮದ ರೈತ ಹನುಮಂತೇಗೌಡ (60) ಗುರುವಾರ ಜಮೀನಲ್ಲಿರುವ ಮರಕ್ಕೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಭೂ ಸ್ವಾಧೀನ ಪ್ರಕ್ರಿಯೆ ಆರಂಭವಾದಾಗಿನಿಂದ ಹನುಮಂತೇಗೌಡ ಮನನೊಂದಿದ್ದರು. ಪ್ರಾಣ ಕೊಟ್ಟಾದರೂ ಸರಿ, ಹಿರಿಯರ ಭೂಮಿ ಉಳಿಸಿಕೊಳ್ಳುತ್ತೇನೆ ಎಂದು ಹೇಳುತಿದ್ದರು. ಕೊನೆಗೆ ಕೆಐಎಡಿಬಿ ನೋಟಿಸ್ ಜೇಬಿನಲ್ಲಿ ಇಟ್ಟುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಕೊನಘಟ್ಟ ಗ್ರಾಮದ ಬಾಬು ತಿಳಿಸಿದರು.

ತಾಲ್ಲೂಕಿನ ಕೊನಘಟ್ಟ, ಆದಿನಾರಾಯಣ ಹೊಸಹಳ್ಳಿ ಸುತ್ತ ಮುತ್ತ ಸುಮಾರು 800 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಕೆಐಎಡಿಬಿ ರೈತರಿಗೆ ನೋಟಿಸ್ ನೀಡುತ್ತಿದೆ. ಕೈಗಾರಿಕಾ ವಲಯ ಸ್ಥಾಪನೆಗೆ ಸರ್ಕಾರ ಸ್ವಾಧೀನ ಪಡಿಸಿಕೊಳ್ಳುತ್ತಿರುವ ಬಹುತೇಕ ಜಮೀನುಗಳು ಫಲವತ್ತಾಗಿದ್ದು ದ್ರಾಕ್ಷಿ, ತೆಂಗು ಹಾಗೂ ತರಕಾರಿ ಬೆಳೆಯಲಾಗುತ್ತಿದೆ.

ಸ್ಥಳದಲ್ಲೇ ಪ್ರತಿಭಟನೆ: ರೈತರಿಂದ ಫಲವತ್ತಾದ ಕೃಷಿ ಭೂಮಿ ವಶಪಡಿಸಿಕೊಳ್ಳುವುದನ್ನು ಕೂಡಲೇ ನಿಲ್ಲಿಸಬೇಕು ಎಂದು ಒತ್ತಾಯಿಸಿ ರೈತರು ಹಾಗೂ ವಿವಿಧ ಕನ್ನಡಪರ ಸಂಘಟನೆಗಳ ಮುಖಂಡರು ಹನುಮಂತೇಗೌಡ ಆತ್ಮಹತ್ಯೆ ಮಾಡಿಕೊಂಡ ಸ್ಥಳದಲ್ಲೇ ಪ್ರತಿಭಟನೆ ನಡೆಸಿದರು.

ಮುಂದಿನ ವಾರ ತಾಲ್ಲೂಕಿನ ಎಲ್ಲ ರೈತ ಸಂಘಟನೆ ಹಾಗೂ ಕನ್ನಡಪರ ಸಂಘಟನೆಗಳ ಜತೆ ಸಭೆ ನಡೆಸಿ ಭೂ ಸ್ವಾಧೀನ ಪ್ರಕ್ರಿಯೆ ನಿಲ್ಲಿಸುವಂತೆ ಪ್ರತಿಭಟನೆ ಆರಂಭಿಸಲಾಗುವುದು ಎಂದು ಅವರು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಆತ್ಮಹತ್ಯೆಗೆ ಶರಣಾಗಿರುವ ಹನುಮಂತೇಗೌಡ ಅವರಿಗೆ ಪತ್ನಿ, ನಾಲ್ವರು ಪುತ್ರಿಯರಿದ್ದು, ಎರಡೂವರೆ ಎಕರೆ ಜಮೀನಿನಲ್ಲಿ ತರಕಾರಿ ಬೆಳೆಯುತಿದ್ದರು.

ನನ್ನ ಕಂಡರೆ ಅವರಿಗೆ ಭಯ – ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಕುಮಾರಸ್ವಾಮಿ ಹೇಳಿಕೆ

'ನನ್ನ ಬಂಧಿಸಲು ಸಿದ್ದರಾಮಯ್ಯ ಯತ್ನಿಸಿದ್ದರು'

ಪ್ರಜಾವಾಣಿ ವಾರ್ತೆ

ಮೈಸೂರು: 'ಸಿದ್ದರಾಮಯ್ಯ ಸಿ.ಎಂ ಆಗಿದ್ದಾಗ ಹನ್ನೆರಡು ವರ್ಷದ ಹಿಂದೆ ದಾಖಲಾಗಿದ್ದ ಪ್ರಕರಣದಲ್ಲಿ ನನ್ನನ್ನು ಬಂಧಿಸಲು ಯೋಜಿಸಿದ್ದರು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಆರೋಪಿಸಿದರು.

'ಅವರೊಬ್ಬ ಸುಳ್ಳಿನ ರಾಮಯ್ಯ. ಅವರಿಗೆ ನನ್ನ ಭಯ ಕಾಡುತ್ತಿದೆ. ಎಲ್ಲಿ ನಾನು ಅಧಿಕಾರಕ್ಕೆ ಬಂದು ಬಿಡುತ್ತೇನೋ ಎಂದು ಆತಂಕದಲ್ಲಿದ್ದಾರೆ' ಎಂದು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

'ಕೆ.ಎಸ್.ಈಶ್ವರಪ್ಪ ಕುರಿತು ಮೃದು ಧೋರಣೆ ಇಲ್ಲ. ಸಾಕ್ಷ್ಯಾಧಾರಗಳಿದ್ದರೆ ಬಂಧಿಸಿ. ಬಂಧಿಸಿದ ಬಳಿಕ ನ್ಯಾಯಾಲಯ ನಿರಪರಾಧಿ ಎಂದರೆ ಏನು ಮಾಡುವುದು? ಎಲ್ಲದರಲ್ಲೂ ರಾಜಕೀಯ ಬೇಡ' ಎಂದರು.

'ಬಿಜೆಪಿ ಸರ್ಕಾರಕ್ಕೆ ನಾನು ಸರ್ಟಿಫಿಕೇಟ್ ಕೊಟ್ಟಿದ್ದೇನೆ ಎನ್ನುವ ಕಾಂಗ್ರೆಸ್ಸಿಗರ ನಾಲಿಗೆಯಲ್ಲಿ ಮೂಳೆ ಇದೆಯಾ' ಎಂದು ಪ್ರಶ್ನಿಸಿದರು.

ಶಿವಲಿಂಗೇಗೌಡ ವಿರುದ್ಧ ಅಸಮಾಧಾನ

> **ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಯಾವುದೇ ಕಾರಣಕ್ಕೂ ಚಿಕ್ಕನಾಯಕನಹಳ್ಳಿ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ**
> **ಸಿದ್ದರಾಮಯ್ಯ,** ವಿಧಾನಸಭೆ ವಿರೋಧ ಪಕ್ಷದ ನಾಯಕ

ಹಾಸನ ವರದಿ: ಇಲ್ಲಿ 'ಜನತಾ ಜಲಧಾರೆ' ಸಮಾವೇಶಕ್ಕೆ ಗೈರುಹಾಜರಾಗಿದ್ದ ಶಾಸಕ ಕೆ.ಎಂ.ಶಿವಲಿಂಗೇಗೌಡ ವಿರುದ್ಧ ಎಚ್‌.ಡಿ.ಕುಮಾರಸ್ವಾಮಿ ಮತ್ತು ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡರು ಬೇಸರ ಹೊರಹಾಕಿದರು.

ಕುಮಾರಸ್ವಾಮಿ ಅವರು, 'ಪಕ್ಷದಲ್ಲಿದ್ದುಕೊಂಡು ಕುತ್ತಿಗೆ ಕೊಯ್ಯಬೇಡಿ. ಬೆನ್ನಿಗೆ ಚೂರಿ ಹಾಕುವ ರಾಜಕಾರಣ ಮಾಡಬಾರದು. ಯಾರಿಗೂ ನಾನು ರಾಜಿ ಆಗೋಲ್ಲ' ಎಂದು ವಾಗ್ದಾಳಿ ನಡೆಸಿದರು.

ನಡುವೆಯೇ ಅವರಿಂದ ಮೈಕ್ ಪಡೆದು ಮಾತನಾಡಿದ ದೇವೇಗೌಡರು, 'ನಾನು ತೆಂಗಿಗೆ ಪರಿಹಾರ ವಿಚಾರವಾಗಿ ಧರಣಿ ಮಾಡ್ತೀನಿ, ಮೂರು ದಿನ ಬಿಟ್ಟು ಬಂದು ಏಳಿಸಿ. ಕುಮಾರಸ್ವಾಮಿಗೆ ಹೇಳಿ ಏನಾದ್ರೂ ಪರಿಹಾರ ಕೊಡಿಸಿ ಅಂದ್ರು. ಅಬ್ಬಾ ಎಂತಾ ಡ್ರಾಮಾ..' ಎಂದು ವ್ಯಂಗ್ಯವಾಡಿದರು.

ಸಮಾವೇಶಕ್ಕೆ ಶಾಸಕ ಎ.ಟಿ.ರಾಮಸ್ವಾಮಿ ಸಹ ಗೈರಾಗಿದ್ದರು. 'ಸಮಾವೇಶ ತಡವಾದ ಕಾರಣ ನಾಯಕರಿಗೆ ತಿಳಿಸಿಯೇ ಬೇರೆ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ತೆರಳಿದೆ' ಎಂದು ಎ.ಟಿ.ರಾಮಸ್ವಾಮಿ ತಿಳಿಸಿದರು.

ಈ ಘಟನೆಯಿಂದ, ಶಿವಲಿಂಗೇಗೌಡರು ಕಾಂಗ್ರೆಸ್ ಸೇರಲು ಸಿದ್ಧತೆ ನಡೆಸಿದ್ದಾರೆ ಎಂಬ ಚರ್ಚೆ ಶುರುವಾಗಿದೆ.

'ಎಚ್‌ಡಿಕೆಯಿಂದಲೇ ದ್ವೇಷದ ರಾಜಕಾರಣ'

ತುಮಕೂರು: 'ನನ್ನದು ಸ್ನೇಹದ ರಾಜಕಾರಣ. ಜೆಡಿಎಸ್ ಮುಖಂಡ ಎಚ್‌.ಡಿ.ಕುಮಾರಸ್ವಾಮಿ ಅವರೇ ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಜೆ.ಸಿ.ಪುರದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. 'ನನ್ನನ್ನು ಬಂಧಿಸಲು ಸಿದ್ದರಾಮಯ್ಯ ಪ್ರಯತ್ನಿಸಿದ್ದರು' ಎಂಬ ಕುಮಾರಸ್ವಾಮಿ ಆರೋಪಕ್ಕೆ ಅವರು ಈ ರೀತಿ ಪ್ರತಿಕ್ರಿಯಿಸಿದರು.

'ನನ್ನನ್ನು ಕಂಡರೆ ಸಿದ್ದರಾಮಯ್ಯನವರಿಗೆ ಭಯ' ಎಂಬ ಕುಮಾರಸ್ವಾಮಿ ಅವರ ಹೇಳಿಕೆಗೆ ಸಿದ್ದರಾಮಯ್ಯ 'ನಾನು ರಾಜಕೀಯಕ್ಕೆ ಬಂದಾಗ ಇವನ್ಯಾರು ಎಂಬುದೇ ಗೊತ್ತಿರಲಿಲ್ಲ' ಎಂದು ತರಾಟೆಗೆ ತೆಗೆದುಕೊಂಡರು.

ಪಿಎಸ್‌ಐ ನೇಮಕಾತಿಗೆ ನಡೆದ ಅಕ್ರಮದಲ್ಲಿ ಭಾಗಿಯಾಗಿರುವ ಕಿಂಗ್‌ಪಿನ್ ದಿವ್ಯಾ ಹಾಗೂ ಅವರ ಗಂಡ ಬಿಜೆಪಿಯವರು. ಹಾಗಾಗಿ ಬಿಜೆಪಿ ನಾಯಕರು ಈ ಅಕ್ರಮದಲ್ಲಿ ಶಾಮೀಲಾಗಿದ್ದಾರೆ ಎಂದು ಆರೋಪಿಸಿದರು.

ಗೌಡರು ಫೋನ್ ಮಾಡಲು ಹೇಳಿದರು: ಬೊಮ್ಮಾಯಿ

ತುಮಕೂರು: 'ಬೆಂಗಳೂರಿಗೆ ಯಾವಾಗ ಬರುತ್ತೀರಿ. ಬಂದಾಗ ಫೋನ್ ಮಾಡಿ ಎಂದು ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಹೇಳಿದ್ದಾರೆ. ಇದರಲ್ಲಿ ವಿಶೇಷವಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಜೆ.ಸಿ.ಪುರದಲ್ಲಿ ಸಚಿವ ಜೆ.ಸಿ.ಮಾಧುಸ್ವಾಮಿ ಪುತ್ರನ ವಿವಾಹ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ದೇವೇಗೌಡರು ಹೇಳಿದ್ದ ಮಾತಿಗೆ ಈ ಸ್ಪಷ್ಟನೆ ನೀಡಿದರು.

'ದೇವೇಗೌಡರು ಹಿರಿಯರು. ಅವರ ಮಾರ್ಗದರ್ಶನ ಯಾವಾಗಲೂ ಇದ್ದೇ ಇರುತ್ತೆ' ಎಂದರು.

ಬಿಜೆಪಿ ಬಗ್ಗೆ ಜೆಡಿಎಸ್‌ನ ಎಚ್‌.ಡಿ.ಕುಮಾರಸ್ವಾಮಿ ಮೃದು ಧೋರಣೆ ಕುರಿತು 'ಸಾಫ್ಟೂ ಇಲ್ಲ, ಕಾರ್ನರೂ ಇಲ್ಲ. ಅವರ ರಾಜಕಾರಣ ಅವರು ಮಾಡುತ್ತಾರೆ. ನಮ್ಮ ರಾಜಕಾರಣ ನಾವು ಮಾಡುತ್ತೇವೆ' ಎಂದು ತಿಳಿಸಿದರು.

ಗಣಿಗಾರಿಕೆ ಬಾಧಿತ ಜಿಲ್ಲೆಗಳ ಪುನರುತ್ಥಾನ

ನ್ಯಾಯಮೂರ್ತಿ ಸುದರ್ಶನ ರೆಡ್ಡಿಗೆ ಉಸ್ತುವಾರಿ

ನವದೆಹಲಿ (ಪಿಟಿಐ): ಕಬ್ಬಿಣದ ಅದಿರು ಗಣಿಗಾರಿಕೆಯಿಂದ ಬಾಧಿತವಾದ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯ ಪುನರುತ್ಥಾನ ಯೋಜನೆ ಮತ್ತು ಆರೋಗ್ಯ ಯೋಜನೆಯ ಅನುಷ್ಠಾನದ ಮೇಲುಸ್ತುವಾರಿಗೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ. ಸುದರ್ಶನ ರೆಡ್ಡಿ ಅವರನ್ನು ಸುಪ್ರೀಂ ಕೋರ್ಟ್ ಗುರುವಾರ ನೇಮಿಸಿದೆ.

ಗಣಿಗಾರಿಕೆ ಬಾಧಿತ ವಲಯಗಳ ಸಮಗ್ರ ಪರಿಸರ ಯೋಜನೆಯ ಅಡಿಯಲ್ಲಿ ಪುನರುತ್ಥಾನ ಯೋಜನೆ ಅನುಷ್ಠಾನಕ್ಕೆ ನಿಧಿ ಬಿಡುಗಡೆಗೆ ನಿರ್ದೇಶನ ನೀಡಬೇಕು ಎಂದು ಕರ್ನಾಟಕ ಸರ್ಕಾರವು ಕೋರಿತ್ತು. ಮೂರು ಜಿಲ್ಲೆಗಳ ಪುನರುತ್ಥಾನಕ್ಕೆ ₹24,000 ಕೋಟಿ ದೊರೆಯುವ ನಿರೀಕ್ಷೆ ಇದೆ. ಇದಕ್ಕೆ ಸಂಬಂಧಿಸಿ ಕರಡು ಆದೇಶ ಸಿದ್ಧಪಡಿಸಿ ಪೀಠದ ಮುಂದೆ ಸಲ್ಲಿಸುವಂತೆ ಕೋರ್ಟ್, ಕರ್ನಾಟಕ ಸರ್ಕಾರಕ್ಕೆ ಸೂಚಿಸಿದೆ.

'ಸುಪ್ರೀಂ ಕೋರ್ಟ್ ನೇಮಿಸಿದ ಉನ್ನತಾಧಿಕಾರ ಸಮಿತಿಯು ₹24 ಸಾವಿರ ಕೋಟಿಯ ಯೋಜನೆ ಸಿದ್ಧಪಡಿಸಲು ಸೂಚಿಸಿತ್ತು. ಅದರಲ್ಲಿ ₹1,915 ಕೋಟಿಯನ್ನು ಆರೋಗ್ಯ ಯೋಜನೆಗಳಿಗೆ ನೀಡಬೇಕು ಎಂದಿತ್ತು. 2021ರ ಸೆಪ್ಟೆಂಬರ್‌ವರೆಗೆ ಸಂಗ್ರಹವಾದ ಮೊತ್ತವು ₹18,722 ಕೋಟಿ ಆಗಿದೆ. ಈ ಮೊತ್ತವು ಉಸ್ತುವಾರಿ ಸಮಿತಿಯಲ್ಲಿದೆ' ಎಂದು ರಾಜ್ಯ ಸರ್ಕಾರವು ಕೋರ್ಟ್‌ಗೆ ಹೇಳಿದೆ.

ಅಖಿಲೇಶ್‌ಗೆ ಶಿವಪಾಲ್ ಯಾದವ್ ಸವಾಲು

ಪ್ರಜಾವಾಣಿ ವಾರ್ತೆ

ಲಖನೌ: ಸಮಾಜವಾದಿ ಪಕ್ಷದಿಂದ ತಮ್ಮನ್ನು ಉಚ್ಚಾಟಿಸಿ ನೋಡುವಂತೆ ಶಾಸಕ ಶಿವಪಾಲ್ ಯಾದವ್ ಅವರು ಪಕ್ಷದ ಅಧ್ಯಕ್ಷ ಮತ್ತು ತಮ್ಮ ಅಣ್ಣನ ಮಗ ಅಖಿಲೇಶ್ ಯಾದವ್ ಅವರಿಗೆ ಸವಾಲು ಹಾಕಿದ್ದಾರೆ.

ಶಿವಪಾಲ್ ಯಾದವ್ ಅವರು ಬಿಜೆಪಿ ಸೇರುತ್ತಾರೆ ಎಂಬ ವದಂತಿ ದಟ್ಟವಾಗಿರುವ ಸಂದರ್ಭದಲ್ಲೇ ಅವರು ಈ ಸವಾಲು ಹಾಕಿದ್ದಾರೆ. ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು ಸೋಲುಂಡ ಬಳಿಕ ನಡೆದ ಶಾಸಕಾಂಗ ಪಕ್ಷದ ಸಭೆಗೆ ಶಿವಪಾಲ್ ಯಾದವ್ ಅವರನ್ನು ಆಹ್ವಾನಿಸಿರಲಿಲ್ಲ. ಇದರ ಬೆನ್ನಲ್ಲೇ ಶಿವಪಾಲ್ ಅವರು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು.

ಈ ಬೆಳವಣಿಗೆ ಬಗ್ಗೆ ಪ್ರತಿಕ್ರಿಯೆ ನೀಡಿದ್ದ ಅಖಿಲೇಶ್, 'ಬಿಜೆಪಿ ಬಗ್ಗೆ ಅನುಕಂಪ ಹೊಂದಿರುವವರು ಮತ್ತು ಬಿಜೆಪಿ ಸೇರಲು ಯೋಚಿಸುತ್ತಿರುವವರಿಗೆ ಸಮಾಜವಾದಿ ಪಕ್ಷದಲ್ಲಿ ಜಾಗವಿಲ್ಲ. ನಾವು ಯಾವುದೇ ಒತ್ತಡದಲ್ಲಿ ಕೆಲಸ ಮಾಡುತ್ತಿಲ್ಲ. ಬಿಜೆಪಿ ನಾಯಕರನ್ನು ಭೇಟಿ ಮಾಡುವವರು ನಮ್ಮ ಪಕ್ಷದಲ್ಲಿ ಉಳಿಯಬೇಕಿಲ್ಲ' ಎಂದಿದ್ದರು.

ಇದಕ್ಕೆ ಪ್ರತಿಕ್ರಿಯೆ ನೀಡಿರುವ ಶಿವಪಾಲ್, 'ಅಖಿಲೇಶ್ ಅವರು ಪಕ್ಷದ ಅಧ್ಯಕ್ಷರಾಗಿದ್ದಾರೆ. ನಾನು ಒಬ್ಬ ಸಾಮಾನ್ಯ ಶಾಸಕ. ನಾನು ಬಿಜೆಪಿ ಜತೆಗೆ ಸಖ್ಯ ಬೆಳೆಸುತ್ತಿದ್ದೇನೆ ಎಂದು ಅವರಿಗೆ ಅನಿಸಿದರೆ, ಅವರು ನನ್ನನ್ನು ಪಕ್ಷದಿಂದ ಉಚ್ಚಾಟಿಸಲಿ' ಎಂದು ಸವಾಲು ಹಾಕಿದ್ದಾರೆ.

ಸೇವಾಸಿಂಧು ಪೋರ್ಟಲ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರ ಸಾರ್ವಜನಿಕ ಆಡಳಿತದಲ್ಲಿ ಉತ್ಕೃಷ್ಟತೆಯ ಸೇವೆಗಾಗಿ ನೀಡುವ 2021ನೇ ಸಾಲಿನ ಪ್ರಶಸ್ತಿಗೆ ಕರ್ನಾಟಕ ಸರ್ಕಾರದ 'ಸೇವಾಸಿಂಧು' ಪೋರ್ಟಲ್ ಪಾತ್ರವಾಗಿದ್ದು, ಗುರುವಾರ ಇಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನಾಗರಿಕ ವಿದ್ಯುನ್ಮಾನ ಸೇವಾ ವಿಭಾಗದ (ಇಡಿಸಿಎಸ್) ನಿರ್ದೇಶಕಿ ದೀಪ್ತಿ ಆದಿತ್ಯ ಕಾನಡೆ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಸೇವಾಸಿಂಧು ಪೋರ್ಟಲ್ ಮೂಲಕ 74 ಇಲಾಖೆಗಳ 789 ಸೇವೆಗಳನ್ನು ನೀಡಲಾಗುತ್ತಿದೆ. ಪ್ರತಿ ದಿನವೂ ಒಂದು ಲಕ್ಷಕ್ಕಿಂತ ಹೆಚ್ಚು ಜನರು ಪೋರ್ಟಲ್‌ಗೆ ಭೇಟಿ ನೀಡಿ, ಸರ್ಕಾರದ ವಿವಿಧ ಸೇವೆಗಳನ್ನು ಪಡೆಯುತ್ತಿದ್ದಾರೆ ಎಂದು ದೀಪ್ತಿ ಹೇಳಿದರು.

2018ರಲ್ಲಿ ಆರಂಭವಾದ ಪೋರ್ಟಲ್ ಕಂದಾಯ, ಸಾರಿಗೆ ಸೇರಿದಂತೆ ಸರ್ಕಾರದ ಹಲವು ಇಲಾಖೆಗಳಿಗೆ ಸಂಬಂಧಿಸಿದ 2 ಕೋಟಿಗಿಂತ ಹೆಚ್ಚು ಸೇವೆಗಳನ್ನು ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಇಡಿಸಿಎಸ್ ನಿರ್ದೇಶಕಿ ದೀಪ್ತಿ ಆದಿತ್ಯ ಕಾನಡೆ ಅವರಿಗೆ ನವದೆಹಲಿಯಲ್ಲಿ ಗುರುವಾರ ಪ್ರಶಸ್ತಿ ಪ್ರದಾನ ಮಾಡಿದರು

ಸಂಕ್ಷಿಪ್ತ ಸುದ್ದಿ

ಗಣಿ ಕುಸಿತ: ಹಲವರು ಸಿಲುಕಿರುವ ಶಂಕೆ

ಧನ್‌ಬಾದ್, ಜಾರ್ಖಂಡ್ (ಪಿಟಿಐ): ಅಕ್ರಮವಾಗಿ ನಡೆಸುತ್ತಿದ್ದ ಕಲ್ಲಿದ್ದಲು ಗಣಿ ಕುಸಿದಿದ್ದು, ಹಲವರು ಸಿಲುಕಿರುವ ಶಂಕೆ ವ್ಯಕ್ತವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸರ್ಕಾರ ಗಣಿಯನ್ನು ಸ್ಥಗಿತಗೊಳಿಸಿದ್ದರೂ ಅಕ್ರಮವಾಗಿ ಗಣಿಗಾರಿಕೆ ನಡೆಸಲಾಗುತ್ತಿತ್ತು. ಸದ್ಯ ಗಣಿಯಲ್ಲಿ ಎಷ್ಟು ಜನ ಸಿಲುಕಿದ್ದಾರೆ, ಅವರು ಯಾರು ಎಂಬುದರ ಬಗ್ಗೆ ಮಾಹಿತಿ ಇಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಕುರಿತು ಜಾರ್ಖಂಡ್ ಸರ್ಕಾರದ ಗಣಿ ಇಲಾಖೆಯ ನಿರ್ದೇಶಕ ಅಮಿತ್ ಕುಮಾರ್, 'ಕೆಲವರು ಕುಸಿದು ಬಿದ್ದಿರುವ ಗಣಿಯಲ್ಲಿ ಸಿಲುಕಿಕೊಂಡಿದ್ದಾರೆ. ರಕ್ಷಣಾ ಕಾರ್ಯ ಪ್ರಗತಿಯಲ್ಲಿದೆ. ಈ ಘಟನೆಯ ಬಗ್ಗೆ ಮಾಹಿತಿ ನಿರೀಕ್ಷಿಸುತ್ತಿದ್ದೇವೆ' ಎಂದು ಹೇಳಿದರು.

ಘಟನೆಯ ಬಗ್ಗೆ ಪ್ರತಿಕ್ರಿಯೆ ನೀಡಿರುವ ಭಾರತ್ ಕೋಕೊಂಗ್ ಕೋಲ್ ಲಿಮಿಟೆಡ್‌ನ (ಬಿಸಿಸಿಎಲ್) ವಕ್ತಾರ, 'ನಿರ್ಸಾದ ಚಾಂಚ್ ವಿಕ್ಟೋರಿಯಾ ಪ್ರದೇಶದಲ್ಲಿ ಗಣಿ ಕುಸಿದು ಬಿದ್ದಿರುವ ವಿಷಯದ ಬಗ್ಗೆ ಮಾಹಿತಿ ಬಂದಿದೆ. ಆದರೆ, ಗಣಿಯಲ್ಲಿ ಸಿಲುಕಿದವರ ಬಗ್ಗೆ ಮಾಹಿತಿ ಇಲ್ಲ' ಎಂದರು.

ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ವಿರುದ್ಧ ಎಫ್‌ಐಆರ್

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಅವರ ವಿರುದ್ಧ ಭ್ರಷ್ಟಾಚಾರ ಆರೋಪಗಳಿಗೆ ಸಂಬಂಧಿಸಿ ಸಿಬಿಐ ಎರಡು ಎಫ್‌ಐಆರ್‌ಗಳನ್ನು ದಾಖಲಿಸಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಸರ್ಕಾರಿ ಉದ್ಯೋಗಿಗಳಿಗೆ ಗುಂಪು ವೈದ್ಯಕೀಯ ವಿಮಾ ಯೋಜನೆಗೆ ಗುತ್ತಿಗೆ ನೀಡುವಲ್ಲಿ ಮತ್ತು ರಾಜ್ಯದಲ್ಲಿನ ಕಿರು ಜಲವಿದ್ಯುತ್ ಯೋಜನೆ ಕಾಮಗಾರಿಗೆ ಸಂಬಂಧಿಸಿ ಎಫ್‌ಐಆರ್ ದಾಖಲಾಗಿದೆ. ಎಫ್‌ಐಆರ್ ದಾಖಲಾದ ನಂತರ, ಸಿಬಿಐ ಗುರುವಾರ ಬೆಳಿಗ್ಗೆ ಜಮ್ಮು, ಶ್ರೀನಗರ, ದೆಹಲಿ, ಮುಂಬೈ, ಉತ್ತರ ಪ್ರದೇಶದ ನೋಯ್ಡಾ, ಕೇರಳದ ತಿರುವನಂತಪುರ ಮತ್ತು ಬಿಹಾರದ ದರ್ಭಾಂಗ ಸೇರಿದಂತೆ 14 ಸ್ಥಳಗಳಲ್ಲಿ ಶೋಧಕಾರ್ಯ ನಡೆಸಿತು.

ಪಿಒಕೆಗೆ ಅಮೆರಿಕ ಕಾಂಗ್ರೆಸ್ ಸದಸ್ಯೆ ಭೇಟಿ: ಖಂಡನೆ

ನವದೆಹಲಿ (ಪಿಟಿಐ): ಅಮೆರಿಕದ ಕಾಂಗ್ರೆಸ್ ಸದಸ್ಯೆ ಇಲ್ಹಾನ್ ಒಮರ್ ಅವರು ಪಾಕಿಸ್ತಾನ ಆಕ್ರಮಿತ ಕಾಶ್ಮೀರಕ್ಕೆ ಭೇಟಿ ನೀಡಿರುವುದನ್ನು ಖಂಡಿಸಿರುವ ಭಾರತ, ಇದು ಒಮರ್ ಅವರ ಸಂಕುಚಿತ ಮನಸ್ಸಿನ ರಾಜಕಾರಣವನ್ನು ತೋರಿಸುತ್ತದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಕಿಡಿ ಕಾರಿದರು.

ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಾಗ್ಚಿ, 'ನಮ್ಮ ದೇಶದಿಂದ ಪಾಕಿಸ್ತಾನ ಅಕ್ರಮವಾಗಿ ವಶಪಡಿಸಿಕೊಂಡಿರುವ ಪಿಒಕೆಗೆ ಒಮರ್ ಭೇಟಿ ನೀಡಿದ್ದಾರೆ. ಆದರೆ, ಒಮರ್ ನಮ್ಮ ದೇಶದ ಪ್ರಾದೇಶಿಕ ಸಮಗ್ರತೆ ಹಾಗೂ ಸಾರ್ವಭೌಮತ್ವಕ್ಕೆ ಅಗೌರವ ತೋರಿಸುವುದನ್ನು ನಾವು ಖಂಡಿಸುತ್ತೇವೆ' ಎಂದು ತಿಳಿಸಿದರು.

ಯುದ್ಧ: ಗುರುವಾರದ ಬೆಳವಣಿಗೆಗಳು

- ರಷ್ಯಾ ಪಡೆಗಳು ವಾಪಸ್ಸಾದ ನಂತರ ಕೀವ್‌ನಲ್ಲಿ 1,020 ನಾಗರಿಕರ ಶವಗಳು ಪತ್ತೆ- ಯುರೋಪ್ ಒಕ್ಕೂಟಕ್ಕೆ ಮಾಹಿತಿ ನೀಡಿದ ಉಕ್ರೇನ್‌ನ ಉಪ ಪ್ರಧಾನಿ ಇರಿನಾ ವೆರೆಶ್‌ಚುಕ್
- ಉಕ್ರೇನ್‌ನಲ್ಲಿ ರಷ್ಯಾ ಸೇನೆಗೆ ಭಾರಿ ನಷ್ಟವಾಗಿದೆ ಎನ್ನುವ ವಿವಾದಾತ್ಮಕ ದೃಶ್ಯದ ತುಣುಕುಗಳನ್ನು ತೆಗೆದುಹಾಕಲು ವಿಫಲವಾಗಿರುವುದಕ್ಕೆ ಗೂಗಲ್‌ನ ಯುಟ್ಯೂಬ್‌ಗೆ ರಷ್ಯಾ ನ್ಯಾಯಾಲಯ ₹10.26 ಕೋಟಿ ದಂಡ ಹಾಕಿದೆ
- ಜಿ20 ಹಣಕಾಸು ಸಭೆಯಲ್ಲಿ ರಷ್ಯಾ ಪ್ರತಿನಿಧಿಯ ಭಾಷಣ ಆರಂಭವಾಗುತ್ತಿದ್ದಂತೆ ಅಮೆರಿಕದ ಖಜಾನೆ ಕಾರ್ಯದರ್ಶಿ ಜನೆತ್ ಯೆಲೆನ್ ನೇತೃತ್ವದಲ್ಲಿ ಹಲವು ರಾಷ್ಟ್ರಗಳ ಪ್ರತಿನಿಧಿಗಳು ಸಭೆ ಬಹಿಷ್ಕರಿಸಿ ಹೊರ ನಡೆದರು
- ಬುಧವಾರ 50,921 ನಾಗರಿಕರು ಉಕ್ರೇನ್ ತೊರೆದಿದ್ದು, ನಿರಾಶ್ರಿತರ ಸಂಖ್ಯೆ 50.85 ಲಕ್ಷಕ್ಕೆ ಏರಿದೆ- ವಿಶ್ವಸಂಸ್ಥೆ
- ಪ್ರಮುಖ ಸೇನಾ ಅಧಿಕಾರಿಗಳು ಮತ್ತು ರಕ್ಷಣಾ ಉಪಕರಣಗಳ ಕಂಪನಿಗಳು ಸೇರಿ ರಷ್ಯಾದ ವಿರುದ್ಧದ ನಿರ್ಬಂಧಗಳ ಪಟ್ಟಿಗೆ ಬ್ರಿಟನ್ ಹೊಸದಾಗಿ 26 ಮಂದಿ ಸೇರಿಸಿದೆ

ಮೊದಲನೇ ವರ್ಷದ ಪುಣ್ಯಸ್ಮರಣೆ

ಆರ್. ಶ್ರೀನಿವಾಸ ಮೂರ್ತಿ
(Retd. Police Sub-Inspector)

ಇವರು ದಿನಾಂಕ 5-5-2021 ರಂದು ದೈವಾಧೀನರಾಗಿರುತ್ತಾರೆ. ತತ್ಸಂಬಂಧವಾದ ಮೊದಲನೇ ವರ್ಷದ ಪುಣ್ಯಸ್ಮರಣೆಯನ್ನು ದಿನಾಂಕ 24-4-2022 ರಂದು ಭಾನುವಾರ ಬೆಳಿಗ್ಗೆ 10:00 ಘಂಟೆಗೆ ಇವರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ಇವರ ಬಂಧು-ಮಿತ್ರರೆಲ್ಲರೂ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿಸುತ್ತೇನೆ.

ಇಂತಿ: ಶ್ರೀಮತಿ ರತ್ನಮ್ಮ, ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು
ಸಂಪರ್ಕಿಸಿ: 8762995932, 9986125426

ಶ್ರೀನಗರ: ಎಲ್‌ಇಟಿ ಕಮಾಂಡರ್ ಹತ್ಯೆ

ಶ್ರೀನಗರ: ಉತ್ತರ ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಪರಿಸ್ವಾನಿ ಪ್ರದೇಶದಲ್ಲಿ ಗುರುವಾರ ಭದ್ರತಾ ಪಡೆಗಳು ಹಾಗೂ ಉಗ್ರರ ನಡುವಿನ ಗುಂಡಿನ ಚಕಮಕಿಯಲ್ಲಿ ಲಷ್ಕರ್-ಎ-ತಯಬಾ (ಎಲ್‌ಇಟಿ) ಸಂಘಟನೆಯ ಕಮಾಂಡರ್ ಮೊಹಮ್ಮದ್ ಯೂಸುಫ್ ಕಂತ್ರೂ ಸೇರಿ ಮೂವರು ಉಗ್ರರು ಹತರಾಗಿದ್ದು, ಮೂವರು ಯೋಧರು, ನಾಗರಿಕರೊಬ್ಬರು ಗಾಯಗೊಂಡಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡಲಾಗುವುದು.

ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮರಿಯುಪೊಲ್ ನಗರ ವಿಮೋಚನೆ: ರಷ್ಯಾ ಪಡೆಗಳಿಗೆ ಸಿಕ್ಕ ಯಶಸ್ಸು– ಪುಟಿನ್ ಶ್ಲಾಘನೆ

‘ಉಕ್ಕು ಸ್ಥಾವರದ ಮೇಲೆ ದಾಳಿ ಬೇಡ’

ಮಾಸ್ಕೊ (ಎಎಫ್‌ಪಿ): ಉಕ್ರೇನಿನ ಬಂದರು ನಗರ ಮರಿಯುಪೊಲ್‌ನ ದೈತ್ಯ ಅಜೋವ್‌ಸ್ಟಾಲ್ ಉಕ್ಕಿನ ಸ್ಥಾವರದ ಮೇಲೆ ದಾಳಿ ಮಾಡುವ ಬದಲು, ಅದನ್ನು ವಶಕ್ಕೆ ಪಡೆಯಿರಿ ಎಂದು ತಮ್ಮ ಸೇನಾ ಪಡೆಗಳಿಗೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಗುರುವಾರ ಆದೇಶ ನೀಡಿದ್ದಾರೆ.

‘ಉಕ್ಕಿನ ಸ್ಥಾವರದ ಭೂಗತ ಸುರಂಗಗಳಲ್ಲಿ ರಕ್ಷಣೆ ಪಡೆದಿರುವವರಷ್ಟೇ ಅಲ್ಲ, ಒಂದು ನೊಣ ಕೂಡ ರಷ್ಯಾ ಸೇನೆಯ ಕಣ್ತಪ್ಪಿಸಿ ಸ್ಥಾವರದಿಂದ ಪರಾರಿಯಾಗಲು ಸಾಧ್ಯವಾಗಬಾರದು’ ಎಂದು ಪುಟಿನ್ ಆದೇಶ ಕೊಟ್ಟಿದ್ದಾರೆ.

ದೈತ್ಯ ಅಜೋವ್‌ಸ್ಟಾಲ್ ಉಕ್ಕಿನ ಸ್ಥಾವರ ಹೊರತುಪಡಿಸಿ ಉಕ್ರೇನಿನ ಬಂದರು ನಗರ ರಷ್ಯಾದ ನಿಯಂತ್ರಣಕ್ಕೆ ಸಿಕ್ಕಿರುವುದಾಗಿ ರಕ್ಷಣಾ ಸಚಿವ ಸೆರ್ಗೆಯ್ ಶೋಯಿಗು ಮಾಹಿತಿ ಕೊಟ್ಟ ಬೆನ್ನಲ್ಲೇ ಪುಟಿನ್ ಅವರು, ಮರಿಯುಪೊಲ್‌ನ ವಿಮೋಚನೆ ರಷ್ಯಾ ಪಡೆಗಳಿಗೆ ಸಿಕ್ಕಿದ ಯಶಸ್ಸು ಎಂದು ಶ್ಲಾಘಿಸಿದರು.

‘ಅಜೋವ್‌ಸ್ಟಾಲ್ ಸ್ಥಾವರದಲ್ಲಿ ಸುಮಾರು ಎರಡು ಸಾವಿರ ಉಕ್ರೇನ್ ಸೈನಿಕರು ಇರುವ ಅಂದಾಜಿದೆ. ಸ್ಥಾವರದೊಳಗಿನ ಭೂಗತ ಸುರಂಗಗಳ ಸಂಪರ್ಕ ಜಾಲ ಬಳಸಿಕೊಂಡು ಉಕ್ರೇನ್ ಸೇನೆ ಅಂತಿಮ ಪ್ರತಿರೋಧ ತೋರುತ್ತಿದೆ’ ಎಂದು ಶೋಯಿಗು, ಪುಟಿನ್ ಅವರಿಗೆ ಮಾಹಿತಿ ನೀಡಿದರು.

‘ಅಜೋವ್‌ಸ್ಟಾಲ್ ಸ್ಥಾವರದ ಮೇಲೆ ಭೀಕರ ದಾಳಿ ಕಾರ್ಯಸಾಧುವಲ್ಲ. ತಕ್ಷಣ ಆ ಯೋಜನೆ ನಿಲ್ಲಿಸಿ’ ಎಂದು ರಕ್ಷಣಾ ಸಚಿವ ಶೋಯಿಗು ಅವರಿಗೆ ಪುಟಿನ್ ಆದೇಶ ನೀಡಿದರು.

‘ಇಂತಹ ಭೂಗತ ಸಮಾಧಿಗಳನ್ನು ತಲುಪುವ ಮತ್ತು ಸ್ಥಾವರದ ಭೂಗತ ಸುರಂಗಗಳಲ್ಲಿ ತೆವಳುವ ಅಗತ್ಯವಿಲ್ಲ. ಒಂದು ನೊಣ ಕೂಡ ತಪ್ಪಿಸಿಕೊಳ್ಳದಂತೆ ಸ್ಥಾವರದ ಎಲ್ಲ ಮಾರ್ಗಗಳನ್ನು ನಿರ್ಬಂಧಿಸಿ’ ಎಂದು ಪುಟಿನ್ ತಮ್ಮ ಸೇನೆಗೆ ಸೂಚಿಸಿದರು.

ರಷ್ಯಾ ಪಡೆಗಳು ಮುತ್ತಿಗೆ ಹಾಕಿರುವ ಈ ನಗರದಲ್ಲಿ ಆಹಾರ, ನೀರು, ವಿದ್ಯುತ್ ಇಲ್ಲದೇ ಸಾವಿರಾರು ನಾಗರಿಕರು ಮೃತಪಟ್ಟಿರುವ ಅಂದಾಜು ಇದೆ.

9 ಶವ ಪತ್ತೆ

ಕೀವ್ (ಎಎಫ್‌ಪಿ): ರಾಜಧಾನಿ ಹೊರ ವಲಯದ ಬೊರೊಡಿಯಾಂಕ ಪಟ್ಟಣದಲ್ಲಿ ಒಂಬತ್ತು ನಾಗರಿಕರ ಶವಗಳು ಗುರುವಾರ ಪತ್ತೆಯಾಗಿದ್ದು, ಚಿತ್ರಹಿಂಸೆ ನೀಡಿ ಕೊಂದಿರುವ ಗುರುತುಗಳು ಶವಗಳ ಮೇಲಿವೆ ಎಂದು ಕೀವ್ ಪ್ರಾಂತ್ಯದ ಪೊಲೀಸ್ ಮುಖ್ಯಸ್ಥ ಆಂಡ್ರಿ ನಿಬಿಟೋವ್ ತಿಳಿಸಿದರು.

ಬೊರೊಡಿಯಾಂಕ ಸುತ್ತಲೂ ಪೊಲೀಸರು 2 ಸಮಾಧಿಗಳನ್ನು ಪತ್ತೆಹಚ್ಚಿದ್ದಾರೆ. ಒಂದು ಸಮಾಧಿಯಲ್ಲಿ 15 ವರ್ಷದ ಬಾಲಕಿ ಸೇರಿ ಮೂವರ ಶವ ಸಿಕ್ಕಿದರೆ, ಎರಡನೇ ಸಮಾಧಿಯಲ್ಲಿ ಆರು ಶವಗಳು ಸಿಕ್ಕಿವೆ. ಮೃತರೆಲ್ಲರೂ ಸ್ಥಳೀಯರು ಎಂದು ನಿಬಿಟೋವ್ ಹೇಳಿದರು.

ಉಕ್ರೇನಿನ ಕೀವ್ ನಗರದ ವಾಯುವ್ಯದ ಮೊಶ್ಚುನ್ ಗ್ರಾಮದಲ್ಲಿ ರಷ್ಯಾ ಬಾಂಬ್ ದಾಳಿಗೆ ನಾಶವಾದ ವಸತಿ ಪ್ರದೇಶದ ವೈಮಾನಿಕ ನೋಟ – ಎಎಫ್‌ಪಿ ಚಿತ್ರ

ರಷ್ಯಾ-ಉಕ್ರೇನ್ ಸಮರಾಂಗಣ

ಉಕ್ರೇನ್‌ನ ಹಾರ್ಕಿವ್ ನಗರದ ಮೇಲೆ ಗುರುವಾರ ನಸುಕಿನನಲ್ಲಿ ರಷ್ಯಾ ಪಡೆಗಳು ಭೀಕರ ಬಾಂಬ್ ದಾಳಿ ನಡೆಸಿವೆ ಎಂದು ಮೇಯರ್ ಇಹೋರ್ ತೆರೆಖೋವ್ ತಿಳಿಸಿದ್ದಾರೆ.

ಸೇನಾ ನೆರವು: ರಷ್ಯಾದ ವಿರುದ್ಧ ಹೋರಾಡಲು ಉಕ್ರೇನ್‌ಗೆ ಹೆಚ್ಚುವರಿಯಾಗಿ 800 ದಶಲಕ್ಷ ಡಾಲರ್ ಮೊತ್ತದ ಸೇನಾ ನೆರವನ್ನು ಅಮೆರಿಕ ಅಧ್ಯಕ್ಷ ಜೋ ಬೈಡನ್ ಪ್ರಕಟಿಸಲಿದ್ದಾರೆ ಎಂದು ಶ್ವೇತ ಭವನದ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಬಲವಂತದಿಂದ ಸ್ಥಾವರ ವಶ ಅಸಾಧ್ಯ: ಉಕ್ರೇನ್

ಕೀವ್ (ರಾಯಿಟರ್ಸ್): ‘ರಷ್ಯಾ ಪಡೆಗಳು ಅಜೋವ್‌ಸ್ಟಾಲ್ ಉಕ್ಕಿನ ಸ್ಥಾವರ ವಶಕ್ಕೆ ಪಡೆಯಲು ನಿರ್ಧರಿಸಿವೆ. ಆದರೆ, ಅದನ್ನು ಬಲವಂತದಿಂದ ವಶಪಡಿಸಿಕೊಳ್ಳಲು ಆಗದು ಎನ್ನುವುದು ಅವರಿಗೆ ಗೊತ್ತಿದೆ. ಅಲ್ಲಿ ಅವರು ಈಗಾಗಲೇ ಭಾರಿ ನಷ್ಟ ಅನುಭವಿಸಿದ್ದಾರೆ’ ಎಂದು ಉಕ್ರೇನ್ ಅಧ್ಯಕ್ಷರ ಸಲಹೆಗಾರ ಒಲೆಕ್ಸಿ ಅರೆಸ್ಟೋವಿಚ್ ಗುರುವಾರ ಹೇಳಿದ್ದಾರೆ.

‘ಸ್ಥಾವರವನ್ನು ಭೌತಿಕವಾಗಿ ವಶಪಡಿಸಿಕೊಳ್ಳಲು ಅವರಿಗೆ ಆಗದು. ಅಲ್ಲಿ ನಮ್ಮ ರಕ್ಷಕರು ಸ್ಥಾವರದ ಹಿಡಿತ ಮುಂದುವರಿಸಿದ್ದಾರೆ’ ಎಂದು ತಿಳಿಸಿದರು.

ನಾಗರಿಕರ ಸ್ಥಳಾಂತರ: ಮರಿಯುಪೊಲ್ ನಗರದಲ್ಲಿ ಸಿಲುಕಿರುವ ನಾಗರಿಕರನ್ನು ಸ್ಥಳಾಂತರಿಸಲು ನಾಲ್ಕು ಬಸ್‌ಗಳು ಮಾನವೀಯ ಕಾರಿಡಾರ್ ಮೂಲಕ ಬುಧವಾರ ಕಾರ್ಯಾಚರಣೆ ಆರಂಭಿಸಿದವು.

ಮಹಿಳೆಯರು, ಮಕ್ಕಳು ಮತ್ತು ವೃದ್ಧರನ್ನು ಸ್ಥಳಾಂತರಿಸುವ ಕಾರ್ಯಾಚರಣೆ ಗುರುವಾರ ಮುಂದುವರಿಯಿತು ಎಂದು ಉಪ ಪ್ರಧಾನಿ ಐರಿನಾ ವೆರೆಶ್‌ಚುಕ್ ತಿಳಿಸಿದರು.

ಕಂಪನಿಗಳಿಗೆ ಗಡ್ಕರಿ ಎಚ್ಚರಿಕೆ

ನವದೆಹಲಿ: ಎಲೆಕ್ಟ್ರಿಕ್ ವಾಹನಗಳ ಸುರಕ್ಷತಾ ಮಾನದಂಡಗಳನ್ನು ಅಳವಡಿಸಿಕೊಳ್ಳುವಲ್ಲಿ ನಿರ್ಲಕ್ಷ್ಯ ತೋರಿದರೆ, ಅಂಥ ವಾಹನಗಳ ತಯಾರಕರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಗುರುವಾರ ಎಚ್ಚರಿಸಿದ್ದಾರೆ.

ಎಲೆಕ್ಟ್ರಿಕ್ ವಾಹನಗಳಲ್ಲಿ ಬೆಂಕಿ ಅವಘಡಗಳು ಸಂಭವಿಸಿರುವ ಪ್ರಕರಣಗಳನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಎಂದು ಟ್ವೀಟ್ ಮಾಡಿರುವ ಅವರು, ‘ಯಾವುದೇ ಕಂಪನಿಯು ತಮ್ಮ ಪ್ರಕ್ರಿಯೆಗಳಲ್ಲಿ ನಿರ್ಲಕ್ಷ್ಯ ತೋರಿದರೆ, ಭಾರಿ ದಂಡ ತೆರಬೇಕಾಗುತ್ತದೆ. ಅಲ್ಲದೆ, ಎಲ್ಲ ದೋಷಯುಕ್ತ ವಾಹನಗಳನ್ನು ಹಿಂಪಡೆಯಬೇಕು’ ಎಂದರು.

ಮಲಿಕ್ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಕೆ

ಮುಂಬೈ (ಪಿಟಿಐ): ಭೂಗತ ಪಾತಕಿ ದಾವೂದ್ ಇಬ್ರಾಹಿಂಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಮಹಾರಾಷ್ಟ್ರ ಅಲ್ಪಸಂಖ್ಯಾತರ ಅಭಿವೃದ್ಧಿ ಸಚಿವ ನವಾಬ್ ಮಲಿಕ್ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಗುರುವಾರ ಚಾರ್ಜ್‌ಶೀಟ್ ಸಲ್ಲಿಸಿದೆ.

ಎನ್‌ಸಿಪಿ ನಾಯಕ ಮಲಿಕ್ ಅವರನ್ನು ಇದೇ ಫೆಬ್ರುವರಿ 23 ರಂದು ಬಂಧಿಸಿದ್ದು, ನ್ಯಾಯಾಂಗ ಕಸ್ಟಡಿಯಲ್ಲಿದ್ದಾರೆ. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ 5,000 ಪುಟಗಳ ಚಾರ್ಜ್‌ಶೀಟ್ ಸಲ್ಲಿಸಲಾಗಿದೆ ಎಂದು ಇ.ಡಿ ಪರ ವಕೀಲರು ತಿಳಿಸಿದ್ದಾರೆ.

ಕಾನೂನುಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯ್ದೆ (ಯುಎಪಿಎ) ಅಡಿಯಲ್ಲಿ ದಾವೂದ್ ಇಬ್ರಾಹಿಂ ಮತ್ತು ಆತನ ಸಹಚರರ ವಿರುದ್ಧ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಇತ್ತೀಚೆಗೆ ದಾಖಲಿಸಿದ ಎಫ್‌ಐಆರ್‌ಗೆ ಸಂಬಂಧಿಸಿ ಮಲಿಕ್ ವಿರುದ್ಧ ಇ.ಡಿ ಪ್ರಕರಣ ದಾಖಲಿಸಿದೆ.

ಎಲೆಕ್ಟ್ರಿಕ್ ವಾಹನಗಳ ಬ್ಯಾಟರಿ ವಿನಿಮಯ ನೀತಿಯ ಕರಡು ಪ್ರಕಟ

ನವದೆಹಲಿ: ಎಲೆಕ್ಟ್ರಿಕ್ ವಾಹನಗಳಲ್ಲಿ ಬೆಂಕಿ ಅವಘಡಗಳು ಸಂಭವಿಸಿದ ಹಲವು ಪ್ರಕರಣಗಳು ಬೆಳಕಿಗೆ ಬಂದ ಬೆನ್ನಲ್ಲೇ ನೀತಿ ಆಯೋಗವು ಎಲೆಕ್ಟ್ರಿಕ್ ವಾಹನಗಳಲ್ಲಿ ಬದಲಾಯಿಸಬಹುದಾದ ಬ್ಯಾಟರಿಗಳಿಗಾಗಿ ಕಠಿಣ ಪರೀಕ್ಷಾ ನಿಯಮಗಳನ್ನು ಪಾಲಿಸುವ ಅಗತ್ಯವಿದೆ ಎಂದು ಸೂಚಿಸಿದೆ. ಈ ನಿಟ್ಟಿನಲ್ಲಿ ಆಯೋಗವು ಗುರುವಾರ ‘ಎಲೆಕ್ಟ್ರಿಕ್ ವಾಹನಗಳಿಗೆ ಬ್ಯಾಟರಿ ವಿನಿಮಯ ನೀತಿಯ ಕರಡ’ನ್ನು ಪ್ರಕಟಿಸಿದೆ.

ಕೇಂದ್ರ ಸರ್ಕಾರದ ನೀತಿಗಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವ ನೀತಿ ಆಯೋಗವು, ಎಲೆಕ್ಟ್ರಿಕ್ ವಾಹನ, ಬ್ಯಾಟರಿ ಸುರಕ್ಷತೆ, ವಿದೇಶಗಳಿಂದ ತರಿಸುವ ವಿದ್ಯುತ್ ಉಪಕರಣಗಳು, ಕೇಬಲ್‌ಗಳು ಮತ್ತು ಕನೆಕ್ಟರ್‌ಗಳ ತಾಂತ್ರಿಕತೆಯು ಅನುಮೋದಿಸಲ್ಪಟ್ಟ ಅಥವಾ ಬಿಐಎಸ್‌ನಿಂದ ವ್ಯಾಖ್ಯಾನಿಸಲಾದ ಮಾನದಂಡಗಳ ಅನ್ವಯವೇ ಇರಬೇಕು ಎಂದು ಕರಡು ವರದಿಯಲ್ಲಿ ಪ್ರಸ್ತಾಪಿಸಿದೆ.

‘ಟ್ರಾಕ್ಷನ್ ಬ್ಯಾಟರಿ ಪ್ಯಾಕ್‌ಗಳ ಸುರಕ್ಷತೆಗಾಗಿ ಎಐಎಸ್ 156 (2020) ಮತ್ತು ಎಐಎಸ್ 038 ಆರ್‌ಇವಿ 2 (2020) ಮಾನದಂಡಗಳ ಪ್ರಕಾರ ಬ್ಯಾಟರಿಗಳನ್ನು ಪರೀಕ್ಷಿಸಬೇಕು ಮತ್ತು ಪ್ರಮಾಣೀಕರಿಸಬೇಕು’ ಎಂದು ವರದಿಯಲ್ಲಿ ಹೇಳಿದೆ.

‘ಸ್ವಾಪಿಂಗ್ ಸ್ಟೇಷನ್’ನಲ್ಲಿ ಬಳಸಲಾಗುವ ಎಲೆಕ್ಟ್ರಿಕ್ ವಾಹನಗಳ ಉಪಕರಣಗಳನ್ನು (ಇವಿಎಸ್‌ಇ) ರಾಷ್ಟ್ರೀಯ ಮಾನ್ಯತೆ ಮಂಡಳಿ (ಎನ್‌ಎಬಿಎಲ್) ಅಥವಾ ಬ್ಯಾಟರಿ ವಿನಿಮಯಕ್ಕಾಗಿ ಕೇಂದ್ರೀಯ ನೋಡಲ್ ಏಜೆನ್ಸಿ ನೇಮಿಸಿದ ಸಂಸ್ಥೆಯಿಂದ ಪರೀಕ್ಷಿಸಿ, ಅನುಮೋದಿಸಬೇಕು ಎಂದು ಕರಡು ನೀತಿಯಲ್ಲಿ ತಿಳಿಸಲಾಗಿದೆ.

ಕರಡು ನೀತಿಗೆ ಸಂಬಂಧಿಸಿದಂತೆ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು ಜೂನ್ 5 ರವರೆಗೆ ಕಳುಹಿಸಬಹುದು ಎಂದು ನೀತಿ ಆಯೋಗ ತಿಳಿಸಿದೆ.

ಮೋದಿ ವಿರುದ್ಧ ಟ್ವೀಟ್: ಮೇವಾನಿ ಬಂಧನ

ಕೊಕ್ರಜಾರ್, ಅಸ್ಸಾಂ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಟ್ವೀಟ್ ಮಾಡಿದ್ದ ಗುಜರಾತ್‌ನ ಶಾಸಕ ಜಿಗ್ನೇಶ್ ಮೇವಾನಿ ಅವರನ್ನು ಅಸ್ಸಾಂನಲ್ಲಿ ಪೊಲೀಸರು ಬಂಧಿಸಿದ್ದಾರೆ.

ಪ್ರಧಾನಿಯನ್ನು ಉಲ್ಲೇಖಿಸಿ ‘ದೇವರೆಂದು ಪರಿಗಣಿಸಿದ ಗೋಡ್ಸೆ’ ಎಂಬ ಅಡಕವಿದ್ದ ಟ್ವೀಟ್ ಮಾಡಿದ್ದರು. ಕೋಮುಸೌಹಾರ್ದಕ್ಕೆ ಮನವಿ ಮಾಡಬೇಕು ಎಂದು ಪ್ರಧಾನಿಗೆ ಒತ್ತಾಯಿಸಲು ಟ್ವೀಟ್ ಬಳಸಲಾಗಿತ್ತು ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಬೊಡೊಲ್ಯಾಂಡ್ ಗಡಿ ಸಮಿತಿಯ ಬಿಜೆಪಿ ಕಾರ್ಯಕಾರಿ ಸದಸ್ಯ ಅರುಪ್ ಕೆಆರ್ ಡೇ ಅವರು ಈ ಬಗ್ಗೆ ದೂರು ನೀಡಿದ್ದರು. ಈ ಟ್ವೀಟ್ ಸಮಾಜದಲ್ಲಿ ಅಶಾಂತಿ ಮೂಡಿಸಲು ಕಾರಣವಾಗಲಿದೆ ಎಂದು ದೂರಿನಲ್ಲಿ ಹೇಳಿದ್ದರು.

ರಾಹುಲ್ ಖಂಡನೆ: ಮೇವಾನಿ ಬಂಧನವು ಪ್ರಜಾಪ್ರಭುತ್ವ ವಿರೋಧಿ ಕ್ರಮ. ಈ ಮೂಲಕ ಅವರನ್ನು ಆಯ್ಕೆ ಮಾಡಿದ್ದ ಜನರಿಗೆ ಅಪಮಾನ ಮಾಡಲಾಗಿದೆ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಟೀಕಿಸಿದ್ದಾರೆ.

‘ಮೋದಿಯವರೇ, ನೀವು ಆಡಳಿತಯಂತ್ರ ಬಳಸಿ ವಿರೋಧವನ್ನು ಹತ್ತಿಕ್ಕಬಹುದು. ಆದರೆ, ಸತ್ಯವನ್ನು ಮರೆಮಾಚಲಾಗದು’ ಎಂದು ರಾಹುಲ್ ಗಾಂಧಿ ಟೀಕಿಸಿದ್ದಾರೆ. #ಡರೋಮತ್, #ಸತ್ಯಮೇವಜಯತೇ ಹ್ಯಾಷ್‌ಟ್ಯಾಗ್ ಜೊತೆಗೆ ಟ್ವೀಟ್ ಮಾಡಿದ್ದಾರೆ.

ಕೇಂದ್ರದ ಈ ಹತ್ತಿಕ್ಕುವ ಧೋರಣೆಯ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಧ್ವನಿ ಎತ್ತಲಿದ್ದಾರೆ ಎಂದು ತಿಳಿಸಿದ್ದಾರೆ. ಕಾಂಗ್ರೆಸ್ ಮುಖಂಡ ಕೆ.ಸಿ.ವೇಣುಗೋಪಾಲ್ ಅವರೂ ಟ್ವೀಟ್ ಮಾಡಿದ್ದು, ಮೇವಾನಿ ಬಂಧನವು ಕಾನೂನುಬಾಹಿರ ಕ್ರಮ ಎಂದಿದ್ದಾರೆ.

ಕೋವಿಡ್: ಮಾದರಿಗಳಲ್ಲಿ ಬಿಎ.2.12 ತಳಿ ಪತ್ತೆ

ನವದೆಹಲಿ (ಪಿಟಿಐ): ಏಪ್ರಿಲ್ ತಿಂಗಳ ಮೊದಲ ಹದಿನೈದು ದಿನಗಳಲ್ಲಿ ದೆಹಲಿಯಲ್ಲಿ ಪರೀಕ್ಷೆಗೆ ಒಳಪಡಿಸಿರುವ ಮಾದರಿಗಳಲ್ಲಿ ಓಮೈಕ್ರಾನ್‌ನ ಬಿಎ.2.12 ತಳಿ ಹೆಚ್ಚಿನ ಪ್ರಮಾಣದಲ್ಲಿ ಪತ್ತೆಯಾಗಿದೆ. ಇದು ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗಲು ಕಾರಣ ಎಂದು ಮೂಲಗಳು ಗುರುವಾರ ತಿಳಿಸಿವೆ.

ಅಮೆರಿಕದಲ್ಲಿ ಕೋವಿಡ್ ಪ್ರಕರಣ ಏರಿಕೆಯಾಗಲು ಕಾರಣವಾಗಿದ್ದ ಬಿಎ.2.12.1 ತಳಿ ಕೂಡ ಕೆಲವು ಮಾದರಿಗಳಲ್ಲಿ ಪತ್ತೆಯಾಗಿದೆ ಎಂದು ವೈರಾಣು ಸಂರಚನೆ ವಿಶ್ಲೇಷಣೆ ಸಂಸ್ಥೆ ಐಎನ್‌ಎಸ್‌ಎಸಿಒಜಿ ತಿಳಿಸಿದೆ. ಆದರೆ ಅಧಿಕಾರಿಗಳು ಇದನ್ನು ದೃಢಪಡಿಸಿಲ್ಲ.

‘ಹೊಸ ಉಪತಳಿ ಬಿಎ.2.12 ಶೇ 52 ರಷ್ಟು ಮಾದರಿಗಳಲ್ಲಿ ಹಾಗೂ ಬಿಎ.2.10 ಶೇ11ರಷ್ಟು ಮಾದರಿಗಳಲ್ಲಿ ಪತ್ತೆಯಾಗಿದೆ’ ಎಂದೂ ಮೂಲಗಳು ತಿಳಿಸಿವೆ. ದೆಹಲಿಯಲ್ಲಿ ಏಪ್ರಿಲ್ ತಿಂಗಳ ಮೊದಲ ಹದಿನೈದು ದಿನಗಳಲ್ಲಿ 300 ಮಾದರಿಗಳನ್ನು ‘ಜೆನೋಮ್ ಸಿಕ್ವೆನ್ಸಿಂಗ್’ ಪರೀಕ್ಷೆಗೆ ಒಳಪಡಿಸಲಾಗಿತ್ತು. ದೆಹಲಿಯಲ್ಲಿ ಬುಧವಾರ 1,009 ಹೊಸ ಪ್ರಕರಣಗಳು ದೃಢಪಟ್ಟಿದ್ದವು.

ಯಾರೂ ಸುರಕ್ಷಿತರಲ್ಲ: ಭಾರತದಲ್ಲಿ ಲಸಿಕೆ ಹಾಕಿಸಿಕೊಳ್ಳುವಲ್ಲಿ ಅಸಮಾನತೆ ಸಮಸ್ಯೆಯಾಗಿಯೇ ಉಳಿದಿದೆ. ಒಟ್ಟು ಜನಸಂಖ್ಯೆಯ ಶೇ2 ಕ್ಕಿಂತ ಕಡಿಮೆ ಜನರು ಬೂಸ್ಟರ್ ಡೋಸ್ ಪಡೆದುಕೊಂಡಿದ್ದಾರೆ. ವಿಶ್ವದ 56 ದೇಶಗಳಲ್ಲಿ ಶೇ 10ರಷ್ಟು ಜನರಿಗೆ ಬೂಸ್ಟರ್ ಡೋಸ್ ನೀಡಲು ಸಾಧ್ಯವಾಗುತ್ತಿಲ್ಲ. ಲಸಿಕೆ ಹಾಕಿಸಿಕೊಳ್ಳುವವರೆಗೆ ಯಾರೂ ಸುರಕ್ಷಿತರಲ್ಲ ಎಂದು ಎಂದು ಜಾನ್ ಹಾಪ್ಕಿನ್ಸ್ ವಿಶ್ವವಿದ್ಯಾಲಯದ ವಿಜ್ಞಾನಿ ಅಮಿತಾ ಗುಪ್ತಾ ಹೇಳಿದ್ದಾರೆ.

ಮಾಸ್ಕ್ ಧರಿಸಲು ಸಲಹೆ (ಚಂಡೀಗಡ ವರದಿ): ಕೊರೊನಾ ಪ್ರಕರಣಗಳು ಏರಿಕೆಯಾಗುತ್ತಿರುವುದರಿಂದ ಹೆಚ್ಚು ಜನನಿಬಿಡ ಪ್ರದೇಶಗಳಲ್ಲಿ ಸಂಚರಿಸುವಾಗ ಮಾಸ್ಕ್ ಧರಿಸಬೇಕು ಎಂದು ಪಂಜಾಬ್ ಸರ್ಕಾರ ಸಲಹೆ ನೀಡಿದೆ.

12 ಮಂದಿಗೆ ಕೋವಿಡ್: ಮದ್ರಾಸ್ ಐಐಟಿಯಲ್ಲಿ 12 ಮಂದಿಗೆ ಕೋವಿಡ್ ಇರುವುದು ಗುರುವಾರ ದೃಢಪಟ್ಟಿದ್ದು, ಇದನ್ನು ಕೋವಿಡ್ ಕ್ಲಸ್ಟರ್ ಎಂದು ಗುರುತಿಸಲಾಗಿದೆ. ಮುಂದಿನ ದಿನಗಳಲ್ಲಿ 1500 ಮಂದಿಗೆ ಕೋವಿಡ್ ಪರೀಕ್ಷೆ ನಡೆಸಲಾಗುತ್ತದೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಸಕ್ರಿಯ ಪ್ರಕರಣ 13,433ಕ್ಕೆ ಏರಿಕೆ



ಗುರುವಾರ ಬೆಳಿಗ್ಗೆ 8 ಗಂಟೆಗೆ ಅಂತ್ಯವಾದಂತೆ 24 ಗಂಟೆಗಳ ಅವಧಿಯಲ್ಲಿ ದೇಶದಾದ್ಯಂತ ಹೊಸದಾಗಿ 2,380 ಮಂದಿಗೆ ಕೋವಿಡ್ ದೃಢಪಟ್ಟಿದೆ. ಇದೇ ವೇಳೆ 56 ಮಂದಿ ಕೋವಿಡ್‌ನಿಂದ ಬಲಿಯಾಗಿದ್ದು, ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ ಒಟ್ಟು 5,22,062ಕ್ಕೆ ತಲುಪಿದೆ. ಇನ್ನು ಸಕ್ರಿಯ ಪ್ರಕರಣಗಳ ಸಂಖ್ಯೆ 13,433ಕ್ಕೆ ಏರಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಗುರುವಾರ ತಿಳಿಸಿದೆ.

ಕೇರಳದಲ್ಲಿ 53 ಸಾವು: ದೇಶದಾದ್ಯಂತ ಸಾವಿಗೀಡಾದ 56 ಮಂದಿ ಪೈಕಿ 53 ಜನ ಕೇರಳದವರು. ದೆಹಲಿ, ಮಿಜೋರಾಂ, ಒಡಿಶಾದಲ್ಲಿ ತಲಾ ಒಬ್ಬರು ಕೋವಿಡ್‌ನಿಂದ ಸಾವನ್ನಪ್ಪಿದ್ದಾರೆ.

ಹಾಂಗ್‌ಕಾಂಗ್: ನಿರ್ಬಂಧ ಸಡಿಲ

ಬೀಜಿಂಗ್, ಚೀನಾ (ಪಿಟಿಐ): ಹಾಂಗ್‌ಕಾಂಗ್‌ನಲ್ಲಿ ಕೊರೊನಾ ಸೋಂಕು ಪ್ರಕರಣಗಳು ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಕೊರೊನಾ ನಿರ್ಬಂಧಗಳನ್ನು ಸಡಿಲಗೊಳಿಸಲಾಗುತ್ತಿದೆ.

ಕೊರೊನಾ ಪ್ರಕರಣಗಳಲ್ಲಿ ಗಣನೀಯ ಪ್ರಮಾಣದ ಇಳಿಕೆಯಾಗಿರುವುದರಿಂದ, ಹಾಂಗ್‌ಕಾಂಗ್‌ನ ಡಿಸ್ನಿ ಲ್ಯಾಂಡ್, ವಸ್ತು ಸಂಗ್ರಹಾಲಯ ಮತ್ತು ರಾತ್ರಿಯ ವೇಳೆಯಲ್ಲಿನ ಹೋಟೆಲ್‌ಗಳು ಪುನಃ ಕಾರ್ಯಾರಂಭ ಮಾಡಲು ಅಲ್ಲಿನ ಸರ್ಕಾರ ಅನುಮತಿ ನೀಡಿದೆ.

ಹಾಂಗ್‌ಕಾಂಗ್‌ನಲ್ಲಿ ಕೊರೊನಾ ರೂಪಾಂತರದ ಐದನೇ ಅಲೆಯು ವ್ಯಾಪಕವಾಗಿ ಹರಡಿದ್ದಾಗ ಜನಪ್ರಿಯ ಥೀಮ್ ಪಾರ್ಕ್‌ಗಳು, ವಸ್ತು ಸಂಗ್ರಹಾಲಯಗಳು ಮುಂತಾದವುಗಳನ್ನು ಜನವರಿ ತಿಂಗಳಲ್ಲಿ ಮುಚ್ಚಲಾಗಿತ್ತು. ಹಾಂಗ್‌ಕಾಂಗ್‌ನ 74 ಲಕ್ಷ ಜನರ ಪೈಕಿ 72 ಲಕ್ಷ ಜನರು ಕೊರೊನಾ ಸೋಂಕಿಗೆ ತುತ್ತಾಗಿದ್ದರು. ಅಲ್ಲದೇ ಸೋಂಕಿನಿಂದ 9,000 ಜನ ಮೃತಪಟ್ಟಿದ್ದಾರೆ.

ಶಾಂಘೈ: 25ಕ್ಕೆ ಏರಿದ ಸಾವಿನ ಸಂಖ್ಯೆ

ಚೀನಾದ ಶಾಂಘೈನಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿದ್ದು, ಇನ್ನೂ ಎಂಟು ಮಂದಿ ಸಾವನ್ನಪ್ಪಿದ್ದಾರೆ. ಚೀನಾದಲ್ಲಿ ಸದ್ಯಕ್ಕೆ ಒಟ್ಟು 19, 300 ಕೋವಿಡ್ ರೂಪಾಂತರದ ಪ್ರಕರಣಗಳು ಇವೆ.

ಈ ಬಗ್ಗೆ ಮಾಹಿತಿ ನೀಡಿರುವ ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗ, 2019ರಿಂದ ಇಲ್ಲಿಯವರೆಗೆ ಒಟ್ಟು 4,663 ಜನ ಕೊರೊನಾ ಸೋಂಕಿನಿಂದ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಚೀನಾದಲ್ಲಿ ಬುಧವಾರ ಒಟ್ಟು 19,382 ಕೊರೊನಾ ಪ್ರಕರಣಗಳು ದಾಖಲಾಗಿವೆ. ಇದರಲ್ಲಿ ದೃಢಪಟ್ಟ ಪ್ರಕರಣಗಳು 2,830. ಉಳಿದ ಲಕ್ಷಣ ರಹಿತ ಕೊರೊನಾ ಪ್ರಕರಣಗಳು ಶಾಂಘೈ ಪ್ರದೇಶದಲ್ಲಿ ಹೆಚ್ಚಾಗಿವೆ ಎಂದು ಆಯೋಗ ಹೇಳಿದೆ.

ಶ್ರೀಲಂಕಾದಲ್ಲಿ ಮಾಸ್ಕ್ ಮತ್ತೆ ಕಡ್ಡಾಯ

ಕೊಲಂಬೊ(ಪಿಟಿಐ): ದೇಶದಲ್ಲಿ ಕೋವಿಡ್ ಪ್ರಕರಣಗಳು ಇಳಿಕೆಯಾಗಿದ್ದರೂ ಪ್ರತಿಭಟನೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರುತ್ತಿರುವುದರಿಂದ ಶ್ರೀಲಂಕಾದಲ್ಲಿ ಮತ್ತೆ ಮಾಸ್ಕ್ ಧರಿಸುವಿಕೆಯನ್ನು ಗುರುವಾರ ರಾತ್ರಿಯಿಂದಲೇ ಕಡ್ಡಾಯಗೊಳಿಸಲಾಗಿದೆ. ಹೊರಾಂಗಣ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಕಡ್ಡಾಯ ಎಂದು ಆರೋಗ್ಯ ಸೇವೆಗಳ ಪ್ರಧಾನ ನಿರ್ದೇಶಕ ಡಾ.ಅಸೆಲ್ ಗುಣವರ್ಧನ ತಿಳಿಸಿದ್ದಾರೆ.

ಭಾರತದಿಂದ ಶ್ರೀಲಂಕಾಕ್ಕೆ 40,000 ಟನ್ ಡೀಸೆಲ್

ಕೊಲಂಬೊ(ಪಿಟಿಐ): ವಿದೇಶಿ ವಿನಿಮಯದ ಕೊರತೆಯಿಂದಾಗಿ ಆರ್ಥಿಕ ಸಂಕಷ್ಟಕ್ಕೆ ತುತ್ತಾಗಿರುವ ಶ್ರೀಲಂಕಾಕ್ಕೆ ಭಾರತವು ಗುರುವಾರ 40,000 ಟನ್‌ನಷ್ಟು ಡೀಸೆಲ್ ಅನ್ನು ರವಾನಿಸಿದೆ.

ಚೀನಾ-ಪಾಕ್ ಕಾರಿಡಾರ್ ರದ್ದು?

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ನೂತನ ಪ್ರಧಾನಿ ಶಾಹಬಾಝ್ ಷರೀಫ್ ನೇತೃತ್ವದ ಸರ್ಕಾರವು ಚೀನಾ ಬೆಂಬಲಿತ ಚೀನಾ--ಪಾಕಿಸ್ತಾನ ಆರ್ಥಿಕ ಕಾರಿಡಾರ್ ರದ್ದುಗೊಳಿಸಲು ಮುಂದಾಗಿದೆ.

ಸಂಪನ್ಮೂಲಗಳು ವ್ಯರ್ಥವಾಗಿದೆ. ಅಲ್ಲದೆ, ಮಹತ್ವಾಕಾಂಕ್ಷೆಯ ಪ್ರಾಂತೀಯ ಸಂಪರ್ಕ ಕಾರ್ಯಕ್ರಮದ ತ್ವರಿತ ಜಾರಿಗೆ ಅಡ್ಡಿಯಾಗಿದೆ. ಹಾಗಾಗಿ ಈ ಯೋಜನೆಯನ್ನು ರದ್ದುಗೊಳಿಸಲಾಗುವುದು ಎಂದು ಸಚಿವ ಅಹಸಾನ್ ಇಕ್ಬಾಲ್ ಅವರು ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC,PUC, Degree ಯವರು ITI ನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ 10ನೇ,ಪಿಯುಸಿ, ಡಿಗ್ರಿ, ಡಿಪ್ಲೋಮಾದವರು 18,000-56,000/- (ತಕ್ಷಣ ಬೇಕಾಗಿದ್ದಾರೆ) ವಸತಿಯೂಟದೊಂದಿಗೆ 8197650569, 7204396011

CMG, URGENTLY Required Boys/ Girls, 10th, 2nd PUC (Pass/ Fail) Any Degree (Room/ Food Available) 7338404970/ 9916331164

ಬೆಂಗಳೂರು ನಗರದಲ್ಲಿರುವ BSNL,BANK EMPLOYEES & OTHERS WELFARE SOCIETY(R). ಸಂಸ್ಥೆಗೆ ಮಾರ್ಕೆಟಿಂಗ್ ವಿಭಾಗದಲ್ಲಿ ಕಛೇರಿಯಲ್ಲಿ ಕುಳಿತು ಕೆಲಸ ಮಾಡಲು SSLC,PUC,Degree ಪಾಸಾದ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಬಳ: 15ರಿಂದ 20ಸಾವಿರದವರೆಗೆ+Incentives. ಕೂಡಲೇ ಸಂಪರ್ಕಿಸಿ:8884072500

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Walk-in

ಬೆಂಗಳೂರಿನ ಕೋರಮಂಗಲದಲ್ಲಿರುವ ಶ್ರೀ ಲಕ್ಷ್ಮೀವೆಂಕಟೇಶ್ವರ ದೇವಸ್ಥಾನಕ್ಕೆ ವ್ಯವಸ್ಥಾಪಕರು ಮತ್ತು ವಿಷ್ಣುದೇವರ ಪೂಜಾ ಕೈಂಕರ್ಯ ತಿಳಿದಿರುವ ಪ್ರಧಾನ ಅರ್ಚಕರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9901801138

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17800-68000. 9538811223, 9538811104

Marketing & Sales

ಹೊಸಬರಿಗೆ ಸುವರ್ಣಾವಕಾಶ. ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದಿರುವ ಬೆಂಗಳೂರಿನ ನೂತನ ಕಂಪನಿಯೊಂದಕ್ಕೆ, ಯುವಕ ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ವಸತಿ ಉಚಿತ. ವಿದ್ಯಾರ್ಹತೆ SSLC ಮೇಲ್ಪಟ್ಟು ವಯಸ್ಸು- 18-36 ವರೆಗೆ. ಸಂಬಳ- 10,000ದಿಂದ 40,000ವರೆಗೆ. ಸಂಪರ್ಕಿಸಿ: 9535911982, 080 - 29903967

WANTEDFILEDOFFICER AND Marketing ManagerAny degree at least 2 or 3 years experienceinSecurity Service field Preferable Salary & working Location Bangalore only Contact Us e-mail ensafeguard@gmail.com/ zubi_aha@yahoo.com Ph no. 974230843/ 9448534370 ENSAFEGUARDSECURITY PVT LTD

POSITION: SENIOR Sales Executive Bike is Must Preference to insurance background candidates. Salary: 20,000+ Plus incentive Job Location: Bangalore Send CV to richard.emmanuel@letstransport.team / 7259837095

ವ್ಯಾಪಾರ

Business Offers

General

ಪ್ರತಿತಿಂಗಳು 65,000/ ರಿಂದ 90,000/ ಗಳಿಸಿರಿ. ಪೇಪರ್ ಬ್ಯಾಗ್ಸ್, LEDಬಲ್ಬ್ಸ್, ಟೀಕಪ್ಸ್ ಗಳ ಉತ್ಪಾದನಾ ಘಟಕವನ್ನು ಮನೆಯಲ್ಲಿಯೇ ಅಳವಡಿಸಿ. ನಾವು ಮರುಖರೀದಿಯ ಒಪ್ಪಂದದ ಜೊತೆಗೆ, ಉಚಿತವಾಗಿ ರಾಮೆಟಿರಿಯಲ್ ಗಳನ್ನು ನೀಡುತ್ತೇವೆ. ವಿವರಗಳಿಗಾಗಿ: 9958628785

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಧರ್ಮಸ್ಥಳ: 7022443071

ನಂ.1 ವಶೀಕರಣ ಸ್ಪೆಷಲಿಸ್ಟ್ ತಾಂತ್ರಿಕ್: ಸ್ತ್ರೀಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿಮೋಸ, ಗಂಡಹೆಂಡತಿ ಕಲಹ, ನಾಗಸಾಧುಗಳಿಂದ ವಶೀಕರಣ 3ದಿನಗಳಲ್ಲಿ ಪರಿಹಾರ 6360611244

★ದೈವಜ್ಞ ಶ್ರೀದೇವಾನಂದನ್★ ರವರಿಂದ ಸರ್ವತೋಮುಖ ಅಭಿವೃದ್ಧಿ ಸುಖಶಾಂತಿ ಮಹಾವಶೀಕರಣ ಆಕರ್ಷಣ ಮತ್ತು ಶತ್ರು ಕೃತವ್ಯಾಧಿಗಳ ಪರಿಹಾರಕ್ಕೆ ಇಂದೇ ಸಂಪರ್ಕಿಸಿ: 9845005009

ಪ್ರವಾಸ

Travel

ಹಿಮಾಚಲ ಸ್ಪೆಶಲ್ ಸಿಮ್ಲಾ,ಕುಲು,ಮನಾಲಿ ಚಂಡಿಘಡ್ ನೈನಾದೇವಿ ಚಾಮುಂಡಾ ವಜ್ರೇಶ್ವರಿ ವೈಷ್ಣವಿದೇವಿ ಅಮೃತ್-ಸರ್ ಕುರುಕ್ಷೇತ್ರ ಹಾಗು ಚಾರ್-ಧಾಮ್ ಯಾತ್ರೆ. ಬದರಿನಾಥ್ ಕೇದಾರನಾಥ್ ಗಂಗೋತ್ರಿ,ಯುಮುನೋತ್ರಿ, ಹರಿದ್ವಾರ್,ರಿಷಿಕೇಶ್ ಬುಕಿಂಗ್ಗಳಿಗಾಗಿ ಸಂಪರ್ಕಿಸಿ ಆರ್ಕಿಡ್ ಟ್ರಾವಲ್ ಅಂಡ್ ಟೂರ್ಸ್ 9900080793 9880079588

03.05.2022 6ದಿನಗಳು ದಕ್ಷಿಣಕನ್ನಡ ಪ್ರವಾಸ. 10.05.2022, 4 ದಿನಗಳು ಗೋವಾ ದೂದ್‌ಸಾಗರ್ ಪ್ರವಾಸ. 11.05.2022, 4 ದಿನಗಳು ಮಂತ್ರಾಲಯ,ಶ್ರೀಶೈಲ ಪ್ರವಾಸ 10.5.2022 7 ದಿನಗಳು ಕೇರಳ ಪ್ರವಾಸ. 11.05.2022, 5 ದಿನಗಳು ತಮಿಳುನಾಡು ಪ್ರವಾಸ.12.05.2022 3 ದಿನಗಳು ಚಿಕ್ಕಮಂಗಳೂರು ಪ್ರವಾಸ 04.05,2022 6 ದಿನಗಳು ಕಾಶಿಯಾತ್ರೆ. 05.07.2022 12.07.2022 19.07.2022 6 ದಿನಗಳು ಅಮರನಾಥಯಾತ್ರೆ ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ಬೆಂಗಳೂರು-40. 9880847001 9342848791

28.06.2022 14 ದಿನಗಳು ವಿಮಾನ/ A/C ಬಸ್ಸಿನಲ್ಲಿ ಅಮರನಾಥ್,ದೆಹಲಿ ವೈಷ್ಣೋದೇವಿ,ಕಾಶ್ಮೀರ್ ಕಾಂಗ್ಡಾದೇವಿ,ಅಮೃತ್‌ಸರ್ ಇತ್ಯಾದಿ. ಗಣೇಶ ಹಬ್ಬದ ಪ್ರಯುಕ್ತ: 02.09.2022 15 ದಿನಗಳ ಚಾರ್‌ಧಾಮ್ ಇತ್ಯಾದಿ. ಊಟ ವಸತಿಯೊಂದಿಗೆ ಸಂಪರ್ಕಿಸಿ: ಜೈರಾಮ್ ಟೂರ್ಸ್ ವಿ.ವಿ.ಪುರಂ ಬೆಂಗಳೂರು-4. 9342514289

03.06.2022 18.06.2022 20.06.2022 ಚಾರ್‌ಧಾಮ್ ಪ್ರವಾಸ. 06.07.2022 16.07.2022 ಅಮರನಾಥ್ ಪ್ರವಾಸಗಳು. 01.09.2022, 35 ದಿನಗಳ ಉತ್ತರ ಭಾರತ. 7 ದಿನಗಳ ಕಾಶಿ,ಗಯಾ,ಅಯೋಧ್ಯ, ಇತ್ಯಾದಿ. ಸಂಪರ್ಕಿಸಿ: ವಿಷ್ಣು ಟ್ರಾವಲ್ ಏಜೆನ್ಸಿ 080-26574131, 26573421, 9964108171

15 ದಿನಗಳ ಕಾಶಿ,ದೆಹಲಿ ಪ್ರವಾಸ. 17ದಿನಗಳ ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ಚಾರ್‌ಧಾಮ್ ಮತ್ತು ಜೂನ್ ಜುಲೈನಲ್ಲಿ ಅಮರನಾಥ್ ಪ್ರವಾಸ. ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರ ಸೇವಸಂಘ, ಗಿರಿನಗರ ಬೆಂಗಳೂರು 9916473906 8861111568

ಪಶುಪತಿ, ಸ್ವಯಂಭೂ, ಮನಕಾಮನ, ಚಂದ್ರಗಿರಿ, ಗುಪ್ತೇಶ್ವರ, ಮುಕ್ತಿನಾಥ್, ಚಿತ್ವಾನ್ ಇತ್ಯಾದಿ ನೇಪಾಳದ ಯಾವುದೇ ಸ್ಥಳಗಳಿಗೂ ಪ್ರವಾಸ ಏರ್ಪಡಿಸುವ ಏಕೈಕ ಸಂಸ್ಥೆ ನಾಲಂದಾ ಟ್ರಾವೆಲ್ಸ್ ಕುಂದಾಪುರ. ಸಂಪರ್ಕಿಸಿ: 8310028157.

Pilgrimage Tours

29.4.2022 ಅಮವಾಸ್ಯೆಗೆ ಸಿಗಂದೂರು, ಕಮಲಶಿಲೆ,ಉಡುಪಿ. 29.4.2022 ಚಿಕ್ಕಮಗಳೂರು,ಕೆಮ್ಮಣ್ಣಗುಂಡಿ. 7.6.2022 ಚಾರ್ ದಾಮ್. 13.5.2022 ನಾಗರಹೊಳೆ, ಮಡಿಕೇರಿ. ಅನುಗ್ರಹಯಾತ್ರ : 9880079351

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115
CD Per Sqcm	Single Col	Double Col	Multi Col	
	430	450	475	

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

condition apply*

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

ಮುಖೇಶ್ ಚೌಧರಿಗೆ 3 ವಿಕೆಟ್; ರಾಬಿನ್ ಉತ್ತಪ್ಪ, ಅಂಬಟಿ ರಾಯುಡು ಉತ್ತಮ ಬ್ಯಾಟಿಂಗ್

ಮುಂಬೈಗೆ ಸೋಲುಣಿಸಿದ 'ಫಿನಿಶರ್' ಧೋನಿ

ಮುಂಬೈ (ಪಿಟಿಐ): 'ಫಿನಿಶಿಂಗ್' ಸಾಮರ್ಥ್ಯ ತಮ್ಮಲ್ಲಿ ಇನ್ನೂ ಉಳಿದಿದೆ ಎಂಬುದನ್ನು ಮಹೇಂದ್ರ ಸಿಂಗ್ ಧೋನಿ ಗುರುವಾರ ರಾತ್ರಿ ಸಾಬೀತುಮಾಡಿದರು.

ಡಿ.ವೈ. ಪಾಟೀಲ್ ಕ್ರೀಡಾಂಗಣದಲ್ಲಿ ನಡೆದ ಮುಂಬೈ ಇಂಡಿಯನ್ಸ್ ಎದುರಿನ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಪಂದ್ಯದ ಕೊನೆಯ ಓವರ್‌ನಲ್ಲಿ ಅಬ್ಬರಿಸಿದ ಅವರು ಚೆನ್ನೈ ಸೂಪರ್ ಕಿಂಗ್ಸ್‌ಗೆ ಜಯ ತಂದುಕೊಟ್ಟರು.

ಮುಂಬೈ ಇಂಡಿಯನ್ಸ್ ಸತತ ಏಳನೇ ಸೋಲಿನೊಂದಿಗೆ ನಿರಾಸೆಗೆ ಒಳಗಾಯಿತು. ಚೆನ್ನೈ ಸೂಪರ್ ಕಿಂಗ್ಸ್‌ಗೆ ಇದು ಎರಡನೇ ಜಯ.

156 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಚೆನ್ನೈ 7ಕ್ಕೆ 156 ರನ್ ಗಳಿಸಿತು. ಇನಿಂಗ್ಸ್‌ನ ಕೊನೆಯ ಎಸೆತದಲ್ಲಿ ಧೋನಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಆರಂಭದಿಂದಲೇ ವಿಕೆಟ್ ಕಳೆದುಕೊಂಡ ಕಾರಣ ತಂಡ ಸಂಕಷ್ಟಕ್ಕೆ ಒಳಗಾಗಿತ್ತು. ರಾಬಿನ್ ಉತ್ತಪ್ಪ ಮತ್ತು ಅಂಬಟಿ ರಾಯುಡು ಅವರ ಸಮಯೋಚಿತ ಬ್ಯಾಟಿಂಗ್ ನೆರವಿನಿಂದ ತಂಡ ಚೇತರಿಸಿಕೊಂಡಿತು. ಕೊನೆಯ ಓವರ್‌ನಲ್ಲಿ ಗೆಲುವಿಗೆ 17 ರನ್ ಬೇಕಾಗಿತ್ತು. ಜಯದೇವ ಉನದ್ಕತ್ ಹಾಕಿದ ಓವರ್‌ನ ಮೊದಲ ಎಸೆತದಲ್ಲಿ ತಂಡ ವಿಕೆಟ್ ಕಳೆದುಕೊಂಡಿತು. ಎರಡನೇ ಎಸೆತದಲ್ಲಿ ಡ್ವೇನ್ ಬ್ರಾವೊ ಒಂದು ರನ್ ಗಳಿಸಿದರು. ನಂತರ ಸ್ಟ್ರೈಕ್ ತಮ್ಮಲ್ಲೇ ಉಳಿಸಿಕೊಂಡ ಧೋನಿ ಚಾಣಾಕ್ಷತನ ಮೆರೆದರು. ಮೂರು ಮತ್ತು ನಾಲ್ಕನೇ ಎಸೆತಗಳಲ್ಲಿ ಕ್ರಮವಾಗಿ ಸಿಕ್ಸರ್, ಬೌಂಡರಿ ಸಿಡಿಸಿದರು. ಐದನೇ ಎಸೆತದಲ್ಲಿ ಎರಡು ರನ್ ಗಳಿಸಿದರು. ಹೀಗಾಗಿ ಕೊನೆಯ ಎಸೆತದಲ್ಲಿ ಗೆಲುವಿಗೆ 4 ರನ್ ಬೇಕಾಗಿತ್ತು. ಲೆಗ್‌ಸ್ಟಂಪ್ ಗುರಿಯಾಗಿರಿಸಿ ಹಾಕಿದ ಯಾರ್ಕರ್ ಎಸೆತವನ್ನು ಧೋನಿ ಬೌಂಡರಿ ಗೆರೆ ದಾಟಿಸಿದರು.

ತಿಲಕ್ ವರ್ಮಾ ಮಿಂಚು: ಟಾಸ್ ಗೆದ್ದ ಚೆನ್ನೈ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮಧ್ಯಮವೇಗಿ ಮುಕೇಶ್ ಚೌಧರಿ ದಾಳಿಗೆ ಕುಸಿಯುತ್ತಿದ್ದ ಮುಂಬೈ ಇಂಡಿಯನ್ಸ್ ತಂಡಕ್ಕೆ ತಿಲಕ್ ವರ್ಮಾ ಜೀವ ತುಂಬಿದರು. ಅಜೇಯ ಅರ್ಧಶತಕ ಗಳಿಸಿದರು. ಹೀಗಾಗಿ ತಂಡಕ್ಕೆ 20 ಓವರ್‌ಗಳಲ್ಲಿ 7ಕ್ಕೆ 155 ರನ್ ಗಳಿಸಲು ಸಾಧ್ಯವಾಯಿತು.

ಕೇವಲ 23 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿದ್ದ ಮುಂಬೈ ತಂಡವನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕುವ ಅವಕಾಶವನ್ನು ಚೆನ್ನೈ ಕೈಚೆಲ್ಲಿತು. ಕೆಟ್ಟ ಫೀಲ್ಡಿಂಗ್ ಮತ್ತು ಕ್ಯಾಚ್‌ಗಳನ್ನು ನೆಲಕ್ಕೆ ಚೆಲ್ಲಿದ್ದು ದುಬಾರಿಯಾಯಿತು. ರವೀಂದ್ರ ಜಡೇಜ ಅವರೇ ಎರಡು ಕ್ಯಾಚ್ ಬಿಟ್ಟರು. ಶಿವಂ ದುಬೆ ಮತ್ತು ಡ್ವೇನ್ ಪ್ರಿಟೋರಿಯಸ್ ಕೂಡ ಕ್ಯಾಚ್ ಕೈಚೆಲ್ಲಿದರು.

ಮುಕೇಶ್ ಮಿಂಚು: ಮಧ್ಯಮವೇಗಿ ಮುಕೇಶ್ ಮೊದಲ ಓವರ್‌ನಲ್ಲಿ ಮುಂಬೈ ಆರಂಭಿಕ ಜೋಡಿ ರೋಹಿತ್ ಶರ್ಮಾ ಮತ್ತು ಇಶಾನ್ ಕಿಶನ್ ಅವರ ವಿಕೆಟ್ ಕಬಳಿಸಿದರು. ಇಬ್ಬರೂ ಖಾತೆ ತೆರೆಯಲಿಲ್ಲ. ಮುಕೇಶ್ ತಮ್ಮ ಎರಡನೇ ಓವರ್‌ನಲ್ಲಿ ಡಿವಾಲ್ಡ್ ಬ್ರೆವಿಸ್ ವಿಕೆಟ್ ಬುಟ್ಟಿಗೆ ಹಾಕಿಕೊಂಡರು.

ಈ ಹಂತದಲ್ಲಿ ಜೊತೆಗೂಡಿದ ಸೂರ್ಯಕುಮಾರ್ ಯಾದವ್ ಮತ್ತು ತಿಲಕ್ ವರ್ಮಾ ಬಿರುಸಿನ ಆಟ ಆರಂಭಿಸಿದರು. ಎಂಟನೇ ಓವರ್‌ನಲ್ಲಿ ಸ್ಪಿನ್ನರ್ ಮಹೀಶ್ ತೀಕ್ಷಣ ಬೌಲಿಂಗ್‌ನಲ್ಲಿ ಸೂರ್ಯಕುಮಾರ್ (32; 21ಎ) ಕ್ಯಾಚ್ ಪಡೆಯುವಲ್ಲಿ ಸಫಲರಾದ ಮುಕೇಶ್ ಸಂಭ್ರಮಿಸಿದರು. ವರ್ಮಾ ಜೊತೆಗೂಡಿದ ಹೃತಿಕ್ ಶೋಕೀನ್ (25; 25ಎ) ಐದನೇ ವಿಕೆಟ್ ಜೊತೆಯಾಟದಲ್ಲಿ 38 ರನ್ ಸೇರಿಸಿದರು. ಹೃತಿಕ್ ಎರಡು ಜೀವದಾನ ಪಡೆದರು.

ಮಹೇಂದ್ರ ಸಿಂಗ್ ಧೋನಿ ಬ್ಯಾಟಿಂಗ್ ಸೊಬಗು –ಪಿಟಿಐ ಚಿತ್ರ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	6	5	1	0	0	10	0.395
ಬೆಂಗಳೂರು	7	5	2	0	0	10	0.251
ರಾಜಸ್ಥಾನ	6	4	2	0	0	8	0.380
ಲಖನೌ	7	4	3	0	0	8	0.124
ಹೈದರಾಬಾದ್	6	4	2	0	0	8	-0.077
ಡೆಲ್ಲಿ	6	3	3	0	0	6	0.942
ಕೋಲ್ಕತ್ತ	7	3	4	0	0	6	0.160
ಪಂಜಾಬ್	7	3	4	0	0	6	-0.562
ಚೆನ್ನೈ	7	2	5	0	0	4	-0.534
ಮುಂಬೈ	7	0	7	0	0	0	-1.892

*ಗುರುವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ರೋಹಿತ್‌ಗೆ 14ನೇ ಡಕ್

ಐಪಿಎಲ್ ಕ್ರಿಕೆಟ್‌ನಲ್ಲಿ ರೋಹಿತ್ ಶರ್ಮಾ 14ನೇ ಬಾರಿ ಸೊನ್ನೆ ಸುತ್ತಿದರು. ಟೂರ್ನಿಯಲ್ಲಿ ಅತಿ ಹೆಚ್ಚು ಬಾರಿ 'ಡಕ್ ಔಟ್' ಆದ ಆಟಗಾರನಾದರು. ಈ ಹಿಂದೆ ಅಜಿಂಕ್ಯ ರಹಾನೆ, ಪಾರ್ಥಿವ್ ಪಟೇಲ್, ಅಂಬಟಿ ರಾಯುಡು, ಮನದೀಪ್ ಸಿಂಗ್, ಹರಭಜನ್ ಸಿಂಗ್ ಮತ್ತು ಪಿಯೂಷ್ ಚಾವ್ಲಾ ತಲಾ 13 ಬಾರಿ ಡಕ್‌ಔಟ್ ಆಗಿದ್ದರು.

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್ 7ಕ್ಕೆ 155 (20 ಓವರ್)

ರೋಹಿತ್ ಸಿ ಸ್ಯಾಂಟ್ನರ್ ಬಿ ಮುಕೇಶ್ 0 (2 ಎ), ಇಶಾನ್ ಬಿ ಮುಕೇಶ್ 0 (1 ಎ), ಬ್ರೆವಿಸ್ ಸಿ ಧೋನಿ ಬಿ ಮುಕೇಶ್ 4 (7 ಎ), ಸೂರ್ಯಕುಮಾರ್ ಸಿ ಮುಕೇಶ್ ಬಿ ಸ್ಯಾಂಟ್ನರ್ 32 (21 ಎ, 4x3, 6x1), ತಿಲಕ್ ಔಟಾಗದೆ 51 (43 ಎ, 4x3, 6x2), ಹೃತಿಕ್ ಸಿ ರಾಬಿನ್ ಬಿ ಬ್ರಾವೊ 25 (25 ಎ, 4x3), ಪೊಲಾರ್ಡ್ ಸಿ ಶಿವಂ ಬಿ ತೀಕ್ಷಣ 14 (9 ಎ, 4x1, 6x1), ಸ್ಯಾಮ್ಸ್ ಎಲ್‌ಬಿಡಬ್ಲ್ಯು ಬಿ ಬ್ರಾವೊ 5 (3 ಎ, 4x1), ಜಯದೇವ ಔಟಾಗದೆ 19 (9 ಎ, 4x1, 6x1)

ಇತರೆ: (ಲೆಗ್‌ಬೈ 2, ವೈಡ್ 3) 5

ವಿಕೆಟ್ ಪತನ: 1-0 (ರೋಹಿತ್ ಶರ್ಮಾ, 0.2), 2-2 (ಇಶಾನ್ ಕಿಶನ್, 0.5), 3-23 (ಡಿವಾಲ್ಡ್ ಬ್ರೆವಿಸ್, 2.6), 4-47 (ಸೂರ್ಯಕುಮಾರ್ ಯಾದವ್, 7.3), 5-85 (ಹೃತಿಕ್ ಶೋಕೀನ್, 13.3), 6-111 (ಕೀರನ್ ಪೊಲಾರ್ಡ್, 16.2), 7-120 (ಡ್ಯಾನಿಯಲ್ ಸ್ಯಾಮ್ಸ್, 17.2)

ಬೌಲಿಂಗ್: ಮುಕೇಶ್ ಚೌಧರಿ 3-0-19-3, ಮಿಚೆಲ್ ಸ್ಯಾಂಟ್ನರ್ 3-0-16-1, ಮಹೀಶ್ ತೀಕ್ಷಣ 4-0-35-1, ರವೀಂದ್ರ ಜಡೇಜ 4-0-30-0, ಡ್ವೇನ್ ಪ್ರಿಟೋರಿಯಸ್ 2-0-17-0, ಡ್ವೇನ್ ಬ್ರಾವೊ 4-0-36-2

ಚೆನ್ನೈ ಸೂಪರ್ ಕಿಂಗ್ಸ್ 7ಕ್ಕೆ 156 (20 ಓವರ್)

ಋತುರಾಜ್ ಸಿ ತಿಲಕ್ ಬಿ ಸ್ಯಾಮ್ಸ್ 0 (1 ಎ), ರಾಬಿನ್ ಸಿ ಬ್ರೆವಿಸ್ ಬಿ ಉನದ್ಕತ್ 30 (25 ಎ, 4x2, 6x2), ಸ್ಯಾಂಟ್ನರ್ ಸಿ ಉನದ್ಕತ್ ಬಿ ಸ್ಯಾಮ್ಸ್ 11 (9 ಎ, 4x2), ಅಂಬಟಿ ಸಿ ಪೊಲಾರ್ಡ್ ಬಿ ಸ್ಯಾಮ್ಸ್ 40 (35 ಎ, 4x2, 6x3), ಶಿವಂ ಸಿ ಇಶಾನ್ ಬಿ ಸ್ಯಾಮ್ಸ್ 13 (14 ಎ, 6x1), ರವೀಂದ್ರ ಸಿ ತಿಲಕ್ ಬಿ ಮೆರೆಡಿತ್ 3 (8 ಎ), ಮಹೇಂದ್ರ ಸಿಂಗ್ ಔಟಾಗದೆ 28 (13 ಎ, 4x3, 6x1), ಪ್ರಿಟೋರಿಯಸ್ ಎಲ್‌ಬಿಡಬ್ಲ್ಯು ಬಿ ಉನದ್ಕತ್ 22 (14 ಎ, 4x2, 6x1), ಬ್ರಾವೊ ಔಟಾಗದೆ 1 (1 ಎ)

ಇತರೆ: (ಲೆಗ್‌ಬೈ 1, ವೈಡ್ 7) 8

ವಿಕೆಟ್ ಪತನ: 1-0 (ಋತುರಾಜ್ ಗಾಯಕವಾಡ್, 0.1), 2-16 (ಮಿಚೆಲ್ ಸ್ಯಾಂಟ್ನರ್ 2.3), 3-66 (ರಾಬಿನ್ ಉತ್ತಪ್ಪ, 8.6), 4-88 (ಶಿವಂ ದುಬೆ, 12.5), 5-102 (ಅಂಬಟಿ ರಾಯುಡು, 14.5), 6-106 (ರವೀಂದ್ರ ಜಡೇಜ, 15.4), 7-139 (ಡ್ವೇನ್ ಪ್ರಿಟೋರಿಯಸ್, 19.1)

ಬೌಲಿಂಗ್: ಡ್ಯಾನಿಯಲ್ ಸ್ಯಾಮ್ಸ್ 4-0-30-4, ಜಸ್‌ಪ್ರೀತ್ ಬೂಮ್ರಾ 4-0-29-0, ರಿಲಿ ಮೆರೆಡಿತ್ 4-0-25-1, ಜಯದೇವ ಉನದ್ಕತ್ 4-0-48-2, ಹೃತಿಕ್ ಶೋಕೀನ್ 4-0-23-0

ಫಲಿತಾಂಶ: ಚೆನ್ನೈಸೂಪರ್ ಕಿಂಗ್ಸ್‌ಗೆ 3 ವಿಕೆಟ್‌ಗಳ ಜಯ

ಚಾಹಲ್–ಕುಲದೀಪ್ ಮುಖಾಮುಖಿ

ಡೆಲ್ಲಿ ಕ್ಯಾಪಿಟಲ್ಸ್–ರಾಜಸ್ಥಾನ ರಾಯಲ್ಸ್ ಹಣಾಹಣಿ ಇಂದು

ಮುಂಬೈ (ಪಿಟಿಐ): ರಾಜಸ್ಥಾನ ರಾಯಲ್ಸ್ ತಂಡದ ಯಜುವೇಂದ್ರ ಚಾಹಲ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡದ ಚೈನಾಮನ್ ಬೌಲರ್ ಕುಲದೀಪ್ ಯಾದವ್ ಶುಕ್ರವಾರ ವಾಂಖೆಡೆ ಕ್ರೀಡಾಂಗಣದಲ್ಲಿ ಮುಖಾಮುಖಿಯಾಗಲಿದ್ದಾರೆ.

ಐಪಿಎಲ್‌ನಲ್ಲಿ ಗಮನ ಸೆಳೆಯುತ್ತಿರುವ ಸ್ಪಿನ್ನರ್‌ಗಳಿವರು. ಆದ್ದರಿಂದ ಕ್ರಿಕೆಟ್‌ಪ್ರಿಯರ ಕುತೂಹಲ ಕೆರಳಿದೆ.

ಕಳೆದ ಪಂದ್ಯದಲ್ಲಿ ರಾಯಲ್ಸ್‌ನ ಚಾಹಲ್ ಕೋಲ್ಕತ್ತ ನೈಟ್ ರೈಡರ್ಸ್ ಎದುರು ಹ್ಯಾಟ್ರಿಕ್ ಸಾಧನೆ ಮಾಡಿದ್ದರು. ಆ ಪಂದ್ಯದಲ್ಲಿ ಒಟ್ಟು ಐದು ವಿಕೆಟ್ ಗಳಿಸಿ ತಂಡಕ್ಕೆ ಜಯದ ಕಾಣಿಕೆ ನೀಡಿದ್ದರು. ಬುಧವಾರದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವು ಅಲ್ಪಮೊತ್ತ ಗಳಿಸಲು ಕುಲದೀಪ್ ಯಾದವ್ ಬೌಲಿಂಗ್ ನೆರವಾಗಿತ್ತು. ಅವರೊಂದಿಗೆ ಅಕ್ಷರ್ ಪಟೇಲ್, ಲಲಿತ್ ಯಾದವ್ ಕೂಡ ಮಿಂಚಿದ್ದರು. ಡೆಲ್ಲಿ ಜಯ ಗಳಿಸಿತ್ತು. ತಂಡವು ಮೂರು ಪಂದ್ಯ ಗೆದ್ದು, ಮೂರರಲ್ಲಿ ಸೋತಿದೆ. ರಾಯಲ್ಸ್ ಆರಂಭಿಕ ಆಟಗಾರ ಜೋಸ್ ಬಟ್ಲರ್ ಈ ಟೂರ್ನಿಯಲ್ಲಿ ಎರಡು ಶತಕ ಗಳಿಸಿದ್ದಾರೆ.



ಯಜುವೇಂದ್ರ ಚಾಹಲ್

ಡೇವಿಡ್ ವಾರ್ನರ್, ಪೃಥ್ವಿ ಶಾ, ರಿಷಭ್ ಪಂತ್ ಮತ್ತು ಸರ್ಫರಾಜ್ ಖಾನ್ ಅವರ ಮೇಲೆ ಡೆಲ್ಲಿಯ ಬ್ಯಾಟಿಂಗ್ ವಿಭಾಗದ ಹೊಣೆ ಇದೆ. ಮಿಚೆಲ್ ಮಾರ್ಷ್, ಟಿಮ್ ಸೀಫರ್ಟ್ ಸೇರಿದಂತೆ ತಂಡದ ಆರು ಮಂದಿಗೆ ಕೋವಿಡ್ ಆಗಿದ್ದು, ಅವರೆಲ್ಲರೂ ಪ್ರತ್ಯೇಕವಾಸದಲ್ಲಿದ್ದಾರೆ.

ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್ ಸ್ಟಾರ್

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್‌ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	17
ಕುಲದೀಪ್	ಡೆಲ್ಲಿ	13
ನಟರಾಜನ್	ಹೈದರಾಬಾದ್	12

ಆರೆಂಜ್ ಕ್ಯಾಪ್ (ಹೆಚ್ಚು ರನ್‌ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್‌ಬಟ್ಲರ್	ರಾಜಸ್ಥಾನ	375
ರಾಹುಲ್	ಲಖನೌ	265
ಡುಪ್ಲೆಸಿ	ಬೆಂಗಳೂರು	250

ಪಂದ್ಯಶ್ರೇಷ್ಠ ಪ್ರಶಸ್ತಿ ಅಕ್ಷರ್‌ಗೆ ನೀಡಿದ ಯಾದವ್!

ಬುಧವಾರದ ಪಂದ್ಯದಲ್ಲಿ ಗೆದ್ದ ಡೆಲ್ಲಿ ತಂಡದ ಸ್ಪಿನ್ನರ್ ಕುಲದೀಪ್ ಯಾದವ್ ತಮಗೆ ನೀಡಿದ ಪಂದ್ಯಶ್ರೇಷ್ಠ ಗೌರವವನ್ನು ಅಕ್ಷರ್ ಪಟೇಲ್ ಅವರಿಗೂ ಹಂಚಿಕೊಂಡು ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಪಂಜಾಬ್ ತಂಡವನ್ನು 115 ರನ್‌ಗಳಿಗೆ ಕಟ್ಟಿಹಾಕುವಲ್ಲಿ ಕುಲದೀಪ್ (24ಕ್ಕೆ2) ಪಾತ್ರ ವಹಿಸಿದ್ದರು. ಅಕ್ಷರ್ ಪಟೇಲ್ (10ಕ್ಕೆ2), ಲಲಿತ್ ಯಾದವ್ (11ಕ್ಕೆ2) ಮತ್ತು ಮಧ್ಯಮವೇಗಿ ಖಲೀಲ್ (21ಕ್ಕೆ2) ಕೂಡ ಮಿಂಚಿದ್ದರು. ಕುಲದೀಪ್ 14ನೇ ಓವರ್‌ನಲ್ಲಿ ಕಗಿಸೊ ರಬಾಡ ಮತ್ತು ನೇಥನ್ ಎಲ್ಲಿಸ್ ವಿಕೆಟ್‌ಗಳನ್ನು ಕಿತ್ತಿದ್ದರು.

ಪ್ರಶಸ್ತಿ ಸ್ವೀಕರಿಸಿದ ನಂತರ ಟಿವಿ ವಾಹಿನಿಯೊಂದಿಗೆ ಮಾತನಾಡಿದ ಕುಲದೀಪ್, 'ಈ ಗೌರವಕ್ಕೆ ಅಕ್ಷರ್ ಪಟೇಲ್ ಅರ್ಹರು. ಅವರಿಗೆ ಸಮರ್ಪಿಸುತ್ತೇನೆ' ಎಂದರು. ಪಂದ್ಯದಲ್ಲಿ ಡೆಲ್ಲಿ 9 ವಿಕೆಟ್‌ಗಳಿಂದ ಗೆದ್ದಿತ್ತು.

ಚೆಲ್ಸಿ ಖರೀದಿಗೆ ಸೆರೆನಾ ಬಿಡ್

ಲಂಡನ್ (ಎಪಿ/ರಾಯಿಟರ್ಸ್): ಟೆನಿಸ್ ತಾರೆ ಸೆರೆನಾ ವಿಲಿಯಮ್ಸ್ ಮತ್ತು ಫಾರ್ಮುಲಾ ಒನ್ ರೇಸ್ ತಾರೆ ಲೂಯಿಸ್ ಹ್ಯಾಮಿಲ್ಟನ್ ಅವರು ಪ್ರೀಮಿಯರ್ ಫುಟ್‌ಬಾಲ್ ಲೀಗ್‌ನಲ್ಲಿ ಆಡುವ ಚೆಲ್ಸಿ ತಂಡವನ್ನು ಖರೀದಿಸಲು ಮಾರ್ಟಿನ್ ಬ್ರಾಟನ್ ಒಕ್ಕೂಟದ ಬಿಡ್‌ಗೆ ಕೈಜೋಡಿಸಿದ್ದಾರೆ.

ಲಿವರ್‌ಪೂಲ್‌ನ ಮಾಜಿ ಮುಖ್ಯಸ್ಥ ಬ್ರಾಟನ್ ಬಳಗದಲ್ಲಿ ವಿಶ್ವ ಅಥ್ಲೆಟಿಕ್ ಅಧ್ಯಕ್ಷ ಸೆಬಾಸ್ಟಿಯನ್ ಕೊ ಮತ್ತು ಶ್ರೀಮಂತ ಹೂಡಿಕೆದಾರರು ಇದ್ದಾರೆ. ನ್ಯಾಷನಲ್ ಬ್ಯಾಸ್ಕೆಟ್‌ಬಾಲ್ ಅಸೋಸಿಯೇಷನ್ ಫಿಲ್‌ಡೆಲ್ಫಿಯಾ 76ಇಆರ್‌ಎಸ್ ಮಾಲೀಕರಾದ ಜೋಶ್ ಹ್ಯಾರಿಸ್ ಮತ್ತು ಡೇವಿಡ್ ಬ್ಲಿಟ್ಜರ್ ಕೂಡ ಈ ಬಿಡ್‌ಗೆ ಬೆಂಬಲಿಸಿದ್ದಾರೆ.

ಹ್ಯಾರಿಗೆ ಬೆದರಿಕೆ

ಲಂಡನ್ (ಎಎಫ್‌ಪಿ): ಮ್ಯಾಂಚೆಸ್ಟರ್ ಯುನೈಟೆಡ್ ತಂಡದ ನಾಯಕ ಹ್ಯಾರಿ ಮೆಗ್ವೈರ್ ಅವರಿಗೆ ಬಾಂಬ್ ದಾಳಿಯ ಬೆದರಿಕೆ ಹಾಕಲಾಗಿದೆ. ಹ್ಯಾರಿ ಇಂಗ್ಲೆಂಡ್ ನಿವಾಸದಲ್ಲಿ ತಮ್ಮ ಸಂಗಾತಿ ಮತ್ತು ಇಬ್ಬರು ಮಕ್ಕಳೊಂದಿಗೆ ಇದ್ದಾರೆ. ಬೆದರಿಕೆ ಒಡ್ಡಿರುವವರ ಬಗ್ಗೆ ಯಾವುದೇ ಮಾಹಿತಿ ಲಭಿಸಿಲ್ಲ. ತನಿಖೆ ಮುಂದುವರಿಸಲಾಗಿದೆ.

ಏಷ್ಯನ್ ಗೇಮ್ಸ್‌ಗೆ 14ರ ಬಾಲೆ ಉನ್ನತಿ

ಬೆಂಗಳೂರು: ರೋಹ್ತಕ್‌ನ 14 ವರ್ಷದ ಉನ್ನತಿ ಹೂಡಾ ಅವರು ಭಾರತ ಬ್ಯಾಡ್ಮಿಂಟನ್ ತಂಡದಲ್ಲಿ ಸ್ಥಾನ ಗಳಿಸಿದ್ದು ಏಷ್ಯನ್ ಗೇಮ್ಸ್ ಮತ್ತು ಥಾಮಸ್ ಮತ್ತು ಊಬರ್ ಕಪ್ ಟೂರ್ನಿಗಳಲ್ಲಿ ಪಾಲ್ಗೊಳ್ಳಲು ಅರ್ಹತೆ ಗಳಿಸಿದ್ದಾರೆ.

ದೆಹಲಿಯ ಇಂದಿರಾಗಾಂಧಿ ಕ್ರೀಡಾಂಗಣದಲ್ಲಿ ನಡೆದ ಆಯ್ಕೆ ಟ್ರಯಲ್ಸ್‌ನ ನಂತರ ಭಾರತ ಬ್ಯಾಡ್ಮಿಂಟನ್ ಸಂಸ್ಥೆಯು ಕಾಮನ್‌ವೆಲ್ತ್ ಗೇಮ್ಸ್, ಏಷ್ಯನ್ ಗೇಮ್ಸ್ ಮತ್ತು ಥಾಮಸ್–ಉಬರ್ ಕಪ್ ಟೂರ್ನಿಗಳಿಗೆ ತಂಡಗಳನ್ನು ಗುರುವಾರ ಪ್ರಕಟಿಸಿದೆ.

ಕಾಮನ್‌ವೆಲ್ತ್ ಗೇಮ್ಸ್‌ಗಾಗಿ ಆಯ್ಕೆಯಾದ ಪುರುಷರ ತಂಡದಲ್ಲಿ ಯುವ ಆಟಗಾರ ಲಕ್ಷ್ಯ ಸೇನ್, ಅನುಭವಿ ಕಿದಂಬಿ ಶ್ರೀಕಾಂತ್, ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ, ಚಿರಾಗ್ ಶೆಟ್ಟಿ ಮತ್ತು ಬಿ.ಸುಮೀತ್ ರೆಡ್ಡಿ ಇದ್ದಾರೆ. ಮಹಿಳೆಯರ ತಂಡದಲ್ಲಿ ಪಿ.ವಿ.ಸಿಂಧು ಜೊತೆಗೆ ಆಕರ್ಷಿ ಕಶ್ಯಪ್, ಟ್ರೀಸಾ ಜೋಲಿ, ಗಾಯತ್ರಿ ಪಿ ಮತ್ತು ಅಶ್ವಿನಿ ಪೊನ್ನಪ್ಪ ಸ್ಥಾನ ಗಳಿಸಿದ್ದಾರೆ.

ಉನ್ನತಿ ಹೂಡಾ –ಬಿಎಐ ಚಿತ್ರ

ತಂಡಗಳು: ಕಾಮನ್‌ವೆಲ್ತ್ ಗೇಮ್ಸ್: ಪುರುಷರು: ಲಕ್ಷ್ಯ ಸೇನ್, ಕಿದಂಬಿ ಶ್ರೀಕಾಂತ್, ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ, ಚಿರಾಗ್ ಶೆಟ್ಟಿ, ಬಿ.ಸುಮೀತ್ ರೆಡ್ಡಿ; **ಮಹಿಳೆಯರು:** ಪಿ.ವಿ.ಸಿಂಧು, ಆಕರ್ಷಿ ಕಶ್ಯಪ್, ಟ್ರೀಸಾ ಜೋಲಿ, ಗಾಯತ್ರಿ ಪಿ., ಅಶ್ವಿನಿ ಪೊನ್ನಪ್ಪ.

ಏಷ್ಯನ್ ಗೇಮ್ಸ್ ಮತ್ತು ಥಾಮಸ್–ಊಬರ್ ಕಪ್: ಪುರುಷರು: ಲಕ್ಷ್ಯ ಸೇನ್, ಕಿದಂಬಿ ಶ್ರೀಕಾಂತ್, ಎಚ್.ಎಸ್. ಪ್ರಣಯ್, ಪ್ರಿಯಾಂಶು ರಾಜಾವತ್, ಚಿರಾಗ್ ಶೆಟ್ಟಿ, ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ, ಧ್ರುವ ಕಪಿಲ, ಎಂ.ಆರ್. ಅರ್ಜುನ್, ವಿಷ್ಣುವರ್ಧನ್ ಗೌಡ್, ಕೃಷ್ಣ ಗಾರಿಗ; **ಮಹಿಳೆಯರು:** ಪಿ.ವಿ.ಸಿಂಧು, ಆಕರ್ಷಿ ಕಶ್ಯಪ್, ಅಶ್ಮಿತಾ ಚಾಲಿಹ, ಉನ್ನತಿ ಹೂಡಾ, ಟ್ರೀಸಾ ಜೋಲಿ, ಗಾಯತ್ರಿ ಪಿ, ಎನ್.ಸಿಕ್ಕಿ ರೆಡ್ಡಿ, ಅಶ್ವಿನಿ ಪೊನ್ನಪ್ಪ, ತನಿಶಾ ಕ್ರಾಸ್ಟೊ, ಶ್ರುತಿ ಮಿಶ್ರಾ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,136
ಇಂದಿನ ಅಂತ್ಯ	17,392
▲	256
ದಿನದ ಗರಿಷ್ಠ	17,414

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹405
12 ಮೊಟ್ಟೆಗೆ	₹56
ಮೈಸೂರು	
100 ಮೊಟ್ಟೆಗೆ	₹407

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹10000-15000

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹167
ಆರ್‌ಎಸ್‌ಎಸ್-5	₹161
ಗುಡ್ ಲಾಟ್	₹157

(ಪ್ರತಿ ಕೆ.ಜಿಗೆ)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1000-1300
ಮಧ್ಯಮ	₹800-1000
ಸಣ್ಣ	₹400-800

₹ 19 ಲಕ್ಷ ಕೋಟಿ ಸಮೀಪಕ್ಕೆ ರಿಲಯನ್ಸ್ ಮಾರುಕಟ್ಟೆ ಮೌಲ್ಯ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ಷೇರುಗಳು ಸತತ ಮೂರನೇ ದಿನವೂ ಗಳಿಕೆ ಕಂಡವು. ಗುರುವಾರ ಶೇಕಡ 2ಕ್ಕೂ ಹೆಚ್ಚು ಪ್ರಮಾಣದಲ್ಲಿ ಏರಿಕೆ ಕಂಡಿತು. ಇದರಿಂದಾಗಿ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ₹ 19 ಲಕ್ಷ ಕೋಟಿಯ ಸಮೀಪಕ್ಕೆ ತಲುಪಿದೆ.

ಬಿಎಸ್‌ಇನಲ್ಲಿ ಕಂಪನಿಯ ಷೇರು ಮೌಲ್ಯ ಶೇ 2.35ರಷ್ಟು ಹೆಚ್ಚಾಗಿ ಪ್ರತಿ ಷೇರಿನ ಬೆಲೆ ₹ 2,782ಕ್ಕೆ ತಲುಪಿತು. ಮೂರು ದಿನಗಳ ವಹಿವಾಟಿನಲ್ಲಿ ಕಂಪನಿಯ ಮಾರುಕಟ್ಟೆ ಮೌಲ್ಯ ₹ 1.60 ಲಕ್ಷ ಕೋಟಿಯಷ್ಟು ಹೆಚ್ಚಾಗಿದ್ದು ಒಟ್ಟಾರೆ ಮಾರುಕಟ್ಟೆ ಮೌಲ್ಯವು ₹ 18.82 ಲಕ್ಷ ಕೋಟಿಗೆ ಏರಿದೆ.

ಸಕಾರಾತ್ಮಕ ಓಟ: ರಿಲಯನ್ಸ್ ಇಂಡಸ್ಟ್ರೀಸ್, ಇನ್ಫೊಸಿಸ್ ಮತ್ತು ಎಚ್‌ಡಿಎಫ್‌ಸಿ ಷೇರುಗಳು ಹೂಡಿಕೆದಾರರನ್ನು ಆಕರ್ಷಿಸಿದ್ದರಿಂದ ದೇಶದ ಷೇರುಪೇಟೆಗಳಲ್ಲಿ ಸತತ ಎರಡನೇ ದಿನವೂ ಸಕಾರಾತ್ಮಕ ವಹಿವಾಟು ಮುಂದುವರಿಯಿತು.

ಪ್ರಮುಖ ಕಂಪನಿಗಳ ಜೊತೆಗೆ ಕೆಲವು ಮಧ್ಯಮ ಮತ್ತು ಸಣ್ಣ ಗಾತ್ರದ ಕಂಪನಿಗಳ, ಕಡಿಮೆ ಮೌಲ್ಯಕ್ಕೆ ಸಿಗುತ್ತಿದ್ದ ಷೇರುಗಳನ್ನು ಹೂಡಿಕೆದಾರರು ಖರೀದಿ ಮಾಡಿದ್ದರಿಂದ ಸೂಚ್ಯಂಕಗಳು ಏರಿಕೆ ಕಂಡವು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 874 ಅಂಶ ಏರಿಕೆ ಕಂಡು 57,912 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 256 ಅಂಶ ಹೆಚ್ಚಾಗಿ 17,392 ಅಂಶಗಳಿಗೆ ತಲುಪಿತು.

ಬ್ರೆಂಟ್ ಕಚ್ಚಾತೈಲ ದರ ಶೇ 1.40ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 108.3 ಡಾಲರ್‌ಗಳಿಗೆ ತಲುಪಿತು.

ಬಿಪಿಸಿಎಲ್ ಮಾರಾಟ: ಪುನರ್ ಪರಿಶೀಲನೆ ಸಾಧ್ಯತೆ

ನವದೆಹಲಿ (ಪಿಟಿಐ): ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನ (ಬಿಪಿಸಿಎಲ್) ಖಾಸಗೀಕರಣದ ಪ್ರಸ್ತಾವವನ್ನು ಕೇಂದ್ರ ಸರ್ಕಾರವು ಹೊಸದಾಗಿ ಅವಲೋಕಿಸುವ, ಮಾರಾಟದ ಷರತ್ತುಗಳನ್ನು ಪರಿಷ್ಕರಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

'ಬಿಪಿಸಿಎಲ್ ಖಾಸಗೀಕರಣದ ವಿಚಾರವಾಗಿ ನಾವು ಹೊಸದಾಗಿ ಚಿಂತನೆ ನಡೆಸಬೇಕಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬಿಪಿಸಿಎಲ್‌ನಲ್ಲಿ ತಾನು ಹೊಂದಿರುವ ಶೇಕಡ 52.98ರಷ್ಟು ಷೇರುಗಳನ್ನು ಕೇಂದ್ರ ಮಾರಾಟ ಮಾಡುತ್ತಿದೆ. ಬಿಪಿಸಿಎಲ್ ಖರೀದಿಗೆ ವೇದಾಂತ ಸಮೂಹ ಸೇರಿದಂತೆ ಕೆಲವು ಕಂಪನಿಗಳು ಆಸಕ್ತಿ ತೋರಿಸಿವೆ. ಹಣಕಾಸಿನ ಬಿಡ್ ಇನ್ನಷ್ಟೇ ಆಹ್ವಾನಿಸಬೇಕಿದೆ.

ಪರಿಸರ ಪೂರಕ ಹಾಗೂ ನವೀಕರಿಸಬಹುದಾದ ಇಂಧನಗಳ ಕಡೆ ಜಗತ್ತು ಮುಖ ಮಾಡುತ್ತಿರುವಾಗ ಬಿಪಿಸಿಎಲ್ ಖಾಸಗೀಕರಣವು ಈಗಿನ ನಿಯಮಗಳ ಅಡಿಯಲ್ಲಿ ಕಷ್ಟವಾಗುತ್ತದೆ. ಎಷ್ಟು ಷೇರುಪಾಲನ್ನು ಮಾರಾಟ ಮಾಡಬೇಕು ಎಂಬ ಬಗ್ಗೆಯೂ ಆಲೋಚನೆ ನಡೆಸಬೇಕು. ಖಾಸಗಿಯವರು ಒಕ್ಕೂಟ ರಚಿಸಿಕೊಂಡು ಬಿಪಿಸಿಎಲ್ ಖರೀದಿಸಲಿಕ್ಕೆ ಅವಕಾಶ ಆಗುವಂತೆ ನಿಯಮಗಳನ್ನು ಬದಲಾಯಿಸಬೇಕು ಎಂದು ಅಧಿಕಾರಿ ಹೇಳಿದ್ದಾರೆ. ಈ ವಿಚಾರವಾಗಿ ಕೇಂದ್ರ ಹಣಕಾಸು ಸಚಿವಾಲಯದಿಂದ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಈಗಿನ ಮಾರುಕಟ್ಟೆ ಮೌಲ್ಯದ ಪ್ರಕಾರ ಬಿಪಿಸಿಎಲ್‌ನಲ್ಲಿ ಕೇಂದ್ರ ಹೊಂದಿರುವ ಷೇರು ಪಾಲಿನ ಮೌಲ್ಯವು ₹ 45 ಸಾವಿರ ಕೋಟಿ ಆಗುತ್ತದೆ.

ಬಿಪಿಸಿಎಲ್ ಖರೀದಿಸಲು ಆಸಕ್ತಿ ತೋರಿಸಿ ವೇದಾಂತ ಸಮೂಹ, ಅಪೋಲೊ ಗ್ಲೋಬಲ್ ಮತ್ತು ಥಿಂಕ್ ಗ್ಯಾಸ್ ಮುಂದೆ ಬಂದಿವೆ. ಬಿಪಿಸಿಎಲ್‌ನ ಆಸ್ತಿಗಳನ್ನು ಖುದ್ದಾಗಿ ಪರಿಶೀಲಿಸಲು ಇವುಗಳಿಗೆ ಅವಕಾಶ ನೀಡಲಾಗಿತ್ತು.

ಕೇಂದ್ರ ಹಣಕಾಸು ಸಚಿವಾಲಯದ ಹೇಳಿಕೆ

ಖಾಸಗೀಕರಣ: ಸರ್ಕಾರಿ ಕಂಪನಿಗಳಿಗೆ ಇಲ್ಲ ಅವಕಾಶ

ಮುಖ್ಯಾಂಶಗಳು

- ನಿರ್ದಿಷ್ಟ ಅನುಮತಿ ಹೊಂದಿದ್ದರೆ ಮಾತ್ರ ಅವಕಾಶ
- 'ಕೇಂದ್ರೋದ್ಯಮಗಳಿಗೆ ವೈವಿಧ್ಯದ ಸಾಮರ್ಥ್ಯ ಇಲ್ಲ'

ನವದೆಹಲಿ (ಪಿಟಿಐ): ಖಾಸಗೀಕರಣ ಆಗಲಿರುವ ಕೇಂದ್ರ ಸರ್ಕಾರದ ಮಾಲೀಕತ್ವದ ಕಂಪನಿಗಳ ಖರೀದಿಗೆ ಸರ್ಕಾರದ ಇತರ ಕಂಪನಿಗಳು ಮುಂದಾಗುವಂತೆ ಇಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ.

ಇಂತಹ ಕಂಪನಿಗಳ ಆಡಳಿತವನ್ನು ಸರ್ಕಾರಿ ಸ್ವಾಮ್ಯದ ಇತರ ಕಂಪನಿಗಳಿಗೆ ವರ್ಗಾವಣೆ ಮಾಡುವುದರಿಂದ, ಸರ್ಕಾರಿ ಸ್ವಾಮ್ಯದ ಕಂಪನಿಗಳಲ್ಲಿ ಇರುವ 'ಅಸಾಮರ್ಥ್ಯವು' ಮುಂದುವರಿಯಬಹುದು, ಖಾಸಗೀಕರಣದ ಉದ್ದೇಶವೇ ಈಡೇರದೆ ಇರಬಹುದು ಎಂದು ಸಚಿವಾಲಯವು ಹೇಳಿದೆ.

'ಕೇಂದ್ರ ಅಥವಾ ರಾಜ್ಯ ಸರ್ಕಾರದ ಮಾಲೀಕತ್ವದ ಕಂಪನಿಗಳು, ಸರ್ಕಾರಗಳ ಜಂಟಿ ಸಹಭಾಗಿತ್ವದ ಕಂಪನಿಗಳು, ಸರ್ಕಾರದ ನಿಯಂತ್ರಣದಲ್ಲಿರುವ ಸಹಕಾರ ಸಂಘಗಳು ಖಾಸಗೀಕರಣ ಪ್ರಕ್ರಿಯೆಯಲ್ಲಿ ಬಿಡ್ದರ್ ಆಗಿ ಪಾಲ್ಗೊಳ್ಳುವಂತೆ ಇಲ್ಲ. ಇಂತಹ ಕಂಪನಿಗಳು ಕೇಂದ್ರ ಸರ್ಕಾರದಿಂದ ನಿರ್ದಿಷ್ಟ ಅನುಮತಿ ಪಡೆದಿದ್ದರೆ ಮಾತ್ರ ಭಾಗವಹಿಸಬಹುದು' ಎಂದು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣೆ ಇಲಾಖೆ (ಡಿಐಪಿಎಎಂ) ಹೇಳಿದೆ.

ಆದರೆ, ಹಿಂದೆಲ್ಲ ಸರ್ಕಾರವು ತನ್ನ ಮಾಲೀಕತ್ವದ ಕಂಪನಿಗಳನ್ನು ಅದೇ ವಲಯದ ಇತರ ಸರ್ಕಾರಿ ಕಂಪನಿಗಳಿಗೆ ಮಾರಾಟ ಮಾಡಿದ ನಿದರ್ಶನಗಳು ಇವೆ. 2001-02ರಲ್ಲಿ ಕೇಂದ್ರವು ಇಂಡೊ ಬರ್ಮಾ ಪೆಟ್ರೋಲಿಯಂ ಕಂಪನಿಯಲ್ಲಿನ (ಐಬಿಪಿ) ಶೇಕಡ 74ರಷ್ಟು ಷೇರುಗಳನ್ನು ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್ ಕಾರ್ಪೊರೇಷನ್‌ಗೆ (ಐಒಸಿ) ಮಾರಾಟ ಮಾಡಿತ್ತು.

ಸರ್ಕಾರಿ ಸ್ವಾಮ್ಯದ ಒಎನ್‌ಜಿಸಿ ಕಂಪನಿಯು 2018ರಲ್ಲಿ ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನಲ್ಲಿ ಸರ್ಕಾರ ಹೊಂದಿದ್ದ ಅಷ್ಟೂ ಷೇರುಗಳನ್ನು (ಶೇ 51.11ರಷ್ಟು) ₹ 36,915 ಕೋಟಿಗೆ ಖರೀದಿಸಿತ್ತು. ಸರ್ಕಾರಿ ಸ್ವಾಮ್ಯದ ಪವರ್ ಫೈನಾನ್ಸ್ ಕಾರ್ಪೊರೇಷನ್ (ಪಿಎಫ್‌ಸಿ) ಆರ್‌ಇಸಿ ಕಂಪನಿಯಲ್ಲಿ ಸರ್ಕಾರ ಹೊಂದಿದ್ದ ಶೇ 52.63ರಷ್ಟು ಷೇರುಗಳನ್ನು 2019ರಲ್ಲಿ ₹ 14,500 ಕೋಟಿಗೆ ಖರೀದಿಸಿತ್ತು.

2000-01ರಿಂದ 2019-20ರ ನಡುವಿನ ಅವಧಿಯಲ್ಲಿ ಕೇಂದ್ರ ಸರ್ಕಾರವು ಒಂಬತ್ತು ಕಂಪನಿಗಳಲ್ಲಿನ ತನ್ನ ಷೇರುಗಳನ್ನು ಸರ್ಕಾರಿ ಸ್ವಾಮ್ಯದ ಇತರ ಕಂಪನಿಗಳಿಗೆ ಮಾರಾಟ ಮಾಡಿ ಒಟ್ಟು ₹ 53,450 ಕೋಟಿ ಸಂಗ್ರಹಿಸಿದೆ.

ಸರ್ಕಾರಿ ಸ್ವಾಮ್ಯದ ಕಂಪನಿಗಳು ಸಾಮಾನ್ಯವಾಗಿ ಹೊಸ ಬಂಡವಾಳ, ಹೊಸತನ, ಆಧುನಿಕ ತಂತ್ರಜ್ಞಾನದ ವಿಚಾರವಾಗಿ ಮಿತಿಗಳನ್ನು ಹೊಂದಿವೆ. ಅವು ತಮ್ಮ ಸೇವೆ ಹಾಗೂ ಉತ್ಪನ್ನಗಳಲ್ಲಿ ವೈವಿಧ್ಯ ತರುವ ಸಾಮರ್ಥ್ಯ ಹೊಂದಿಲ್ಲ ಎಂದು ಡಿಐಪಿಎಎಂ ಹೇಳಿದೆ.

ಎಲ್‌ಐಸಿ ಐಪಿಒ: ಈ ವಾರವೇ ನಿರ್ಧಾರ ಸಾಧ್ಯತೆ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಐಪಿಒ ದಿನಾಂಕದ ಕುರಿತು ಸರ್ಕಾರವು ಈ ವಾರದಲ್ಲೇ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆ ಇದೆ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ರಿಟೇಲ್ ಮತ್ತು ದೇಶಿ ಹೂಡಿಕೆದಾರರ ಬೇಡಿಕೆಗೆ ಅನುಗುಣವಾಗಿ ಐಪಿಒಗೆ ಬರುವುದೋ ಅಥವಾ ಜಾಗತಿಕ ಬಿಕ್ಕಟ್ಟು ಬಗೆಹರಿಯುವವರೆಗೆ ಮತ್ತು ಮಾರುಕಟ್ಟೆಗೆ ಮತ್ತೆ ವಿದೇಶಿ ಸಾಂಸ್ಥಿಕ ಬಂಡವಾಳ (ಎಫ್‌ಐಐ) ಹೂಡಿಕೆ ಆಗುವವರೆಗೆ ಕಾಯುವುದೋ ಎನ್ನುವ ನಿರ್ಧಾರ ತೆಗೆದುಕೊಳ್ಳುವುದು ಕಷ್ಟವಾಗುತ್ತಿದೆ ಎಂದು ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ಐಪಿಒ ಮೂಲಕ ಮಾರ್ಚ್‌ನಲ್ಲಿ ಎಲ್‌ಐಸಿಯಲ್ಲಿನ ಶೇಕಡ 5ರಷ್ಟು ಷೇರುಗಳನ್ನು ಮಾರಾಟ ಮಾಡುವ ಮೂಲಕ ₹ 60 ಸಾವಿರ ಕೋಟಿ ಬಂಡವಾಳ ಸಂಗ್ರಹಿಸುವ ಯೋಜನೆ ರೂಪಿಸಿತ್ತು. ಆದರೆ, ರಷ್ಯಾ–ಉಕ್ರೇನ್ ಬಿಕ್ಕಟ್ಟಿನಿಂದಾಗಿ ಅದನ್ನು ಮುಂದೂಡುವಂತಾಗಿದೆ.

ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಈಗಾಗಲೇ ಕರಡು ದಾಖಲೆ ಪತ್ರ ಸಲ್ಲಿಸಿರುವುದರಿಂದ ಐಪಿಒಗೆ ಬರಲು ಮೇ 12ರವರೆಗೆ ಅವಕಾಶ ಇದೆ. ಆ ಬಳಿಕ ಮತ್ತೊಮ್ಮೆ ಹೊಸದಾಗಿ ದಾಖಲೆ ಪತ್ರಗಳನ್ನು ಸಲ್ಲಿಸಬೇಕಾಗುತ್ತದೆ.

ಈ ಸಂಬಂಧ ಕಳುಹಿಸಿದ ಇ–ಮೇಲ್‌ಗೆ ಹಣಕಾಸು ಸಚಿವಾಲಯವು ಪ್ರತಿಕ್ರಿಯೆ ನೀಡಿಲ್ಲ.

ಕೇಂದ್ರ ಸರ್ಕಾರದ ಷೇರು ವಿಕ್ರಯ ಪ್ರಕ್ರಿಯೆಗೆ ಎಲ್‌ಐಸಿ ಐಪಿಒ ಮುಖ್ಯವಾಗಿದೆ. 2022–23ನೇ ಹಣಕಾಸು ವರ್ಷಕ್ಕೆ ಷೇರು ವಿಕ್ರಯದ ಮೂಲಕ ₹ 65 ಸಾವಿರ ಕೋಟಿ ಸಂಗ್ರಹಿಸಲು ಸರ್ಕಾರ ಯೋಜನೆ ರೂಪಿಸಿದೆ.

ರೈತರಿಗೆ ಕೋ ಬ್ರ್ಯಾಂಡೆಡ್ ಕ್ರೆಡಿಟ್ ಕಾರ್ಡ್ 'ಉನ್ನತಿ '

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರು ತಮ್ಮ ಕೃಷಿ ಚಟುವಟಿಕೆಗಳ ಅಗತ್ಯಕ್ಕೆ ತಕ್ಕಂತೆ ಯಾವ ಸಮಯದಲ್ಲಾದರೂ ಬಳಸಬಹುದಾದ ಉನ್ನತಿ ಕ್ರೆಡಿಟ್ ಕಾರ್ಡ್ ಅನ್ನು ಬ್ಯಾಂಕ್ ಆಫ್ ಬರೋಡಾ ಫೈನಾನ್ಶಿಯಲ್ ಸರ್ವೀಸಸ್ ಲಿ. (ಬಿಎಫ್‌ಎಸ್‌ಎಲ್) ಮತ್ತು ಕ್ರೆಡಿಟ್‌ಎಐ ಜೊತೆಗೂಡಿ ಬಿಡುಗಡೆ ಮಾಡಿವೆ.

ಈ ಕಾರ್ಡ್‌ಅನ್ನು ರೈತ ಉತ್ಪಾದಕ ಸಂಸ್ಥೆಗಳ ಮೂಲಕ ರೈತರಿಗೆ ತಲುಪಿಸಲಾಗುತ್ತದೆ. ಎಫ್‌ಪಿಒಗಳಲ್ಲಿ ಮಾತ್ರವೇ ಈ ಕಾರ್ಡ್ ಬಳಸಿ ಕೃಷಿಗೆ ಉಪಯೋಗ ಆಗುವ ಗೊಬ್ಬರ ಮತ್ತು ರಾಸಾಯನಿಕ ಖರೀದಿಸಬೇಕಾಗುತ್ತದೆ.

ಸಣ್ಣ ಕೃಷಿಕರು ತಾವು ಪಡೆಯುವ ಸಾಲಗಳಿಗೆ ಹೆಚ್ಚಿನ ಬಡ್ಡಿ ಕಟ್ಟಲಾಗದೆ ಕೃಷಿ ಭೂಮಿಯನ್ನೇ ಮಾರುವ ಸ್ಥಿತಿ ಇದೆ. ಇಂತಹ ಸ್ಥಿತಿಯಿಂದ ಹೊರಬರಲು ಈ ಕಾರ್ಡ್ ನೆರವಾಗುತ್ತದೆ ಎಂದು ಕ್ರೆಡಿಟ್‌ಎಐ ಕಂಪನಿಯ ಸಿಇಒ ಸಂಗ್ರಾಮ್ ನಾಯಕ ಹೇಳಿದರು.

ರೈತರು ತಮ್ಮ ಬೇಸಾಯದ ಅಗತ್ಯಗಳಿಗೆ ತಡೆರಹಿತವಾಗಿ ಸಾಲಪಡೆಯಬಹುದು ಎಂದು ಬಿಎಫ್‌ಎಸ್‌ಎಲ್‌ನ ಸಿಇಒ ಶೈಲೇಂದ್ರ ಸಿಂಗ್ ಮಾಹಿತಿ ನೀಡಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	510
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54000
ಪುತ್ತೂರು	
ಕೋಕ	11000-26000
ಹೊಸತು	27500-45000
ಸಾಗರ	
ಬಿಳಿಗೋಟು	22899-30499
ಚಾಲಿ	28360-39209
ಕೋಕ	19119-33509
ಕೆಂಪುಗೋಟು	25219-36569
ರಾಶಿ	31899-48499
ಸಿಪ್ಪೆಗೋಟು	5100-22792
ಶಿವಮೊಗ್ಗ	
ಬೆಟ್ಟೆ	48658-52579
ಗೊರಬಲು	16000-36350
ರಾಶಿ	43309-48609
ಸರಕು	53300-77396
ಸಿದ್ದಾಪುರ	
ಬಿಳಿಗೋಟು	24699-33299
ಕೋಕ	23380-32100
ಹೊಸಚಾಲಿ	34219-40409
ಕೆಂಪುಗೋಟು	28689-31099
ರಾಶಿ	44112-48299
ತಟ್ಟಿಬೆಟ್ಟೆ	34089-47119
ಶಿರಸಿ	
ಬೆಟ್ಟೆ	28018-45799
ಬಿಳಿಗೋಟು	12199-33699
ಚಾಲಿ	34669-40891
ರಾಶಿ	42789-49799
ಸಿದ್ದಾಪುರ	
ಬಿಳಿಗೋಟು	26899-33899
ಕೋಕ	18899-30711
ಚಾಲಿ	36399-41699
ಕೆಂಪುಗೋಟು	32168-35969
ರಾಶಿ	48099-53911
ತಟ್ಟಿಬೆಟ್ಟೆ	38699-47910
ರಾಮನಗರ ರೇಷ್ಮೆಗೂಡು	
ಮಿಶ್ರ ತಳಿ	310-841
ದ್ವಿತಳಿ	400-700

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15800	15800	219.45 ಸೆಂಟ್ಸ್
ಎಸಿ	8400	8200	8450	
ಆರ್‌ಪಿ	9500	9400	9475	ಲಂಡನ್
ಆರ್‌ಸಿ	4275	4050	4250	2092 ಡಾಲರ್ಸ್

ನಗರ ಸಹಕಾರಿ ಬ್ಯಾಂಕ್: ಗೌರವ ಹುದ್ದೆ ರದ್ದತಿಗೆ ಸೂಚನೆ

ಮುಂಬೈ (ಪಿಟಿಐ): ನಗರ ಸಹಕಾರಿ ಬ್ಯಾಂಕ್‌ಗಳಲ್ಲಿ (ಯುಸಿಬಿ) ಯಾವುದೇ ತರಹದ ಗೌರವ ಹುದ್ದೆ ಸೃಷ್ಟಿಸದಂತೆ ಭಾರತೀಯ ರಿಸರ್ವ್ ಬ್ಯಾಂಕ್ ಸೂಚನೆ ನೀಡಿದೆ. ಅಲ್ಲದೆ, ಅಂತಹ ಹುದ್ದೆಗಳು ಇದ್ದರೆ ಅವುಗಳನ್ನು ಒಂದು ವರ್ಷದ ಒಳಗಾಗಿ ರದ್ದುಪಡಿಸುವಂತೆ ನಿರ್ದೇಶನ ನೀಡಿದೆ.

ಆಡಳಿತ ಮಂಡಳಿಯ ಮಟ್ಟದಲ್ಲಿ ಯಾವುದೇ ಗೌರವ ಹುದ್ದೆಯನ್ನು ಅಥವಾ ಗೌರವಾಧ್ಯಕ್ಷ ಮತ್ತು ಸಮೂಹ ಅಧ್ಯಕ್ಷ ತರಹದ ಹುದ್ದೆಯನ್ನು ಸೃಷ್ಟಿಸಬಾರದು ಎಂದು ಹೇಳಿದೆ. ಅಂತಹ ಹುದ್ದೆಗಳು ಹಿತಾಸಕ್ತಿ ಸಂಘರ್ಷ ಸೃಷ್ಟಿಸುತ್ತವೆ. ಆಡಳಿತ ಮಂಡಳಿಯ ಸ್ವತಂತ್ರ ಕಾರ್ಯನಿರ್ವಹಣೆಗೆ ಅಡ್ಡಿ ಉಂಟುಮಾಡುತ್ತದೆ ಎಂದು ಆರ್‌ಬಿಐ ಪ್ರಕಟಣೆಯಲ್ಲಿ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಕಾರಿನಲ್ಲಿ 6 ಏರ್‌ಬ್ಯಾಗ್: ಶೀಘ್ರವೇ ನಿಯಮ

ನವದೆಹಲಿ (ರಾಯಿಟರ್ಸ್): ವಾಹನ ತಯಾರಿಸುವ ಕೆಲವು ಕಂಪನಿಗಳ ವಿರೋಧದ ನಡುವೆಯೂ ಎಲ್ಲ ಪ್ರಯಾಣಿಕ ಕಾರುಗಳಲ್ಲಿ ಆರು ಏರ್‌ಬ್ಯಾಗ್ ಕಡ್ಡಾಯ ಮಾಡುವ ನಿಟ್ಟಿನಲ್ಲಿ ರಸ್ತೆ ಸಾರಿಗೆ ಸಚಿವಾಲಯ ಹೆಜ್ಜೆ ಇರಿಸಿದೆ ಎಂದು ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸುರಕ್ಷತೆಯ ವಿಷಯದಲ್ಲಿ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಸಚಿವಾಲಯವು ನಿಯಮಗಳನ್ನು ಅಂತಿಮಗೊಳಿಸುತ್ತಿದೆ. ಈ ಕುರಿತು ಅಧಿಸೂಚನೆ ಹೊರಡಿಸಲು ಸ್ವಲ್ಪ ಸಮಯ ಹಿಡಿಯಲಿದೆ ಎಂದು ತಿಳಿಸಿದ್ದಾರೆ.

ಕಾರಿನ ವೆಚ್ಚ ಹೆಚ್ಚಾಗುತ್ತದೆ ಎನ್ನುವ ಕಾರಣಕ್ಕೆ ಕೆಲವು ಕಂಪನಿಗಳು ಆರು ಏರ್‌ಬ್ಯಾಗ್ ಅಳವಡಿಕೆ ಕಡ್ಡಾಯ ಮಾಡುವುದನ್ನು ವಿರೋಧಿಸುತ್ತಿವೆ.

ಅಕ್ಟೋಬರ್ 1ರಿಂದ ಎಲ್ಲಾ ಕಾರುಗಳಲ್ಲಿಯೂ ಆರು ಏರ್ ಬ್ಯಾಗ್‌ಗಳು ಇರಬೇಕು ಎನ್ನುವ ಕರಡು ಮಾರ್ಗಸೂಚಿಯನ್ನು ಸರ್ಕಾರವು ಜನವರಿಯಲ್ಲಿಯೇ ಹೊರಡಿಸಿತ್ತು. ಅದಾದ ಒಂದು ತಿಂಗಳ ಬಳಿಕ ನಿಯಮ ಅಂತಿಮಗೊಳಿಸಬೇಕಿತ್ತು. ಆದರೆ ಈಗಲೂ ಕಂಪನಿಗಳ ಪ್ರತಿಕ್ರಿಯೆಯನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಬರಲಿದೆ ಎಲೆಕ್ಟ್ರಿಕ್ ಕ್ರಾಸ್‌ಓವರ್ 'ಕಿಯಾ ಇವಿ6'

ನವದೆಹಲಿ (ಪಿಟಿಐ): ಕಿಯಾ ಕಂಪನಿಯು ಪ್ರೀಮಿಯಂ ಎಲೆಕ್ಟ್ರಿಕ್ ಕ್ರಾಸ್‌ಓವರ್ 'ಇವಿ6' ಅನ್ನು ಶೀಘ್ರವೇ ಬಿಡುಗಡೆ ಮಾಡಲಿದ್ದು, ಆ ಮೂಲಕ ಭಾರತದಲ್ಲಿ ವಿದ್ಯುತ್ ಚಾಲಿತ ವಾಹನ ಮಾರುಕಟ್ಟೆ ಪ್ರವೇಶಿಸುವುದಾಗಿ ಘೋಷಿಸಿದೆ.

ಮೇ 26ರಿಂದ 'ಇವಿ6' ಬುಕಿಂಗ್ ಆರಂಭ ಆಗಲಿದ್ದು, ಶೀಘ್ರವೇ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುವುದು ಎಂದು ಕಂಪನಿ ತಿಳಿಸಿದೆ. 2022ರಲ್ಲಿ ಕೇವಲ 100 ಕಾರುಗಳನ್ನು ಮಾರಾಟ ಮಾಡಲು ಉದ್ದೇಶಿಸಿದೆ.

'ಜಾಗತಿಕವಾಗಿ ಹೆಚ್ಚು ಜನಪ್ರಿಯ ಆಗಿರುವ ವಿದ್ಯುತ್ ಚಾಲಿತ ಕಾರನ್ನು ಭಾರತದಲ್ಲಿ ಬಿಡುಗಡೆ ಮಾಡಲಿದ್ದೇವೆ. ಅಲ್ಟ್ರಾ–ಫಾಸ್ಟ್ ಚಾರ್ಜಿಂಗ್ ಸಾಮರ್ಥ್ಯ ಹೊಂದಿರಲಿದೆ' ಎಂದು ಕಿಯಾ ಇಂಡಿಯಾದ ಸಿಇಒ ಟೇ ಜಿನ್ ಪಾರ್ಕ್ ತಿಳಿಸಿದ್ದಾರೆ.

ಪದಕದೊಂದಿಗೆ ಸರಿತಾ ಮೊರ್ ಮತ್ತು ಸುಷ್ಮಾ –ಟ್ವಿಟರ್ ಚಿತ್ರ

ಏಷ್ಯನ್ ಕುಸ್ತಿ: ಸರಿತಾ, ಸುಷ್ಮಾಗೆ ಕಂಚಿನ ಪದಕ

ಉಲಾನ್ ಬತಾರ್, ಮಂಗೋಲಿಯ (ಪಿಟಿಐ): ಸರಿತಾ ಮೊರ್ ಇಲ್ಲಿ ನಡೆಯುತ್ತಿರುವ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ. ಸುಷ್ಮಾ ಶೊಕೀನ್ ಅವರಿಗೂ ಕಂಚಿನ ಪದಕ ಲಭಿಸಿತು.

ಗುರುವಾರ ನಡೆದ 59 ಕೆಜಿ ವಿಭಾಗದ ಬೌಟ್‌ನಲ್ಲಿ ಸರಿತಾ ಉಜ್ಬೆಕಿಸ್ತಾನದ ದಿಲ್‌ಫುಜಾ ಎದುರು ತಾಂತ್ರಿಕವಾಗಿ ಮೇಲುಗೈ ಸಾಧಿಸಿದರು. ನಂತರ ಡಯಾನ ಕಯು ಮೋವಾ ವಿರುದ್ಧ 5–2ರಲ್ಲಿ ಗೆದ್ದರು.

59 ಕೆಜಿ ವಿಭಾಗದ ಸ್ಪರ್ಧೆಯಲ್ಲಿ ಐವರು ಕುಸ್ತಿಪಟುಗಳು ಇದ್ದರು. ಮೊದಲ ಎರಡು ಬೌಟ್‌ಗಳಲ್ಲಿ ಸರಿತಾ ಸೋತರು.

ಸುಷ್ಮಾ 55 ಕೆಜಿ ವಿಭಾಗದಲ್ಲಿ ಕಂಚಿನ ಪದಕ ಗಳಿಸಿದರು. ಜಪಾನ್‌ನ ಉಮಿ ಇಮಾಯ್ ವಿರುದ್ಧ ತಾಂತ್ರಿಕ ಹಿನ್ನಡೆಯಿಂದಾಗಿ ಸೋತ ಅವರು ನಂತರ ಕಜಕಸ್ತಾನದ ಅಲ್ಟಿನ್ ಶಗಯೆವ ವಿರುದ್ಧ 5–0ಯಿಂದ ಜಯ ಗಳಿಸಿದರು. ಉಜ್ಬೆಕಿಸ್ತಾನದ ಸರ್ಬಿನಾಜ್ ಜಿಯೆನ್‌ಬಯೆವಾ ಅವರನ್ನು ನೆಲಕ್ಕೆ ಕೆಡವಿ ಗೆಲುವು ಸಾಧಿಸಿದರು. ಕೊನೆಯ ಬೌಟ್‌ನಲ್ಲಿ ಸ್ಥಳೀಯ ಪ್ರತಿಭೆ ಒಟ್ಗೊನ್ಜಾರ್ಗಲ್ ಗನ್ಬಾತಾರ್ ಎದುರು ನೀರಸ ಸೋಲನುಭವಿಸಿ ಕಂಚಿನ ಪದಕಕ್ಕೆ ಸಮಾಧಾನಪಟ್ಟುಕೊಂಡರು.

50 ಕೆಜಿ ವಿಭಾಗದಲ್ಲಿ ಕಂಚಿನ ಪದಕಕ್ಕಾಗಿ ನಡೆದ ಬೌಟ್‌ನಲ್ಲಿ ಮನಿಷಾ ಉಜ್ಬೆಕಿಸ್ತಾನದ ಜಾಸ್ಮಿನಾ ಇಮಾಯೆವಾ ಎದುರು ಸೋತರು. 68 ಕೆಜಿ ವಿಭಾಗದಲ್ಲಿ ಸೋನಿಕಾ ಹೂಡಾ ಮತ್ತು 76 ಕೆಜಿ ವಿಭಾಗದಲ್ಲಿ ಸುದೇಶ್ ಕುಮಾರಿ ಪದಕ ಸುತ್ತು ಪ್ರವೇಶಿಸುವಲ್ಲಿ ವಿಫಲರಾದರು. ಭಾರತ ಈ ವರೆಗೆ ಏಳು ಕಂಚಿನ ಪದಕ ಗಳಿಸಿದೆ. ಗ್ರೀಕೊ ರೋಮನ್ ವಿಭಾಗದಲ್ಲಿ ಐದು ಕಂಚಿನ ಪದಕ ಭಾರತಕ್ಕೆ ಲಭಿಸಿತ್ತು.

ರೋಹಿತ್, ಬೂಮ್ರಾಗೆ ವಿಸ್ಡನ್ ಗೌರವ

ಲಂಡನ್ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ವೇಗಿ ಜಸ್‌ಪ್ರೀತ್ ಬೂಮ್ರಾ ಅವರಿಗೆ 2022ರ ಆಲ್ಮನ್ಯಾಕ್ ಆವೃತ್ತಿಯಲ್ಲಿ ವಿಸ್ಡನ್ಸ್ ವರ್ಷದ ಕ್ರಿಕೆಟಿಗ ಗೌರವಕ್ಕೆ ಪಾತ್ರರಾಗಿದ್ದಾರೆ.

ನ್ಯೂಜಿಲೆಂಡ್ ಬ್ಯಾಟರ್ ಡೇವೊನ್ ಕಾನ್ವೆ, ಇಂಗ್ಲೆಂಡ್ ವೇಗಿ ಒಲಿ ರಾಬಿನ್ಸನ್ ಮತ್ತು ದಕ್ಷಿಣ ಆಫ್ರಿಕಾ ಮಹಿಳಾ ತಂಡದ ಡೇನ್ ವ್ಯಾನ್ ನೀಕರ್ಕ್ ಈ ಗೌರವ ಗಳಿಸಿದ್ದಾರೆ.

ALVA'S EDUCATION FOUNDATION (R.)
Moodubidire D.K 574 227
REQUIRED
Admission Executive
Student Welfare Officer (Male / Female)
Hostel Warden (Male / Female)
Qualification: Any Graduates / Post Graduates with fluency in English.
Food and Accommodation will be provided.
Mail your updated bio data to adminrguhs@alvas.org within 7 days.
Contact: 95905 13518

ಫುಟ್‌ಬಾಲ್: ಮೈಸೂರು, ಹಾಸನ ತಂಡಗಳ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ವಿಜಯನಗರ ಎಫ್‌ಸಿ ಮತ್ತು ಹಾಸನ ಎಫ್‌ಸಿ ತಂಡಗಳು ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ 'ಸಿ' ಡಿವಿಷನ್ ಲೀಗ್ ಟೂರ್ನಿಯಲ್ಲಿ ಗುರುವಾರ ಭರ್ಜರಿ ಜಯ ಗಳಿಸಿದವು.

ಫೂಟ್‌ಲಾಂಗ್ಸ್ ಎಫ್‌ಸಿ ಎದುರಿನ ಪಂದ್ಯದಲ್ಲಿ ಮೈಸೂರು ವಿಜಯನಗರ ತಂಡ 4–1ರಲ್ಲಿ ಜಯ ಗಳಿಸಿತು. ಮೈಸೂರು ಪರವಾಗಿ ರಾಹುಲ್ 13 ಮತ್ತು 60ನೇ ನಿಮಿಷಗಳಲ್ಲಿ ಗೋಲು ಗಳಿಸಿದರೆ ಪ್ರಿತಮ್ 25ನೇ ನಿಮಿಷದಲ್ಲಿ ಮತ್ತು ಸ್ವರೂಪ್ 33ನೇ ನಿಮಿಷದಲ್ಲಿ ಚೆಂಡನ್ನು ಗುರಿ ಮುಟ್ಟಿಸಿದರು.

ಹಾಸನ ಎಫ್‌ಸಿ 2–1ರಲ್ಲಿ ಕೊಡಗು ಎಫ್‌ಸಿಯನ್ನು ಮಣಿಸಿತು. ಹಾಸನ ಪರವಾಗಿ ದರ್ಶನ್ (23ನೇ ನಿ) ಮತ್ತು ಮಿಥುನ್ (45ನೇ ನಿ), ಕೊಡಗು ತಂಡಕ್ಕಾಗಿ ಸುಜಿತ್ (4ನೇ ನಿ) ಗೋಲು ಗಳಿಸಿದರು. ಆರ್.ಆರ್.ನಗರ ಅಕಾಡೆಮಿ ತಂಡ ಕಣಕ್ಕೆ ಇಳಿಯದ ಕಾರಣ ಡಾನ್ ಬೋಸ್ಕೊ ಎಫ್‌ಸಿಗೆ ವಾಕ್ ಓವರ್ ಲಭಿಸಿತು. ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆಯ 'ಸಿ' ಡಿವಿಷನ್ ಲೀಗ್‌ನ 'ಎಂ' ಗುಂಪಿನ ಪಂದ್ಯದಲ್ಲಿ ಟೊರ್ನಾಡೊಸ್ ಎಫ್‌ಸಿ 4–1ರಲ್ಲಿ ಆರ್‌ಬಿಐ ಎಫ್‌ಸಿಯನ್ನು ಮತ್ತು ಬಿನ್ನಿ ಎಫ್‌ಸಿ 3–0ಯಿಂದ ಎಲ್‌ಆರ್‌ಡಿಇ ಎಫ್‌ಸಿಯನ್ನು ಮಣಿಸಿತು.

'ಪಿ' ಗುಂಪಿನ ಹಣಾಹಣಿಯಲ್ಲಿ ವೆಟೆರನ್ಸ್ ಎಫ್‌ಸಿ ಮತ್ತು ಬೆಂಟೆಕ್ಸ್ ಎಫ್‌ಸಿ ನಡುವಿನ ಪಂದ್ಯ 2–2ರಲ್ಲಿ ಡ್ರಾ ಆಯಿತು. 'ಕೆ' ಗುಂಪಿನಲ್ಲಿ ತಾಮರೈ ಕಣ್ಣನ್ ಎಫ್‌ಸಿ 3–0ಯಿಂದ ಬಾಗಲಕುಂಟೆ ಎಫ್‌ಸಿಯನ್ನು ಸೋಲಿಸಿತು. 'ಒ' ಗುಂಪಿನಲ್ಲಿ ಬೆಂಗಳೂರು ಸಿಟಿ ಎಫ್‌ಸಿ 7–0ಯಿಂದ ಮಹಾರಾಜ ಸೋಷಿಯಲ್ ಎಫ್‌ಸಿಯನ್ನು ಸೋಲಿಸಿತು. ಇಂಡಿಯನ್ ನೈಟ್ಸ್ ಎಫ್‌ಸಿ ಮತ್ತು ಜೆ ಸ್ಪೋರ್ಟ್ಸ್ ಎಫ್‌ಸಿ ನಡುವಿನ ಪಂದ್ಯ 1–1ರಲ್ಲಿ ಡ್ರಾ ಆಯಿತು.

'ರಷ್ಯಾ ಆಟಗಾರರ ಮೇಲೆ ನಿಷೇಧ ಬೇಡ'



ಎಲಿನಾ ಸ್ವಿಟೊಲಿನಾ

ಲಂಡನ್ (ರಾಯಿಟರ್ಸ್): ರಷ್ಯಾ ಮತ್ತು ಬೆಲಾರೂಸ್ ಅಟಗಾರರಿಗೆ ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಆಡುವ ಅವಕಾಶ ನೀಡಬೇಕು. ಅವರ ಮೇಲೆ ನಿಷೇಧ ಸಲ್ಲದು ಎಂದು ಉಕ್ರೇನ್ ಆಟಗಾರ್ತಿ ಎಲಿನಾ ಸ್ವಿಟೊಲಿನಾ ಹೇಳಿದ್ದಾರೆ.

ತಮ್ಮ ದೇಶದ ಮೇಲೆ ರಷ್ಯಾ ಹೋದ ಫೆಬ್ರುವರಿ ತಿಂಗಳಿನಿಂದಲೂ ಯುದ್ಧ ಸಾರಿದೆ. ನಿರಂತರ ದಾಳಿ ನಡೆಸುತ್ತಿದೆ. ರಷ್ಯಾವನ್ನು ಬೆಲಾರೂಸ್ ಬೆಂಬಲಿಸಿದೆ. ಇದರಿಂದಾಗಿ ಹಲವು ಅಂತರರಾಷ್ಟ್ರೀಯ ಕ್ರೀಡಾಕೂಟಗಳಿಂದ ಈ ದೇಶಗಳ ಆಟಗಾರರನ್ನು ನಿಷೇಧಿಸಲಾಗಿದೆ. ಆದರೆ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಧ್ವಜದಡಿಯಲ್ಲಿ ಆಡಲು ಅವಕಾಶ ನೀಡಲಾಗಿದೆ.

ಈ ವರ್ಷದ ವಿಂಬಲ್ಡನ್ ಟೆನಿಸ್‌ನಲ್ಲಿಯೂ ಎರಡೂ ದೇಶಗಳ ಆಟಗಾರರಿಗೆ ಅವಕಾಶವಿಲ್ಲ ಎಂದು ಬುಧವಾರ ಆಯೋಜಕರು ಘೋಷಿಸಿದ್ದರು.

ಬುಧವಾರ ತಮ್ಮ ದೇಶದ ಆಟಗಾರರೊಂದಿಗೆ ಸೇರಿ, ರಷ್ಯಾ ಆಟಗಾರರನ್ನು ಅಂತರರಾಷ್ಟ್ರೀಯ ಮಟ್ಟದ ಕೂಟಗಳಲ್ಲಿ ನಿಷೇಧಿಸುವ ಬಗ್ಗೆ ದನಿಗೂಡಿಸಿದ್ದ ಸ್ವಿಟೊಲಿನಾ ಗುರುವಾರ ಬಿಬಿಸಿಗೆ ನೀಡಿರುವ ಸಂದರ್ಶನದಲ್ಲಿ ಮೃದು ಧೋರಣೆ ತೋರಿದ್ದಾರೆ.

ಸಂಕ್ಷಿಪ್ತ ಸುದ್ದಿ

ಟೇಬಲ್ ಟೆನಿಸ್: ಪಿಎಸ್‌ಪಿಬಿಗೆ 25ನೇ ಪ್ರಶಸ್ತಿ

ಶಿಲ್ಲಾಂಗ್ (ಪಿಟಿಐ): ಪೆಟ್ರೋಲಿಯಂ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್‌ನ ಪುರುಷ ಮತ್ತು ಮಹಿಳಾ ತಂಡಗಳು 83ನೇ ಸೀನಿಯರ್ ರಾಷ್ಟ್ರೀಯ ಮತ್ತು ಅಂತರರಾಜ್ಯ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದವು.

ಪಿಎಸ್‌ಪಿಬಿ ಪುರುಷ ತಂಡವು ಗಳಿಸಿದ 25ನೇ ಮತ್ತು ಮಹಿಳೆಯರ ತಂಡವು 16ನೇ ಬಾರಿ ಗಳಿಸಿದ ಪ್ರಶಸ್ತಿ ಇದಾಗಿದೆ. ಫೈನಲ್‌ನಲ್ಲಿ ಎರಡೂ ವಿಭಾಗಗಳಲ್ಲಿ ಪಿಎಸ್‌ಪಿಬಿಯು ಮಹಾರಾಷ್ಟ್ರದ ವಿರುದ್ಧ ಜಯಿಸಿತು.

ಆರ್ಯ ಗಣಪತಿಗೆ 'ಡಬಲ್' ಸಂಭ್ರಮ

ಆರ್ಯ ಗಣಪತಿ

ಬೆಂಗಳೂರು: ಅಗ್ರ ಶ್ರೇಯಾಂಕದ ಮನದೀಪ್ ರೆಡ್ಡಿ ಕುಡುಮಲ ವಿರುದ್ಧ ಗೆದ್ದ ಆರ್ಯ ಗಣಪತಿ ಅವರು ಎಐಟಿಎ ಆಯೋಜಿಸಿರುವ ಎಸ್‌ಎಟಿ ಸ್ಪೋರ್ಟ್ಸ್‌ನ 18 ವರ್ಷದೊಳಗಿನವರ ಸಿಎಸ್ 7 ಟೆನಿಸ್ ಟೂರ್ನಿಯ ಬಾಲಕರ ವಿಭಾಗದ ಫೈನಲ್ ಪ್ರವೇಶಿಸಿದರು.

ಕೆಎಸ್‌ಎಲ್‌ಟಿಎ ಅಂಗಣದಲ್ಲಿ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಆರ್ಯ ಗಣಪತಿ 6-4, 6-2ರಲ್ಲಿ ಜಯ ಗಳಿಸಿದರು. ನಂತರ ಬಾಲಕರ ಡಬಲ್ಸ್ ವಿಭಾಗದ ಪ್ರಶಸ್ತಿ ಗೆದ್ದು ಸಂಭ್ರಮಿಸಿದರು.

ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಅರ್ಯ ಮತ್ತು ಕಂದವೇಲ್ ಮುಖಾಮುಖಿಯಾಗುವರು. ಆರಾಧ್ಯ ದ್ವಿವೇದಿ ಎದುರು 6-1, 6-3ರಲ್ಲಿ ಜಯ ಗಳಿಸಿ ಕಂದವೇಲ್ ಪ್ರಶಸ್ತಿ ಸುತ್ತು ಪ್ರವೇಶಿಸಿದ್ದಾರೆ.

ಕ್ರಿಕೆಟ್: ಸುಷ್ಮಾ ವರ್ಮಾ ಅಜೇಯ ಅರ್ಧಶತಕ

ರಾಜ್‌ಕೋಟ್: ಸುಷ್ಮಾ ವರ್ಮಾ ಅಜೇಯ ಅರ್ಧಶತಕದ ನೆರವಿನಿಂದ ಹಿಮಾಚಲಪ್ರದೇಶ ತಂಡವು ಬಿಸಿಸಿಐ ಸೀನಿಯರ್ ಮಹಿಳಾ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕ ವಿರುದ್ಧ 7 ವಿಕೆಟ್‌ಗಳಿಂದ ಜಯಿಸಿತು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 20 ಓವರ್‌ಗಳಲ್ಲಿ 6ಕ್ಕೆ106; **ಹಿಮಾಚಲಪ್ರದೇಶ:** 19.1 ಓವರ್‌ಗಳಲ್ಲಿ 3ಕ್ಕೆ109 (ಸುಷ್ಮಾ ವರ್ಮಾ ಔಟಾಗದೆ 52, ಪ್ರತ್ಯೂಷಾ 10ಕ್ಕೆ3).

ಮಾತ್ರೆಗಾಗಿ ದಂಡಯಾತ್ರೆ?
ಈಗ ಬೇಕಿಲ್ಲ!
ಯಾಕಂದ್ರೆ ಆಯುರ್ ಸೆಂಟ್ರಲ್ ಮೆಡಿಕಲ್ ಶಾಪುಗಳು ಬೆಂಗಳೂರಿನ ಮೂಲೆಮೂಲೆಯಲ್ಲೂ ಇವೆ
ಖಂಡಿತಾ ನಿಮ್ಮ ಮನೆ ಹತ್ರಾನೂ ಒಂದಿದೆ!

ಮನೆಗೂ ಹತ್ತಿರ; ಮನಸಿಗೂ ಹತ್ತಿರ
AyurCentral
ಆಯುರ್ವೇದಿಕ್ ಮೆಡಿಕಲ್ ಶಾಪುಗಳು
www.ayurcentral.com
ಬೆಂಗಳೂರಿನಲ್ಲಿ 60+ ಅಂಗಡಿಗಳು
ಆರೋಗ್ಯವಂತ ಬೆಂಗಳೂರಿಗೆ ನಮ್ಮದೇ ಬೆಂಬಲ ಆರೋಗ್ಯವಂತ ಕರ್ನಾಟಕ ಮುಂದಿನ ಹಂಬಲ
ನಮ್ಮ ಈ ಕನಸಿನಲ್ಲಿ ನಿಮಗೂ ಜಾಗವಿದೆ ಸರಿಯಾದ ಆಯ್ಕೆಯಲ್ಲಿ ಗೆಲುವಿನ ಜೀಗವಿದೆ!
ಫ್ರಾಂಚೈಸಿಗಾಗಿ ಸಂಪರ್ಕಿಸಿ: 7676731881

ನಂಬರ್ 1 ಆಗಲು
ಸರಿಯಾದ ತೂಕ ಹಾಗೂ ಸದೃಢ ಶರೀರ ಅತ್ಯಂತ ಅಗತ್ಯ
ನಮಗೆಲ್ಲರಿಗೂ ಗೊತ್ತು, ಜೀವನ ನಡೆಸೋದಕ್ಕೆ ಶಕ್ತಿಹೀನರು ತುಂಬಾ ಕಷ್ಟಪಡುತ್ತಾರೆ. ಆದರೆ, ನೀವು ಹಾಗಾಗಬೇಕಿಲ್ಲ. ಇಂದೇ ಶುರು ಮಾಡಿ ಬಾಡಿ ಪ್ಲಸ್ ಸಪ್ಲಿಮೆಂಟ್, ಇದು ನಿಮ್ಮ ಶರೀರಕ್ಕೆ ಸೂಕ್ತ ತೂಕ ಹಾಗೂ ಸರಿಯಾದ ಪೋಷಣೆ ನೀಡುತ್ತದೆ...


Trusted Brand of 22 years
BODY PLUS
The Ultimate Choice
ಪೌಡರ್ ಅಥವಾ ಟ್ಯಾಬ್ಲೆಟ್
ತೂಕ ಹೆಚ್ಚಿಸಿಕೊಳ್ಳಿ
ಬೊಜ್ಜು ಕಡಿಮೆ, ಎನರ್ಜಿ ಭರಪೂರ
ಉತ್ತಮ ಇಮ್ಯೂನಿಟಿ
ಫಿಟ್‌ನೆಸ್ ವರ್ಧಕ
ಉತ್ತಮ ಪರಿಣಾಮಕ್ಕಾಗಿ ಬಾಡಿ ಪ್ಲಸ್ ಪೌಡರ್ ಹಾಗೂ ಟ್ಯಾಬ್ಲೆಟ್ ಎರಡನ್ನೂ ಬಳಸಿ.
ಯುವಕರು ಹಾಗೂ ಯುವತಿಯರಿಗೆ ಅತ್ಯುತ್ತಮ ಪ್ರಯೋಜನ
ಶಕ್ತಿಯುತ ಪ್ರೊಟೀನ್, ಅದ್ಭುತ ಇಮ್ಯುನಿಟಿ
For more information contact : 7676731881 / 9448535202
Super Stockiest : Sarvahitha Ayurvedalaya Pvt. Ltd. Mob.: 7349144446
Stockiest : Bangalore : Mohan Pharma 080-22874575 Narendra Agencies 22870983 Renuka Agencies 22340160 Devendra Drug House 22876452 Mysore : 0821 - 2432796 Nimishamba Enterprises 4255719 Hubli : Supreme Agencies 9739610014 Shree Meenakshi Medical Agencies 0836-2221341 Mallikarjun Agencies 9448801251 Mangalore : Vivek Traders 0824-2497018/2496483
Available in AyurCentral
+91 99675 99653 / Email : info@bodyplus.co.in ಎಲ್ಲ ಆಯುರ್ವೇದ, ಮೆಡಿಕಲ್, ಸಪ್ಲಿಮೆಂಟ್ ಸ್ಟೋರ್ ಹಾಗೂ ಇ-ಸೈಟ್‌ಗಳಲ್ಲಿ ಲಭ್ಯವಿದೆ

ಲೈಂಗಿಕ ಸಮಸ್ಯೆ

ಪೌರುಷ ದೌರ್ಬಲ್ಯ ದೂರ ಮಾಡಿಕೊಳ್ಳಿ. ಇಂದ್ರಿಯದ ಆಕಾರ ಹೆಚ್ಚಿಸಿಕೊಳ್ಳಿ. ದಾಂಪತ್ಯ ಜೀವನದ ಆನಂದ ಪಡೆಯಿರಿ.
ನಿಮ್ಮ ಸಮಸ್ಯೆಗೆ ಸತ್ಯ ಹಾಗೂ ಆಯುರ್ವೇದಿಕ ಔಷಧಿ ಪಡೆಯಿರಿ ಮತ್ತು ಆನಂದಮಯ ಜೀವನ ನಿಮ್ಮದಾಗಿಸಿಕೊಳ್ಳಿ
02262676816

ಗಜಕರ್ಣ, ತುರಿಕೆ, ಇಸಬು
ಸಮಸ್ಯೆಗಳ ನಿವಾರಣೆಯ ಆಯುರ್ವೇದಿಕ ಮುಲಾಮು
ಇಚ್ಛಾ
ಆಯುರ್ವೇದಿಕ ಮುಲಾಮು

ಮೊದಲ ದಿನದಿಂದಲೇ ಫಲಿತಾಂಶ
ಅಂಟಿಕೊಳ್ಳುವುದಿಲ್ಲ, ಕಲೆಯಾಗುವುದಿಲ್ಲ

Dr. Juneja's
ಡಾ.ಆರ್ಥೋ
Ayurvedic Oil, Capsules, Spray & Ointment

ಕೀಲುಗಳ ನೋವಿನ ಸ್ಪೆಷಲಿಸ್ಟ್
ಇವುಗಳ ನಿವಾರಣೆಗೆ ಸಹಕಾರಿ
ಕೀಲುಗಳ ನೋವು
ಬೆನ್ನುನೋವು
ಭುಜದ ನೋವು
ಮುಂಗೈ ನೋವು
24x7 Helpline: 7876977777 • www.drorthooil.com

ಇದರಲ್ಲಿನ 8 ಉಪಯುಕ್ತ ಆಯುರ್ವೇದಿಕ ತೈಲಗಳ ಸಮ್ಮಿಶ್ರಣವು, ಕೀಲುಗಳ ನೋವು ನಿವಾರಣೆಗೆ ಸಹಕಾರಿಯಾಗಿದೆ. ದಿನಕ್ಕೆ 1–2 ಬಾರಿ ನೋವು ಇರುವ ಭಾಗದ ಮೇಲೆ 8–10 ಎಂಎಲ್ ಡಾ.ಆರ್ಥೋ ತೈಲದಿಂದ ಮೃದುವಾಗಿ ಮಸಾಜ್ ಮಾಡಿರಿ.
FREE HOME DELIVERY
USE CODE DIVISA
ಮಂಡಿ, ಭುಜ, ಕತ್ತು, ಬೆನ್ನು, ಮುಂಗೈ ಇತ್ಯಾದಿ ನೋವುಗಳ ನಿವಾರಣೆಗೆ ಸಹಕಾರಿಯಾದ ಆಯುರ್ವೇದಿಕ ಔಷಧಿ.

ಬಿಡಿಎ
ಪ್ರೀಮಿಯಂ ಸೈಟ್‌ಗಳ ಇ-ಹರಾಜು

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು
ಪ್ರಪಂಚದ ಯಾವುದೇ ಮೂಲೆಯಲ್ಲಿ ಕುಳಿತು ಆನ್‌ಲೈನ್ ಮೂಲಕ ನಿಮ್ಮ ಕನಸಿನ ನಿವೇಶನ ವೀಕ್ಷಿಸಬಹುದು ಮತ್ತು ಖರೀದಿಸಬಹುದು.

• ಅರ್ಕಾವತಿ
• ಅಂಜನಾಪುರ
• ಸರ್.ಎಂ.ವಿಶ್ವೇಶ್ವರಯ್ಯ
• ನಾಡಪ್ರಭು ಕೆಂಪೇಗೌಡ ಬಡಾವಣೆ
• ರಾಜಾಜಿನಗರ
• ಜೆ.ಪಿ.ನಗರ
• ಬನಶಂಕರಿ
• ಆರ್.ಎಂ.ವಿ
• ಬಿ.ಟಿ.ಎಂ
ಸೇರಿದಂತೆ ಹಲವು ಪ್ರತಿಷ್ಠಿತ ಬಡಾವಣೆಗಳ ಮೂಲೆ ನಿವೇಶನಗಳು ಲಭ್ಯ
ಇ–ಹರಾಜಿನಲ್ಲಿ ಭಾಗವಹಿಸಲು ಮತ್ತು ಬಿಡ್ಡಿಂಗ್‌ಗಾಗಿ
https://eproc.karnataka.gov.in
080-46010000 / 22631200 / 68948.777
ಇ–ಹರಾಜಿನ ಡೆಮೊ ವೀಡಿಯೊ ಹಾಗೂ ಹೆಚ್ಚಿನ ಮಾಹಿತಿಗಾಗಿ
www.bdabangalore.org
080-23368423 / 23368036
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ
6 ಅಡಿ ದೈಹಿಕ ಅಂತರ ಪಾಲಿಸಿ
ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ
ನಿವೇಶನಗಳ ಇ–ಬಿಡ್ಡಿಂಗ್ ಪ್ರಾರಂಭವಾಗಿದೆ

ಪ್ರಕಟಣೆ ಕ್ರಮ ಸಂಖ್ಯೆ	ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ	ಇ–ಹರಾಜನ್ನು ಮುಕ್ತಾಯಗೊಳಿಸುವ ದಿನಾಂಕ ಮತ್ತು ಸಮಯ
01 TO 75	25.04.2022 ; 6.00 pm IST	26.04.2022 ; 6.00 pm IST
76 TO 150	27.04.2022 ; 6.00 pm IST	28.04.2022 ; 6.00 pm IST
151 TO 225	29.04.2022 ; 6.00 pm IST	30.04.2022 ; 6.00 pm IST
226 TO 300	02.05.2022 ; 6.00 pm IST	04.05.2022 ; 6.00 pm IST
301 TO 375	05.05.2022 ; 6.00 pm IST	06.05.2022 ; 6.00 pm IST
376 TO 448	06.05.2022 ; 6.00 pm IST	07.05.2022 ; 6.00 pm IST
449 TO 520	07.05.2022 ; 6.00 pm IST	09.05.2022 ; 6.00 pm IST
521 TO 595	09.05.2022 ; 6.00 pm IST	10.05.2022 ; 6.00 pm IST
596 TO 670	10.05.2022 ; 6.00 pm IST	11.05.2022 ; 6.00 pm IST
671 TO 743	11.05.2022 ; 6.00 pm IST	12.05.2022 ; 6.00 pm IST
744 TO 814	12.05.2022 ; 6.00 pm IST	13.05.2022 ; 6.00 pm IST
815 TO 888	13.05.2022 ; 6.00 pm IST	16.05.2022 ; 6.00 pm IST
889 TO 961	16.05.2022 ; 6.00 pm IST	17.05.2022 ; 6.00 pm IST
962 TO 1036	17.05.2022 ; 6.00 pm IST	18.05.2022 ; 6.00 pm IST

ಮಧ್ಯವರ್ತಿಗಳ ತೊಂದರೆಯಿಲ್ಲ, ನೇರವಾಗಿ ಇ–ಹರಾಜಿನಲ್ಲಿ ಭಾಗವಹಿಸಿ.
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560 020.